UNIVERSAL LIBRARY
OU_200874
UNIVERSAL LIBRARY

ಮನೋಹರ ಗ್ರಂಥಮಾಲೆಯ [illegible] ಕುಸುಮ

# ಬಹುಮಾನ ಪಡೆದ ಬರಹಗಳು

( [illegible] ಸಣ್ಣ ಕತೆ ಸ್ಪರ್ಧೆಯ [illegible] ಸಂಕಲನ )

ಸಂಪಾದಕ

ಜಿ. ಬಿ. ಜೋಶಿ

ಎಪ್ರಿಲ್

೧೯೪೯

ಮನೋಹರ ಗ್ರಂಥಪ್ರಕಾಶನ ಸಮಿತಿ
ಧಾರವಾಡ

ಸಾಹಿತ್ಯವಿಷಯದಲ್ಲಿ ಸಲಹೆಗಾರರು :

ಶ್ರೀ. ದ. ರಾ. ಬೇಂದ್ರೆ, ಎಂ. ಎ.

ಶ್ರೀ. ವಿ. ಕೃ. ಗೋಕಾಕ, ಬಿ. ಎ. ( ಆಕ್ಸಫರ್ಡ )

ಶ್ರೀ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ.

**ಬೆಲೆ**

**೧—೧೨—೦**

**ಪ್ರಕಾಶಕರು :**
**ಜಿ. ಬಿ. ಜೋಶಿ**
**ಮನೋಹರ ಗ್ರಂಥಮಾಲಾ**
**ಧಾರವಾಡ**

**ಮುದ್ರಕರು :**
**ಎಮ್. ಎಸ್. ಕುಲಕರ್ಣಿ**
**ಗೌರೀಶ ಮುದ್ರಣಾಲಯ**
**ಧಾರವಾಡ**

# ನಮ್ಮ ಮಾತು

ಮನೋಹರ ಗ್ರಂಥಮಾಲೆಯಿಂದ ಏರ್ಪಡಿಸಿದ 'ಶತಗ್ರಂಥೋತ್ಸವ ಸ್ಪರ್ಧೆ'ಯಲ್ಲಿ ಬಹುಮಾನ ಪಡೆದ ಕೆಲ ಬರಹಗಳ ಸಂಕಲನ ಇದು. ಇದರಲ್ಲಿ ಎರಡು ಏಕಾಂಕ, ಎರಡು ಸಣ್ಣಕತೆ, ಒಂದು ವ್ಯಕ್ತಿಚಿತ್ರ ಇಷ್ಟಿವೆ. ಬಹುಮಾನ ಪಡೆದ ಕಾದಂಬರಿಯನ್ನೂ (ಮುನಿಯನ ಮಾದರಿ) ಗ್ರಂಥಮಾಲೆಯಲ್ಲಿ ಮುಂದಿನ ಕುಸುಮವಾಗಿ ಪ್ರಕಟಿಸುತ್ತೇವೆ.

ಈ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಶ್ರೀಯುತರಾದ ಕೆ. ಎ. ಎನ್. ರಾವ, ಎಚ್. ಆರ್. ಸುಬ್ರಹ್ಮಣ್ಯಂ, ಕೆ. ಬಿ. ಪಾಟೀಲ, ಇವರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು, ಅಭಿನಂದನೆಗಳು.

ತಮ್ಮ ಬರಹಗಳನ್ನು ಗ್ರಂಥಮಾಲೆಯಲ್ಲಿ ಪ್ರಕಟಿಸಲು ಅವರು ಅನುಮತಿಯಿತ್ತುದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳು.

ಕಾದಂಬರಿ, ನಾಟಕ, ಸಣ್ಣಕತೆ, ಏಕಾಂಕ, ವ್ಯಕ್ತಿಚಿತ್ರ, ಕಾವ್ಯ, ಪ್ರಬಂಧ ಸಾಹಿತ್ಯದ ಈ ಸಪ್ತಮುಖದಲ್ಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮೈಸೂರು ಕಡೆಯಿಂದ ೩೫, ಮಂಗಳೂರು ಕಡೆಯಿಂದ ೧೩, ಕಾರವಾರ ಕಡೆಯಿಂದ ೧, ಉತ್ತರ ಕರ್ನಾಟಕದ ಕಡೆಯಿಂದ ೧೬, ಬಳ್ಳಾರಿಯಿಂದ ೧, ಪರಪ್ರಾಂತ್ಯಗಳಲ್ಲಿದ್ದ ಕನ್ನಡಿಗರಿಂದ ೬, ಹೀಗೆ ಎಲ್ಲ ಭಾಗಗಳಿಂದಲೂ ಒಟ್ಟು ಎಪ್ಪತ್ತೆರಡು ಬರಹಗಾರರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕಾದಂಬರಿಗಳು ೧೮, ನಾಟಕಗಳು ೧೫, ಸಣ್ಣಕತೆಗಳು ೪೫, ಏಕಾಂಕಗಳು ೨೦, ಕಾವ್ಯ, ೬, ವ್ಯಕ್ತಿಚಿತ್ರಗಳು ೧೭, ಪ್ರಬಂಧಗಳು ೩ ಹೀಗೆ ಈ ಸ್ಪರ್ಧೆಗೆ ಬಂದಿದ್ದ ಒಟ್ಟು ಬರಹಗಳು ಇವು. ಕಾವ್ಯಶಾಸ್ತ್ರವಿನೋದಕ್ಕಾಗಿ ಏರ್ಪಡಿಸಿದ ಈ ಸ್ಪರ್ಧೆಯಲ್ಲಿ ವಿನೋದಬುದ್ಧಿಯಿಂದ ಭಾಗವಹಿಸಿ ಇದಕ್ಕೆ ಕಳೆ ತಂದು ಕೊಟ್ಟ ಈ ಬರಹಗಾರರಿಗೆಲ್ಲ ನಾವು ತುಂಬ ಉಪಕೃತರಾಗಿದ್ದೇವೆ.

—**ಸಂಪಾದಕ**

# ಪರಿವಿಡಿ


| | | |
|---|---|---|
| ತ್ಯಾಗ (ನಾಟಕ) .... | ಶ್ರೀ ಎಚ್. ಆರ್. ಸುಬ್ರಹ್ಮಣ್ಯಂ | ೧ |
| ಹಂಚಿಕೆ (ನಾಟಕ) .... | ಶ್ರೀ ಕೆ. ಎ. ಎಸ್. ರಾವ್ | [illegible] |
| ಭಕ್ತನ ಕನಸು (ಸಣ್ಣ ಕತೆ) .... | ಶ್ರೀ ಕೆ. ಎ. ಎಸ್. ರಾವ್ | [illegible] |
| ದಾದಿ (ಸಣ್ಣ ಕತೆ) .... | ಶ್ರೀ ಕೃಷ್ಣ ಪಾಟೀಲ | [illegible] |
| ಮಾಸ್ತಿಯವರು (ವ್ಯಕ್ತಿಚಿತ್ರ) .... | ಶ್ರೀ ಕೆ. ಎ. ಎಸ್. ರಾವ್ | [illegible] |

# ತ್ಯಾಗ

## ( ಏಕಾಂಕ )

ಬರೆದವರು.

ಎಚ್. ಆರ್. ಸುಬ್ರಹ್ಮಣ್ಯ ಅಯ್ಯರ್

### ಪಾತ್ರಗಳು.

| | | |
|---|---|---|
| ರಾಮರಾಯ | ... | ಒಬ್ಬ ಧನವಂತ |
| ಕುಪ್ಪು | ... | ರಾಮರಾಯನ ಮಗ |
| ಅಚ್ಚಿ | .... | ರಾಮರಾಯನ ಹೆಂಡತಿ |
| ಸೋಮು | .... | |
| ಚಂದ್ರಿ | .... | ಕುಪ್ಪನ ಸ್ನೇಹಿತ, ಸ್ನೇಹಿತೆಯರು |
| ಆದಿ | .... | |
| ಪದ್ಮಾ | .. | |
| ನರಸಿಂಹಯ್ಯ | ... | ಬಿಟ್ಟಿ ವರ್ಗ ಪಟ್ಟಿ ಕೂಡಿಸುವವನು |
| ಕನ್ನೆ | .... | ನರಸಿಂಹಯ್ಯನ ಮಗಳು |

ಕುರುಡ, ಪುರೋಹಿತ, ಸುಬ್ಬು, [illegible], ಮಾಣಿ ಇತರ ಪಾತ್ರಗಳು.

ಸ್ಥಳ: ಬೆಂಗಳೂರು

[ರಾಮರಾಯನ ಮನೆಯ ಹಜಾರ. ಕುಪ್ಪನನು ಹಿಡಿದ ಅಚ್ಚಿ. ಅತ್ತ ಸುಬ್ಬಿ. ಇತ್ತ ವೆಂಕೂಬಾಯಿ.]

**ಕುಪ್ಪ**:— [ ತಾಯ ಹಿಡಿಯಿಂದ ಕಿತ್ತಿಕೊಂಡು ಹೋಗುತ್ತಾ] ಉಹು ಉಹು. ಈ ಹಾಳು ಸಂಪ್ರದಾಯದ ಭ್ರಮೆ ಇನ್ನು ಅಸಹ್ಯ ನನಗೆ. ಒಂದು ಆತ್ಮವನೆ ಪಂಜರದಲಿ ಹಾಕಿಕೊಂಡು ನಾವೂ ಅದಕ್ಕೆ ಕಟ್ಟಿಬಿದ್ದುಕೊಂಡು ಒದ್ದಾಡುವದು! ಈ ದೇವರ ಹಾಗಿರುವ ಜಲ್ಮ ಆ ರೊಚ್ಚಿಗೇಡಿನ ಮುಳುಹಳ್ಳದಲ್ಲಿ ಮಿಲಿಮಿಲಿ ಒದ್ದಾಡುತ್ತಿರುವುದೆ, ಬೇಕುಬೇಕೆಂದು ಮಾಡಿಕೊಂಡು? [ನಿಷ್ಕ್ರಮಣ.]

**ಅಚ್ಚಿ**:— ಏನು ಹುಡುಗ ಅಪ್ಪ ಇವನು!

**ಸುಬ್ಬಿ**:— ವೆಂಕೂಬಾಯಮ್ಮನವರು ಹೇಳಿದ ಹಾಗೆ ಮಾಡದೆ ಇರಿ. ಅವನು ಕೈಗೆ ಸಿಕ್ಕರೆ ನೋಡಿ.

**ವೆಂಕಿ**:— ನನ್ನ ಮಗ ಆಗಬೇಕಾಗಿತ್ತು.

(ರಾಮರಾಯನ ಪ್ರವೇಶ.)

**ರಾಮು**:— ಏನೆ? ಮರುಹಚ್ಚಿಬಿಟ್ಟಿಯೊ ನಿನ್ನ ಪಾರ್ಲಿಮೆಂಟಿಗೆ?

(ಸುಬ್ಬಿ ವೆಂಕೂಬಾಯಿ ನುಸುಳಿಕೊಂಡು ಹೋಗುತ್ತಾರೆ.)

**ರಾಮು**:— (ತಲೆಯ ಚೆಚ್ಚಿಕೊಂಡು) ಗ್ರಹಚಾರ! ಎದುರುಮನೆಯ ರುಕ್ಕುವನು ನೋಡು; ಗಂಡ ಆಚೆ ಹೋದ ಎಂದರೆ ಯಾವಾಗ ಬರುತ್ತಾನೋ ಅಂತ ಅವನು ಹೋದ ದಾರಿಯನೆ ಕಾಯುತಿರುತ್ತಾಳೆ. ಅವನು ಬಂದ ಎಂದರೆ ಕೈಕಾಲು ತೊಳೆದುಕೊಳುವುದಕ್ಕೆ ನೀರೋ, ನಿಡಿಯೋ, ಆ ಉಪಚಾರವೊ, ಆ ಮೃಷ್ಟಾನ್ನವೊ, ನೀನೆಲ್ಲಿ ಬಂದೆಯೆ! ಶಿಂಗಲೀಕ? ಮೂರು ಹೊತ್ತೂ ಬಾಳುಗೆಟ್ಟವರನು ಕಟ್ಟಿಕೊಂಡು- ನಿನ್ನ ಎಣ್ಣೆ ನೋರೆಯೋ, ನಿನ್ನಬರಲು ತಲೆಯೋ? [ಹಜಾರದ ಬಲಗಡೆಗಿರುವ ಕೋಣೆಯ ಕಡೆಗೆ ನೆಟ್ಟಿಬಿಚ್ಚಿಕೊಂಡು ಹೋಗುತ್ತಾ.] ರಾಮೂ! ರಾಮು! ನಾನು ಇಷ್ಟು ರೋಮ್ಯಾಂಟಿಕ್ ಆಗಿರುವುದಕ್ಕೂ, ನೀನು ಟಿಬೆಟ್‌ಲಾಮಾ ಹೆಂಡತಿಯ ಗುಲಾಮಗಿತ್ತಿ ಆಗಿರುವುದಕ್ಕೂ!

**ಅಚ್ಚಿ**:— [ಸೆಡಕಿಕೊಂಡು] ನೀವು ನನ್ನ ಇಟ್ಟುಕೊಂಡಿರುವುದೊ?

ಏಮರುಮನೆಯು ಪುಟ್ಟ, ಅವನು ಗಂಡ ಅಂದರೆ ಗಂಡನೆ ! ಆ ಒಡವೆ ! ಆ ವಸ್ತ್ರ! ಇಲ್ಲಿ ಹೊಟ್ಟೆಗೆ ಸರಿಯಾಗಿ ಕೂಳಿಲ್ಲ. ಒಡಲಿಗೆ ಸರಿಯಾಗಿ ಬಟ್ಟೆ ಇಲ್ಲ. ಮಾತಿಗೆ ಮಾತ್ರ ಲಕ್ಷಾಧೀಶ್ವರನ ಹೆಂಡತಿ.

(ನಿಷ್ಕ್ರಮಣ.)

**ರಾಮು:**— (ಒಳಗಡೆಯಿಂದಲೆ ಚಂಡಿಸಿ.) ಕೆಟ್ಟ ಸೋಲಿ.

(ಬಾಗಿಯ ಪ್ರವೇಶ)

**ಬಾಗಿ:**— (ಬಾಗಿಲ ಆಚೆ ನಿಂತು.) ಅಚ್ಚಮ್ಮನವರೆ.

**ರಾಮು:**— (ಒಳಗಡೆಯಿಂದಲೆ.) ಜೇನಾಯಿತಪ್ಪ, ನಿರುದ್ಯೋಗಿಗಳ ಸಂಘಕ್ಕೆ.

**ಬಾಗಿ:**— (ಗೊಣಗುಟ್ಟಿಕೊಂಡು ನಿಷ್ಕ್ರಮಿಸುತ್ತಾಳೆ.)

**ಅಚ್ಚಿ:**— (ಹೊರಗಡೆ ಬಂದು) ನೀವೇಕೆ ಇಂದು ಹೀಗೆ ?

**ರಾಮು:**— ನೋಡು. ನನ್ನ ರೇಗಿಸಬೇಡ. ಇನ್ನುಮೇಲೆ ಸರ್ಕಾರದವರಿಗೆ ತಿಳಿಸಬೇಕು. ಅವರಿಗೆ ಗೊತ್ತಿರುವುದಕ್ಕಿಂತ ಹೆಚ್ಚಾಗಿದೆ, 'ಅನೆಂಪ್ಲಾಯ್‌ಮೆಂಟ್ ಪ್ರಾಬ್ಲಮ್' ಅಂತ.

**ಅಚ್ಚಿ:**— ಏನಂತ ಆಡುತೀರೊ ?

(ನಿಷ್ಕ್ರಮಣ.)

(ರಾಮುರಾಯನು ಮರುಗುಟ್ಟಿಕೊಂಡು ನೋಡುತ್ತಾನೆ.)

(ಆದಿಯ ಪ್ರವೇಶ)

**ಆದಿ:**— ರಾಯರೆ ರಾಯರೆ. ಕುಪ್ಪು ನೋಡಿ. ಯಾವನೋ ಒಬ್ಬ ತಿರುಕ ಕೇಳಿಕೊಂಡರೆ ತಾನು ಉಟ್ಟ ಬಟ್ಟೆಯನೆಲ್ಲಾ ಕೊಟ್ಟುಬಿಟ್ಟು, ಒಬ್ಬ ಅವಧೂತ ವೇಷದ ದಾರಿಹೋಕನ ಹಿಂದೆ ಹೋಗುತಿರುವುದು.

**ರಾಮು:**— ನಿನ್ನೆ ತಾನೆ ಹೊಲಿಸಿದ ಹೊಸ ಷರಟು. ಹೊಸ ಪೈಜಾಮ ?

(ಬೀದಿಯ ಕಡೆಗೆ ಓಡಿಹೋಗುತ್ತಾನೆ. ಒಳಗಡೆಯಿಂದ ಅಚ್ಚಿ ನಡೆಸಿಕೊಂಡು ಬರುತ್ತಾಳೆ.)

**ರಾಮು:**—(ಮತ್ತೆ ಪ್ರವೇಶಿಸಿ.) ಷರಟು ಎಂಟು ರೂಪಾಯಿ; ಪೈಜಾಮ ಹನ್ನೆರಡು ರೂಪಾಯಿ;

**ಅಚ್ಚಿ**:—ಹೊಟ್ಟೆ ಕಿವುಚಿಕೊಂಡರು, ಮಗು ಎಲ್ಲಿ ಹೋಯಿತೋ ಅಂತ ಇಲ್ಲ. (ಅಣಕಿಸುತ್ತಾ) ಕೌಪೀನ ಎರಡಾಣೆ. ಇಪ್ಪತ್ತು ರೂಪಾಯಿ ಎರಡಾಣೆ—ಅಂತ ಅಳಿ.

**ರಾಮು**:— ನನ್ನನು ರೇಗಿಸಬೇಡ ನೋಡು. ಕಾಸು ನಿಮ್ಮಪ್ಪ ಕೊಡಲಿಲ್ಲ. ಮೂರು ಕಾಸೂ....

**ಅಚ್ಚಿ**:— ನೀವು ಹೆತ್ತು.... ...

(ಬೀದಿಯಲಿ ಯಾವೊಬ್ಬನೋ ಸುಳಿದು ಹೋದಂತಾಗಿ 'ಅಚ್ಚಿ, ಕಪ್ಪೂ, ಕುಪ್ಪೂ' ಎಂದು ಕೂಗಿಕೊಂಡು ಹೋಗುತ್ತಾಳೆ.)

**ರಾಮು**:— ಹೋಗು. ನಿನಗೂ ಹುಚ್ಚು ಹಿಡಿದು ಹೋಗಲಿ. ಹಾಗೆಯೆ ಆ ಇಪ್ಪತ್ತು ರುಪಾಯಾದರೂ ಮಿಗಲಿ.

(ಆದಿ ವಿಸ್ಮಿತನಾಗುತ್ತಾನೆ.)

**ಆದಿ**:— (ಸ್ವಗತ) ಅಬ್ಬ ! ಹಣವೆ ಇವನಿಗೆ ಪ್ರಾಣ !

**ಅಚ್ಚಿ**:— (ಹುಚ್ಚಿಯಂತಾಗಿ ಬಂದು.) ನಮ್ಮ ಕುಪ್ಪುವಿಗೆ ಏನಾದರೂ ಮಾಡಿ ಒಂದು ಒಳ್ಳೆಯ ಹುಡುಗಿಯನು ತಂದು ಗಂಟು ಹಾಕಿಬಿಡಿ ಹಾಕಿಬಿಡಿ ಅಂತ ಎಷ್ಟು ಹೊಡೆದುಕೊಂಡರೂ ಹಣ-ದುಡ್ಡು-ಕಾಸು-ಅಂತ ನಚ್ಚುನಚ್ಚಾಗಿ ಹಲ್ಲು ಕಿರಿದಿರಿ. ಇನ್ನು ಸುಖವಾಗಿ ಕಬ್ಬಿಣದ ಪೆಟ್ಟಿಗೆ ದೊಡ್ಡದು ಮಾಡಿಕೊಳ್ಳಿ. ಜೆಂಕಿಶಾಸ್ತ್ರ ಬಲ್ಲವಳು ಅಂತ ಎಷ್ಟು ಹೇಳಿದರೂ ನಿಮಗೆ ತಾತ್ಸಾರ. ಅವನು ರಾತ್ರಿಯೆಲ್ಲಾ ನಿದ್ದೆಯೇ ಮಾಡುವುದಿಲ್ಲ. ನಿದ್ದೆ ಬಂದಾಗ ಕೂಡಾ-ಕನವರಿಸಿಕೊಂಡು 'ಶಾರದಾ! ಶಾರದಾ!' ಎಂದು ಹಂಬಲಿಸಿಕೊಳುತಾನೆ. ನನಗೆ ಅಷ್ಟು ಸೂಕ್ಷ್ಮ ತಿಳಿಯದೆ ? ಇನ್ನು ಆಯಿತು. ತಣ್ಣಗಿರಿ. ಕಬ್ಬಿಣದ ಪೆಟ್ಟಿಗೆ ಕಾದುಕೊಂಡು. ನಾನೂ ಕೆರೆಯೋ, ಕೊಳವೋ ನೋಡಿಕೊಳುತೇನೆ. (ಉದ್ಗಾರದಿಂದ.) ಅಪ್ಪ ಜೀನಿಗ, ಮಗ ಸನ್ಯಾಸಿ, (ನಿಷ್ಕ್ರಮಣ)

**ರಾಮು** :— ಅಚ್ಚಿ ! ಅಚ್ಚೀ ! (ನಿಷ್ಕ್ರಮಣ)

**ಆದಿ**:— ಏನು ಜನಗಳಪ್ಪಾ !

[ಮುಂದೆ ಒಂದು ಬೆಳ್ಳಿಯ ಲೋಟವನು ಕಂಡು ಅದರ ಬಳಿಗೆ ಹೋಗಿ, ಅದ ತೆಗೆದುಕೊಂಡು ಅಂಗಿಯ ಒಳಗಡೆ ಮರೆಸಿಟ್ಟುಕೊಳ್ಳುತ್ತಾನೆ.]

**ರಾಮು**:-(ಹಿಂದಕ್ಕೆ ಬಂದು.) ಆದಿ, ಸ್ವಲ್ಪ ಬಾಗಿಲ ಹತ್ತಿರವೆ ನೋಡಿ ಕೊಂಡಿರಪ್ಪಾ. ನೀನು ರಾಜಾ ಹುಡುಗ. ಅದಕ್ಕೇ.... (ನಿಷ್ಕ್ರಮಣ.)

[ಒಳಬನಿಯನು ಚಿಡ್ಡಿ ಧರಿಸಿದ ಕುಪ್ಪು ಪ್ರವೇಶ. ಅವನು ಧೃಢಾಂಗ. ಸುರೂಪಿ. ಅವನೊಡನೆ ಸೋಮು ಚಂದ್ರಿ ಪ್ರವೇಶ.]

**ಕುಪ್ಪು**:— [ಮಂದಹಾಸ ಬೀರಿ.] ನೀವು ಮೃಗವನು ಹಿಡಿದು ತರು ವಂತೆ ತಂದೆವೆಂದು ಗರ್ವಿಸಿದಿರೊ. ನಿಮ್ಮ ಮೂಳೆಗಳಲೊಂದೂ ಉಳಿಯುವ ದಿಲ್ಲ. ಅಪ್ಪಾ, ಬಡವರು ಅಂತ ಕೆಂಜಿಕೊಂಡು ಬಂದಿರೊ ನೀವೂ ಪಾಪ ಬಡವರು. ಅಪ್ಪನ ಹತ್ತಿರವೂ ಹಣ ಮಸ್ತಾಗಿ ಕೂಡಿದೆ. ಹೆಮ್ಮೆ ಹೇಳಿ ಕೊಂಡು ಒಂದೆರಡು ಕಾಸು ಕಿತ್ತಿಕೊಂಡು ಹೋಗುತೇವೆ ಮಾತ್ರವಪ್ಪಾ ಎಂದು ಮಂಗಮುಸುಡಿ ಹಾಕಿಕೊಂಡು ಕೆಂಜಿಕೊಂಡಿರೊ. ನಾನೂ ನಿಮಗೆ ಸಾಕ್ಷಿ. (ಆದಿಯನು ನೋಡಿ.) ಆದಿ ಏನೋ ಅದು ನಿನ್ನ ಷರಟಿನಲ್ಲಿ ?

(ಆದಿ ಭಯಗೊಂಡು ಬೆಳ್ಳಿಯ ಬಟ್ಟಲ ಕೆಡವಿಕೊಳ್ಳುತ್ತಾನೆ.)

[ಸೋಮು ಚಂದ್ರಿ ನಗುತ್ತಾರೆ.]

ತೊಗೋ. ನೀನೂ ಬಡವ. ಆದರೆ ಆದಿ, ಇನ್ನುಮೇಲೆ ಮಾತ್ರ ಕಣ್ಣು ಮುಚ್ಚಿ ಕದಿದು ಗುಣ ಕೆಡಿಸಿಕೊಳ್ಳಬೇಡ. ದೇವರು ನಗುತಾನೆ. ನೋಡು. ನಮಗೇನು ಹೇಳು. ಅಂತಹ ಬೆಳ್ಳಿಯ ಒಟ್ಟಲಗಳು ಬೇಕಾದಷ್ಟಿವೆ. ಕೇಳಿ ಕೊಂಡರೆ ಕೊಡಲಾರನೆ ?

**ಆದಿ**:— [ದೈನ್ಯತೆ ಅದಿರುತಾ.] ಕುಪ್ಪು. ಕುಪ್ಪಣ್ಣಾ. ಕ್ಷಮಿಸೊ.

[ಕುಪ್ಪು ಬೆಳ್ಳಿಯ ಬಟ್ಟಲನು ತೆಗೆದುಕೊಂಡು ಆದಿಗೆ ಕೊಡಹೋಗುತ್ತಾನೆ.]

**ಕುಪ್ಪು**:— [ಆದಿಯ ಮುಖವ ನೋಡಿ ಮನ ಮರುಗಿ, ಅವನ ಗಲ್ಲವ ಹಿಡಿದುಕೊಂಡು.] ಆದಿ, ತೊಗೊ. ಕೋಪವೆ ಅವಮಾನ ಮಾಡಿದೆ ಅಂತ. ಈ ಪ್ರಪಂಚದ ಮೇಲೆ ಯಾವುದು ಯಾರದು ಆದಿ ? ಆದರೆ ಮಾತ್ರ ನಮ್ಮ ಅಂತರಾತ್ಮ ಒಪ್ಪದುದು ಮಾಡಿ ಗುಣ ಕೆಡಿಸಿಕೊಳ್ಳಬಾರದು. ಅಷ್ಟೆ. (ಬಟ್ಟಲನು ಕೊಡಹೋಗಿ.) ತೊಗೊ. ನಮ್ಮ ಮನೆಯಲಿ ಯಾರಾದರೂ ಕೇಳಿ ದರೆ ನಾನು ಕೊಟ್ಟೆ ಅಂತ ಹೇಳು. (ಆದಿಯು ಸೋಮು ಚಂದ್ರಿಗಳ ಮುಖಗಳ ನೋಡುತ್ತಾ ಸೋಲು ಮುಖಹಾಕಿಕೊಂಡು ನಿಲ್ಲುತ್ತಾನೆ.) ಅವರು ನನ್ನ ಸ್ನೇಹಿ ತರು. ನನಗೆ ಇಷ್ಟವಿಲ್ಲದೆ ಇರುವದನು ಅವರು ಮಾಡುವುದಿಲ್ಲ.

(ಆದಿ ಒಲ್ಲದೆ ಹಲ್ಕಿರಿದುಕೊಂಡು ನಿಲ್ಲುತ್ತಾನೆ.)

**ಕುಪ್ಪು**:— (ಕೋಪಗೊಂಡು) ಆದಿ, ನೀನು ಹೀಗೆಯೇ ಹಲ್ಕಿರಿಯು ತಿರು. ನಮ್ಮ ತಂದೆಯವರ ಕೈಯಲಿ ನಿನಗೆ ಬಲಿ ಹಾಕಿಸುತೇನೆ.

(ಆದಿಯು ಬೆಳ್ಳಿಯ ಬಟ್ಟಲ ಕೆಡಹಿಕೊಂಡು ಕೆಟ್ಟೆನೋ ಬದುಕಿದೆನೋ ಎಂದು ಕೊಂಡು ಓಡಿಹೋಗುತ್ತಾನೆ.)

(ಬಟ್ಟಲನು ತೆಗೆದುಕೊಂಡು-ಕುಪ್ಪುವು 'ಆದಿ' ಎಂದು ಕೂಗಿಕೊಂಡು ಅವನ ಹಿಂದೆ ಹೋಗುತ್ತಾನೆ; ಮತ್ತೆ ಒಬ್ಬ ಕುರುಡನ ಹಿಂದೆಯೆ ಅನುಸರಿಸಿ ಬರು ತ್ತಾನೆ: ಕಣ್ಣಳಲಿ ನೀರು ತುಂಬಿದೆ.)

**ಕುರುಡ**:— ಅಯ್ಯೋ! ಎರಡೂ ಕಣ್ಣೂ ಇಲ್ಲವಪ್ಪಾ ತಂದೇ! (ಕಣ್ಣುಗಳ ಕೈಗಳಲಿ ಬಿಡಿಸಿ ತೋರಿಸುತಾ) ಭಂಡಗೆಟ್ಟು ಈ ಹಾಳು ಹೊಟ್ಟೆ ಹೊರೆಯುವದಪ್ಪಾ. ನೀವೇ ಎಲ್ಲಾ ನನ್ನ ತಂದೆ. ಪರಮಾತ್ಮಾ. (ಕೈಗಳ ಯಾಚಿಸುವಂತೆ ನೀಡಿಕೊಂಡು ಬರುತ್ತಾನೆ. ಕುಪ್ಪು ಮರುಕಕೆ ಅತಿ ನಮ್ರನಾಗಿ ಕೈಯಲಿದ್ದ ಬೆಳ್ಳಿಯ ಬಟ್ಟಲ ಕೊಡುತ್ತಾನೆ.)

**ಕುಪ್ಪು**:— ಇದು ಬೆಳ್ಳಿಯ ಬಟ್ಟಲು ಕಾಣಪ್ಪಾ-ತೊಗೋ.

[ಕುರುಡನು ಹಿಗ್ಗಿ ಆ ಬಟ್ಟಲ ಕೊಂಡು ಅದನು ತಡವಿ ನೋಡುತ್ತಾ-ಕಣ್ಣುಗಳ ಹತ್ತಿರಕೆ ತಂದುಕೊಂಡು ಕಣ್ಗಳ ಮುಂದಾಡಿಸಿಕೊಂಡು ಹರ್ಷಕೆ ಕುಣಿದಾಡು ತ್ತಾನೆ.]

**ಕುರುಡ**:— ಶಿವಾ ಶಿವಾ ಮಹದೇವ ಶಿವಾ. ಕಣ್ಣಿಲ್ಲವರಿಗೆ ನೀನೆ ಶಿವಾ! ಕಾಲಿಲ್ಲವರಿಗೆ ನೀನೇ ಶಿವಾ. ನಮ್ಮಪ್ಪನ ಪೊರೆ ಸದಾಶಿವ! ತಂದೇ. ತಂದೇ. (ಕೈ ಮುಗಿದುಕೊಂಡು) ತಣ್ಣಗ ಬದುಕಪ್ಪಾ ಶಿವಾ. ನಿನ್ನ ಮಕ್ಕಳು ಮರಿ ಉದ್ಧಾರವಾಗಲಪ್ಪಾ. (ನಿಷ್ಕ್ರಮಣ.)

**ಕುಪ್ಪು**:— ಪಾಪ!

**ಚಂದ್ರಿ**:— ಕುಪ್ಪು! ಕುಪ್ಪು! ಕೋಪಿಸಿಕೊಳ್ಳಬೇಡ ನೋಡು. ಹೀಗೆ ತಂದೆ ಸಂಪಾದಿಸಿದುದನು ಮಗ ಹಾಳು ಮಾಡುತ ಬಂದರೆ ಯಾವ ದೊಡ್ಡಸ್ತಿಕೆ ಹೇಳು?

**ಕುಪ್ಪು**:— ತಂದೆ ಸಂಪಾದಿಸುವುದೇಕೆ ಚಂದ್ರಿ?

(ಪದ್ಮಪ್ರವೇಶ)

**ಪದ್ಮ**:— ಕುಪ್ಪು ಏನು ಹೀಗೆ?

**ಕುಪ್ಪ**:— ಪದ್ಮಾ ಹೀಗಿದ್ದರೆ ನಿನಗೆ ವಿಲಕ್ಷಣವಾಗಿ ಕಾಣುತ್ತೇನೆಯೆ?

**ಪದ್ಮ**:— ಇಲ್ಲ. ಇಲ್ಲ. ಹೇಳಿದೆ ಅಷ್ಟೆ.

[ ಕುಪ್ಪ ಕೊಠಡಿಗೆ ಹೋಗಿ ಸೊಗಸಿನ ಉಡುಪುಗಳ ಧರಿಸಿ ಬಂದು, ಬಿಂಕವಾಗಿ ನಿಂತು. ]

**ಕುಪ್ಪ**:— ಪದ್ಮಾ, ಈಗ? ಹೀಗಿದ್ದು ಒಂದು ವೇಳೆ ನಿನ್ನನು ಅಲಕ್ಷ್ಯವಾಗಿ ಕಂಡೆನೆನ್ನು. ಆಗ?

**ಪದ್ಮಾ**:— ಆಗ ಕೂಡಾ ನಿನ್ನ ಸಮಾನ ಪ್ರಪಂಚದಲ್ಲೇ ಒಬ್ಬನಿಲ್ಲ ಅಂತ ಹೇಳುತಿದ್ದೆ ಕುಪ್ಪ.

**ಕುಪ್ಪ**:— ಸರಿ. ಆಗ ನೀನು ಬರಿ ಸುಳ್ಳು ಹೇಳುತಿದ್ದೆ.

**ಪದ್ಮಾ**:— ಇಲ್ಲ ಇಲ್ಲ. ಯಾರನ್ನು ಬೇಕಾದರೂ ಕೇಳಿಕೊ.

[ ಸೋಮು ಚಂದ್ರಿ ಮುಖಗಳ ಮುಚ್ಚಿಕೊಂಡು ನಗುತ್ತಾರೆ.]

**ಪದ್ಮಾ**:—(ಅದನವಗಾಹಿಸಿ ಚಪಲತೆಗೊಂಡು) ಬರುತ್ತೇನೆ, ಬರುತ್ತೇನೆ. ನಮಸ್ಕಾರ, ನಮಸ್ಕಾರ.

( ಹೊರಡಲುದ್ಯುಕ್ತಳಾಗುತ್ತಾಳೆ.)

**ಕುಪ್ಪ**:— ( ಸೋಮು ಚಂದ್ರಿಗಳನ್ನು ದುರುಗುಟ್ಟಿ ನೋಡಿ. ಅವರು ಗಂಭೀರವಾಗಲು) ಪದ್ಮಾ, ಪದ್ಮಾ, ಏನಿದು ನಿನ್ನ ಹುಚ್ಚು? ಬಂದುದೇನು, ಕಾರಣ ಹೇಳದೆ ಹೋಗುವುದೇನು?

**ಪದ್ಮಾ**:— ( ಹಿಂತಿರುಗಿ ಏನನ್ನೋ ಜ್ಞಾಪಿಸಿಕೊಂಡಂತೆ ಅಭಿನಯಿಸಿ) ಏನೂ ಇಲ್ಲ.

**ಕುಪ್ಪ**:—ಯಾವುದಾದರೂ ಪುಸ್ತಕಕ್ಕಾಗಿ ಬಂದಿದ್ದೆಯೊ? ಅಥವಾ ಇನ್ನು ಯಾವುದಾದರೊಂದು ಸಂದೇಹನಿವೃತ್ತಿಗಾಗಿ ಬಂದಿದ್ದೆಯೊ?

**ಪದ್ಮಾ**:—( ಜ್ಞಾಪಿಸಿಕೊಂಡು ) ಚಿತ್ರನಾಟಕ ಇನ್ನೊಂದು ಸಲ ಓದ ಬೇಕೆನಿಸಿತು.

**ಕುಪ್ಪ**:— ಓ, ಏತಕ್ಕಾಗಿ ಅಶ್ಲೀಲ ಮರಳು ಮರೀಚಿಕೆ ಪದ್ಮಾ? ಅಥವಾ ಹಾಗೆ ಅವನೆ ನೀನು ಆಸೆ ಮಾಡಿದೆಯೆನ್ನು. ನೋಡು, ಅದೆಲ್ಲಾ ನನ್ನ ಬಾಯಲ್ಲೇ ಇದೆ. ನಿನ್ನೆದುರಿಗೇ ಬಂದು ಬೇಕಾದರೆ ನಾಟಕ ಆಡಿ ಬಿಡುತ್ತೇನೆ.

**ಪದ್ಮಾ:**— (ತಲೆಯನಾಡಿಸಿ) ಉಂ.

**ಕುಪ್ಪು:**— ರಾತ್ರಿ ಹತ್ತು ಘಂಟೆಗೆ.

**ಪದ್ಮಾ:**— ಉಂ.

**ಕುಪ್ಪು:**— ಇದೇನು, ಏನು ಹೇಳಿದರೂ 'ಉಂ' ಯಾರಾದರೂ ಇನ್ನೇನಾದರೂ ತಿಳಿದುಕೊಂಡರೆ ನಿನ್ನ ಗತಿ ?

**ಪದ್ಮಾ:**—ಕುಪ್ಪೂ, ಕುಪ್ಪೂ. ನಾಯಿಗಳು ಬಗುಳಿದರೆ ದೇವಲೋಕ ಹಾಳೆ ?

**ಪದ್ಮಾ:**—ಉಂ, ಸರಿ. ದೇವಲೋಕದ ಹಾಗೆಯೇ ಇರಲಿ ನಿನ್ನ ಮನಸ್ಸು.

**ಕುಪ್ಪು:**— (ಕೈ ಕೈ ಮುಗಿದು) ನಮಸ್ಕಾರ, ನಮಸ್ಕಾರ.

(ನಿಷ್ಕ್ರಮಣ.)

**ಕುಪ್ಪು:**— (ಅವಳು ಹೋದ ದಾರಿಯನೇ ಎವೆಯಿಕ್ಕದೆ ನೋಡುತ್ತಾನೆ. ಮತ್ತೆ ಚಂದ್ರಿಯ ಭುಜದ ಮೇಲೆ ಕೈಹಾಕಿಕೊಂಡು) ಚಂದ್ರಿ, ಏನು ಹೇಳುತೀ? ನನಗೆ ಮದುವೆಯ ಆಸೆ ಇದ್ದಿದ್ದರೆ ಇವಳನು ಬಿಟ್ಟು ಪ್ರಪಂಚದಲ್ಲೇ ಇನ್ನು ಯಾರನೂ ಆಗುತಿರಲಿಲ್ಲ.

**ಸೋಮು:**— ಆ ಕುಣಿಯುವ ಸೂಳೆಯನು.

(ಕುಪ್ಪು ಸ್ವಾಭಾವಿಕವಾಗಿ ಎಂದೆನುವಂತೆ ಛಟ್ಟನೆ ಸೋಮುವಿನ ತೋಳಿಗೆ ಏಟೊಂದನು ಕೊಡುತಾನೆ. ಅವನು ಮುಟ್ಟಿ ನೋಡಿಕೊಳುತ್ತಾನೆ.)

**ಕುಪ್ಪು:**— ಸೋಮು, ನಮಗೂ ಅಕ್ಕತಂಗಿಯರಿದ್ದಾರೆ. ಅವರನು ಎಲ್ಲರಿಗು ಮೇಲಾಗಿ ಷೋಕಾಗಿಟ್ಟಿರಬೇಕು ಎಂದು ನಾವು ಆಸೆಪಡುತ್ತೇವೆ. ಹಾಗೆಂದರೆ ತಲೆಹಿಡುಕರೆಂದೇನು ?

**ಚಂದ್ರಿ:**—ಏಕೆ ? ಸಂಭಾವಿತರಾದ ಗಂಡಸರು ಬೀದಿಯಲಿ ಹಾಯ್ದು ಹೋದರೆ ಸಾಕು. ಬೀದಿಯ ಬಾಗಿಲುಗಳನೇ ಶೂನ್ಯ ಮಾಡಿ ಒಳಕ್ಕೆ ಓಡಿಹೋಗುವ ದಿನಕ್ಕೆ ಮೂರು ಸಲ ಮಡಿ, ನಾಲ್ಕು ಸಲ ಜಪ ಮಾಡಿಕೊಂಡು, ಈ ಕಾಲದ ಸರಸದಾಂಪತ್ಯವನೇ ಹೀನಾಯ ಮಾಡಿ ಅಣಕಿಸುವ ಅರುಂಧತೀ ಮಾನಿನಿಯರು ಎಷ್ಟೋ ಜನ ಒಳಗೊಳಗೇ ಮಾಡಿಕೊಳ್ಳುವ ಅಕೃತ್ಯ ತಿಳಿಯದು.

**ಕುಪ್ಪ**:— ಸತ್ಯವಾಗಿ-ಚಂದ್ರಿ. ನಾವು ಹುಡುಕಿಕೊಂಡು ಹೋದ ಹಾಗೆಲ್ಲಾ ಸಿಕ್ಕುತ್ತದೆ ಪ್ರಪಂಚ.

[ಅಚ್ಚಿಯು ಪ್ರವೇಶ]

**ಅಚ್ಚಿ**:— (ಬೀದಿಯಿಂದಲೇ ಕೂಗಿಕೊಂಡು) ಕುಪ್ಪೂ, ಕುಪ್ಪೂ. ಏ ಕಪ್ಪ ಸನ್ಯಾಸಿಯಾಗಿ ಹೋಗುವದು ನೀನು, ನಿನಗೇನು ಕೊರೆಯೊ ಇಲ್ಲಿ? [ಬಂದು ಗೋಪುವಿನೊತ್ತಿಗೆ ನಿಂತುಕೊಳ್ಳುತ್ತಾಳೆ.]

**ಕುಪ್ಪು**:— ಅಮ್ಮಾ. ಸನ್ಯಾಸಿ! ಯಾರು ಹೇಳಿದರು? ನೋಡು ಎಷ್ಟು ಸೊಗಸು ಮಾಡಿಕೊಂಡಿದ್ದೇನೆ.

**ಅಚ್ಚಿ**:— ಹಾಗಾದರೆ ನೀನು ಸನ್ಯಾಸಿಯಾಗಿ ಹೋಗಲಿಲ್ಲವಪ್ಪ? ಯಾರೋ ಹೇಳಿದರು. ನೀನು ಒಟ್ಟೆಬರೆಯನೆಲ್ಲಾ ಯಾರಿಗೊ ಎತ್ತಿ ಕೊಟ್ಟುಬಿಟ್ಟು, ಯಾವನೋ ಒಬ್ಬ ಕಪಟ ಅವಧೂತನ ಹಿಂದೆ ಹೊರಟು ಹೋದೆಯೆಂದು. ಇಲ್ಲವಪ್ಪೆ? ಹಾಗೆಲ್ಲಾ ಮಾಡಬೇಡವಪ್ಪಾ. ನಿನಗೇನು ಕೊರೆ, ಅವರು ಇಷ್ಟೆಲ್ಲಾ ಮಾಡಿಟ್ಟಿರುವಾಗ?

**ಕುಪ್ಪು**:— ಅಮ್ಮಾ, ನಿಜವಾಗಿ ನೋಡೆ. ಅವರೀಗ ಮಹಾತ್ಮ ರೆಂದರೆ ಅವರು ಓದಿಯೇ ಇಲ್ಲವಂತೆ. ಅಮ್ಮಾ ಯಾವ ಯಾವ ವೇದಾಂತ ಶಿರೋಮಣಿ, ಜಗದ್ಗುರು ಪಂಡಿತರತ್ನರೂ ಅರಿಯದ ಗಹನ ವಿಷಯಗಳ ನೆಲ್ಲಾ ಎಷ್ಟು ಸುಲಭವಾಗಿ ಹೇಳಿಬಿಟ್ಟರು ಅಂತ! ಆಶ್ಚರ್ಯವಾಗಿ ಹೋಯಿತೆ ತಾಯಿ ಅವರ ಹಿಂದೆಯೇ ಹೊರಟು ಹೋಗಬೇಕು ಅಂತ ನೋಡಿದೆ ಅದರೆ ಇವನೊಬ್ಬ ಮಾಯಿ. ಅವನೊಬ್ಬ ಮೋಹ ಕಾಣೆ ನನಗೆ.

**ಅಚ್ಚಿ**:— ಕುಪ್ಪೂ, ಕುಪ್ಪೂ. ಬೇಡವಪ್ಪಾ ಬೇಡ. ಅವಧೂತನಂತೆ ಅವಧೂತ. ಅವನಿಗಂತೂ ಹೊಟ್ಟೆಗಿಲ್ಲ. ಭಿಕಾರಿ ಬೀದಿ ಬೀದಿ ಅಲೆಯು ತಾನೆ ಅಂದರೆ ನೀನಗೇನಪ್ಪ ಅರೆಯಾಗಿರುವುದು? ಅಯ್ಯೋ ನನಗೆಷ್ಟು ಕಷ್ಟವಾಗಿ ಹೋಯಿತೊ! ನಿನ್ನ ಒಟ್ಟೆ ಬರೆಯುಯೆಲ್ಲಿ?

**ಕುಪ್ಪು**:— ಏತಕ್ಕಮ್ಮಾ? ನಾನೊಂದಷ್ಟು ಹಾಕಿಕೊಂಡಿದೇನೆ. ಪೆಟ್ಟಿಗೆಯಲಿ ಒಂವಷ್ಟಿದೆ. ಮಿಕ್ಕಿದ್ದು ಅಗಸರವನಿಗೆ ಹೋಗಿದೆ.

**ಅಚ್ಚಿ**:-ಹಾಗಾದರೆ ಕಂಡ ಕಂಡವರಿಗೆಲ್ಲಾ ದಾನ ಮಾಡಿಬಿಟ್ಟು ನೀನು

ವೈರಾಗಿಯಾಗಿ ಹೋಗುವದಿಲ್ಲವಷ್ಟೆ? ಹಾಗಾದರೆ ಮೊದಲು ಮದುವೆ ಮಾಡಿಕೊ.

**ಕುಪ್ಪು**:— ಏಕಮ್ಮ ನನ್ನ ಮೇಲೆ ಇಷ್ಟು ನಿಷ್ಕರುಣೆ?

**ಅಚ್ಚಿ**:—ಇದರಲ್ಲಿ ನಿಷ್ಕರುಣೆ ಏನು ಬಂತು ಮಗು?

**ಕುಪ್ಪು**:— ನೋಡು ಅಷ್ಟು ದಿನದಿಂದ ಹೊತ್ತು ಹೊತ್ತು ಈಗ ಒಂದೇ ಕ್ಷಣಕ್ಕೆ ಈ ದೇಹವನ್ನೂ, ಈ ಹೃದಯವನ್ನೂ ಪರರ ಪಾಲು ಮಾಡಿ ಬಿಡಬೇಕೆಂದಿದ್ದೀಯಲ್ಲವೆ? ನಮ್ಮದೇಶದ ತಾಯಿಯರು ಅಷ್ಟೊಂದು ಸಮರ್ಥರಲ್ಲವಮ್ಮಾ. ನೋಡು. ಎಷ್ಟೋ ಒಂದು ಕಡೆ ಹಾಗೆ ಮಾಡುವುದಕ್ಕೆ ಹೋಗಿ ಸಾಧ್ಯವಾಗದೆ, ಇತ್ತ ಕಡೆ ಮಕ್ಕಳು ಕಾರ್ಪಣ್ಯ ಪಡುತ್ತಿದ್ದಾರೆ. ಅತ್ತಕಡೆ ತಾಯಿ ಅತೃಪ್ತೆ. ಮತ್ತೊಂದು ಕಡೆ ಮನೆಗೆ ಬಂದ ಹೆಣ್ಣು ಸುರಿಸುವ ಕಣ್ಣೀರಿನಲ್ಲೂ, ಬಿಡುವ ನಿಟ್ಟುಸುರಿನಲ್ಲೂ ಸೇರಿದ ಮನೆಯನ್ನೆ ಧೂಳಿಪಟ ಮಾಡುತಿದ್ದಾಳೆ.

**ಅಚ್ಚಿ**:— ನಾನು ಅಷ್ಟೊಂದಕ್ಕೆಲ್ಲಾ ಅವಕಾಶ ಕೊಡುತ್ತೇನೆಯೆ, ಕುಪ್ಪು? ನಾನೇನು ಅನಾಗರಿಕ ಸಂಪ್ರದಾಯದ ಪಿಶಾಚಿ ಹೆಂಗಸಲ್ಲ. ನನಗೆ ಬೇಕಾಗಿರುವುದು ನಿನ್ನ ಸಂತೋಷ ಮಾತ್ರ. ನನಗೆ ಇನ್ನು ನನ್ನ ಮೇಲೆ ನಿನಗಿರುವ ವಿಶ್ವಾಸ ಕೂಡಾ ಅಷ್ಟು ದೊಡ್ಡದಲ್ಲ.

**ಕುಪ್ಪು**:— ಹೌದು ನನ್ನ ಸಂತೋಷ. ಅವಳ ದುಃಖ.

**ಅಚ್ಚಿ**:— ನಾನೇನು ಅವಳಿಗೆ ಮಲತಾಯಿಯೆ?

**ಕುಪ್ಪು**:— ಅದೂ ಅಲ್ಲದೆ ದೊಡ್ಡವರು ಅತಿ ಧೈರ್ಯವಂತರಿಗೂ, ಹಟ ಸಾಧಕರಿಗೂ, ವಿರಕ್ತರಿಗೂ, ನಪುಂಸಕರಿಗೂ, ಮಹಾರೋಗಿಗಳಿಗೂ, ದುರ್ಬಲರಿಗೂ ಮದುವೆಯನು ನಿಷೇಧಿಸಿದಾರೆ.

**ಅಚ್ಚಿ**:— ಆ ವಿಧವಾದ ಕೊರತೆ ಯಾವುದೂ ನಿನಗಿಲ್ಲವಲ್ಲ.

**ಕುಪ್ಪು**:— ಅಷ್ಟೇ ಅಲ್ಲದೆ, ಒಂದು ವೇಳೆ ಮದುವೆಯಾದ ಮೇಲೆ ನನಗೇ ಏನೋ ಸಂಭವಿಸಿತು. (ಅಚ್ಚಿ ಬೆಚ್ಚುತ್ತಾಳೆ.) ಕೈ ಹಿಡಿದ ಒಂದು ಹೂ ಆತ್ಮದ ಗೋಳು. ಬಾಳು ಯಾವ ದೈವಕ್ಕೆ ಒಂದು ಕಣ್ಸೂಜಿ. (ತಾಯಿ ಕಳವಳಿಸುತ್ತಾಳೆ.) ಮತ್ತೆ, ಅಪ್ಪ ಸಂಪಾದಿಸಿ ಇಟ್ಟಿರುವುದು ನನ್ನಂತಹ ದುಂದುಗಾರರಿಗೆ ಮೂರೇ ದಿನಕ್ಕೆ ಸಾಲದು. ನಾನೋ ಕಂಡ ಕಂಡ ದುರ್ಮದಗಳಿವಿರೆಲ್ಲಾ ಮಂಗ ಕುಣಿತ ಕುಣಿದುಕೊಂಡು ಬಾಳಿ ಬದುಕುವ ಜೀವವಲ್ಲ.

ಇರುವುದಲ್ಲ ತೀರಿಹೋದ ಮೇಲೆ ನನ್ನನ್ನೇ ನಂಬಿ ಬಂದವಳ ಗತಿ ? ನಾನೋ ಯಾವಾಗಲೂ ಓದು-ಆಲೋಚನೆ-ಅವಳಿಗೆ ಬೇಸರವಾಯಿತು. ಗತಿ ?

**ಚಂದ್ರಿ**:— ಕುಪ್ಪು. ಹೀಗೆ ನಮ್ಮ ಜೀವಿತದಲ್ಲೇ ನಮಗೆ ಎಷ್ಟೋ ಒಂದು ಸಂದೇಹವಾದರೆ ಏನೋಂದು ಮಾಡುವುದೂ ಅನರ್ಥವೇ. ಉಸಿರಾಡುವುದು ಕೂಡಾ.

**ಕುಪ್ಪು**:— ಮತ್ತೆ ಆ ಸಂಸಾರ ತಾಪತ್ರಯ: ಇಂದೋ ನಮ್ಮಳಿಷ್ಟ! ನಾಳೆಯೊ ನರಕ, ಹೇಯ. ಇಂದೋ ಯೌವನ, ಸೊಗಸು! ನಾಳೆಯೊ ಹಳಸು ಹುಳಿ; ವಾಸ್ತವ ಪದಾರ್ಥವೊಂದಿಲ್ಲ. ಶಾಶ್ವತ ಸುಖವೊಂದಿಲ್ಲ. ಹೂವು ಬಾಡುವುದಕ್ಕೆ ಮುಂದಾಗಿಯೆ ಮುದುಡಿದ ಅರಳೆ. ಜೇನು ಹೀರುವುದಕ್ಕೆ ಮುಂಚೆಯೆ ಮೇಣದ ಸೊಗಡು.

**ಚಂದ್ರಿ**:— ಪ್ರಪಂಚ ಧರ್ಮವೇ ಅಷ್ಟು. ಅದಕ್ಕಾಗಿ ಬಾಳು ಬೇಸರ ಮಾಡಿಕೊಂಡು ಪ್ರಯೋಜನವೇನು ಕುಪ್ಪು ? ನೋಡು. ಅದೇ ಸೃಷ್ಟಿಯ ಪ್ರಕೃತಿ. ನಿಸರ್ಗದ ಪರಿಸ್ಥಿತಿ. ಅಷ್ಟರಲ್ಲೇ ನಮಗೆ ಒಂದು ತೃಪ್ತಿಯಿಲ್ಲದಿದ್ದರೆ ಜೀವನ ಒಂದು ದುರಂತ ಕಥೆಯಾಗುತ್ತದೆ. ಸ್ವಭಾವವೆ ಒಂದು ಜ್ವಾಲಾಮುಖಿಯಾಗುತದೆ.

( ರಾಮರಾಯನ ಪ್ರವೇಶ )

**ರಾಮು**:— [ಬರುತ್ತಲೇ] ಲೋ ಹಲಾಲುಕೋರ.

(ಅಚ್ಚಿ ಕುಪ್ಪುವಿನ ಬಳಿ ಸರಿಯುತ್ತಾಳೆ. ಕುಪ್ಪು ಸುತ್ತಲೂ ಕಕ್ಕಾಬಿಕ್ಕಿಯಾಗಿ ನೋಡುತ್ತಾನೆ.)

**ರಾಮು**:— ನಿನ್ನನ್ನೇ ಕಾಣ್ತೋ.

**ಕುಪ್ಪು**:— ಅಪ್ಪಾ. ನಾನು ಸಪ್ಪಂಬನಷ್ಟೆ.

**ರಾಮು**:— (ಅಚ್ಚಿಗೆ) ಆಹಾಹ! ಇನ್ನೂ ಅಷ್ಟು ಸರಿಯಾದ ಮಗ ಇದ್ದರೆ ಇನ್ನೆಷ್ಟು ಆಡಿಬಿಡುತಿದ್ದೆಯೊ ಕಾಣೆ. [ಕುಪ್ಪುವಿಗೆ] ಪೋಕರಿ ಬಡವ. ವೇದಾಂತವಂತೆ ವೇದಾಂತ! ಸಪ್ಪಂಚ! ಅದು ನಿನ್ನ ತಲೆಗೆ ಹೆಸರು ಹೇಳಿತು.

**ಅಚ್ಚಿ**:— ಅದೇನಂವರೆ ಅದು—ಮಗು ಮಾಡಬಾರದ ಅಂಥ ಕೆಲಸ ಏನು ಮಾಡಿತು ?

**ಕುಪ್ಪು**:— ಸಂತೋಷ ಅಪ್ಪಾ.

**ರಾಮು**:— ಆ ಸೀತಿಗೆಟ್ಟ ಹುಡುಗಿ-ಪದ್ಮಾ ಬಂದಿರಲಿಲ್ಲವೇನೋ ಇಲ್ಲಿಗೆ ?

**ಕುಪ್ಪು**:— ಖಂಡಿತ ಬಂದಿದ್ದಳಪ್ಪಾ. ಅಷ್ಟೇಕೆ, ನಾನೇ ರಾತ್ರಿ ಹತ್ತು ಗಂಟೆಗೆ ಸರಿಯಾಗಿ ಅವಳ ಮನೆಗೇ ಹೋಗುವುದಾಗಿ ಹೇಳಿ ಕಳುಹಿಸಿದೆ (ಮತ್ತೆ ಚಿಂತಿಸಿ) ಏಕೆ? ಪದ್ಮಾ ಮಾತ್ರವೇನು ? ಎಷ್ಟೋ ಹುಡುಗಿಯರು ಬರುತ್ತಾರೆ. ಹೋಗುತ್ತಾರೆ. ಅವಳೇ ಏನು ?

**ರಾಮು**:— ಕುಲಕ್ಷಯ; ಮೊದಲು ಮದುವೆ ಮಾಡಿಕೊ.

**ಕುಪ್ಪು**:— ಹಾ: ಒಂದೇ ಒಂದು ಕಟ್ಟು, ಮುಖ ದೃಷ್ಟಿಸಿ ನೋಡಿಕೊಂಡು ಅದನ್ನು ವಿಕಾರ ಮಾಡುವುದಕ್ಕೆ? ಪಟ್ಟ ಸುಖಾನುಭವವನೆ ಪಟ್ಟುಕೊಂಡು ತೃಪ್ತಿಯ ನಾಲಗೆಯನು ಒಗರು ಮಾಡಿಕೊಳ್ಳುವುದಕ್ಕೆ ? ಪ್ರಪಂಚದೇಶೋ-ವಿಶಾಲ. ಭ್ರಾಂತಿಗೆ ಮುಕ್ತಪಕ್ಷ ಅಪ್ಪಾ. ಅಪ್ಪಾ ಅರಳುವ ಗುಲಾಬಿಯ ಮೊಗ್ಗನು ಕಿತ್ತು ಮುಡಿಯುವದಕ್ಕಿಂತ ಗಿಡದ ನೆತ್ತಿಯಲೇ ನೋಡಿ ಆನಂದ ಪಡುತ್ತಿದ್ದರೆ ಅದರ ಸೌಂದರ್ಯ ನಮ್ಮ ಒಂದು ಸಲದ ಹಿಗ್ಗಿಗಿಂತಲಾದರೂ ದೀರ್ಘಕಾಲ ಉಳಿದುಕೊಂಡೀತು.

**ಚಂದ್ರಿ**:— ಕುಪ್ಪು. ನೀನು ಆರ್ಷಧರ್ಮವನೆಲ್ಲಾ ತಿರಿವಿಹಾಕಿಬಿಟ್ಟೆ.

**ರಾಮು**:— ಇಲ್ಲ. ಇಲ್ಲ. ಇವನು ಬಹಳ ಬಹಳ ಕಲಿತುಬಿಟ್ಟ ಇತ್ತೀಚೆಗೆ. (ಕುಪ್ಪುವಿಗೆ) ಏನೋ ಭಡವ, ಮದುವೆ ಮಾಡಿಕೊಳ್ಳುತೀಯೋ, ಅಥವಾ ಮನೆ ಬಿಟ್ಟು ಹೋಗುತೀಯೋ ?

**ಕುಪ್ಪು**:— ಎರಡರಲೊಂದನೂ ಮಾಡುವುದಿಲ್ಲ.

**ಸೋಮು**:— ಕುಪ್ಪು, ಕೋಪಿಸಿಕೊಳ್ಳಬೇಡ. ಬಹು ಜನ ಪ್ರೇಮಿ ಯಾರೊಬ್ಬರನೂ ಸರಿಯಾಗಿ ಪ್ರೀತಿಸುವುದಿಲ್ಲ.

**ಕುಪ್ಪು**:— ಬೇಡ ಆದರೆ ಅವನು ಪ್ರಪಂಚದಲೆಲ್ಲರನೂ ಪ್ರೀತಿಸುತಾನೆ.

**ರಾಮು**:— ಏನು ? ಇವನು ಕೃಷ್ಣ! ಅಪ್ಪನ ಗಂಟು ಬಲವಾಗಿರಬೇಕು ಅಷ್ಟೇ.

**ಕುಪ್ಪು**:— ಅದೇ ಮತ್ತೆ ಎಲ್ಲಾ ಸುಖಕ್ಕೂ ಸಾಧನ.

**ರಾಮು**:— ಲೋ ಮುಟ್ಠಾಳ. ಜೆಟ್ಟಿಗಳ ಕೈಯಲಿ ಕಟ್ಟಿಹಾಕಿಸಿ

ಮದುವೆ ಮಾಡದಿದ್ದರೆ ಏಕಾದೀತು ?

**ಕುಪ್ಪು**:— ಅಪ್ಪಾ, ಯಾವ ಜೆಟ್ಟಿ ಹೇಳು ಅವನು.(ಮೈಯ ಹಿಗ್ಗಲಿಸು ತ್ತಾನೆ. ತೊಟ್ಟ ಷರಟು ಪಟಪಟನೆ ಹೊಲಿಗೆ ಕಿತ್ತು ಒಂದು ಕಡೆ ಸ್ವಲ್ಪ ಹರಿದು ಹೋಗುತ್ತದೆ.) ನೋಡಿದೆಯಾ ಹೇಗಿದೆ ?

**ಅಜ್ಜಿ**:— (ಸ್ವಗತ.) ಆಹಾ ! ಇವನು ನನ್ನ ಮಗ. ( ವಾತ್ಸಲ್ಯದಿಂದ ನೋಡುತಾಳೆ ಕುಪ್ಪುವನು. )

**ರಾಮು**:— ಓ ಷರಟು ಹರಿದು ಹಾಕಿಕೊಂಡೆಯೊ ? ನಿನಗೆ ನನ್ನ ಹಣದ ಬೆಲ ಅಷ್ಟು ಸುಲಭ.

**ಚಂದ್ರಿ, ಸೋಮು**:— (ಸ್ವಗತ) ಇವಕ್ಕಾಗಿಯೇ ನಾವು ಓಗೆ ಬಾಯಿಗೆ ಬೀಗ ಹಾಕಿಕೊಂಡಿರುವುದು.

**ಕುಪ್ಪು**:— ಅಪ್ಪಾ ನಿನ್ನ ಹಣ ಅಷ್ಟು ಸಾರ್ಥಕವಾಗುತಪೆಯಲ್ಲಾ ಅದಕ್ಕೆ ಸಂತೋಷಪಡಬೇಡವೆ ?

**ರಾಮು**:— ಅಜ್ಜಿ, ಇನ್ನು ಮೇಲೆ ಇವನಿಗೆ ತಿಂಡಿ ಕಡಿಮೆಮಾಡೆ.

**ಅಜ್ಜಿ**:— ಊ.

**ಕುಪ್ಪು**:— ಈ ಕೈಗೆ ಕಬ್ಬಿಣದ ಪೆಟ್ಟಿಗೆ ಯಾವ ಭದ್ರ ? ( ತೋಳ ಮಾಂಸ ಖಂಡವ ಹಿಸುಕಿ ನೋಡಿಕೊಂಡು.) ಕೈಗೆ ಸಾಧನೆ. ದುಡ್ಡಿಗೆ ಬಾದಾಮಿ ದ್ರಾಕ್ಷಿ.

**ರಾಮು**:— ನೀನು ನನ್ನ ಮನೆಯಲಿರಬೇಡ ಹೋಗು. (ಒಬ್ಬಳು ನವೀನ ಸುಂದರಿ. ಜೊತೆಯಲಿ ಒಬ್ಬ ದೊಡ್ಡ ಮನುಷ್ಯ. ಅವನನುಸರಿಸಿ ಒಬ್ಬ ಪುರೋಹಿತ ಪ್ರವೇಶ.)

**ಪುರೋಹಿತ**:— (ರಾಮುರಾಯನ ಬಳಿಗೆ ಹೋಗಿ.) ಇವರೇ ನಾನು ಹೇಳಿದ್ದು. ಡೆಪ್ಯುಟಿ ಕಮಿಷನರು ನರಸಿಂಹಯ್ಯನವರು.

**ಕುಪ್ಪು**:— (ಒಳಗೊಳಗೆ ನಗುತ. ಸ್ವಗತ.) ನರಸಿಂಹಾವತಾರವೆ !

**ರಾಮು**:— ಹೆಲ್ಲೋ ಸಾರ್.

[ರಾಮುರಾಯನು ಗೋಪುವಿನ ಮುಖವನು ಅರ್ಥಪೂರಿತವಾಗಿ ನೋಡು ತ್ತಾನೆ.]

**ಕುಪ್ಪು**:— ಒಳ್ಳೆಯ ಕ್ರಮ ಈ ಧರ್ಮಾವರದ ಸೀರೆಗಳು ಬಂದರೆ. ನನ್ನ ತೋಳುಗಳಿಗೆ; ಹೋಗಲಿ. ಹೀಗೆಯೇ ದಿನಕ್ಕೆ ಒಂದು ಇಪ್ಪತ್ತಾದರು

ಮೂರು ಸರಕು ಬರುತ್ತಿದ್ದರೆ ನನ್ನ ತೋಳ ಖಂಡವಾದರೂ ಇಷ್ಟಿಷ್ಟು ಬೆಳೆಯುತದೆ.

( ಒಂದು ಮೇಜ. ಅದರ ಸುತ್ತಲು ಐದು ಕುರ್ಚಿಗಳನ್ನು ತಂದು ಜೋಡಿಸುತ್ತಾನೆ. )

**ಕುಪ್ಪ**:— (ಕನ್ಯೆಯನ್ನು ಸಂಬೋಧಿಸಿ.) ಶ್ರೀಮತಿಯವರು ದಯವಿಟ್ಟು ಆ ಪೀಠವನಲಂಕರಿಸುವಷ್ಟು ಶ್ರಮ ವಹಿಸಬಲ್ಲಿರಾ ?

( ಶ್ರೀಮತಿ ಕುಪ್ಪ ನಿರ್ದೇಶಿಸಿದ ಒಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾಳೆ. ಅವನನೆಲ್ಲೋ ನೋಡಿದ ಜ್ಞಾಪಕವಾಗಿ ಆವಳ ಮುಖ ಬೆವರುತ್ತದೆ. ರಾಮರಾಯ ನರಸಿಂಹಯ್ಯ ಇವರೂ ಒಂದೊಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾರೆ. ಉಳಿದ ಒಂದು ಕುರ್ಚಿಯನ್ನು ನಿರ್ದೇಶಿಸಿ, ಕುಪ್ಪ. )

**ಕುಪ್ಪ**:— ಅಮ್ಮಾ ಇಲ್ಲಿ ನೀನು.

**ಅಜ್ಜಿ**:— [ಏಕಾಂತದಲಿ.] ನಾನೇನೋ ? ನೀನು ಕೂತುಕೊಳ್ಳೋ.

**ಕುಪ್ಪ**:— (ದೊಡ್ಡ ಮನುಷ್ಯರಿಗೆ) ಮಹಾರಾಜಶ್ರೀಯವರೆ, ಇವತ್ತು ಆಕಸ್ಮಾತ್ತಾಗಿ ಹೀಗೆ ಇಷ್ಟೊಂದು ಮಂದಿಯನ್ನು ನಾವು ನಿರೀಕ್ಷಿಸಲಿಲ್ಲವಾದ ಕಾರಣ ಈ ಶ್ರೀಮಂತ ಆಸನಗಳ ಬಳಿಯೆ ಬಡವರ ಸ್ಟೂಲುಗಳನ್ನು ಕೂಡಾ ತಂದು ಹಾಕಬಹುದೋ ?

**ನರಸಿಂಹ**:— ( ಸ್ವಗತ ) ಒಳ್ಳೆಯ ತೆನಾಲಿರಾಮನಾದನೆ ! (ಪ್ರಕಾಶ) ಅದಕ್ಕೇನು ?

(ಕುಪ್ಪ ಮೂರು ಸ್ಟೂಲುಗಳನ್ನು ತಂದು ಹಾಕುತ್ತಾನೆ. ಖಾಲಿ ಕುರ್ಚಿಯಲ್ಲಿ ತಾಯಿಯನ್ನು ಹಿಡಿದು ಬಲಾತ್ಕಾರವಾಗಿ 'ಕುಳಿತುಕೊ' ಎಂದು ಹೇಳಿ ಕುಳ್ಳಿರಿಸಿ. ನಡುವೆ ಇದ್ದ ಸ್ಟೂಲಿನಲಿ ತಾನು ಕುಳಿತು. ಎರಡೂ ಕಡೆಯ ಸ್ಟೂಲುಗಳನ್ನು ತನ್ನ ಗೆಳೆಯರಿಗೆ ತೋರಿ " ಅಮ್ಮಾ ಕಾಫಿ ? " ಎಂದು ಹೇಳಿಕೊಂಡು ಎದ್ದು ಹೋಗಲು ಸಡಗರಿಸುತ್ತಾನೆ.)

**ಅಜ್ಜಿ**:— (ಕುಪ್ಪುವಿಗೆ ಏಕಾಂತದಲಿ.) ಥೂ! ಇಷ್ಟು ದೊಡ್ಡ ಮನುಷ್ಯರು ಬಂದಾಗ ಕೂಡಾ ನಿನಗೆ ಗಂಭೀರವೇ ಇಲ್ಲ.

**ರಾಮ**:— (ಆಗ್ರಹಗೊಂಡು ಅಜ್ಜಿಗೆ) ನೀನು ಹೋಗೆ.

[ ಕುಪ್ಪುವನ್ನು ಮರಮರು ನೋಡುತ್ತಾನೆ.]

**ಕುಪ್ಪು**:— (ತಾಯೊಡನೆ ಏಕಾಂತದಲಿ.) ನಿನಗೂ ನನಗೂ ದೊಡ್ಡ ವರು ಯಾರೆ ? (ಪ್ರಕಾಶ. ಪೆಚ್ಚನಂತೆ ನಟಿಸಿ.) ಊ ಹೋಗಲಿ ಹೋಗು. [ದೊಡ್ಡ ಮನುಷ್ಯನಿಗೆ] ಈ ಶ್ರೀಮತಿಯವರೇನೋ ನನ್ನ ಮದುವೆ ಮಾಡಿ ಕೊಳ್ಳುವುದು ?

**ರಾಮು**:— [ಕೋಪಗೊಂಡು, ಕುಪ್ಪುವಿನ ಮುಖವನ್ನು ಉಗ್ರನೋಡಿ] [ಸ್ವಗತ]. ಹಾಳು ಹುಡುಗ: ಸುಮ್ಮನಾದರೂ ಇರಬಾರದೆ ಕಮಂಗಿ.

**ಕುಪ್ಪು**:— [ತಂದೆಯ ಮುಖವನ್ನು ನೋಡಿ ಗಂಭೀರವಾಗುತ್ತಾನೆ.]

**ನರಸಿಂಹ**:— [ಗರ್ಜಿಸಿ.] ಎಸ್.

**ಕುಪ್ಪು**:— (ಆಂಗ್ಲಭಾಷೆಯ ಗೌರವ ಅಣಕಿಸಿದಂತೆ ಬಾಯನ್ನು ವಕ್ರ ವಕ್ರ ಮಾಡುತ್ತಾನೆ.

**ಕುಪ್ಪು** — ಎಲ್ಲಾ ಮದುವೆಯ ಹುಡುಗಿಯರ ಹಾಗೆಯೂ ಅಲ್ಲವೆ ಇವರಿಗೆ ಗಂಡಿದರೆ ಮಾತ್ರ ಹಾಡುಗಾರಿಕೆ ತನಗೆ ತಾನಾಗಿಯೆ ಬರುತದೆ ಅಂತ ಕಾಣುತದೆ.

(ನರಸಿಂಹಯ್ಯನವರು ಅಲಸಿದ ಮುಖಮುದ್ರೆ)

**ರಾಮು**:— [ಅಲಸಿ.] ಹೌದು. ಸುಮ್ಮನೆ ಇರು ಸಾಕು.

**ಕುಪ್ಪು**:— ಅಲ್ಲ, ಕೇಳಿದೆ. ಏಕೆಂದರೆ ನನ್ನ ಜೊತೆಗೆ ಕಾಲೇಜಿನಲಿ ಓದುವ ಪದ್ಮಳಿಗೆ ಗಂಡಲೂ ಬೇಡ, ಏನೂ ಬೇಡ. ಇಷ್ಟಕ್ಕಿಷ್ಟ ಹಾಗೆಯೇ ಸಂಗೀತ, ನೃತ್ಯ ಎಲ್ಲ ಬಂದುಬಿಡುತದೆ. ಒಂದು ವೀಣೆ. ಒಂದು ಚಿಟಕಿ. ಅವಳಿಗೆ ಎಲ್ಲ.

**ರಾಮು**:— (ಕೋಪಗೊಂಡು ಏಳಲು ಸಡಗರಿಸುತ್ತಾನೆ.)

**ಕನ್ನೆ**:- ಪದ್ಮಾ? ಹುಡುಗಿ ಎಂದರೆ ಹುಡುಗಿಯಲ್ಲಿ ಬಹಳ ಮಾಡೆಸ್ಟ್ ಗರ್ಲ್. ಆದರೆ ಅವಳು ಸ್ವಲ್ಪ ಕನ್ಸರ್ವೇಟಿವ್. ನಮ್ಮ ಪಾರ್ಟಿ ಲಿಬರಲ್ ಪಾರ್ಟಿ.

[ಕುಪ್ಪು ಮೂಗಿನ ಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯದಿಂದ ತಿಂದೆಸು ನಂತೆ ನೋಡುತ್ತಾನೆ.]

**ನರಸಿಂಹ**:- ಷಿ ಈಸ್ ಬಿ. ಎಸ್. ಸಿ. ಆನರ್ಸ್ ಇನ್ ಪಾಲಿಟಿಕ್ಸ್,

**ಕುಪ್ಪು**:— ಬಹಳ ಸಂತೋಷ.

[ಅಜ್ಜಿ ಎಲ್ಲರಿಗೂ ಲೋಟಗಳಲ್ಲಿ ಕಾಫಿ ತಂದು ಕೊಡುತ್ತಾಳೆ. ರಾಮು ರಾಯನು ಕುಳಿತುಕೊಳ್ಳುತ್ತಾನೆ.]

**ಕುಪ್ಪು**:— (ತನ್ನ ಲೋಟವನ್ನು ಮೇಜದ ಮೇಲೆ ಎತ್ತಿಸೀದಿ ಹಿಡಿದು) ಟು ದಿ ಹೆಲ್ತ್ ಆಫ್ ದಿ ಹೈಲಿ ಎಜುಕೇಟೆಡ್ ಬ್ರೈಡ್.

(ಎಲ್ಲರೂ ಅಣಕಕೆಂದೆನುವಂತೆ ನಗುತ ಕುಡಿಯುತ್ತಾರೆ.)

**ಪುರೋಹಿತ**:— ಸೊಗಸಾದ ಕಾಫಿ.

(ನರಸಿಂಹಯ್ಯನು ಕುಪ್ಪು ಷರಟು ಹರಿದಿರುವದನ್ನೇ ದೃಷ್ಟಿಸಿ ನೋಡುತ್ತಾನೆ.)

**ರಾಮು**:— ನೋಡಿ. ಬಾಡಿಸೋಗೆ ಹೋಗಿ ಮಾಡಿಕೊಂಡು ಬಂದಿರುವುದು, ಹೊಸ ಹೊಸ ಪಾಪ್ಲಿನ್ ಷರ್ಟನು.

[ಕುಪ್ಪು ಕೈ ಮುಡಿಸಿಕೊಂಡು ತೋಳ ಮಾಂಸ ಖಂಡವನ್ನು ನೋಡಿಕೊಳ್ಳುತ್ತಾನೆ. ನರಸಿಂಹಯ್ಯನು ಅದನ್ನು ಮಗಳ ಕೃಶಾಂಗವನ್ನೂ ನೋಡಿ ಪೆಚ್ಚಾಗುತ್ತಾನೆ.]

**ಪುರೋಹಿತ**:— (ನರಸಿಂಹಯ್ಯನವರಿಗೆ ಏಕಾಂತದಲಿ.) ಹುಡುಗನೇನೋ ಮನ್ಮಥ.

**ಕನ್ನೆ**:— (ಸ್ವಗತ) ಹುಪ್ಪೇನೋ ಮುತ್ತಿಗ.

**ನರಸಿಂಹ**:— (ರಾಮುರಾಯನಿಗೆ) ಹುಡುಗನ ಕ್ವಾಲಿಫಿಕೇಷನ್?

[ಕುಪ್ಪು ಕಾಫಿಲೋಟವನ್ನು ತೆಗೆದುಕೊಂಡು ತುಟಿಗೆ ಸೋಕಿಸಿ ಹಿಡಿದುಕೊಳ್ಳುತ್ತಾನೆ.]

**ರಾಮು**:— ಎಂ. ಸಿ. ಎಸ್. ಫಸ್ಟ್ ಕ್ಲಾಸ್.

**ಅಜ್ಜಿ**:—(ಹಿಗ್ಗಿ) ಸಂಸ್ಥಾನಕ್ಕೇ ಫಸ್ಟು.

**ಚಂದ್ರಿ**:— ಪ್ರೊಬೆಷನರಿ ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ ಆರ್ಡರುಕೂಡಾ ಬಂದಿದೆ.

**ನರಸಿಂಹ**:— ಎಂ....ಸಿ....ಎಸ್. ಮೈಸೂರು ಸಿವಿಲ್ ಸರ್ವಿಸ್. (ಕನ್ನೆಗೆ ಅದು ಹೆಮ್ಮೆಯ ಹಿಗ್ಗು.)

**ಕುಪ್ಪು**:— (ಮೆತ್ತಗೆ) ಮಾಡರ್ನ್ ಕುಕಿಂಗ್ ಸರ್ವೀಸ ನಾವೆಲ್ಲಾ ಸಿರಸ್ತೇದಾರರಾಗಿ ಹತ್ತು ಹದಿನೈದು ವರ್ಷ ಸರ್ವಿಸ್ ಮಾಡಿ ಇಲ್ಲಿಗೆ ಹತ್ತಿದ್ದರೆ ಇವನು ಎತ್ತಿಕೊಳುತಲೆ ಅಸಿಸ್ಟೆಂಟ ಕಮಿಷನರೋ ?

**ಕುಪ್ಪು**:— (ಎದ್ದು ನಿಂತು. ನರಸಿಂಹಯ್ಯನವರಿಗೆ) ಮಹಾರಾಜಶ್ರೀ ಸೋ ಅಂಡರಸೋರವರೇ. ಈ ನವಯುಗದಲ್ಲಿ ಹೊಸದಾಗಿ ಮದುವೆಯಾಗ

ಲಿರುವವರು ಪರಸ್ಪರ ಅಭಿಪ್ರಾಯ ಪರಿಚಯ ಮಾಡಿಕೊಳ್ಳದೆ ಮದುವೆಯ ಪ್ರಸ್ತಾಪದಲ್ಲಿ ಮುಂದುವರಿಯುವುದು ಅನುಚಿತವಾಗಿ ತೋರುವ ಕಾರಣ ಶ್ರೀ ಶ್ರೀಯುವರನ್ನು ನಾನು ಪ್ರಾರ್ಥಿಸಿಕೊಳ್ಳುವವೇನೆಂದರೆ ನಮ್ಮ ಇಬ್ಬರಿಗೂ ಇದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು.

(ರಾಮರಾಯನು ಆಲಿಸುತ್ತಾನೆ.)

**ನರಸಿಂಹ**:— ಮೈ ಡಾಟರ್ ಈಸ್ ಫುಲ್ಲಿ ಅಪ್ ಟು ದಿ ಮಾರ್ಕ. ಹಿ ಆರ್ ಇನ ವೈರಿವೆ ಸೋಷಿಯಲ್. ನಮ್ಮ ಎದುರಿಗೇ ಆಗಬಹುದಲ್ಲ ಅದು.

**ಕುಪ್ಪ**:— ಶ್ರೀಮತಿಯವರೇ. ತಾವು ಮಹಿಳಾ ಸಮಾಜಗಳು ಹಲವಾರಕ್ಕೆ ಅಧ್ಯಕ್ಷರಾಗಿ ಎಷ್ಟೋ ಉಪನ್ಯಾಸಗಳನ್ನು ಕೊಟ್ಟಿರುವುದಾಗಿ ಕೇಳಿದ್ದೇನೆ. ವಿವಾಹ ನಮ್ಮ ದೇಶದಲ್ಲಿ ಆಜೀವ ಪರ್ಯಂತದ ಶ್ರೇಷ್ಠ ಬಂಧನವೆನ್ನುವುದೂ ತಮಗೆ ತಿಳಿಯದ ವಿಷಯವಲ್ಲ. ನಾವು ಯಾವ ಆದರ್ಶ ವನ್ನು ಮುಂದಿಟ್ಟುಕೊಂಡು ದಾಂಪತ್ಯಜೀವನವನ್ನು ನಡೆಸಬೇಕೋ ಅದನ್ನು ನಾವಿಬ್ಬರೂ ಪರಸ್ಪರ ಚರ್ಚೆಮಾಡಿಕೊಂಡರೆ, ಮುಂದಿನ ನಮ್ಮ ಸುಖಕ್ಕೆ ಆತಂಕ ಬರದಂತೆ ಮಾಡಿಕೊಳ್ಳಬಹುದೆನ್ನುವುದೇ ನನ್ನ ಭರವಸೆ. ಅದಕ್ಕಾಗಿ ದಯವಿಟ್ಟು ವಿವಾಹಿತ ಜೀವನದಲ್ಲಿ ನಾವು ನಾವು ಅನುಸರಿಸ ಬೇಕಾದ ಮಾರ್ಗಗಳನ್ನು ತಾವು ನನಗೆ ಮನದಟ್ಟು ಮಾಡಿಕೊಡುವಷ್ಟು ಶ್ರಮ ವಹಿಸಬಲ್ಲಿರಾ?

**ಶ್ರೀಮತಿ**:— (ಎದ್ದು ನಿಂತು) ವಿತ್ ಆಲ್ ಕೈಂಡ್ ರೀಗಾರ್ಡ್ಸ್.

**ಕುಪ್ಪ**:— ನನಗೆ ಇಂಗ್ಲೀಷು ಭಾಷೆ ಮಿದುಳಿನ ಯಾವ ಅಭುಕ್ತ ಪ್ರಾಂತದಲ್ಲೋ ಸೇರಿಕೊಂಡು ಬಿಟ್ಟಿರುವುದರಿಂದ, ಅದು ಅದರ ಮೇಲು ಭಾಗಕ್ಕೆ ತೇಲಿಕೊಂಡು ಬರುವುದೇ ಅತಿ ಕಷ್ಟವಾಗಿ ಹೋಗಿದೆ. ದಯವಿಟ್ಟು ತಾವು ಸಾಧ್ಯವಾದ ಮಟ್ಟಿಗೂ ಕನ್ನಡದಲ್ಲೇ ಹೇಳಬೇಕೆನ್ನುವುದು ನನ್ನ ಕೋರಿಕೆ.

'ಕನ್ನಡಂ ಮಧುರಮ್ಯೋತ್ಪನ್ನಂ.'

**ಶ್ರೀಮತಿ**:— ಕ್ಷಮಾಪಣೆಯೊಡನೆ. ಶ್ರೀಮಾನ್‌ರವರೆ ವಿವಾಹವು ನಮ್ಮ ದೇಶದಲ್ಲಿ ಆಜನ್ಮಪರ್ಯಂತದ ಶ್ರೇಷ್ಠ ಬಂಧನವೆಂದು ಹೇಳಿದುದು ತಮ್ಮ ಗೌರವಕ್ಕೆ ತಕ್ಕ ಮಾತೇ ಆಗಿದೆ. ಆದರೆ ಆ ಬಂಧನವೆಂತಹುದು.? ಆಜೀವ ಪರ್ಯಂತದ ಆಜೀವನದಲ್ಲಿ ನಮ್ಮದು ಸ್ಥಾನಮಾನಗಳು ಯಾವವು. ಎಂದೆ

ಸುವ ವಿಚಾರ ಗಮನಾರ್ಹವಾದುದು ನಮ್ಮ ದೇಶದಲ್ಲಿ ದಾಂಪತ್ಯ ಜೀವನ ದಲ್ಲಿ ಎಲ್ಲ ಅಧಿಕಾರವೂ ಪುರುಷರದೇ ಆಗಿಹೋಗಿದೆ. ಸ್ತ್ರೀ ಬರಿಯ ಹಡೆವ ಯಂತ್ರ ಅಡಿಗೆಯಮಾತು ಹಾಗಿರಲಿ. ತನ್ನ ಸಂಸಾರದಲ್ಲೇ ತನಗೆ ಯಾವ ಆಡಳಿತ ಸ್ವಾತಂತ್ರ್ಯವೂ ಇಲ್ಲ. ಬರಿಯ ಪುರುಷ ಕಾಮನೆಯ ದಾಸಿ ಅವಳು. ಮಾನಸಿಕ ವಿಷಯದಲ್ಲಿ ಮಂತ್ರಿಯಲ್ಲ. ಒಳ್ಳೆಯದೋ, ಕೆಟ್ಟದ್ದೋ, ಅವಳು ಅವನ ಅಭಿಪ್ರಾಯಗಳ ಗುಲಾಮಳು. ಪ್ರಾಚೀನ ಇತಿಹಾಸಗಳನ್ನು ನೋಡಿ ದರೂ ಅವಳ ಸ್ವಾತಂತ್ರ್ಯ ಒಲೆಯ ಮುಂದಿನದೇ. ಉದಾಹರಣೆಗೆ, ಸೀತೆ ಯನ್ನು ರಾಮನು ಕಾಡಿಗೆ ಕಳುಹಿಸಿದ್ದು. ಧರ್ಮರಾಯನು ದ್ರೌಪದಿಯನ್ನು ಜೂಜಿನಲ್ಲಿ ಸೋತಿದ್ದು. ಇತ್ಯಾದಿ. ಇದನ್ನೆಲ್ಲಾ ನೋಡಿದರೆ ಸ್ತ್ರೀ ವಿಷಯದಲ್ಲಿ ಅವರಿಗಿದ್ದ ಅಧಿಕಾರಭಾವನೆ ಎಂತಹುದೆನ್ನುವುದು ಸ್ಪಷ್ಟವಾಗುತ್ತದೆ. ಅಷ್ಟೇಕೆ, ಇಂತಹ ನಾಗರಿಕ ಪ್ರಪಂಚದಲ್ಲಿ ಕೂಡಾ ಸ್ತ್ರೀಯರಿಗೆ ವಿದ್ಯೆ ಹೇಳಿ ಸುವ ವಿಷಯವಾಗಿ ವಿದ್ಯಾವಂತರಿಗು ಸಂದೇಹವೃಷ್ಟಿ. ಸ್ತ್ರೀಯರಿಗೆ ಆತ್ಮ ವಿಲ್ಲ, ದೇವರು ಕೊಟ್ಟ ಬುದ್ಧಿಯಿಲ್ಲ, ಜವಾಬ್ದಾರಿವಹಿಸುವ ಸಾಮರ್ಥ್ಯ ವಿಲ್ಲ. ರಾಣಿ ಎಲಿಜಿಬೆತ್, ಸರೋಜಿನಿದೇವಿ, ವಿಜಯಲಕ್ಷ್ಮಿ ಪಂಡಿತ. ಇವರೇ ಅವಕ್ಕೆ ಉತ್ತರ ಹೇಳುತ್ತಾರೆ. ಕೆಲವು ಅಂಶಗಳಲ್ಲಿ ಹಾಗೆ ನೋಡಿ ದರೆ ಪುರುಷರಿಗಿಂತ ಸ್ತ್ರೀ ಬುದ್ಧಿವಂತೆ. ಸೆಕ್ಸ್ ಸೈಂಟಿಸ್ಟ್ಸ ಪ್ರಕಾರ, ಅವ ರಿಗಿಂತ ಇವಳು ಶಕ್ತಳು. ಅವಳು ಮುಂದಿನ ಜನಾಂಗದ ತಾಯಿ. ಅವಳ ಜನ್ಮಶ್ರೇಷ್ಠ ಅಷ್ಟಲ್ಲದಿದ್ದರೆ ನಮ್ಮ ದೇಶವನ್ನು ನಾವು ಭಾರತಮಾತೆ ಎಂದು ಕರೆಯುವುದೇಕೆ? ಆಂಗ್ಲರು ತಮ್ಮ ದೇಶವನ್ನು ಮದರ್‌ಲ್ಯಾಂಡ್ ಎಂದು ಭಕ್ತಿಪ್ರೀತಿ ಪೂರ್ವಕ ಕರೆಯುವುದೇಕೆ? ಅವಳಿಗೆ ಎಲ್ಲಾ ವಿಚಾರದ ಲ್ಲಿಯೂ ಸ್ವಾತಂತ್ರ ಬೇಕು. ಅವಳು ರಾಜಕೀಯ ವಿಷಯಗಳಲ್ಲಿಯೂ ಭಾಗ ವಹಿಸಬೇಕು. ಅವಳು ದಾಂಪತ್ಯಜೀವನದಲ್ಲಿ ಪೂರ್ಣ ಅಧಿಕಾರ ವಹಿಸ ಬೇಕು. ಅಷ್ಟಕ್ಕೆಲ್ಲಾ ಅವಳಿಗೆ ಪೂರ್ಣ ವಿದ್ಯೆಬೇಕು. ಅಂದೇ ನಮ್ಮ ನಾಡಿನ ಪೂರ್ವದಿಗಂತದಲ್ಲಿ ನವಾರುಣೋದಯವಾದೀತು. ಅಂದೇ ನಮ್ಮ ಭಾರತದ ಭವಿತವ್ಯದಲ್ಲಿ ಸ್ವರ್ಣವೃಷ್ಟಿಯಾದೀತು.

**ಕುಪ್ಪ**:—(ಚಪ್ಪಾಳೆ ಹೊಡೆದು) ಜೈ. ಹಿಂದೂ ಸ್ತ್ರೀ ಸ್ವತಂತ್ರಕೇ ಜೈ.

[ ಹಿಡಿಯ ಮೇಲಕ್ಕೆತ್ತುತ್ತಾನೆ. ]

**ರಾಮು**:— (ಕುಪ್ಪುವಿಗೆ) ಶ್ರೀ ಕೂತುಕೊಳ್ಳೋ, ಸಾಕು.

**ನರಸಿಂಹ**:— ತೃಪ್ತಿಯಾಯಿತೆ.

**ಕುಪ್ಪು**:— ಬ್ರಹ್ಮಾಂಡ ! ಇದು ನವ್ಯ ಇಪ್ಪೀ ಭಾರತದ ನವಾರುಣೋದಯದ ಕುರುಹು ! ಫ್ರಾಕು, ಲಂಗ, ಪಂಪ್ ಷೂಗಳು, ಧರ್ಮಾವರ ಬನಾರೆಸ್ ಸೀರೆ ಕುಪ್ಪಸಗಳ ರಾಜ್ಯವನು ದಾಳಿಯಿಟ್ಟು ಜಯಿಸಿ-ಅವುಗಳ ಶಾರ್ಟ್ ಹ್ಯಾಟಿನ ವಿಜಯಪತಾಕೆಯನ್ನು ಮಾಡರ್ನ್ ಇಂಡಿಯಾ ಮುಕಮಲ್ ಕಳಸಗಳ ಮೇಲೆ ಆರೋಹಣ ಮಾಡುವ ಸೂಚನೆ. ಸ್ನೋ, ಲಿಪ್ ಸ್ಟಿಕ್, ಪೌಡರುಗಳು ಎಲೆ-ಅಡಿಕೆ, ಕಾಡಿಗೆ ಅರಿಶಿನಗಳ ಅಂಧಕಾರವನ್ನು ನಿವಾರಿಸಿ ನವಭಾರತದ ಎತ್ತಲೆತ್ತಲೂ ನವಚೈತನ್ಯ ಮೂಡಿಸುವ ಸೋಗು.

(ಆದಿಯು ನೆಗ್ಗಿ ಹೋದ ಒಂದು ಬೆಳ್ಳಿಯ ಬಟ್ಟಲನ್ನು ತರುತ್ತಾನೆ.)

**ಆದಿ**:— ಕುಪ್ಪು. ಕುಪ್ಪು. ಕುರುಡ ಒಂದು ಕಾಲಿಗೆ ಸಿಕ್ಕಿ ನಗ್ಗಿ ಹೋದ. ಬೆಳ್ಳಿಯ ಬಟ್ಟಲು (ತೋರಿಸುತ್ತಾನೆ).

**ರಾಮು**:— ಯಾವುದೋ ಅದು ? ನಮ್ಮದಿದ್ದ ಹಾಗಿದೆ.

**ಕುಪ್ಪು**:— (ಖೇದಕ್ಕೆ ಕಣ್ಮುಚ್ಚಿಕೊಂಡು ಸಹಿಸಲಾರೆನೆಂದು ಹೇಳುವಂತೆ ಕೈಯನೆತ್ತಿ ) ಆದಿ. ಅದು ಪಾಪಿಯ ದಾಸ. ಹೋಗೆಯೋ. ನಿರಂತರ ವಿನೋದಕ್ಕೆಂದು ಮಾಡಿದ ಅರುಣೋದಯವನು ಅಕಸ್ಮಾತ್ತು ಯೊಗೆದ ಮೋಡ ಕವಿಸುತ್ತದೆ

**ಆದಿ**:— ಪಾಪ. ಸ್ವಲ್ಪ ಮಂಜುಮಂಜಾಗಿ ಕಣ್ಣು ಕಾಣಿಸುತ್ತಿತ್ತೋ ಏನೋ. ಕಣ್ಣಿನ ಮುಂದೆ ಅದನಾಡಿಸಿ ಎದೆಗೊತ್ತಿಕೊಂಡು ಬಗ್ಗಿ ಕೆನ್ನೆಗೂ ಮುಖಕ್ಕೂ ಅದನ್ನು ಸವರಿಕೊಂಡು ಹೋಗುತ್ತಿದ್ದ. ಎಲ್ಲಿಂದಲೋ ಬಂದಿತು ಹಾಳು ಕಾರು.

**ಕುಪ್ಪು**:— ಅನೇಕ ವೇಳೆ-ಆದೀ-ಅದೇ ರಜತದ ಸುಖ. ಆದಿ. ಆದಿ. ಸಾಕು ಸಾಕು ಮುಂದಕ್ಕೆ ಕೇಳಲಾರೆ. ಹಾಗೆಯೂ ಕಣ್ಣು ಮುಂದೆಯೆ ರಕ್ತ ಚೆಲ್ಲಿದಂತಾಗಿ ಎದೆಯಲಿ ಸಂಕಟ. ತಲೆ ಸುತ್ತುತ್ತಿದೆ. ನನ್ನನ್ನು ಅಲ್ಲಿಗೆ ಕೈಹಿಡಿದು ಕರೆದುಕೊಂಡು ಹೋಗು.

**ರಾಮು**:— ನಮ್ಮದೇ ಆದಿ ಬಟ್ಟಲು ? (ಕೈ ನೀಡುತ್ತಾನೆ).

**ಕುಪ್ಪು**:— ( [illegible] ) ಆದಿ. ಅದನಿಲ್ಲಿಗೇತಕೆ ತಂದೆ ? ಆದಿ.

ಇಲ್ಲಿ ಕೊಡು. (ಆದಿಯ ಕೈಯಿಂದ ಕಸಿದುಕೊಳ್ಳುತ್ತಾನೆ.) ಇದು ಕೃಪಣ ವಿಸ್ಮಯವನ್ನು ಕೊಂಡ ರಜತ.

[ಕೈಯಲಿ ಜಾಕುತ್ತಾನೆ. ಬಟ್ಟಲು ಮುರಿಸಿಕೊಳ್ಳುತ್ತವೆ. ಕುಪ್ಪು ಆದಿಯನು ಕೈಹಿಡಿದು ಕೊಂಡು ಕೊಂಡು ಹೋಗುತ್ತಾನೆ.]

**ರಾಮು**:— ಓ! ಆಯಿತು! ಕುಪ್ಪೂ, ಕುಪ್ಪೂ, ಇವಕ್ಕಾದರೂ ಏನನ್ನಾದರೂ ಹೇಳಿ ಹೋಗೊ.

**ಆದಿ:—** ಅಪ್ಪ, ಹೇಳು. ಯಾರ ಹತ್ತಿರವೂ ಸುಖವಾಗಿರಳು.

[ಆದಿ, ಕುಪ್ಪು ನಿಷ್ಕ್ರಮಣ.]

**ಅಜ್ಜಿ**:— ಕುಪ್ಪೂ.

**ರಾಮು**:— (ಕೈ ಕೈ ಹಿಸುಕಿಕೊಂಡು) ಛೇ.

**ನರಸಿಂಹ**:- (ಸ್ವಗತ) ಇವನು ಮೇಲೆ ಕಾಣಿಸಿಕೊಳ್ಳುವುದಕ್ಕಿಂತ ಮೂರ್ಖನಂತ ತೋರುತ್ತಾನೆ.

**ಕನ್ನೆ**:— (ಸ್ವಗತ) ಇವನು ನನ್ನನ್ನು ಪಾತ್ರನಂತೆ ಸಂಭವಿಸಿದರೂ ಇವನಲ್ಲಿ ನನಗೇಕೋ ಗೌರವ ಬುದ್ಧಿ ಹುಟ್ಟುತ್ತಿದೆ.

**ನರಸಿಂಹ**:— ಯಾರು ಆ ಕುರುಡ?

**ಕನ್ನೆ**:— ನನ್ನ ಪ್ರಶ್ನೆಯನ್ನು ಸಧ್ಯ ಇವರೇ ಕೇಳಿದರು.

**ರಾಮು**:— ಅಯ್ಯೋ! ನನ್ನ ಹಣೆಯಬರಹ ಏನೆಂದು ಹೇಳಿಕೊಳ್ಳಲಿ ಬೀದಿಯ ಭಿಕಾರಿಗಳೆಲ್ಲಾ ನನಗೆ ದಾಯಿದ್ಯರು.

**ಅಜ್ಜಿ**:— ಸ್ವಭಾವದಿಂದಲೇ ನಮ್ಮ ಕುಪ್ಪು ಹುಚ್ಚನಂತಹ ಮನಸ್ಸಿನವನು. ಕಷ್ಟಪಡುವವರನ್ನು ಕಂಡರೆ ಸರಿ ಅವನ ಮನಸ್ಸು ಕರಗಿ ಹೋಗುತ್ತದೆ ಅಲ್ಲಿ.

**ನರಸಿಂಹ**:— (ಸ್ವಗತ) ನಮ್ಮ ಮನಸ್ಸು ಮೇಲು ಮುಸುಕು ನೋಡಿಕೊಂಡು ಹೇಗೆ ಮೋಸ ಹೋಗಿತ್ತು!

**ಕನ್ನೆ**:- (ಸ್ವಗತ) ಸ್ವಾರ್ಥಭಾವದಿಂದ ಗುಣವನ್ನೇ ಇವರು ಕೇವಲವಾಗಿ ಕಾಣುತ್ತಾರೆ!

**ನರಸಿಂಹ**:— ನಿಮ್ಮ ಕುಮಾರರು ಈಗ ಸರಿಯಾದ ಸ್ಥಿತಿಯಲ್ಲಿರಲಿಲ್ಲ. ಅವರು ಸಮಾಧಾನವಾದ ಮೇಲೆ ಅವರ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುತ್ತೀರಾ?

**ಸೋಮು, ಚಂದ್ರಿ**:— ( ಸ್ವಗತ ) ಇನ್ನು ಕೇಳಿ ತಿಳಿದುಕೊಳ್ಳಬೇಕಾದುದೇನಿದೆ ? ( ನಿಷ್ಕ್ರಮಣ. )

**ರಾಮು**:— ಊ.

**ಕನ್ನೆ**:— ( ಸ್ವಗತ ) ಏನೋ ಪರೀಕ್ಷೆಯ ಫಲಿತಾಂಶವನು ನಿರೀಕ್ಷಿಸುವ ಕುತೂಹಲ ನನಗೆ.

**ಪುರೋಹಿತ**:— ( ನಚ್ಚುನಚ್ಚಾಗಿ ರಾಮುರಾಯನೊಡನೆ ) ನೀವು ಅದರ ವಿಷಯವಾಗಿ ಯೋಚನೆಯೇ ಮಾಡಬೇಡಿ.

**ಅಜ್ಜಿ**:— ಸರಿ ಸರಿ. ಪ್ರಪಂಚದಲ್ಲಿ.... ನಮ್ಮ ಕಷ್ಟ !

**ರಾಮು**:— ಅದೇನೂ ಪರವಾಗಿಲ್ಲ.

**ನರಸಿಂಹ**:— ಮತ್ತೆ ಎಂದು ಬರೋಣ ?

**ಕನ್ನೆ**:— ( ಸ್ವಗತ ) ಆ ಪ್ರಶ್ನೆ ನನಗೆ ಹಿತ.

**ಅಜ್ಜಿ**:— ನಾಳೆಯೇ.

**ರಾಮು**:— ಊ. ( ಅಜ್ಜಿಗೆ ) ಕುಂಕುಮ ತಂದು ಕೊಡೆ ಲಕ್ಷಣವಾಗಿ ಹುಡುಗಿಗೆ.

**ಕನ್ನೆ**:— (ಸ್ವಗತ) ಈ ಸಂಪ್ರದಾಯಗಳೆಲ್ಲಾ ನನಗೆ ಪ್ರಾಚೀನವಾಗಿ ಕಂಡರೂ, ಇವತ್ತು ಏನೋ ಲಕ್ಷಣವಾಗಿ ತೋರುತಿವೆ.

**ಅಜ್ಜಿ**:— (ಕುಂಕುಮವನು ತಂದು ಕೊಡುತ್ತಾಳೆ. ಕನ್ನೆ ಅದನು ಸ್ವೀಕರಿಸಿ, ಹುಬ್ಬಿನ ನಡುವೆ ಒಂದು ಚಿಕ್ಕಿಯಷ್ಟು ಧರಿಸುತ್ತಾಳೆ. ಅಜ್ಜಿ ಕನ್ನೆಯ ಮುಖವನೇ ಹರ್ಷದುಬ್ಬಿನಲಿ ನೋಡಿ ನೋಡುತ್ತಾಳೆ. )

**ನರಸಿಂಹ**:— ನಮಸ್ಕಾರ.

**ಕನ್ನೆ**:— ನಮಸ್ಕಾರ.

**ಅಜ್ಜಿ**:— ( ಇದ್ದಕ್ಕಿದ್ದ ಹಾಗೆಯೇ ) ನಮಸ್ಕಾರ. ( ಕೈಜೋಡಿಸಿ. )

**ರಾಮು**:— ನಮಸ್ಕಾರ.

**ಪುರೋಹಿತ** :— ( ನಸೆನಸೆಯಾಗಿ ನಗುತ್ತಾ ತಲೆ ಕೆರೆದುಕೊಂಡು ನಿಲ್ಲುತ್ತಾನೆ. )

[ ನರಸಿಂಹಯ್ಯ, ಕನ್ನೆ, ಪುರೋಹಿತ ನಿಷ್ಕ್ರಮಿಸುತ್ತಾರೆ. ಕನ್ನೆಯ ಬಿರಿಮುಡಿಯ ನೋಡುತ್ತಾ ಅಜ್ಜಿಯೂ, ನರಸಿಂಹಯ್ಯನ ವಜ್ರದುಂಗುರವನ್ನು ನೋಡುತ್ತಾ ರಾಮುರಾಯನೂ ಅವರ ಜೊತೆಗೆ ಬಾಗಿಲವರಿವಿಗೆ ಹೋಗುತ್ತಾರೆ.]

[ ಮತ್ತೆ ಅಜ್ಜಿ, ರಾಮುರಾಯ, ಪುರೋಹಿತರ ಪ್ರವೇಶ. ]

**ರಾಮು**:— ಐದು ಸಾವಿರವೆಂದಿರಾ? ಸರಿ. ದಿವಾನನ ಮಗ ಆದಾನು, ಅವು ಹೇಗೆ ನನ್ನ ಮಾತಿಗೆ ಬದಲು ಹೇಳುತ್ತಾನೋ ಹೇಳಲಿ. ವಾರಿಗೆ ಬಲಿ.

**ಅಚ್ಚಿ**:— ಇದೇನೆಂದರೆ ಲಕ್ಷಣವಾಗಿ? ಶುಭನಿರೀಕ್ಷಣೆಯ ಸಮಯ ದಲ್ಲಿ ನೀವು ಮಾರಿ, ಮಷಣಿ, ಎನ್ನುವುದು? ನಿಮ್ಮ ಬಾಯಲಿ ಯಾವಾ ಗಲೂ ಒಳ್ಳೆಯ ಮಾತೇ ಬರುವುದಿಲ್ಲ.

**ಪುರೋಹಿತ**:— ನಾನು ಏನೇನೋ ದೊಡ್ಡಸ್ತಿಕೆ ಹೇಳಿಕೊಂಡಿದ್ದರೆ ನಿಮ್ಮ ಹುಡುಗ........

**ರಾಮು**:— ಅಪ್ಪೇ ಕಷ್ಟ ಪುರೋಹಿತರೆ. ಇವಳೇನೊ ಹೇಳಿಬಿಡು ತ್ತಾಳೆ. ನಮಗಲ್ಲವೆ ಅವರ ಜವಾಬ್ದಾರಿ? ಹಾಳು ಹುಡುಗ. ಒಳ್ಳೆಯ ಸಮಯ ದಲ್ಲಿ ಮಂಗನ ಹಾಗೆ ಆಡಿಬಿಡುತ್ತಾನೆ. ಆದರೆ ಅವರು ಅದನ್ನೆಲ್ಲಾ ಮನ ಸ್ಸಿಗೆ ಹಾಕಿಕೊಂಡಿರಲಾರರು. ಅಲ್ಲವೆ?

**ಪುರೋಹಿತ**:— ಛೇ ಛೇ. ಅದಕ್ಕೆಲ್ಲಾ ನಾನು ಸರಿಮಾಡುತ್ತೇನೆ ರಾಯರೆ ನಿಮಗೇಕೆ ಆದರೆ ನಾನು ಮಾತ್ರ. ಸ್ವಲ್ಪ ಜ್ಞಾಪಕವಿರಲಿ.

**ಅಚ್ಚಿ**:— ನಮ್ಮ ಕುಪ್ಪು ಮೇಲಕ್ಕೆ ಮಾತ್ರ ಹಾಗೆ, ಅಷ್ಟೇ, ಶಾಸ್ತ್ರಿ ಗಳೆ. ಪ್ರಪಂಚದಲ್ಲೇ ಅವನಂತಹ ಹುಡುಗರು ಹುಡುಕಿಕೊಂಡರೂ ಸಿಕ್ಕು ವುದಿಲ್ಲ.

**ಪುರೋಹಿತ**:— ಹೌದಮ್ಮ. ಆದರೆ ಹಾಗೆಲ್ಲಾ ಆಡಬಾರದಮ್ಮಾ. ಅಷ್ಟು ದೊಡ್ಡ ಮನುಷ್ಯರ ಎಮರಿಗೆಲ್ಲಾ ನಿಮಗೆ ತಿಳಿಯದು.

**ರಾಮು**:— [ಅಚ್ಚಿಗೆ] ಸುಮ್ಮನಿರೆ. ಮಹಾ ಎಷ್ಟು ಹೊಗಳಿಕೊಳ್ಳು ತೀಯೋ. ಮಗನನು ಸಾಕು. [ಪುರೋಹಿತನಿಗೆ] ಸದ್ಯ ನಿಮ್ಮನ್ನು ಮರೆತವ ರುಂಟೆ ಶಾಸ್ತ್ರಿಗಳೆ? ನೀವು ನಮಗೆ ನಮ್ಮ ಅಜ್ಜ ತಾತಂದಿರ ಕಾಲದಿಂದ ಪುರೋಹಿತರು. ನಿಮಗೆ ತಿಳಿಯದು. ಇನ್ನೂ ಚಿಕ್ಕ ಹುಡುಗರು—ನಿಮ್ಮ ಯಜಮಾನರ ಪಿತೃ ಇದ್ದರು. ಅವರೂ ಮನುಷ್ಯರೇ ಎಲ್ಲರೂ ಮನುಷ್ಯ ರೇನೇ ಶಾಸ್ತ್ರಿಗಳೇ? ನಮ್ಮ ತಾತಂದಿರಿಗೂ ಅವರಿಗೂ ಪ್ರಾಣಕ್ಕೆ ಪ್ರಾಣ. ಅವರಿಗೆ ನಸ್ಯ ನಿಮ್ಮ ಪಿತಾಮಹರ ಕೈಯಿಂದಲೇ ತೀಡಿಕೊಡಬೇಕು.

**ಪುರೋಹಿತ**:— ಹೌದು ಹೌದು. ಕೇಳಿದ್ದೇನೆ. (ಸ್ವಗತ) ಆದರೆ ನಿಮ್ಮ ಹತ್ತಿರ ಚೌಕಸಿ ಮಾಡುವುದಲ್ಲವೆ. ಬಂದಿರುವುದು. [ಪ್ರಕಾಶ] ಬರು ಕೇನೆ. ಮುಖ್ಯ ದಯವಿರಲಿ.

**ರಾಮು**:— ಹೋಗೆ. ಶಾಸ್ತ್ರಿಗಳಿಗೆ ಒಂದು ಕಪ್ಪು ಕಾಫಿ ಕಾಸಿ ಕೊಡೆ.

(ಅಚ್ಚಿ ಸಡಗರಿಸುತ್ತಾಳೆ.)

**ಪುರೋಹಿತ:—** ಪರವಾಗಿಲ್ಲ. ನನ್ನ ಇನ್ನೇನೂ ಬೇಡಿ. ತಾವು ಮರೆಯದಿದ್ದರೆ ಸರಿ.

**ರಾಮು**:— ನಿಮಗೇಕೆ ಶಾಸ್ತ್ರಿಗಳೆ. ನನ್ನ ಇವನ್ನು ಮಾತ್ರ ಮಾಡಿಸಿ ಬಿಡಿ. ನಮಗೇನು ಮರ್ಯಾದೆ ಅಷ್ಟು ತಿಳಿಯದೆ?

**ಅಚ್ಚಿ**:— ಅದು ನನಗಿರಲಿ ಶಾಸ್ತ್ರಿಗಳೆ. ನನ್ನ, ಅಷ್ಟು ಮಟ್ಟಿಗೆ ನಿಮಗೆ ನಮ್ಮ ಮೇಲೆ ವಿಶ್ವಾಸವಿರುವಾಗ?

**ಪುರೋಹಿತ :—** (ಸ್ವಗತ) ಅದು ಎಂತಹ ಮರ್ಯಾದೆಯೋ. ಅದರ ಮೌಲ್ಯವೆಷ್ಟೋ. ತೀವಾದರೂ ತಿಳಿದಿದ್ದರೆ? ನೋಡೋಣ. ಈಕೆ ಸಂಭಾಷಿತೆ. (ಪ್ರಕಾಶ) ಹೊತ್ತಾಯಿತು. ನಮಸ್ಕಾರ. (ನಿಷ್ಕ್ರಮಣ.)

**ರಾಮು**:— (ಮಂದಹಾಸಪೂರ್ವಕ) ನಮಸ್ಕಾರ. (ಲೆಕ್ಕ ಹಾಕುತ್ತಾ) ಐದು ಸಹಸ್ರ. ಅದೇನೂ ಕೇವಲವಲ್ಲ. ನನ್ನ ಮಗನೂ ಎಂ. ಸಿ. ಎಸ್. ಸ್ವಲ್ಪ ಕೋಣಂಗಿಯು ಹಾಗಾಡದಿದ್ದರೆ ಎಲ್ಲ ಸರಿ. ಪಾಪ ದೊಡ್ಡ ಮನುಷ್ಯರು. ಏನು ತಿಳಿದುಕೊಂಡರೊ. ಆದರೆ ಅವರಿಗೂ ಈ ಸಂಬಂಧವಲ್ಲಿ ಆಸೆಯಿದೆ. ಇಲ್ಲದಿದ್ದರೆ ಇಲ್ಲಿಗೇಕೆ ಬರುತ್ತಿದ್ದರು. ನಮ್ಮನ್ನೇಕೆ ಕಡೆಗೆ ಹಾಗೆ ಕೆಂಜಿಕೊಳ್ಳುತ್ತಿದ್ದರು. ಅವರು ಕೆಂಜಿಕೊಂಡರು. ಅಲ್ಲವೇನೆ?

**ಅಚ್ಚಿ**:— (ತಲೆ ಆಡಿಸಿ) ಉ.

**ರಾಮು**:— ಅಲ್ಲವೆ ನಮ್ಮ ಪುರೋಹಿತರು ಬೇರೆ ಇದ್ದಾರಲ್ಲ ನಮಗೆ ಪಥ್ಯ ಅವರೇ ಇದ್ದಿದ್ದ ದೇವರೆ ಇಷ್ಟ ಹಾಗಾಯಿತು. ಅಲ್ಲವೇನೆ?

**ಅಚ್ಚಿ**:— ಹೌದು ಅಂದರೆ. ಪಾಪ ಹೋಗಲಿ. ಅವರಿಗೂ ಒಂದು ನೂರು ರುಪಾಯಿಯಾದರೂ ಸಂಭಾವನೆಯಾಗಿ ಕೊಟ್ಟು ಬಿಡೋಣ ಅಂದ್ರೆ.

**ರಾಮು**:— ನೋಡೋಣ. ಮೊದಲು ನೀನೊಬ್ಬಳು. ಧರ್ಮರಾಯನ ಹೆಸರು ಹೇಳಿಕೊಂಡು ಹುಟ್ಟಿದವಳು. ಮದುವೆಗೆ ಖರ್ಚು ಎಷ್ಟು ಬೀಳುತ್ತದೆ. ಹುಡುಗಿಗೆ ಸೀರೆಗೆ ಎಷ್ಟು-ಒಂದು ಐದು ಸವರನ್ನಿನಲ್ಲಾದರೂ ಎರಡೆಳೆ ಸರ ಮಾಡಿಸದಿದ್ದರೆ ನಮ್ಮ ಮರ್ಯಾದೆಗೆ ತಡೆಯುತ್ತದೆಯೆ. ಮಿಕ್ಕ ನಾಲ್ಕು ನಾಲ್ಕೂವರೆ ಸಾವಿರ ಗಿರವಿಯ ಮೇಲೆ ಹಾಕಿದರೆ ಆದರ ಆದಾಯ ಅಲ್ಲೇ ಇದೆ.

**ಅಚ್ಚಿ**:— ಏಕೆ ? ಎರಡೂ ಖರ್ಚು ಅವರದೇ ಅಲ್ಲವೆ ? ನನ್ನ ಮದು ವೆಯಲಿ ಹಾಗೆಯೇ ಅಲ್ಲವೆ ಆಗಿದ್ದು ?

**ರಾಮ**:— ಅದೇನೋ ಸರಿಯೆ ಕಾಣೆ. ಆದರೆ ನಮ್ಮ ಮರ್‍ಯಾದೆಗಾ ದರೂ ನಾವು ಒಂದೆರಡೆಳೆ ಚೈನು. ಒಂದು ಮಾಂಗಲ್ಯ, ನಾಲ್ಕು ಗುಂಡು ಒಂದು ಒಳ್ಳೆಯ ಸೀರೆ ಅರವತ್ತು ರುಪಾಯಿನಲ್ಲಿ ತೆಗೆದುಕೊಂಡು ಹೋಗ ದಿದ್ದರಾಗುತ್ತದೆಯೆ ? ಅಲ್ಲೆಲ್ಲ ಅದು ಗೌರವ ಮರ್ಯಾದೆಗಳ ಸಮಾಚಾರ.

**ಅಚ್ಚಿ**:— ನಿಮ್ಮ ಹತ್ತಿರವೇ ಆಚೀಚೆ ಬಿಡಿಸಿಕೊಳ್ಳದೆ ನಿಂತುಹೋದ ಹತ್ತು ಸವರನ್ನಿರಬೇಕು ?

**ರಾಮ**:— ಅದು ಸರಿಯೆ. ಅದಕ್ಕೆ ಮಾತ್ರ ಹಣ ಆಗುವುದಿಲ್ಲವೆ ?

**ಅಚ್ಚಿ**:— ಸರಿ ಅನ್ನಿ. ಅದಕ್ಕೆ ಮೇಲೆ ರಾಜಿಗೆ ಬೇರೆ ಇಷ್ಟು ದಿನ ವಾದರೂ ಒಂದು ಸೀರೆ ಉಡಿಸಲಿಲ್ಲ. ಹೆಣ್ಣು ಮಗು. ಈ ನೆಪದಲಾದರೂ ಒಂದು ಒಳ್ಳೆಯ ಸೀರೆ ತರದಿದ್ದರೆ ಸಾಧ್ಯವೆ? ಅದಕ್ಕೆ ಮೇಲೆ ಅಣ್ಣನಿಗೆ, ಅತ್ತಿಗೆಗೆ ವರಸೆ ಮಾಡಬೇಕು. ನೀಲಳಿಗೆ ಒಂದು ಲಂಗವನಾದರೂ ಒಳ್ಳೆಯದಾಗಿ ತರಬೇಕು. ಬಾಕಿ ಉಳಿದವರಿಗೆಲ್ಲಾ ಒಳ್ಳೆ ಒಳ್ಳೆಯದಾಗಿ ಒಂದೊಂದು ತಾಕೆಯನಾದರೂ ತರದಿದ್ದರೆ ಸಾಧ್ಯವೇ ?

**ರಾಮ**:— ನೀನೇ ನೋಡು. ಎಲ್ಲ ಎಷ್ಟಾಗಿ ಹೋಗುತದೆ. ಐದು ಸಹಸ್ರ ! ಹೇಳಿಕೊಳ್ಳುವುದಕ್ಕೇನೋ ಬಹಳ. ನಮ್ಮ ಕುಪ್ಪುವಿನ ಕೈಗೆ ಕೊಟ್ಟರೆ ಮೂರು ನಿಮಿಷದಲ್ಲಿ ಕುಂಟರು ಕುರುಡರಿಗೆ ಹಂಚಿ ಬಿಡುತ್ತಾನೆ. ಅದಕ್ಕೇ ಈ ಐದು ಸಾವಿರವನು ಅವನಿಗೆ ಬುದ್ಧಿ ಬರುವತನಕ ಎಲ್ಲಾದರೂ ಠೇವಾಸವ ಗಿಟ್ಟಿರಬೇಕು. ಅವನ ಕಣ್ಣಿಗೆ ಒಂದು ಕಾಸೂ ತೋರಿಸ ಕೂಡದು.

**ಅಚ್ಚಿ**:— ಅದೆಲ್ಲಾ ಬೇಡ ನಮ್ಮ ಕುಪ್ಪುವೂ ಈಗ ಒಂದಿರುವ ಅರ್ಧ ದನು ಆ ಮನೆಗೆ ಬರುವ ಭಾಗ್ಯಲಕ್ಷ್ಮಿಯು ಅದೃಷ್ಟದಿಂದ ಒಪ್ಪಿಕೊಂಡು ಬಿಟ್ಟರೆ ಸಧ್ಯ ಆವನಿಗೇನು ಮಹಾರಾಜನ ಹಾಗಿರಬಹುದು. ಅಂದ್ರ ಅಲ್ಲವೇ ?

**ರಾಮ**:— ಆದರೆ ಹಾಳು ಹುಡುಗ. ಬುದ್ಧಿಯೇ ಇಲ್ಲ.

**ಅಚ್ಚಿ**:— ಲಕ್ಷಣವಾಗಿ ಮಗುವನು ಬೈದು ಮಾತ್ರ ಬೈಯ್ಯಬೇಡಿ. ಬುದ್ಧಿಯಿಲ್ಲದೆ ಎಂ. ಸಿ. ಎಸ್. ಫಸ್ಟ್ ಕ್ಲಾಸ್ ಪ್ಯಾಸು ಮಾಡಿದನೆ ? ಈ ವೇಶ

ವಲ್ಲಿ ಬುದ್ಧಿವಂತರೇ ಇರಲಿಲ್ಲವೇನೊ ?

**ರಾಮು**:— ನಿನ್ನ ಮಗನನು ನೀನೇ ಹೊಗಳಿಕೊಳ್ಳಬೇಕು! ಬೆಳ್ಳಿಯ ಬಟ್ಟಲು ಏನು ಮಾಡಿಬಿಟ್ಟ !

**ಅಚ್ಚಿ**:— ಹೋಗಲಿ. ಹೋಗಿ ನೋಡಿಕೊಂಡು ಬನ್ನಿ ಅಂಪ್ರೆ ಮಗು ವನು. ನನಗೇನೋ ಅವನನು ಈಗಲೇ ನೋಡಬೇಕೆನ್ನಿಸುತಿದೆ. ಇವತ್ತೇ ಅವನಿಗೆ ಕೆನ್ನೆಗೆ ಅರಿಶಿನ, ಹಣೆಗೆ ಕುಂಕುಮ ಹಚ್ಚಿ, ಅರಿಶಿನದ ಬಟ್ಟೆ ಉಡಿಸಿ, ಮಣೆಯ ಮೇಲೆ ಕೂಡಿಸಿ, ಆರತಿ ಎತ್ತಿ ಕಣ್ತುಂಬ ನೋಡಿ ಬಿಡಬೇಕು ಎನ್ನಿಸುತ್ತಿದೆ ಅಂಪ್ರೆ.

**ರಾಮು**:— ಹೋಗೆ, ಹುಚ್ಚಿ !

[ಆದಿ ಒಂದು ಕೈಯಲಿ ಕೆಸರಾದ ಬೆಳ್ಳಿಯ ಬಟ್ಟಲನೂ, ಇನ್ನೊಂದು ಕೈಯಲಿ ರಕ್ತಮಯವಾದ ಬಟ್ಟೆಯನೂ ಹಿಡಿದುಕೊಂಡು ಹುಚ್ಚನಂತೆ ಹುಯ್ಯ ಲಿಡುತ್ತಾ ಓಡಿಬರುತ್ತಾನೆ. ರಾಮುರಾಯನಿಗೂ ಅಚ್ಚಿಗೂ ಹೃತ್ಪಾತ.]

**ಆದಿ**:—ಅಯ್ಯೋ! ಮಾವಾ! ಮಾವಾ! ಕುಪ್ಪು! ಕುಪ್ಪೂ! (ಓಡಿಬಂದು ಹೊಸ್ತಿಲೆಡವಿ ಬೀಳುತ್ತಾನೆ.)

[ಅಚ್ಚಿಗೂ ರಾಮುರಾಯನಿಗೂ ಕೈಕಾಲು ನಡುಕ; ಎದೆಯಲಿ ಕಡು ಕಷ್ಟ.]

**ರಾಮು, ಅಚ್ಚಿ** :— ಆದೀ, ಏನಪ್ಪಾ ಅದೂ ? ಅಯ್ಯೋ ! ಈಗ ತಾನೇ ಕುರುಡನನು ಹುಡುಕಿಕೊಂಡು ಹೋದನಲ್ಲೋ ! ಏನಾಯಿತೋ ?

**ಆದಿ** :— [ಏಳುತ್ತಾ] ಸ್ವದೇಶಧ್ವಜವನು ಎತ್ತಿ ಓಡಿಯುವಾಗ ಕುಪ್ಪುವಿಗೆ ಭುಜದ ಹತ್ತಿರ ಗುಂಡಿನ ಏಟು ಬಿತ್ತು, ನೋಡಿ !

(ನಡುಗುವ ಕೈಗಳಿಂದ ಬಟ್ಟಲು, ಬಟ್ಟೆಗಳ ಕೊಡ ಹೋಗಿ ನೆಲಕ್ಕೆ ಬಿಡು ತ್ತಾನೆ. ಅಚ್ಚಿ ಕೈಗಳಲಿ ಎದೆಯ ರಾಚಿ ಬಡಿದುಕೊಂಡು “ ಅಯ್ಯೋ! ಕುಪ್ಪೂ ! ಕುಪ್ಪೂ ! ” ಎಂದು ಕೂಗಿಕೊಂಡು ದೊಪ್ಪನೆ ನೆಲದಲಿ ಕೆಡೆದು ಬೀಳುತ್ತಾಳೆ. ರಾಮುರಾಯನು ಜಂಝೂವಾತಕ್ಕೆ ಸಿಕ್ಕಿದೊಂದು ಬಾಳೆಯ ಕಂಬದಂತೆ ಆದುರಿ ಉರುಳುತ್ತಾ, ಕೆಳಗಡೆ ಬಿದ್ದ ಬಟ್ಟೆಯನ್ನೂ ಬಟ್ಟಲನ್ನೂ ತಪ್ಪುನೆಪ್ಪಾಗಿ ಹಿಡಿಯೆ ತವಕಿಸುತಾ, ಅಳಲೊಂದು ಕಟ್ಟುಬ್ಬಸದಲಿ ಮುಲಮುಲಕಿ ‘ ಈಗ ತಾನೆ ಹೋದ ನಲ್ಲೋ.... ಆದೀ.... ಕುರುಡನನ್ನು ಹುಡುಕಿಕೊಂಡು.... ನಮ್ಮ ಕಣ್ಣುಗಳನೆ ಇಂಗಿಸಿ

ಬಿಟ್ಟೆನಲ್ಲೋ....ಅಯ್ಯೋ!’ ಎಂದು ಒರಲುತಾ, ನೆಲಕುರಳಿ ಅಂತೆಯೇ ಆ ಬಟ್ಟೆಯು ಬಿಡದೆ ತೆಗೆದುಕೊಂಡು ಬಿಚ್ಚಿ ತರ ಹರಿಸಿ, ಅದರಲ್ಲಿ ಬರೆದಿದ್ದ ರಕ್ತಾಕ್ಷರಗಳನ್ನು ಕಂಡುಕೊಂಡು ಕ್ರಂದನ-ಗದ್ಗದ-ಧ್ವನಿಯಲಿ “ ಅವಧಿ ಅಲ್ಪ. ಮೃತ್ಯು ಆಕಸ್ಮಿಕ. ಕೋಟ್ಯನುಕೋಟಿ ದಾರಿದ್ರ-ರೋಗ-ದುಃಖಪೀಡಿತರಿಗೆ ರಕ್ತರಜತ ದಾನ ಮಾಡಿ ” ಎಂದು ಓದುತ್ತಾನೆ. ಮತ್ತೆ ‘‘ಆದೀ....ಏಕೆ ತಂದೆಯೋ ಈ ಬಟ್ಟೆಲೂ....” ಎಂದು ಅದನ್ನು ತೆಗೆದು ದೂರ ಬಿಸುಡುತ್ತಾನೆ. ಮತ್ತೆ ‘‘ ಕುಪ್ಪೂ, ಕುಪ್ಪೂ ! ” ಎಂದು ಚೀರುತಾ ನೆಲಕ್ಕೆ ಕೈಯೂರಿಕೊಂಡು ಏಳಲುಪಕ್ರಮಿಸುತಾ “ ಐದು ಸಹಸ್ರ ಗೊತ್ತು ಮಾಡಿದ್ದೆನಲ್ಲೋ.... ಕುಪ್ಪೂ....ನನ್ನನ್ನು ಹೀಗೆ ಅನಾಥರನ್ನಾಗಿ ಮಾಡಿ ಬಿಟ್ಟೆಯಲ್ಲೋ.... ” ಎಂದುಕೊಂಡು ಅಳುತ್ತಾ ಬಟ್ಟೆ ಮುದುರಿ ಬೀಳುವಂತೆ ಕುಸಿದು ಬೀಳುತ್ತಾನೆ.)

**ಅಚ್ಚಿ**:— [ಅತಿ ದಾರುಣವಾಗಿ ರೋದಿಸುತಾ ನೆಲದಲಿ ಕೈಗಳ ಅರಸುತಾ] ಅಯ್ಯೋ ! ಅಪ್ಪಾ! ಕಣ್ಣುಗಳೇ ಕಾಣಿಸದ ಹಾಗೆ ಮಾಡಿಬಿಟ್ಟೆಯಲ್ಲೋ.... ಹಾಳು ದೇವರೇ....ಅಯ್ಯೋ ! ನನ್ನ ಕುಪ್ಪು....ಎಲ್ಲಪ್ಪಾ ಆದೀ?....ಹಾಳು ಆಯಿತು....ರಾಕ್ಷಸರಿಗೆ ಹೇಳಪ್ಪಾ....ನನ್ನನೂ ಗುಂಡಿನಲಿ ಹೊಡೆದು ಸುಟ್ಟು ಬಿಡಲಿ .... ಪುಣ್ಯಕಟ್ಟಿಕೊಳ್ಳಲಿ .... ಮಹಾರಾಜನ ಹಾಗಿದ್ದನಲ್ಲೊ ನನ್ನ ಕುಪ್ಪು....ಪ್ರಪಂಚದಲ್ಲೇ ಇರಲಿಲ್ಲವಲ್ಲಪ್ಪಾ....ನನ್ನ ಕುಪ್ಪೂ ಸಮಾನ.... ಹೇಗೆ ಜೀವಿಸಲಪ್ಪಾ ಭೂಮಿಯ ಮೇಲೆ...ನನ್ನ ಒಂದು ರತ್ನವಿಲ್ಲದೆ.... ಚಿಂತಾರತ್ನವಲ್ಲೋ ನನ್ನ ಕುಪ್ಪು....[ಎದೆಯ ರಾಚಿ ಬಡಿದುಕೊಂಡು “ಅಯ್ಯೋ! ಅಯ್ಯೋ! ಅಯ್ಯೋ!” ಎಂದು ಒರಲುತಾ ನೆಲದಲಿ ಬಿದ್ದು ಹೊರಳಾಡುತ್ತಾಳೆ.]

**ರಾಮು**:—ಆದೀ, ನನಗೆ ಇನ್ನು ಮನೆ ಬೇಡ; ಮಠ ಬೇಡ. ಈ ಹಾಳು ಐಶ್ವರ್ಯವೂ ಬೇಡ, ಆದೀ. ಅಂತಹ ರಾಜಾಹುಡುಗನನ್ನು ಕಳೆದುಕೊಂಡು ಹೇಗಪ್ಪಾ ಜೀವಿಸುವುದು ಈ ಹಾಳು ಭೂಮಿಯ ಮೇಲೆ? ಅಚ್ಚೀ! ಅಚ್ಚೀ! ಏನು ಮಾಡಲಿ ಅಚ್ಚೀ? ಹೇಗೆ ಎದೆ ಹಿಡಿಯುವದೆ ಅಚ್ಚೀ?....ಅಯ್ಯೋ!.... ನನ್ನ ಕುಪ್ಪೂ ಮನ್ಮಥನಲ್ಲೋ.... ಎಲ್ಲಿದಾನಪ್ಪಾ ಆದೀ ? ....ಹೊಡೆದವರ ಕೈ ಸಿಡಿದುಹೋಗಲಿಲ್ಲವೇನಪ್ಪಾ!....ನನ್ನ ಕುಪ್ಪುವನು ಗುಂಡಿನಲಿ ಹೊಡೆದ ವರ ಕರುಳನು ದೇವರೇ ಗುಂಡಿನಲಿ ಹೊಡೆದು ಇಟ್ಟಾಡಿಬಿಡಲಪ್ಪಾ....ಅವರ ತಾಯಿ ತಂದೆಗಳ ಕಣ್ಣಮುಂದೆಯೇ.....

**ಅಚ್ಚಿ**:—ಬೇಡೀ....ಬೇಡೀ....ಈ ಕಷ್ಟ ಯಾರಿಗೂ ಬೇಡಿ.

**ರಾಮು**:— ಈಗ ತಾನೇ ಎಷ್ಟು ಸಂತೋಷವಾಗಿ ನಿನಗೆ ಮದುವೆ

ಮಾಡಿ ಕಣ್ಣಾರ ನೋಡಿ ಹಿಗ್ಗಬೇಕೆಂದಿದ್ದೆವಪ್ಪಾ!....ಆ ರಾಕ್ಷಸರು ನಿನಗೆ ದೊಡ್ಡ ಮದುವೆ ಮಾಡಿದರು.....

(ಅದಿ ರೋದಿಸತೊಡಗುವನು)

ಅದೀ....ಅದೀ....ಎಲ್ಲಿ....ಎಲ್ಲಿ ನನ್ನ ಕುಪ್ಪು ? ಅಯ್ಯೋ ಎಲ್ಲಿ?

**ಆದಿ**:— ಆಸ್ಪತ್ರೆಗೆ ವ್ಯಾನಿನಲ್ಲಿ ಸಾಗಿಸಿಬಿಟ್ಟರು.

**ರಾಮು**:— ಏನಾದರೂ ಉಳಿಯುವ ನಂಬಿಕೆಯಿದ್ದರೆ ನಮ್ಮ ಆಸ್ತಿಯೆಲ್ಲಾ ಹೋಗಲಿ....ನಮ್ಮ ಕುಪ್ಪು ಉಳಿದುಕೊಳ್ಳಲಪ್ಪಾ ದೇವರೇ....ಅದು ನಿನ್ನ ಮಗು .... ನಿನಗೆ ಭಂಗಾರದ ಕವಚಮಾಡಿಸಿ ಹಾಕುತೇನಮ್ಮಾ ಚಾಮುಂಡೇಶ್ವರಿ.....

**ಅಜ್ಜಿ**:— ಯಾರು ನೋಡಿಕೊಳ್ಳುತಿದಾರಪ್ಪಾ ನಮ್ಮ ಕುಪ್ಪುನಾ ?

**ಆದಿ**:— ಪದ್ಮಾ

**ರಾಮು**:— ಅಯ್ಯೋ ! ಅಲ್ಲಿಯೂ ಪದ್ಮಾನೇ? ಸೋಮು ? ಚಂದ್ರಿ? ನೀನು ?

**ಆದಿ**:— ಪದ್ಮಾ ಆ ವಿಶ್ವಾಸದ ಹಕ್ಕನು ಇನ್ನು ಯಾರಿಗೂ ಬಿಟ್ಟು ಕೊಡುವುದಿಲ್ಲ ಎಂದು ಹೇಳಿ ಇನ್ನು ಯಾರಿಗೂ ಅವಕಾಶ ಕೊಡುತ್ತಿಲ್ಲ.

**ಅಜ್ಜಿ**:—ಧನ್ಯಳಪ್ಪಾ! ಅವಳೇ ಧನ್ಯಳು! ಇವರೆಲ್ಲಾ ಆ ಚಿನ್ನದಂತಹ ಹುಡುಗಿಯನು ಏನೇನೋ ಹೇಳಿಕೊಳ್ಳುತಿದ್ದರು.

**ರಾಮು**:— ಇಷ್ಟು ಬೇಗ ಏನು ಘೋರ ಬಂದುಬಿಟ್ಟಿತಪ್ಪ ನಮ್ಮ ಕುಪ್ಪುವಿಗೆ ?

**ಆದಿ**:— ಮನೆ ಬಿಟ್ಟು ಹೋದನಲ್ಲಾ, ಹೊದದ್ದೂ, ಆ ಕುರುಡನ ಹತ್ತಿರಕ್ಕೆ ಹೋದವನು ಹರತಾಳದ ಗಲಾಟೆ ಕೇಳಿಸಿಕೊಂಡನೊ ಇಲ್ಲವೋ ಅದೇನು ಆವೇಶ ಬಂದಿತೋ 'ಜೈ ಭಾರತ ಮಾತೆ' ಎಂದು ಕೂಗಿಕೊಂಡು ಅಲ್ಲಿಗೆ ಹೋದ. ಅಲ್ಲೊಂದು ಕಡೆ ಸಭೆ ಸೇರಿತು, ಅಲ್ಲಿ ಎಲ್ಲರೂ ಸೇರಿ ಸ್ವದೇಶಧ್ವಜ ನಟ್ಟು ಹಾರಿಸತೊಡಗುತಲೆ ಪೋಲೀಸರು ಬಂದು ಅದಕ್ಕೆ ಅಡ್ಡಿಯಾಗಿ ಗುಂಡು ಹಾರಿಸತೊಡಗಿದರು. ಎಲ್ಲರೂ ಉತ್ಸಾಹ ಕಳೆದು ಕೊಂಡು ದಿಕ್ಕುಪಾಲಾಗಿ ಚದುರಿ ಓಡಿಹೋದರು, ಕುರಿ–ಮಂದೆಯಂತೆ

ಅರಿಚುತ, ಕಿರಿಚುತ. ನಮ್ಮ ಕುಪ್ಪು ಅಲ್ಲಿ ದೂರ ನಿಂತಿದ್ದ. ಪದ್ಮಳ ಮುಖ ನೋಡಿದನೋ ಇಲ್ಲವೋ? ಅದು ಏನು ಆವೇಶ ಬಂದಿತೋ? ಮತ್ತೆ "ಜೈ ಭಾರತಮಾತೆ" ಎಂದು ಅರ್ಭಟಿಸಿಕೊಂಡು ಯಾರು ತಡೆದರೂ ನಿಲ್ಲದೆ ನರಕ ಪರಿವಾರ ಜ್ವಾಲೆಯ ಕೋಟಿಕೊತ್ತಲಗಳಲ್ಲಿ ಕಾಯ್ದ ಸ್ವರ್ಗವನು ಸಾಧಿಸುವುದಕ್ಕಾಗಿ ಜೀವನವನೆ ಪಣವಿಟ್ಟು ಮುನ್ನುಗ್ಗಿದ ಹಾಗೆ ನುಗ್ಗಿದ ನಮ್ಮ ಕುಪ್ಪು, ಗುಂಡಿಗೆ ಎದೆ ಕೊಟ್ಟುಕೊಂಡು, ಆ ರುದ್ರಭೂಮಿಯಲಿ. ಒಂದು ಗುಂಡು....

**ಅಜ್ಜಿ, ರಾಮು**:— ಅಯ್ಯೋ! ಅಯ್ಯೋ!

**ಆದಿ**:—ಕುಪ್ಪು ಭುಜದ ಹತ್ತಿರ ಧಗ್ಗನೆ ತಾಕಿ ಆ ಕಡೆ ಹೋಯಿತು.

**ಅಜ್ಜಿ, ರಾಮು**:— ಹಾ! ಹಾ! ಕಷ್ಟ! ಕಷ್ಟ!

**ಆದಿ**:— ಹಾಗೆಯೇ ಒಬ್ಬನ ಮಹತ್ಕಾರ್ಯಕ್ಕೂ ಹಾಳಿಗೂ ಒಬ್ಬಳು ಹೆಂಗಸೇ ಹುಮ್ಮಸ್ಸು.

**ರಾಮು, ಅಜ್ಜಿ**:— ಸಾಕೂ ಸಾಕೂ....ಕೇಳುವುದೇ ಅಸಾಧ್ಯ! ಕಿವಿಗಳೇ ಒಡೆದು ಹೋಗುತಿವೆ. ಎದೆಯೇ ಹೊತ್ತಿಹೋಯಿತು. ರಾಮಾ! ನಮ್ಮನೂ ಕರೆದುಕೊಂಡು ಹೋಗಪ್ಪಾ. ನಮ್ಮನೂ ಸುಟ್ಟುಬಿಡಲಿ. ಆಮೇಲೆ ಸ್ಮಶಾನವನು ಅವರೇ ಆಳಿಕೊಳ್ಳಲಿ. ಅಯ್ಯೋ! ಏತಕ್ಕಪ್ಪಾ ನಾವು ಇನ್ನು ಇರುವುದು ಭೂಮಿಯ ಮೇಲೆ? ಕುಪ್ಪೂ....ಕುಪ್ಪೂ....

(ನಿಷ್ಕ್ರಮಣ)

**ಆದಿ**:—[ಕದವ ಮುಂದಕೆಳೆದುಕೊಂಡು.] ಕಷ್ಟ! ಕಷ್ಟ!

(ನಿಷ್ಕ್ರಮಣ)

— ತೆರೆ —

# ಹಂಚಿಕೆ

( ಏಕಾಂಕ )

ಬರೆದವರು :

**ಕೆ. ಎ. ಎನ್. ರಾವ್**

## ಪಾತ್ರಗಳು

| | | | |
|---|---|---|---|
| **ಲಕ್ಷ್ಮೀಪತಿರಾಯ** | .... | ಮೂಲೇಹಳ್ಳಿಯ ಸಾಹುಕಾರ | |
| **ಆನಂದಪ್ಪ** | .... | .... | ಲಕ್ಷ್ಮೀಪತಿರಾಯನ ಬಲತಮ್ಮ |
| **ನಿತ್ಯಾಣಯ್ಯ** | .... | .... | ಮೂಲೇಹಳ್ಳಿ ಮೇಷ್ಟರು |
| **ಜ್ಯೋತಿಷ್ಕ** | .... | .... | .... .... |
| **ಶಾನುಭೋಗ** | .... | .... | .... .... |

ಭಿಕ್ಷುಕ, ಭಜನೆಯ ಹುಡುಗರು, ಅಂಚೆಯವನು, ಇತ್ಯಾದಿ.

**ಸ್ಥಳ**: ಮೂಲೇಹಳ್ಳಿ

**ಕಾಲ**: ಭಾನುವಾರ ಬೆಳಗ್ಗೆ ಸುಮಾರು ೧೧ವರೆ ಗಂಟೆ ಇರಬಹುದು.

# ದೃಶ್ಯ ೧

( ಮೂಲೇಹಳ್ಳಿಯ ಸಾಹುಕಾರರು ಲಕ್ಷ್ಮೀಪತಿರಾಯನ ಸಾಮಾನ್ಯ ಮನೆಯ ಎತ್ತರವಾದ ಜಗಲಿ. ಚಾಪೆಯೊಂದು ಹಾಸಲ್ಪಟ್ಟಿದೆ. ಆದರ ಮೇಲೆ ಆನಂದಪ್ಪ ಮತ್ತು ನಿರ್ವಾಣಯ್ಯ ಇಬ್ಬರೂ ಮಾತನಾಡುತ್ತ ಕುಳಿತಿರುತ್ತಾರೆ. ಆನಂದಪ್ಪನಿಗೆ ವಯಸ್ಸು ನಲವತ್ತೈದು. ದಪ್ಪ ಮನುಷ್ಯ. ದುಂಡು ಮುಖ. ಅವನನ್ನು ನೋಡಿದೊಡನೆ, ಅವನು ಸುಖಪಡುವುದಕ್ಕೇ ನಿರ್ಮಾಣವಾದವನೆಂದು ಹೇಳಬಹುದು. ಅವನು ಅರೆವಾಸಿ ಪಟ್ಟಣಿಗ. ಕಾಲರಿನ ಷರಟು, ಜರತಾರಿಯಂಚಿನ ಪಂಚೆಗಳು ಅವನ ಉಡುಪು. ಹೆಗಲ ಮೇಲೆ ಶಲ್ಯವೊಂದನ್ನೂ ಹಾಕಿಕೊಂಡಿದ್ದಾನೆ. ಷರಟಿನ ಜೇಬಿನಲ್ಲಿ ನಶ್ಯದ ಚೌಕವನ್ನು ತುರುಕಿಕೊಂಡಿದ್ದಾನೆ. ಅವನ ಮುಂದೆ ಸಮೀಪದಲ್ಲಿಯೇ ಇಸ್ಪೀಟಿನ ಪೆಟ್ಟಿಗೆಯೊಂದು ಕಾಣಿಸುತ್ತದೆ. ಕೈಯಲ್ಲಿ ಪದ್ಧತಿಗನುಸಾರವಾಗಿ ನಶ್ಯವನ್ನು ತೀಡುತ್ತಿರುತ್ತಾನೆ. ನಿರ್ವಾಣಯ್ಯನು ತೆಳ್ಳನೆಯ ಮನುಷ್ಯ. ಕೋಲುಮುಖ, ಬತ್ತಿದ ಕೆನ್ನೆಗಳು, ಮೂರು ನಾಲ್ಕು ದಿನದ ಗಡ್ಡ. ಭಾರತದ ನಾಟಕದಲ್ಲಿ ಶಕುನಿಯಾಗಿರಬಹುದು. ಹಲವು ಊರಿನ ನೀರನ್ನು ಕುಡಿದಿರುವನೆಂಬುದು ಅವನ ಮಾತುಕತೆಗಳಲ್ಲಿ ವ್ಯಕ್ತವಾಗುತ್ತದೆ. ಇವನಿಗೆ ಐವತ್ತೈದು ವರ್ಷ ವಯಸ್ಸು. ಇವನಲ್ಲಿ ನಾಗರಿಕತೆಯ ನುಣುಪು ಕಾಣದಿದ್ದರೂ ಸ್ವಭಾವದಲ್ಲಿ ಚಾತುರ್ಯ ಕಾಣುತ್ತದೆ. ಇವನು ಕಾಲು ಮುಚ್ಚದ ಧೋತ್ರ, ಮುಚ್ಚಿದ ಕೋಟು, ಕೋರೆ ರುಮಾಲಿನಲ್ಲಿ ಅಲಂಕೃತನಾಗಿದ್ದಾನೆ. ಜೇಬುಗಳ ತುಂಬ ಗಿಟ್ಟಿಸಿದ ಕಾಗದಗಳು ಹೊರಗಾಣುತ್ತವೆ. ಇವನು ಎಲೆ ಅಡಿಕೆಯ ಚೀಲವೊಂದನ್ನು ಮುಂದೆ ಬಿಚ್ಚಿಕೊಂಡು ಎಲೆಗೆ ಸುಣ್ಣ ಹಾಕುವುದರಲ್ಲಿ ಉದ್ಯುಕ್ತನಾಗಿದ್ದಾನೆ.

ನಶ್ಯ, ಎಲೆಯಡಿಕೆಯ ದಾನ, ಪ್ರತಿದಾನ, ಉಪಯೋಗಗಳಮಧ್ಯೆ ಮಾತು ಸಾಗುತ್ತದೆ.)

**ನಿರ್ವಾಣಯ್ಯ:**—ಕಾಸುಗಳ್ಳ ನಂಬರು ಒಂದು ಅಂದರೆ ನಿಮ್ಮಣ್ಣ ಕಣಯ್ಯ—ಲಕ್ಷ್ಮೀಪತಿ. ನಾನೂ ಈಗಾಗಲೇ ಹಲವು ಹಳ್ಳಿ ತಿರುಗಿ, ಸಾವಿರಾರು ಜನರನ್ನು ಪರೀಕ್ಷೆ ಮಾಡಿ ‘ಪಲ್ಟಿ’ ಹೊಡಿಸಿದ್ದೇನೆ. ಆದರೆ ಇಂಥ ಕಡಲೆ ನನ್ನ ಹಲ್ಲಿಗೆ ಎಂದಿಗೂ ಸಿಕ್ಕಿದ್ದಿಲ್ಲ. ಹಲ್ಲಿಗೇ ಏನೋ ಗ್ರಹಚಾರ ಬಂದಿದೆ ಅಂತ ಕಾಣುತ್ತದೆ.

**ಆನಂದಪ್ಪ**: —ಅಯ್ಯನವರೆ, ಅವನ ಕಥೆ ನೀವೇನು ಬಲ್ಲಿರಿ? ಹಿರಿಮಗ ಅಂತ ಇವನ ಹತ್ತಿರ ನಮ್ಮಪ್ಪ ಆಸ್ತಿ ಬಿಟ್ಟು ಕಣ್ಣು ಮುಚ್ಚಿ ಕೊಂಡರೆ, ಇವನ ಹತ್ತಿರ ನನ್ನ ನಾಲ್ಕು ಕಾಸನ್ನು ಕಿತ್ತುಕೊಂಡು ಸ್ಕೂಲು ಫೈನಲ್ ಫೇಲಾಗಬೇಕಾದರೆ, ಅದೊಂದು ವಿಶ್ವಪ್ರಯತ್ನ ವಾಯ್ತು.

**ನಿರ್ವಾಣಯ್ಯ**:— ಅಂದರೆ, ನೀವೂ ಫೇಲಾದದ್ದು ಒಂದು ಸಾರಿಯೇ, ಎರಡೇ, ಮೂರೇ,—ಒಟ್ಟು ಆರು ಅಲ್ಲವೆ?

**ಆನಂದಪ್ಪ**:—ಏ; ಸುಮ್ಮನೆ ಉತ್ಪ್ರೇಕ್ಷೆ ಏಕೆ ಮಾಡುತ್ತೀರಿ. ಯಾರಾ ದರೂ ನಕ್ಕಾರು. ಐದೇ ಸಲ, ಕಂಡ್ರಿ

**ನಿರ್ವಾಣಯ್ಯ**:—ನಾನು ಹೇಳಿದ್ದು ಒಂದೇ ಹೆಚ್ಚು. ಅದು ಉತ್ಪ್ರೇಕ್ಷೆಯೆ? ನಿಮಗೆ ಇನ್ನೂ ಅವಕಾಶ ಕೊಟ್ಟಿದ್ದರೆ ಇಂದಿನ ವರೆಗೂ ಫೇಲಾ ಗುತ್ತಾ ಇರುತ್ತಾ ಇದ್ದಿರೋ ಏನೋ!

**ಆನಂದಪ್ಪ**:— ಏ! ಐದು ಸಲವೇ ಹೆಚ್ಚೆ? ಒಂದು ಡಜನ್ ಆದವರೂ, ನಮ್ಮಪ್ಪನಂತಹ ಮಹನೀಯರಿದ್ದಾರೆ.

**ನಿರ್ವಾಣಯ್ಯ**:— ಅದೀಗ ಒಳ್ಳೆಯ ಸಮಾಧಾನ.

**ಆನಂದಪ್ಪ**:— ಒಂದು ವೇಳೆ ನಾನು ಪಾಸು, ಪಾಸು, ಪಾಸೇ ಆಗುತ್ತ ಹೋಗಿ ಬಿ. ಎ. ಮಾಡಿದ್ದರೂ ಇಷ್ಟು ವರ್ಷ ಹಣವನ್ನು ಒದಗಿಸ ಬೇಕಾಗುತ್ತಿರಲಿಲ್ಲವೆ?

**ನಿರ್ವಾಣಯ್ಯ**:— ಆದರೆ ನಿಮಗೆ ಸ್ಕೂಲೇ ಫೈನಲ್ ಆಯಿತಲ್ಲ. ಪ್ರಾಣ ಇರುವ ವರೆಗೂ ಎಷ್ಟು ಕಷ್ಟವಾದರೂ ನಷ್ಟವಾದರೂ ರೋಗಿಗೆ ಚಿಕಿತ್ಸೆ ನಡೆಸುತ್ತಾರೆ. ಪ್ರಾಣವು ಹಾರಿಹೋದ ಮೇಲೂ ಚಿಕಿತ್ಸೆ ಯನ್ನು ಮುಂದುವರಿಸುತ್ತಾರೆಯೆ? ಶವಕ್ಕೆ ಬೇಕಾದುದು ವೈದ್ಯನಲ್ಲ - ಗುಳಿ ಇಲ್ಲವೆ ಚಿತೆ.

**ಆನಂದಪ್ಪ**:— ಅರೆ, ಬಿಡ್ರಿ. ಈಗಿನ ಬಿ. ಎ.ಗಳಿಗಿಂತ ನಾನು ಹತ್ತು ಬಾರಿಗೆ ವಾಸಿ. ಈಗಲೂ ನನ್ನ ಹಾಗೆ ಒಂದು ಅರ್ಜಿ ಬರೆಯು

ವುದಕ್ಕೆ ಅವರಿಗೆ ಯಾರಿಗೂ ಸಾಧ್ಯವಿಲ್ಲ ಎಂಬ ಎದೆ ಮುಟ್ಟಿ ಕೊಂಡು ಹೇಳಬಲ್ಲೆ.

**ನಿರ್ವಾಣಯ್ಯ**:-ಓಹೊ, ಅರ್ಜಿಯ ವಿಚಾರವನ್ನು ಎತ್ತಬೇಡಿ. ನಾನೇನೋ ಲೋಅರ್ ಸೆಕೆಂಡರಿಯನ್ನು ದಾಟದೇ ಇದ್ದರೂ ಅರ್ಜಿಗಿರ್ಜಿ ವಿಚಾರ ದಲ್ಲಿ ಈ ಕೈಯನ್ನು—(ಬಲಗೈ ತೋರಿಸುತ್ತಾ)—ಮೀರಿಸುವ ಕೈಗಳು ಇನ್ನೂ ಸೃಷ್ಟಿಯಾಗಬೇಕಾಗಿವೆ.

**ಆನಂದಪ್ಪ**:—ಇರಬಹುದು. ಇರಬಹುದು. ತಮ್ಮ ತರಲೆ ಅರ್ಜಿಗಳ ವಿಚಾರವನ್ನು ನಾನೂ ಬಹಳ ಕೇಳಿದ್ದೇನೆ.

**ನಿರ್ವಾಣಯ್ಯ**:— ಅಮಲ್ದಾರರು ಅಮಲ್ದಾರರನ್ನೇ ವರ್ಗಮಾಡಿಸಿದ್ದೇನೆ ಗೊತ್ತೆ ? ಬಾಕಿ ಚಿಳ್ಳೆಪಿಳ್ಳೆಗಳ ಮಾತು ಹಾಗಿರಲಿ.

**ಆನಂದಪ್ಪ**:— ಅದು ಸರಿ. ಇಷ್ಟು ಪ್ರಚಂಡ ಬುದ್ಧಿ ಇದ್ದರೇನು — ನಮ್ಮಣ್ಣನ ಮುಂದೆ ನಿಮ್ಮ ಬೇಳೇಕಾಳು ಬೇಯದೆ ಇರುವಾಗ ?

**ನಿರ್ವಾಣಯ್ಯ**:—ನಿಮ್ಮಣ್ಣನ ವಿಷಯವೇ ಬೇರೆ – ಬಾಕಿ ಪ್ರಪಂಚದ್ದೇ ಬೇರೆ. ಅವರಲ್ಲಿ ನಾನು ಸೋತೆ ಅಂತ ಹೇಳಿಕೊಳ್ಳುವುದಕ್ಕೆ ನನ ಗೇನೂ ನಾಚಿಕೆಯಿಲ್ಲ. ಅವರ ಬುದ್ಧಿ ಎಲ್ಲಕ್ಕೂ ಮೀರಿಸಿದ್ದು. ನನ್ನ ಇದ್ದ ಬಿದ್ದ ಬುದ್ಧಿಯನ್ನೆಲ್ಲ ಖರ್ಚುಮಾಡಿಬಿಟ್ಟಿದ್ದೇನೆ. ಒಳ್ಳೆ ಯದು, ಕೆಟ್ಟದು, ಉತ್ಸವ–ವೈದಿಕ, ಆಟ–ಪಾಠ, ಅಂತ ನೂರೆಂಟ್ಟು ಆಟ ಕಟ್ಟಿ ನೋಡಿದೆ. ಆದರೆ ಆ ಪರ್ವತವು ಬೇರೆ 'ಜುಂ' ಅಂದಿರ ಬೇಕಲ್ಲ. ನನಗೆ ದುಡ್ಡನ್ನು ಕೊಡದವರೆಲ್ಲ ಸರ್ಕಾರಕ್ಕಾದರೂ ಕೊಡುತ್ತಾರೆ. ಈ ಮಹಾನುಭಾವ ಮಾತ್ರ ಯಾರಿಗೂ ಒಂದು ಚಿಕ್ಕ ಕಾಸನ್ನೂ ಮರೆತಾದರೂ ಕೈಬಿಡಲಿಲ್ಲ ಕಣಯ್ಯ.

**ಆನಂದಪ್ಪ**:— ಅವನ ದುರ್ದೈವ, ಓದು–ಬರಹ ಮಾತ್ರ ಹೆಚ್ಚು ಕಲಿತು ಕೊಳ್ಳಲಿಲ್ಲ. ಕಲಿತುಕೊಂಡು ಪಟ್ಟಣದಲ್ಲಿ ನೆಲೆಸಿದ್ದರೆ ಮಾತ್ರ ಯಾವುದೋ ಒಂದು ದೊಡ್ಡ ಪದವಿಗೇರುತ್ತಿದ್ದ – ಖಂಡಿತವಾಗಿ.

**ನಿರ್ವಾಣಯ್ಯ**:— ಏನು ಹಣಕಾಸಿನ ಮಂತ್ರಿಯೋ ? ಆಗ ಪ್ರಜೆಗಳಿಗೆ ಬರುತ್ತಿತ್ತು ಗೋಳು.

**ಆನಂದಪ್ಪ**:— ಹಾಗೆನ್ನಬೇಡಿ. ಆಗ ಮಡ್ಡು ತನ್ನದಲ್ಲವೆಂದು ಗೊತ್ತಾಗುತ್ತಿರಲಿಲ್ಲವೆ? ಆದುದರಿಂದ ಕೂಡಿಡುವುದರಲ್ಲೇ ಪರ್ಯವಸಾನವಾಗುತ್ತಿರಲಿಲ್ಲ. ನಾನು ಹೇಳುತ್ತಿದ್ದುದು ಅವನ ಶಿಷ್ಟಾಚಾರದ ವಿಷಯ.

**ನಿರ್ವಾಣಯ್ಯ**:— ಹೌದು; ಅವನ ಲೇವಾದೇವಿಯೆಲ್ಲ ಅವನ ಬುರುಡೆಯಲ್ಲೇ ಇದೆ. ಅವನ ಕರಣಿಕನಾದರೂ ತಪ್ಪಬಹುದು, ಅವನು ಬೇರೆ ಹಾಗೆ ಮಾಡುವಂತಿಲ್ಲ.

**ಆನಂದಪ್ಪ**:— ಈ ಕರಣಿಕ ಗಿರಣಿಕರ ಪ್ರಭಾವವೆಲ್ಲ ಅವಶ್ಯಕವಾದದ್ದು ಅಧಿಕಾರಿಗಳ ಕಚೇರಿಗಳಲ್ಲೇ.

**ನಿರ್ವಾಣಯ್ಯ**:— ನಿಜ; ಅದೇ ಈ ಕಾಲದ ಅಧಿಕಾರದ ಹೆಗ್ಗುರುತಾಗಿ ಹೋಗಿದೆ. ಕಚೇರಿಯಲ್ಲಿ ನಿಜವಾದ ಅಧಿಕಾರ ನಡೆಸುವವನೆಂದರೆ ಚುರುಕಾದ ಗುಮಾಸ್ತನೊಬ್ಬ. ಅವನು ಬರೆದು ಮುಂದೆ ಇಟ್ಟುದದಕ್ಕೆಲ್ಲ ಸಾಮಾನ್ಯವಾಗಿ ಅಧಿಕಾರಿಯ ಗುದ್ದಲಿಯ ಗುರುತು ಬಿದ್ದು ಹೋಗುತ್ತದೆ.

**ಆನಂದಪ್ಪ**:— ಅಧಿಕಾರಿಗೆ ಎಲ್ಲವನ್ನೂ ನೋಡಿ ತೀರ್ಮಾನಿಸುವುದಕ್ಕೆ ತಾಳ್ಮೆಯಾಗಲೀ ಕಾಲವಾಗಲೀ ಎಲ್ಲಿಂದ ಬರಬೇಕು?

**ನಿರ್ವಾಣಯ್ಯ**:— ಈಗ ನೋಡು, 'ನಮ್ಮ ತಾಲ್ಲೋಕು ಕಚೇರಿಯ ಕೆಲಸವು ಏನೇ ಇರಲಿ, ಆ ಹೆಡ್‌ಮುನ್ಷಿಗೆ ಬೆಣ್ಣೆ ಹಚ್ಚಿದರೆ ಸಾಕು, ನಡೆದುಹೋಗುತ್ತದೆ. ಅದೇ ನಮ್ಮ ಪ್ರತಿಷ್ಠೆಯನ್ನು ಮುಂದು ಮಾಡಿಕೊಂಡು ಅಮಲ್ದಾರರನ್ನೇ ನೋಡಿದರೂ ಅವರು ಈ ಮುನ್ಷಿಯ ಅಭಿಪ್ರಾಯವನ್ನೇ ಸಾಮಾನ್ಯವಾಗಿ ಕೇಳುತ್ತಾರೆ. ನಾವು ಅವನಿಗೆ ಪ್ರಥಮ ಪೂಜೆ ಸಲ್ಲಿಸಿದ್ದರೆ ಸಮ, ಪ್ರಸಾದ ಬಲಗಡೆಗೆ ಬೀಳುತ್ತದೆ. ಇಲ್ಲದಿದ್ದರೆ ಎಡಕ್ಕೆ. ಯಾವ ನಿರ್ಧರಕ್ಕೂ ಆಧಾರವಾಗಿ ಕಾನೂನು ಇಲ್ಲವೆ ಕಟ್ಟಳೆಗಳಿದ್ದೇ ಇರುತ್ತವೆ. ಅವೆಲ್ಲವೂ ಮುನ್ಷಿಗೆ ಚೆನ್ನಾಗಿ ಗೊತ್ತು. ಹೀಗೆ ಅಧಿಕಾರಿಗಳ ಗೋತ್ರವೇ ಕಳೆಗುಂದಿಹೋಗಿದೆ.

**ಆನಂದಪ್ಪ**:— ಮುಖ್ಯ, ಅವರಲ್ಲಿ ಬಹುಮಂದಿ ಮೈಗಳ್ಳರು, ಅಸಮರ್ಥರು. ಅದಕ್ಕೇನು ಇತ್ತೀಚೆಗಂತೂ ಹಲವು ಕಾರಣಗಳಿವೆ. ಅದಕ್ಕೆ

ಸರಿಯಾಗಿ ಈಗಿನ ಧೋರಣೆ ಬೇರೆ ಇದೆಯಲ್ಲ "ಅಧಿಕಾರಿಯು ಅಸಮರ್ಥನಾದರೆ, ಮೇಲಿನ ಪದವಿಯಲ್ಲಿ ಪರೀಕ್ಷಿಸು" ಎಂಬುದು?

**ನಿರ್ವಾಣಯ್ಯ**:—ಲಕ್ಷ್ಮೀಪತಿಯೇನು ಅಂತಹ ಅಧಿಕಾರಿಯಾಗುತ್ತಿರಲಿಲ್ಲ. ಕರಣಿಕ ಕುಲಭಯಂಕರನಾಗಿರುತ್ತಿದ್ದ.

**ಆನಂದಪ್ಪ**:— ಅವನು ಹೇಗಿರುತ್ತಿದ್ದನೋ ಅದನ್ನೆಲ್ಲ ಕಟ್ಟಿಕೊಂಡೇನು? ಕರಣಿಕ ಕುಲ ಕಾಳ್ಗಿಚ್ಚೇ ಆಗಿದ್ದಿರಬಹುದು. ಈಗ ನಮಗೆ ಅವರಿಂದ ಆದ ಲಾಭವೇನು? ಇದೆಲ್ಲ ಮೂರು ದಿನ ಉಪವಾಸ ಮಾಡಿ ಪ್ರಾಣ ಹೋಗುತ್ತಿರುವಾಗ ಭಾಗವತ ಪುರಾಣಶ್ರವಣ ಮಾಡಿಸ ಹಾಗೆ. ಈಗ ನೋಡಿ. ನಾನು ಇಲ್ಲಿ ಎಂಟು ದಿನಗಳಿಂದ ನೀರು ಬಡಿಯುತ್ತಿದ್ದೇನೆ—ಕೇವಲ ಇನ್ನೂರು ರೂಪಾಯಿಗಾಗಿ. ಪಟ್ಟಣಕ್ಕೆ ಬರಿಕೈಯಲ್ಲಿ ಹೋದರೆ ಮಾನವಂತು ಉಳಿಯುವ ಹಾಗಿಲ್ಲ. ಮನೆಯ ಯಜಮಾನ, ಹಾಲಿನವನು, ಸಾಮಾನಿನ ಅಂಗಡಿಯವನು, ದರ್ಜಿ—ಕಡೆಗೆ ಮುಸುರೆ ತಿಕ್ಕುವವಳು ಎಲ್ಲರೂ ಕಾಯ್ದು ಕುಳಿತಿದ್ದಾರೆ. ಒಬ್ಬೊಬ್ಬರೂ ಒಂದೊಂದು ಹುಲಿಯಂತೆ ನನ್ನ ಮೇಲೆ ಹಾರುವದಕ್ಕೆ ಸಿದ್ಧವಾಗಿದ್ದಾರೆ. ದೀಪವಂತು ನಿಂತುಹೋಗಿ ಆಗಲೇ ತಿಂಗಳಾಯಿತು.

**ನಿರ್ವಾಣಯ್ಯ**:— ಪಾಪ! ನಿನ್ನ ಈ ಸ್ಥಿತಿಯೂ ಕೂಡ ಈ ವೈದಾಸ ನನ್ನು ಕರಗಿಸುವುದಿಲ್ಲವಲ್ಲ.

**ಆನಂದಪ್ಪ**:— ಅವನ ಎದೆ ವಜ್ರದಿಂದ ಮಾಡಲ್ಪಟ್ಟಿದೆ. ಕರಗುವದು ಹೇಗೆ? ಸೌಮ್ಯವಾಗಿ ಕೇಳಿಯಾಯಿತು. ಅಂಗಲಾಚಿ ಬೇಡಿಯಾಯಿತು. ಸಾಲ ಕೇಳಿಯಾಯಿತು. ಜೈಲಿಗೆ ಹೋಗುವೆನೆಂದೂ ಹೇಳಿಯಾಯಿತು. ಸಾಯುವೆನೆಂದು ಬೆದರಿಸಿಯೂ ಆಯಿತು. ಆದರೇನು ಅವನು ಜಗ್ಗುವಂತಿಲ್ಲ. ಎಲ್ಲವೂ ಒಂದೇ ಪರಿಣಾಮವನ್ನು ಉಂಟುಮಾಡಿದುವು. ಇನ್ನೇನು ಕದಿಯುವುದೊಂದು ಬಾಕಿಯಿದೆ.

**ನಿರ್ವಾಣಯ್ಯ** :— ಅದೇನು ಸುಲಭವಲ್ಲ! ಮತ್ತೆಲ್ಲಾದರೂ ಮೂಳೆ ಗೀಳೆ........

**ಆನಂದಪ್ಪ**:— ಇನ್ನೇನನ್ನು ಮಾಡುವುದೋ ತಿಳಿಯದಾಗಿದೆ.

**ನಿರ್ವಾಣಯ್ಯ**:— ಆ ದಿನ ಯೋಚಿಸಿದ ಉಪಾಯವನ್ನೇಕೆ ಹೂಡಬಾರದು ?

**ಆನಂದಪ್ಪ**:— ಅದರ ಗೆಲುವಿನಲ್ಲಿ ನನಗೇನೂ ನಂಬಿಕೆಯು ಎಳ್ಳಷ್ಟೂ ಇಲ್ಲ. ಆದರೂ ಏರ್ಪಾಡನ್ನೇನೋ ಮಾಡಿದ್ದೇನೆ—ಕಡೆಯ ಹುಚ್ಚುತನದಿಂದ. ಆ ನಾಟಕ ನಾಳೆ ನಡೆಯಬಹುದು.

**ನಿರ್ವಾಣಯ್ಯ**:— (ಎದುರು ಬಾಗಿಲ ಕಡೆಗೆ ಕಣ್ಣು ಹಾಕಿ, ಮೆಲ್ಲಗೆ) ಏ!

(ಆ ಬಾಗಿಲಿನಿಂದ ಲಕ್ಷ್ಮೀಪತಿಯು ಪ್ರವೇಶಿಸುತ್ತಾನೆ. ಇವನಿಗೂ ನಿರ್ವಾಣಯ್ಯನ ವಯಸ್ಸೆ. ಚೆನ್ನಾಗಿ ಬೆಳೆದ ಆಳು. ಬಹಳ ಶ್ರೋತ್ರಿಯನೆಂದು ಭಾಸವಾಗುತ್ತದೆ. ಒಂದು ಮೋಟುಪಂಚೆಯನ್ನುಟ್ಟು ಒಂದು ವಸ್ತ್ರವನ್ನು ಹೊದ್ದಿದ್ದಾನೆ. ಹೊಸ ವಿಭೂತಿ, ಅದರ ಮೇಲೆ ಬರಿಯ ಅಡ್ಡಗಂಧ, ಕಿವಿಯ ಸಂದಿಯಲ್ಲಿ ತುಳಸಿಯ ದಳ, ಇವುಗಳಿಂದ ಈಗ ತಾನೆ ದೇವತಾರ್ಚನೆಯನ್ನು ಮುಗಿಸಿಕೊಂಡು ಬರುತ್ತಿದ್ದಾನೆಂದು ಊಹಿಸಬಹುದು. ಬರುವಾಗ ಹಿಂದೆ ಮುಂದೆ ನೋಡಿಕೊಂಡು "ಛೆ! ಛೆ!" ಅನ್ನುತ್ತಿರುತ್ತಾನೆ. ಒಂದು ಚಾಪೆಯ ಮೇಲೆ ಕೂಡಲು ಹವಣಿಸುತ್ತಾನೆ. ಮುಂದೆ ಇವನ ಬಗ್ಗೆ ನಿರ್ವಾಣಯ್ಯನು ಸ್ನೇಹದ ಸಲುಗೆಯನ್ನೂ, ಆನಂದಪ್ಪನು ಭಯಭಕ್ತಿಗಳನ್ನೂ ಪ್ರದರ್ಶಿಸುತ್ತಾರೆ. ಲಕ್ಷ್ಮೀಪತಿಯು ದರ್ಪದಿಂದ ವರ್ತಿಸುತ್ತಾನೆ.)

ಏನು ಸಾಹುಕಾರರೆ? ಏನು ತೊಂದರೆ?

**ಲಕ್ಷ್ಮೀಪತಿ**:— ಇದೇ ಈ ಹಾಳು ಬೆಕ್ಕು ಅಡ್ಡವಾಯಿತು. ಇದು ಸಾಲದು ಅಂತ ಆ ಒಂಟಿ ಬ್ರಾಹ್ಮಣ ಶ್ಯಾನುಭೋಗ ಬೇರೆ ಎದುರಿಗೇ ಬಂದ.

(ಆನಂದಪ್ಪನು "ಸೀನು"ತ್ತಾನೆ.)

ಏ! ನೀನೂ ಅಪಶಕುನ ನುಡಿಯುತ್ತೀಯೇನು—ಒಂಟಿ ಸೀನಿನಿಂದ?

**ಆನಂದಪ್ಪ**:— ತಪ್ಪಾಯ್ತು, ತಪ್ಪಾಯ್ತಣ್ಣ. ಎಷ್ಟೋ ತಡೆದೆ—ಸಾಧ್ಯವಾಗಲಿಲ್ಲ.

**ಲಕ್ಷ್ಮೀಪತಿ**:— ನನ್ನ ಅದೃಷ್ಟ ಕೆಟ್ಟಿದ್ದರೆ ನೀ ಏನನ್ನು ಮಾಡಬಲ್ಲೆ. ಇವತ್ತು ಏನೇನು ಅನಾಹುತವಾಗುತ್ತದೆಯೋ ನನಗೆ; ಯಾರಿಗೆ ಗೊತ್ತು ?

**ನಿರ್ವಾಣಯ್ಯ**:— ನಿಮ್ಮ ಅದೃಷ್ಟವೇನು, ನೆಟ್ಟಗೇ ಇದೆ. ಸೊಟ್ಟವಾಗಿರುವುದೆಂದರೆ ನಿಮ್ಮ ತಮ್ಮನದ್ದೆ.

**ಲಕ್ಷ್ಮೀಪತಿ**:— ಅವನಸದ್ದನ್ನು ನೆಟ್ಟಗೆ ಮಾಡಲು ಬ್ರಹ್ಮನಿಗೇ ಸಾಧ್ಯವಿಲ್ಲ. ಅದು ಸರಿ. ಅದೇನು ಮಾತನಾಡುತ್ತಿದ್ದಿರಿ ಇಷ್ಟು ಹೊತ್ತೂ? ಯಾರಿಗಾಗಿ ಹೊಂಚು? ಯಾರ ಮನೆ ಮುರಿಯುವುದಕ್ಕೆ ಸಂಚು? ಯಾರ ಕಾಲನ್ನು ಎಳೆಯಬೇಕೆಂದಿದ್ದೀರಿ? ಇನ್ನೇನು, ಗಾಳಿ ಜಿಂಕೆಗಳು, ನೀವು ಕಲೆತಾಗ ಎಲ್ಲಾದರೂ ಉರಿಯೋಳಲೇಬೇಕಲ್ಲ. ಯಾವ ಮೂಗರ್ಜಿ ತಯಾರಾಗುತ್ತದೆ? ಕೋರ್ಟಿಗೆ ಯಾವ ಕೇಸು ದಾಖಲಾಗುತ್ತಿದೆ? ಉಂ?

**ನಿರ್ವಾಣಯ್ಯ**:— (ನಗುತ್ತ) ನಿಮ್ಮ ಶಾಪದಿಂದ ಬಂದ ಕೆಟ್ಟ ಹೆಸರಿನಿಂದ ತಪ್ಪಿಸಿಕೊಳ್ಳುವುದೇನು ನಮಗೆ ಸಾಧ್ಯವಿಲ್ಲ. ಆದರೆ ಸದ್ಯಕ್ಕೇನು ಮನೆಮುರುಕ ಸಂಚೇನೂ ತಯಾರಾಗುತ್ತಿಲ್ಲ. ಸುಮ್ಮನೆ ಆನಂದಪ್ಪ ತನ್ನ ಗೋಳನ್ನು ಹೇಳಿಕೊಳ್ಳುತ್ತಿದ್ದಾನೆ; ನಾನು ಕೇಳುತ್ತಿದ್ದೇನೆ ಅಷ್ಟೆ.

**ಲಕ್ಷ್ಮೀಪತಿ**:— ಅವನ ಗೋಳು ಇರದೇ ಇದ್ದ ದಿವಸವೂ ಇದೆಯೆ?

**ಆನಂದಪ್ಪ**:— (ದೈನ್ಯದಿಂದ) ಹಾಗಲ್ಲಣ್ಣ; ಇದೊಂದು ಸಾರಿ........

**ಲಕ್ಷ್ಮೀಪತಿ**:— ಸಾಕುಮಾಡಯ್ಯ; ಇಂಥ ಒಂದು ಸಾರಿ ನೂರು ಸಾರಿಯಾಗಿದೆ.

**ನಿರ್ವಾಣಯ್ಯ**:— ಈ ಸಲವೇನೋ ಬಹಳ ತೊಂದರೆಗೆ ಸಿಕ್ಕಿಕೊಂಡಿದ್ದಾನಂತೆ. ಕೇವಲ........

**ಲಕ್ಷ್ಮೀಪತಿ**:— ನಿರ್ವಾಣಯ್ಯನವರೆ, ನಿಮ್ಮ 'ಪೂಟು ಲಾಯರಗಿರಿ' ನನ್ನಲ್ಲೇನೂ ಸಾಗುವದಿಲ್ಲ. ಇಲ್ಲಿಯ ವರೆಗೆ ಎಷ್ಟು ಬಾರಿ ಎಷ್ಟು ದುಡ್ಡು ಕೊಟ್ಟಿರುವೆನೆಂದು ನಿಮಗೇನಾದರೂ ಗೊತ್ತೆ?

**ಆನಂದಪ್ಪ**:— ಹೌದು. ಬಹಳ ಅಪರಾಧ ಮಾಡಿದ್ದೇನೆ. ಆದರೆ............

**ಲಕ್ಷ್ಮೀಪತಿ**:–ಆದರೆ-ಗೀದರೆ ಏನೂ ಇಲ್ಲ. ನಿನಗೆ ಮಾಡುವುದನ್ನೆಲ್ಲ—ಅದಕ್ಕಿಂತ ಹೆಚ್ಚಾಗಿ—ಮಾಡಿಬಿಟ್ಟಿದ್ದೇನೆ.

**ಆನಂದಪ್ಪ**:— ಹೌದು.

**ಲಕ್ಷ್ಮೀಪತಿ**:—ಇವನು ಸಣ್ಣವನಾಗಿರುವಾಗಲೇ ತೀರ್ಥರೂಪರವರು ತೀರಿಕೊಂಡರು. ತಂದೆಗಿಂತ ಹೆಚ್ಚಾಗಿ ಸಾಕಿದೆ. ನನಗೇ ವಿದ್ಯದ ಗಂಧಕ್ಕೆ ಅವಕಾಶವಾಗದಿದ್ದರೂ ಇವನ ವಿದ್ಯದ ಮೇಲೆ ಒಂದು ಹೊರೆ ಹಣವನ್ನು ಸುರಿದೆ; ಎಲ್ಲವೂ ಬಂಡೆಯ ಮೇಲೆ ಮಳೆ ಹುಯ್ದಂತೆ ವ್ಯರ್ಥವಾಯಿತು. ಅದರ ಮೇಲೆ ಇವನಿಗೆ ವಯಸ್ಸು ಬಂದ ಮೇಲೆ ಒಂದು ಕಟ್ಟಿಗೆಯನ್ನೂ ಬಿಡದೆ ಲೆಕ್ಕಹಾಕಿ ಸಂಪಾದಿಸಿದ ಆಸ್ತಿಯಲ್ಲಿ ಪಾಲು ಕೊಟ್ಟೆ. ಇನ್ನೇನಾಗಬೇಕು; ಅವನ್ನೆಲ್ಲ ಮುಂದುಮಾಡಿ, ಕುಡಿತ, ಸೂಳೆಗಾರಿಕೆ, ಜುದುಗಾಟದ ಮೇಲೆ ಸುರಿದರೆ ಅದು ನನ್ನ ತಪ್ಪೆ? ಈಗಲೂ ನೌಕರಿಯಿಂದ ಬರುವ ಆದಾಯಕ್ಕೆ ನಾಲ್ಕರಷ್ಟನ್ನು ಖರ್ಚು ಮಾಡಿ ಪದೇ ಪದೇ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಿದ್ದರೆ ಅದರಿಂದ ಮತ್ತೆ ಮತ್ತೆ ಬಿಡಿಸಲು ನಾನು ಹೋಗೆಯೆ? ಇಲ್ಲ. ಇವನಿಗೆ ಒಂದು ಕಾಸಿನ ಮೇಲಿನ ಕಿಲುಬನ್ನೂ ಕೊಡುವುದಿಲ್ಲ. ಎಲ್ಲಾದರೂ ಹಾಳಾಗಿ ಹೋಗಲಿ.

**ನಿರ್ವಾಣಯ್ಯ**:— ನೀವು....ಅಣ್ಣಂದಿರೇ ಇಷ್ಟು ನಿಷ್ಠುರದಿಂದ ಕೈಬಿಟ್ಟರೆ....

**ಲಕ್ಷ್ಮೀಪತಿ**:— ಹಣದ ವಿಷಯದಲ್ಲೇನು ಸಂಬಂಧ? ಸಂಬಂಧ ಉಳಿಸಿಕೊಳ್ಳಬೇಕೆಂಬುವರು ನೆಂಟರಿಷ್ಟರಲ್ಲಿ ಹಂಗನ್ನಿಟ್ಟುಕೊಳ್ಳಬಾರದು; ಹಣದ ವ್ಯವಹಾರವನ್ನು ನಡೆಯಿಸಬಾರದು. ಇದೇ ಬಾಂಧವ್ಯದ ಬಾಳಿನ ಗುಟ್ಟು. ಅಣ್ಣತಮ್ಮಂದಿರಾದರೇನು, ಪಾಪ ತಾಳಿಯಿಂದ ರಾದರೇನು.

**ನಿರ್ವಾಣಯ್ಯ**:— ಅದು ಸರಿಯೆ. ಅವನದ್ದೇನೋ ತಪ್ಪೆ. ಆದರೆ ನಾನು ಒಂದೆರಡು ಪ್ರಶ್ನೆಗಳನ್ನು ಕೇಳಬಹುದೆ?

**ಲಕ್ಷ್ಮೀಪತಿ**:— ಏನು?

**ನಿರ್ವಾಣಯ್ಯ**:— ನೀವೇನೋ ಇಷ್ಟು ಹಣವನ್ನು ಕೂಡಿಹಾಕುತ್ತಿದ್ದೀರಲ್ಲ; ಯಾರಿಗಾಗಿ? ಮಕ್ಕಳಿಲ್ಲ........

**ಲಕ್ಷ್ಮೀಪತಿ**:— ನಾನು ಅವನ್ನೆಲ್ಲ ಬಲ್ಲೆ. ನನ್ನ ವಿಧಿಯನ್ನು ನನಗೆ ತೋರಿಸುವ ಯತ್ನವು ಅನವಶ್ಯಕ. ಅದು ನನಗೆ ಸೇರಿದುದು. ನನಗಾಗಿಯೇ

ಇರಬಹುದು. ಇಲ್ಲವೆ ಹಣವನ್ನು ಕೂಡಿಸುವ ಸಂತೋಷಕ್ಕಾಗಿಯೇ ಇರಬಹುದು.

**ನಿರ್ವಾಣಯ್ಯ**:— ಅದರಲ್ಲಿ ಏನು ಸುಖ?

**ಲಕ್ಷ್ಮೀಪತಿ**:— ನೀವು ಎಂದಾದರೂ ನಾಲ್ಕು ಕಾಸನ್ನು ಕೂಡಿಹಾಕಿದ್ದೀರೇನು?

**ನಿರ್ವಾಣಯ್ಯ** :— ಇಲ್ಲದಿದ್ದರೆ? ಬಡವರೋಪ್ಪರಿಗೆಲ್ಲಿ ಬರಬೇಕು ಆ ಅವಕಾಶ?

**ಲಕ್ಷ್ಮೀಪತಿ**:—ಬೆಳ್ಳಿಯ ರೂಪಾಯಿಗಳನ್ನು ಚೀಲಗಳಲ್ಲಿ ತುಂಬಿಟ್ಟು, ಬೇಕಾದಾಗ ಸುರಿದು ಅವರ 'ಝಣ ಝಣ' ವನ್ನು ಕೇಳಿದ್ದೀರ? ಆ ಗುಡ್ಡೆಗಳನ್ನು ಕಣ್ಣು ತುಂಬ ನೋಡಿದ್ದೀರ?

**ನಿರ್ವಾಣಯ್ಯ**:— ಇಲ್ಲ.

**ಲಕ್ಷ್ಮೀಪತಿ**:—ಹಾಗಿದ್ದರೆ ಹಣವನ್ನು ಶೇಖರಿಸುವ ಸುಖವು ನಿಮಗೆ ಹೇಗೆ ತಿಳಿದೀತು? ಇದು ನನ್ನ ಹಣವೆಂಬ ಭಾವನೆಯು ಕೊಡುವ ತೃಪ್ತಿ, ಹಿರಿಮೆಗಳು ನಿಮ್ಮನ್ನು ಮುಟ್ಟುವುದು ಹೇಗೆ? ಸಪ್ಪೆಯನ್ನೆ ತಿಂದು ಬಾಳಿದ ನೀವು ಉಪ್ಪಿಗೆ ಹೇಗೆ ಬೆಲೆ ಕಟ್ಟೀರಿ? 'ಇಲ್ಲ' ದವರ ಘಾರಾಳ ನಿಮ್ಮದು. ಇದನ್ನು ನಾನು ಚೆನ್ನಾಗಿ ಬಲ್ಲೆ.

**ಆನಂದಪ್ಪ**:— ಅಣ್ಣಾ, ಇವರ ಮುಂದೆ ನಾವೇನೂ ಹೇಳಲಾರೆವು.

**ಲಕ್ಷ್ಮೀಪತಿ**:— (ಗಮನಿಸದೆ) ನನ್ನಲ್ಲಿ ಹಣವಿರುವುದರಿಂದಲೇ ಈ ಹಳ್ಳಿಯಲ್ಲಿ ನಾನು ಗಣ್ಯ. ನೀವೆಲ್ಲರೂ ನನ್ನ ಹಿಂದೆ ಮುಂದೆ ಸುತ್ತಾಡುತ್ತೀರಿ. ಬೇಡುತ್ತೀರಿ. ಹಸಾದವೆನ್ನುತ್ತೀರಿ. ನನಗೆ ಗೌರವವನ್ನು ಕೊಡುತ್ತೀರಿ. ನಾನು ಈ ಹಣವನ್ನೆಲ್ಲ ತೆತ್ತುಬಿಟ್ಟ ಗಳಿಗೆಯಲ್ಲಿ ನೀವು ಕಾಮತೃಪ್ತಿಹೊಂದಿದ ಪಶುವಿನಂತೆ ಅಲಕ್ಷ್ಯದಿಂದ ದೂರ ಸರಿಯುತ್ತೀರಿ. ಸಾಮಾನ್ಯದ ಪ್ರಪಂಚವಿದರಲ್ಲಿ ಸೌಜನ್ಯಕ್ಕಿಂತ ಹಣ ಅಧಿಕಾರಗಳು ಹೆಚ್ಚಿನ ಘನತೆಯನ್ನು ಗಳಿಸುತ್ತವೆ. ಈ ಮಾತುಗಳು ಅಸಂಬದ್ಧವಾಗಿ ಕಾಣಬಹುದು. ಆದರೆ ಇದೇ ಬೆತ್ತಲೆ ಯಸತ್ಯ.

**ನಿರ್ವಾಣಯ್ಯ**:— ಹೌದು; ಆದರೆ ಇದನ್ನು ನಿಮ್ಮ ಸಮುದ್ರದಿಂದ ಒಂದು

ತಂಬಿಗೆಯ ನೀರನ್ನು ಕೊಂಡರೆ ಅದಕ್ಕಾಗುವ ಕುಂದೇನು ?

**ಲಕ್ಷ್ಮೀಪತಿ**:—ಹಣವು ಯಾವಾಗಲೂ ಎಲ್ಲಿಯೂ ಕಡಲಿನಂತಾಗುವದಿಲ್ಲ. ಅದೊಂದು ತಪ್ಪು ಭಾವನೆ. ನಿಜವಾಗಿಯೂ ಅದು ಎಣ್ಣೆಯ ಗಡಿಗೆಯಂತೆ. ಒಂದು ಬಾರಿ ತೂತಾದರೆ ಎಣ್ಣೆಯೆಲ್ಲವೂ ಸೋರಿಹೋಗುವುದರಲ್ಲಿ ಸಂಶಯವಿಲ್ಲ.

**ನಿರ್ವಾಣಯ್ಯ**:— ನಿಮ್ಮ ವಾದವನ್ನು ಕೇಳಿದರೆ ಕೃಪಣತ್ವವೇ ಅತಿಶಯವಾದ ಸದ್ಗುಣವೆನ್ನಿಸುತ್ತದೆ.

**ಲಕ್ಷ್ಮೀಪತಿ**:—ನನ್ನ ಭಾವನೆಯೂ ಅದಕ್ಕೆ ದೂರವಾಗಿಲ್ಲ. ದುಂದುಗಾರಿಕೆಗಿಂತ ಕೃಪಣತ್ವ ಬಹು ಮೇಲು. ಕೃಪಣನೆನ್ನುವುದೇ ನನ್ನ ಮೇಲಿನ ಆರೋಪಣೆಯಾದರೆ ಅದನ್ನು ಸಂತೋಷದಿಂದ ಹೊರುತ್ತೇನೆ. ಕೃಪಣನೆನ್ನಿ; ಕೃಪಣಶಿರೋಮಣಿಯೆನ್ನಿ. ನನಗೇನೂ ನಾಚಿಕೆಯಿಲ್ಲ. ಹಣವನ್ನು ಮಾತ್ರ ಕೇಳಬೇಡಿ. ಕೇಳಿ ಭಂಗಪಡಬೇಡಿ.

**ನಿರ್ವಾಣಯ್ಯ**:—ಈ ಮಾತುಗಳ ಮುಂದೆ ನಾವು ಮೂಕರು.

(ನಿಶ್ಶಬ್ದ. ಒಬ್ಬ ಭಿಕ್ಷುಕನು ಪ್ರವೇಶಿಸುತ್ತಾನೆ.)

**ಲಕ್ಷ್ಮೀಪತಿ**:— (ಭಿಕ್ಷುಕನ ಕಡೆಗೆ ತಿರುಗಿ) ಮುಂದಕ್ಕೆ ಹೋಗಿ ಬಾ.

**ಭಿಕ್ಷುಕ**:— ಸ್ವಾಮಿ.......

**ಲಕ್ಷ್ಮೀಪತಿ**:— ಸ್ವಾಮಿ, ಗೀಮಿ ಏನೂ ಇಲ್ಲ. ಇಲ್ಲ ಅಂತ ಹೇಳಲಿಲ್ಲವೆ? ನಿನ್ನಂಥವರು ಸಾವಿರ ಜನ ನಮಗೆ. (ಭಿಕ್ಷುಕನು ಹೋಗುತ್ತಾನೆ) ಬಂದವರಿಗೆಲ್ಲ ಭಿಕ್ಷೆ ಹಾಕುತ್ತಾ ಹೋದರೆ ಒಂದೇ ದಿನಕ್ಕೆ ಬರಿಯ ಪಾಳದೀತು ಮನೆಯೆಲ್ಲ.

**ಆನಂದಪ್ಪ**:— ಭಿಕ್ಷಾಟನೆಯನ್ನು ನಿಲ್ಲಿಸುವ ಕಾನೂನು ಇನ್ನೇನು ಜಾರಿಗೆ ಬರುವದರಲ್ಲಿದೆಯಂತೆ.

**ಲಕ್ಷ್ಮೀಪತಿ**:—ಅದು ನಾನು ಹುಟ್ಟಿದಾರಭ್ಯ ಬರುತ್ತಲೇ ಇದೆ. ಈ ಅಳ್ಳಕ ಸರ್ಕಾರಗಳು ಯಾವುದನ್ನೂ ಬೇಗ ಮುಂದುವರಿಸಲು ಶಕ್ತಿ ಹೊಂದಿಲ್ಲ.

**ನಿರ್ವಾಣಯ್ಯ**:— ಇಲ್ಲ. ಅದಂತೂ ತರುಣದಲ್ಲೇ........

**ಲಕ್ಷ್ಮೀಪತಿ**:— ಬಂದರೆ ಸಾಕಪ್ಪ; ಸದ್ಯ ಈ ಋಣಪಾತಕರ ಹಾವಳಿ ಯಿಂದ ತಪ್ಪಿಸಿಕೊಳ್ಳಬಹುದು.

**ಆನಂದಪ್ಪ**:— ಹಾಗಾದರೆ ಅಶಕ್ತರಿಗೆಲ್ಲ ಜೀವನ ನಡೆಯಿಸಬೇಕಾಗುತ್ತದೆ. ಇದಕ್ಕಾಗಿ ಹೆಚ್ಚಿನ ತೆರಿಗೆ ಹಾಕದೆ ಆಗುವುದಿಲ್ಲ.

**ಲಕ್ಷ್ಮೀಪತಿ** :— (ಗಾಬರಿಯಿಂದ) ಮತ್ತಷ್ಟು ತೆರಿಗೆ! ಯಾವ ಕಾಲು ಜಾರಿದರೂ ಪೆಟ್ಟು ಒಂದೇ ಕಡೆಗೇ.

( ನಾಲ್ಕಾರು ಹುಡುಗರು ಹೂಸಿನಿಂದ ಅಲಂಕರಿಸಲ್ಪಟ್ಟ ಪಠವೊಂದನ್ನು ಹಿಡಿದುಕೊಂಡು ಭಜನೆ ಮಾಡುತ್ತ ಬರುತ್ತಾರೆ.)

ಏನ್ರೋ ಅದು?

**ಒಬ್ಬ ಹುಡುಗ**:— ರಾಮಪಟ್ಟಾಭಿಷೇಕ, ನಾಳೆ.

**ಲಕ್ಷ್ಮೀಪತಿ**:-ಹಾಗೋ. ಅದಕ್ಕಾಗಿ ನನಗೂ ಆಗಬೇಕೋ ಪಟ್ಟಾಭಿಷೇಕ?

**ಎರಡನೆಯ ಹುಡುಗ**:— ಸಾಹುಕಾರರೆ ನಿಮ್ಮ ಕಾಣಿಕೆಯನ್ನು ಕೊಡಿ.

**ಲಕ್ಷ್ಮೀಪತಿ**:— ಏನು? ಕಾಣಿಕೆಯೆ? ನಮ್ಮ ಮನೆಯಲ್ಲೇ ನಾವು ಬೇಕಾದ ಹಾಗೆ ರಾಮಪೂಜೆಯನ್ನು ಮಾಡುತ್ತೇವೆ. ಮತ್ತೆಲ್ಲಿಗೂ ಕಾಣಿಕೆ ಗೀಣಿಕೆ ಕೊಡುವುದಿಲ್ಲ.

**ಮೂರನೆಯ ಹುಡುಗ**:— ಶಾನುಭೋಗರು ನಿಮ್ಮಲ್ಲಿಗೆ ಹೋಗಿ ಅಂದರು.

**ಲಕ್ಷ್ಮೀಪತಿ**:— ಸರಿ. ಆ ಶಾನುಭೋಗನ ಮುಖಕ್ಕಷ್ಟು ಮಂಗಳಾರತಿ. ಹೋಗಿ ಸುಮ್ಮನೆ!

( ಭಜನೆಯು ಸಾಗುತ್ತದೆ.)

ಈ ಶಾನುಭೋಗನಿಗೇನು — ಕಯಾಲಿ. ಇವತ್ತು ಭಜನೆ, ನಾಳೆ ಹರಿಕಥೆ, ನಾಡಿದ್ದು ಸಂತರ್ಪಣೆ ಇವೇ. ಇದಕ್ಕೆಲ್ಲ ನಾವು ಹಣ ತೆರಬೇಕಂತೆ. ದಂಡ. ಇದಲ್ಲದೆ ಇವತ್ತು ಯಾರೋ ಜೋತಿಷ್ಕರನ್ನು ಬೇರೆ ಕರೆದುಕೊಂಡು ಬಂದಿದ್ದಾನಂತೆ.

**ನಿರ್ವಾಣಯ್ಯ**:— (ಕೃತಕ ಕೌತುಕದಿಂದ) ನಿಜವಾಗಿ?

**ಆನಂದಪ್ಪ**:— (ಕೃತಕ ಕೌತುಕದಿಂದ) ಹಾಗೇ?

**ಲಕ್ಷ್ಮೀಪತಿ**:— ನೀವು ಕೇಳಿಲ್ಲವೇನು? ಅವನ್ನು ಹೇಳುವುದಕ್ಕೇ ಈಗ ಅಪಶಕುನವಾಗಿ ಬಂದಿದ್ದ. ಜ್ಯೋತಿಷ್ಯರನ್ನು ನೆಲದಿಂದ ಆಕಾಶದ ವರೆಗೂ ಹೊಗಳಿದ್ದಾನೆ.

**ನಿರ್ವಾಣಯ್ಯ**:— ಹುಂ!

**ಲಕ್ಷ್ಮೀಪತಿ**:— ಅವನಿಗೇನೋ "ಹೊಸ ಮನೆಯನ್ನು ಕಟ್ಟುತ್ತೀಯೆ; ನಿನಗೆ ಗಂಡುಮಗು ಆಗುತ್ತದೆ" ಅಂದುಬಿಟ್ಟರಂತೆ. ಅವನಿಗೆ ಹುಚ್ಚು ಹುಚ್ಚು ಸಂತೋಷ ಆಗಿಬಿಟ್ಟಿದೆ. ಊರಿಗೆಲ್ಲ ಅವರ ಪರಿಚಯ ಮಾಡಿಸುತ್ತಿದ್ದಾನೆ. ಭಟ್ಟರ ಹುಡುಗಿ ಮೂಕು ಅಂತ "ಏಕದಂ" ಹೇಳಿಬಿಟ್ಟರಂತೆ. ಲಕ್ಷ್ಮಣಯ್ಯನ ಹೆಂಡತಿ ಸತ್ತಿದ್ದು, ಎರಡನೆಯ ಸಂಬಂಧ ಆದದ್ದು ಎಲ್ಲವನ್ನೂ ಲೀಲಾಜಾಲವಾಗಿ ಹೇಳಿಬಿಟ್ಟರಂತೆ.

**ಆನಂದಪ್ಪ**:— ಇಲ್ಲಿಗೂ ಬರುತ್ತಾರೇನು?

**ಲಕ್ಷ್ಮೀಪತಿ**:— ಹುಂ; ಮಧ್ಯಾಹ್ನಕ್ಕೆ ಕರೆದುಕೊಂಡು ಬಾ ಅಂತ ಹೇಳಿದ್ದೇನೆ. ಅವರು ಬರುವ ಹೊತ್ತಿಗೆ ಊಟ ಮುಗಿಸಿಕೊಂಡಿರಬೇಕು. ಆನಂದ, ಬಾರೋ ಊಟಕ್ಕೆ.

(ಎದ್ದು ಹೋಗುತ್ತಾನೆ. ಆನಂದಪ್ಪನು ಹಿಂದೆ ಉಳಿಯುತ್ತಾನೆ.)

**ಆನಂದಪ್ಪ**:— ಓಹೋ! ನಮ್ಮ ಜ್ಯೋತಿಷ್ಯರ ಉಪಾಯ ಸರಿಯಾಗಿ ನಡೆಯುತ್ತಿದೆ. ಆ ಕೊರಮ ಚೆನ್ನಾಗಿ ನಾಟಕ ಕಟ್ಟುತ್ತಾನೆ. ಸಂದೇಹವಿಲ್ಲ.

**ನಿರ್ವಾಣಯ್ಯ**:—ನೋಡೋಣ. ಪ್ರಯತ್ನದ ಯೋಗ್ಯತೆಯೆಲ್ಲವೂ ಪರಿಣಾಮದಿಂದ ತಾನೆ ಗೊತ್ತಾಗುವುದು?

**ಆನಂದಪ್ಪ**:— ಆವನಾಟ ಸಫಲಿಸಲಿ ಅಂತ ಊರ ಬಾಗಿಲ ಹನುಮಂತರಾಯನಿಗೆ ಹರಕೆ ಹಾಕಿಕೊಳ್ಳುತ್ತೇನೆ. ಆಗ ನಾವು ಹೇಳಿಕಳಿಸಿದ್ದೂ, ಅವನು ಬಂದದ್ದೂ ಸಾರ್ಥಕವಾಗುತ್ತದೆ.

**ನಿರ್ವಾಣಯ್ಯ**:— ಅದು ಫಲಿಸಿದರೆ ಅದಕ್ಕೆ ಪಾಲು ನಿರ್ವಾಣಯ್ಯ ಅನ್ನುವುದನ್ನು ಮರೆಯಬೇಡ.

**ಆನಂದಪ್ಪ**:— ಅದರ ಯೋಚನೆ ಇಟ್ಟುಕೊಳ್ಳಬೇಡಿ. ಲಾಭ ನಷ್ಟ ಎರಡರಲ್ಲೂ ಅರ್ಧ ಅರ್ಧ— ನನಗೆ ನಿಮಗೆ.

**ನಿರ್ವಾಣಯ್ಯ**:— ಹಾಗೇ ಆಗಲಿ. ಊಟಕ್ಕೆ ಹೋಗು. ಆಗಲೇ 'ಸಿಡ ಸಿಡ' ಅಂತ ಅನ್ನುತ್ತಿರಬಹುದು ಒಳಗೆ ಲಕ್ಷ್ಮೀಪತಿ.

**ಆನಂದಪ್ಪ**:— ಮಧ್ಯಾಹ್ನ ಬನ್ನಿ.

**ನಿರ್ವಾಣಯ್ಯ** :— ಬಿಡುತ್ತೇನೆಯೆ ಅಂಥ ಸಮಯವನ್ನು ?

[ ಆನಂದಪ್ಪನು ಎದುರು ಬಾಗಿಲಿನೊಳಗೆ ಹೋಗುತ್ತಾನೆ. ನಿರ್ವಾಣಯ್ಯನೂ ನಿಲ್ಲುತ್ತಾನೆ.]

ತೆರೆ.

# ದೃಶ್ಯ ೨

[ ಲಕ್ಷ್ಮೀಪತಿಯ ಮನೆಯ ಹಜಾರ. ಲಕ್ಷ್ಮೀಪತಿ ಮತ್ತು ಆನಂದಪ್ಪನು ತಮ್ಮ ಹಳೆಯ ಉಡುಪಿನಲ್ಲಿ ಮಣೆಗಳ ಮೇಲೆ ಕುಳಿತಿದ್ದಾರೆ. ಅವರಿಗೆ ಸಮೀಪದಲ್ಲಿ ಇನ್ನೊಂದು ಮಣೆಯ ಮೇಲೆ ಜ್ಯೋತಿಷ್ಕನು ಪದ್ಮಾಸನ ಹಾಕಿ ಕುಳಿತಿದ್ದಾನೆ. ಇವನಿಗೆ ನಲವತ್ತು ವಯಸ್ಸು. ಪೃಥವಾದ ಮೈಕಟ್ಟಿನ ಆಸಾಮಿ. ಹಿಂದಕ್ಕೆ ಬಾಚಿದ ಬಿಳಿಯ ತಲೆಗೂದಲು, ಉದ್ದನೆಯ ಕಪ್ಪು ಗಡ್ಡ. ಸೊಂಟದಿಂದ ಮೇಲೆ ಬೆತ್ತಲೆ. ಮಾಸಲು ಬಣ್ಣದ ಮೇಟಿಪಂಚೆಯನ್ನುಟ್ಟಿದ್ದಾನೆ. ಕೊರಳಿನಲ್ಲಿ ದಪ್ಪ ರುದ್ರಾಕ್ಷಿಮಾಲೆ ಹಾಗೆಯೇ ಮೇಲ್ಕೈಗಳಲ್ಲಿ. ಹಣೆ ಮೊದಲ್ಗೊಂಡು ಮೈಯ ಮೇಲೆಲ್ಲ ವಿಭೂತಿಯ ಪಟ್ಟೆಗಳು. ಇವನ ಮುಂದೆ ಒಂದು ಆಂಜನೇಯನ ಪ್ರತಿಮೆಯೂ ಪೂಜಾಸಲಕರಣೆಗಳೂ ಇವೆ. ಹಾಗೆಯೇ ಒಂದು ಕಪ್ಪು ಹಲಗೆ ಬಳಪಗಳೂ ಉಂಟು. ಈ ಗುಂಪಿಗೆ ದೂರದಲ್ಲಿ ಚಾಪೆಯೊಂದರ ಮೇಲೆ ಸಿದ್ದಣ್ಣಯ್ಯನೂ ಶಾನುಭೋಗನೂ ಕುಳಿತಿದ್ದಾರೆ. ಸಿದ್ದಣ್ಣಯ್ಯನು ಬೆಳಿಗ್ಗೆಯ ಉಡುಪಿನಲ್ಲೇ ಕಾಣಿಸುತ್ತಾನೆ. ಶಾನುಭೋಗನಿಗೆ ಮೂವತ್ತೈದು ವಯಸ್ಸು, ಬಡ ಮೈಕಟ್ಟು. ನಾಲ್ಕಾರು ದಿನದ ಗಡ್ಡ. ಸಣ್ಣ ಪಂಚೆ, ಹರಕು ಷರಟು, ಮೇಲೊಂದು ಟವಲು ಇವೇ ಇವನ ವಸ್ತ್ರಗಳು.

ದೃಶ್ಯಾರಂಭದಲ್ಲಿ ಮಂಗಳಾರತಿಯು ನಡೆಸಲ್ಪಡುತ್ತದೆ. ಎಲ್ಲರೂ ಎದ್ದು ನಮಸ್ಕರಿಸಿ ಮತ್ತೆ ಹಿಂದಿನಂತೆಯೇ ಕುಳಿತುಕೊಳ್ಳುತ್ತಾರೆ. ತತ್ಕ್ಷಣವೇ ಜ್ಯೋತಿಷ್ಕನು ಕಣ್ಣುಮುಚ್ಚಿಕೊಂಡು ಧ್ಯಾನಾಸಕ್ತನಾಗುತ್ತಾನೆ. ತುಟಿಗಳು ನಿಶ್ಶಬ್ದವಾಗಿ ಅಲುಗುತ್ತಿರುತ್ತವೆ. ಬಾಕಿಯವರು ಕೈಮುಗಿದುಕೊಂಡು ಸ್ತಬ್ಧರಾಗಿ ನೋಡುತ್ತಿರುತ್ತಾರೆ. ಮೆತ್ತಮೆತ್ತಗೆ ಶಬ್ದಗಳು ಹೊರಡುತ್ತವೆ.]

**ಜ್ಯೋತಿಷ್ಕ**:— (ಮೆಲ್ಲಗೆ ಕಣ್ಣನ್ನು ತೆರೆಯುತ್ತ) ಓಂ! ಓಂ! ಓಂ. ಹರಿ ಓಂ. ಶಿವ ಓಂ! ಶ್ರೀದೇವೇಭ್ಯೋನಮಃ! ಶ್ರೀಗುರುಭ್ಯೋನಮಃ! ಹುಂ ಭಗವಾನ್ ಮಾರುತಿಯು ಪ್ರಸನ್ನನಾಗಿದ್ದಾನೆ. ಇನ್ನು ಮೊದಲಾಗಬಹುದು.

**ಲಕ್ಷ್ಮೀಪತಿ**:— ಸ್ವಾಮಿ, ನನ್ನ ತಮ್ಮನ ವಿಷಯವು ಅಪ್ಪಣೆಯಾಗಲಿ.

**ಆನಂದಪ್ಪ**:— ಇಲ್ಲ ಅಣ್ಣ............

**ಲಕ್ಷ್ಮೀಪತಿ**:— ಸುಮ್ಮನಿರೋ. ನಾನು ಹೇಳುವುದಕ್ಕೆ ಒಪ್ಪಿಕೊ.

**ಜ್ಯೋತಿಷ್ಕ**:—ಹಾಗೆಯೇ ಆಗಲಿ. ತಮ್ಮ ಹೆಸರು ?

**ಆನಂದಪ್ಪ**:— ಆನಂದಪ್ಪ.

**ಜ್ಯೋತಿಷ್ಕ**:— ಹತ್ತರಲ್ಲಿ ಯಾವುದಾದರೂ ಒಂದು ಅಂಕಿಯನ್ನು ಹೇಳಿ.

**ಆನಂದಪ್ಪ**:— ಏಳು.

[ಜ್ಯೋತಿಷ್ಕನು ಕಪ್ಪು ಹಲಿಗೆಯ ಮೇಲೆ ಬೇಗ ಬೇಗನೆ ಲೆಕ್ಕ ಹಾಕಿಕೊಳ್ಳುತ್ತಾನೆ.]

**ಜ್ಯೋತಿಷ್ಕ**:— ಹುಂ. ನೀವು ಹುಟ್ಟುವಾಗಲೇ ತಮ್ಮ ಮಾತೃಶ್ರೀಯವರು ಕಾಲವಾದರು.

**ಲಕ್ಷ್ಮೀಪತಿ**:— [ಆಶ್ಚರ್ಯದಿಂದ] ನಿಜ; ಹುಟ್ಟುತ್ತಲೇ ಅವರ ಅಮ್ಮನನ್ನು ಬಾಯಿಗೆ ಹಾಕಿಕೊಂಡ.

**ಜ್ಯೋತಿಷ್ಕ** :— ಆರು ವರ್ಷದ ಹೊತ್ತಿಗೆ ತೀರ್ಥರೂಪರೂ ತೀರಿ ಹೋದರು.

**ಲಕ್ಷ್ಮೀಪತಿ**:— ಎಲ! ಎಲ! ಸರಿಯಾಗಿ ಆರು ವರ್ಷಕ್ಕೇ ತಂದೆಯನ್ನು ತಿಂದುಕೊಂಡಿದ್ದ.

**ಜ್ಯೋತಿಷ್ಕ**:— ನಿಮ್ಮ ಅಣ್ಣನವರೇ ನಿಮ್ಮನ್ನು ತಂದೆಗಿಂತ ಹೆಚ್ಚಾಗಿ ಪಾಲಿಸಿಕೊಂಡು ಬಂದರು.

**ಲಕ್ಷ್ಮೀಪತಿ** :— ದೇವರಿಗೆ ಗೊತ್ತು – ನಾನು ಇವನಿಗಾಗಿ ಏಷ್ಟು ಒದ್ದಾಡಿದ್ದೇನೆಂದು.

**ಜ್ಯೋತಿಷ್ಕ**:— ಆದರೆ ಅದೆಲ್ಲವೂ ನಿಷ್ಫಲವಾಯಿತು.

**ಲಕ್ಷ್ಮೀಪತಿ**:— ಇನ್ನೂ ಹತ್ತು ಬಾರಿ ಹೇಳಿ ಅದನ್ನು.

**ಜ್ಯೋತಿಷ್ಕ**:— ನಿಮಗೆ ವಿದ್ಯಾಬಲವಿಲ್ಲದೆ ಹೋಯಿತು.

**ಲಕ್ಷ್ಮೀಪತಿ**:—ಅವನಿಗೆ ಬೇಕಾಗಿದ್ದದ್ದು ರಸ್ಟ್ರ-ವಿದ್ಯೆ? ಎಲ್ಲ ನೈವೇದ್ಯವಾಯಿತು.

**ಜ್ಯೋತಿಷ್ಕ**:— ನಿಮ್ಮ ಸ್ವಭಾವವೂ ಬಹಳ ಹಗುರವಾದದ್ದು.

**ಲಕ್ಷ್ಮೀಪತಿ**:—ಆ ಘೋರಣೆ ಧೀಮಾತನ ಅಷ್ಟು ಇಷ್ಟು ಅಂತ ಕೇಳುತ್ತೀರ ?

**ಜ್ಯೋತಿಷ್ಕ**:— ನೀವು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳುವದಿಲ್ಲ. ಸುಖದಲ್ಲೇ ಮನಸ್ಸಾಪವರು.

**ಲಕ್ಷ್ಮೀಪತಿ**:—ಇವತ್ತೇ ಆಕಾಶ ಕೆಳಕ್ಕೆ ಬಿದ್ದು ಹೋಗಲಿ; ಪ್ರಳಯವೇ ಆಗಲಿ; ಅವನು ಬೇರೆ ಒದ್ದಾಡುವ ಹಾಗಿಲ್ಲ. ಅವನದ್ದೇ ಅವನಿಗೆ. ಅವನ ನಸ್ಯ, ಅವನ ಸಿಗರೇಟು, ಅವನ ಇಸ್ಪೀಟು...........

**ಆನಂದಪ್ಪ**:— ತೀರ ಹಾಗೇನು? ಬಿಡಣ್ಣ!

**ಲಕ್ಷ್ಮೀಪತಿ**:— ಅಷ್ಟಲ್ಲದೆ? ಅವರು ಹೇಳಿದುದೆಲ್ಲ ಅಕ್ಷರಶಃ ನಿಜ.

**ಜ್ಯೋತಿಷ್ಕ**:— ನಿಮಗೆ ಪಿತ್ರಾರ್ಜಿತವೇನೋ ಸುಮಾರಾಗಿಯೇ ಬಂದಿತು.

**ಲಕ್ಷ್ಮೀಪತಿ**:— ಸುಮಾರೇನು ಸ್ವಾಮಿ! ಮೂವತ್ತೈದು ಸಾವಿರ ನಗದು.

**ಜ್ಯೋತಿಷ್ಕ**:— ಆದರೆ ಅವನ್ನೆಲ್ಲ ಕಳೆದಿದ್ದೀರಿ.

**ಲಕ್ಷ್ಮೀಪತಿ**:— ಮೂರು ವರ್ಷದಲ್ಲಿ ಹುಟ್ಟಡಗಿಸಿಬಿಟ್ಟ; ಈಗ ಎಲ್ಲೆಲ್ಲೂ ನೇತುಬಿಡಿಯುತ್ತಾನೆ.

**ಜ್ಯೋತಿಷ್ಕ**:—ನಿಮಗೆ ಅಲ್ಲಿ ಇಲ್ಲಿ ಹಣವನ್ನು ಸಂಪಾದಿಸುವ ಛಾತಿಯೇನೋ ಇದೆ.

**ಲಕ್ಷ್ಮೀಪತಿ**:—ಅದಕ್ಕೇನು-ಜೇಕಾದಹಾಗಿದೆ. ನನಗೇ ಹಾಕಿದ್ದಾನೆ ಹತ್ತು ಸರ್ತಿ ಟೋಪಿ. ಇದಲ್ಲದೆ ಇನ್ನೆಷ್ಟು ಜನಕ್ಕೋ ಏನೋ.

**ಆನಂದಪ್ಪ**:— ಸಾಕು ಜೋಯಿಸರೆ.

**ಲಕ್ಷ್ಮೀಪತಿ**:— ಲೇ, ತಾಳೋ.

**ಜ್ಯೋತಿಷ್ಕ**:— ಆದರೆ ಗಳಿಸಿದ ಕಾಸು ಒಂದೂ ಉಳಿಯುವದಿಲ್ಲ. ನೀವು.... ಹೇಳಲೋ?

**ಆನಂದಪ್ಪ**:— ಏನೂ ಬೇಡಿ.

**ಲಕ್ಷ್ಮೀಪತಿ**:— ಹೇಳಿ.

**ಜ್ಯೋತಿಷ್ಕ**:— ನಿಮಗೆ ಜೂಜು, ಕುಡಿತ, ಸ್ತ್ರೀವ್ಯಸನ ಎಲ್ಲವೂ ಉಂಟು.

**ಲಕ್ಷ್ಮೀಪತಿ**:— ನೋಡು ನಿನ್ನ ಬೇಳೆಯುಕಾಳು! ನನಗೇನು ಗೊತ್ತಿರಲಿಲ್ಲವೆ? ಬಿಡಿ, ಜೋಯಿಸರೆ, ನೀವು ಹೇಳಿದ್ದೆಲ್ಲ ಹದಿನಾರಾಣೆ ನಿಜ.

**ಜ್ಯೋತಿಷ್ಕ**:— ಏನೋ ಶ್ರೀಮಾರುತಿಯ ದಯದಿಂದ. ಇನ್ನೊಂದೆರಡು ಮುಖ್ಯ ಸಂಗತಿಗಳನ್ನು ಹೇಳಿ ಮುಗಿಸುತ್ತೇನೆ ನೀವು ತಮ್ಮ ಸಮೀಪ

ಬಂಧುಗಳೊಬ್ಬರಿಂದ ಹಣವನ್ನು ನಿರೀಕ್ಷಿಸುತ್ತಿದ್ದೀರಿ.

**ಲಕ್ಷ್ಮೀಪತಿ**:— ಇನ್ನು ಯಾರಿಂದ, ನನ್ನಿಂದಲೇ.

**ಜ್ಯೋತಿಷ್ಕ**:— ಆದರೆ ಅದು ಫಲಿಸುವದಿಲ್ಲ.

**ಲಕ್ಷ್ಮೀಪತಿ**:— ಭಲೆ !

**ಜ್ಯೋತಿಷ್ಕ**:— ಇಷ್ಟಾದರೂ ತೀರ ಬಡತನವೇನು ಇಲ್ಲ. ಅಲ್ಲದೆ ನಿಮ್ಮ ನವಕರಿಯು ದೊಡ್ಡದಲ್ಲದಿದ್ದರೂ...........

**ಲಕ್ಷ್ಮೀಪತಿ**:— ಸರಿ, ಅವನೊಬ್ಬ ಕೋಆಪರೇಟಿವ್ಹ ಇನಸ್ಪೆಕ್ಟರು.

**ಜ್ಯೋತಿಷ್ಕ**:— ದೊಡ್ಡ ಪದವಿಯಲ್ಲಿರುವರು ಅನೇಕರು ಸ್ನೇಹವಾಗಿದ್ದಾರೆ.

**ಲಕ್ಷ್ಮೀಪತಿ**:— ಹುಂ !

**ಆನಂದಪ್ಪ**:— ನನಗೆ ಗೊತ್ತಿಲ್ಲದ ಡೆಪುಟಿ ಕಮೀಷನರ್ ಯಾರು ?

**ಲಕ್ಷ್ಮೀಪತಿ**:— ಹೋ, ಹೋ.

**ಜ್ಯೋತಿಷ್ಕ**:— ಅವರಲ್ಲಿ ನಿಮ್ಮ ಮಾತು ನಡೆಯುತ್ತದೆ.

**ಲಕ್ಷ್ಮೀಪತಿ**:—ಭಲೆ ! ಪರವಾಯಿಲ್ಲ.

**ಜ್ಯೋತಿಷ್ಕ**:— ಇನ್ನೂ ಆಯುಸ್ಸು ತುಂಬ ಇದೆ. ಮುಂದಿನ ಜೀವನ ಹಿಂದಿನದಕ್ಕಿಂತ ಆನಂದವಾಗಿರುತ್ತದೆ.

**ಲಕ್ಷ್ಮೀಪತಿ**:— ಅದು ಹೇಗೋ ಪರಮೇಶ್ವರನಿಗೇ ಗೊತ್ತು. ಇವನ ಲಂಚ ದುರುಪಯೋಗಗಳು ಹೊರಕ್ಕೆ ಬರದಿದ್ದರೆ ಮಾತ್ರ ಅದು ಸಾಧ್ಯ.

**ಜ್ಯೋತಿಷ್ಕ**:— ಇನ್ನೇನಾದರೂ ಇದೆಯೆ, ನೀವು ಕೇಳುವುದು ?

**ಆನಂದಪ್ಪ**:— (ಆತುರದಿಂದ) ಹುಂ. ಕೇಳಿಕೊಳ್ಳುವದೊಂದಿದೆ–ಸದ್ಯ ನನ್ನ ಬಿಟ್ಟು ಬಿಡಿ ಅಂತ (ಎಲ್ಲರೂ ನಗುತ್ತಾರೆ.)

**ನಿರ್ವಾಣಯ್ಯ**:— ಕೈತೋರಿಸಿ ಅವಲಕ್ಷಣ ಅನಿಸಿಕೊಳ್ಳುವದು ಇದಕ್ಕಿಂತ ಸ್ಪಷ್ಟವಾಗಿರಬಹುದೆ ?

**ಜ್ಯೋತಿಷ್ಕ**:— ಛೇ, ಹಾಗಲ್ಲ. ಒಟ್ಟಿನಲ್ಲಿ ಎಲ್ಲ ಒಳ್ಳೆಯದೇ ಆಗುತ್ತದೆ.

**ಲಕ್ಷ್ಮೀಪತಿ**:— ಜೋಯಿಸರೆ, ನನಗೆ ಭವಿಷ್ಯದಲ್ಲಿ ನಂಬಿಕೆ ಅಂದರೆ ಹಾಗೆ

ಹಾಗೆ. ಆದರೆ ತಾವು ಅಸಂಪನ ವಿಷಯ ಹೇಳಿದ್ದು ನನ್ನ ಅನುಮಾನವನ್ನೆಲ್ಲ ಒತ್ತರಿಸಿತು. ತಮ್ಮಂತಹವರು ಸಿಕ್ಕಿರುವುದು ನಮ್ಮ ಸುಯೋಗ.

**ಶ್ಯಾನುಭೋಗ**:— ನಾನು ಆಗಲೇ ಹೇಳಲಿಲ್ಲವೆ?

**ಲಕ್ಷ್ಮೀಪತಿ**:—ಏನಯ್ಯ, ಹೇಳಿದ್ದು ಬಹಳ? ನಿರ್ವಾಣಯ್ಯ, ನಿಮ್ಮದನ್ನ ಹೇಳಬಹುದೊ?

**ನಿರ್ವಾಣಯ್ಯ**:— ಮಹಾಸ್ವಾಮಿ, ನಿಮ್ಮ ದಮ್ಮಯ್ಯ. ಸದ್ಯ ನನ್ನನ್ನು ಹೊರಕ್ಕೆಳೆಯಬೇಡಿ.

**ಲಕ್ಷ್ಮೀಪತಿ**:— ಜೋಯಿಸರೆ, ನೋಡಿ, ಎಂಥವರು ಇರುತ್ತಾರೆ ಈ ಪ್ರಪಂಚದಲ್ಲಿ.

**ಜ್ಯೋತಿಷ್ಕ**:— ಹೌದು ಸ್ವಾಮಿ; ಎಲ್ಲರೂ ತಮ್ಮ ಹಾಗೇ ಮಾದರಿಯಾಗಿ ಇರಲು ಆದೀತೆ?

**ಲಕ್ಷ್ಮೀಪತಿ**:— ಹ್ಞ; ಹ್ಞ; ಹೋಗಲಿ ನನ್ನದನ್ನೇ ಹೇಳಿಬಿಡಿ.

**ಜ್ಯೋತಿಷ್ಕ**:—(ಪುನಃ ಕಣ್ಣನ್ನು ಮುಚ್ಚಿಕೊಂಡು) ಓಂ; ಓಂ; ಓಂ; ಹರಿ ಓಂ! ಶಿವ ಓಂ! ಸೀತಾಪತಯೇನಮಃ ಲಕ್ಷ್ಮೀಪತಯೇನಮಃ (ಕಣ್ಣು ತೆರೆದು) ಶ್ರೀಮಾರುತಿಯು ಸುಪ್ರಸನ್ನನಾಗಿದ್ದಾನೆ. ಷುರುವಾಗಬಹುದು.

**ಲಕ್ಷ್ಮೀಪತಿ**:— ಹುಂ.

**ಜ್ಯೋತಿಷ್ಕ**:— ಒಂಭತ್ತರಲ್ಲಿ ಯಾವುದಾದರೊಂದು ಸಂಖ್ಯೆಯನ್ನು ಅಪ್ಪಣೆ ಕೊಡಿಸಿ.

**ಲಕ್ಷ್ಮೀಪತಿ**:— ಹ, ಒಂಭತ್ತೇ ಇರಲಿ. ನಮ್ಮದು ಎಲ್ಲಕ್ಕೂ ದೊಡ್ಡದು ಯಾವಾಗಲೂ.

**ಜ್ಯೋತಿಷ್ಕ**:— [ **ಕಪ್ಪು ಹಲಗೆಯ ಮೇಲೆ ಬೇಗ ಬೇಗ ಲೆಕ್ಕ ಹಾಕುತ್ತಾನೆ.** ] ತಮಗೆ ಮೊದಲಿನಲ್ಲಿ ಕಷ್ಟಗಳಿದ್ದರೂ ತಾವು ಸ್ವಪ್ರಯತ್ನದಿಂದ ಎಲ್ಲವನ್ನೂ ಗೆದ್ದು ಮುಂದೆ ಬಂದಿದ್ದೀರಿ.

**ಲಕ್ಷ್ಮೀಪತಿ**:— ಹುಡುಗನಾಗಿದ್ದಾಗ ತಂಗಳನ್ನು ಉಂಡು, ದನವನ್ನು ಕಾಯ್ದು ಹೊಲವನ್ನು ಉತ್ತು ಬೆಳೆಯಬೇಕಾಗಿತ್ತು ನಾನು. ಆ ಮೇಲೆ-ತೀರ್ಥರೂಪರವರು ಸಾಯುವ ಕಾಲಕ್ಕೇ ಕೊಂಚ ಲಕ್ಷ್ಮೀ ಕಟಾಕ್ಷ ಬಿದ್ದದ್ದು.

**ಜ್ಯೋತಿಷ್ಕ**:— ತಮಗೆ ಓದುಬರಹಕ್ಕೆ ಅಡ್ಡಿಯಾದರೂ ವಿದ್ಯಕ್ಕೇನೂ ಕಡಿಮೆಯಾಗಲಿಲ್ಲ.

**ಲಕ್ಷ್ಮೀಪತಿ**:— ಕಷ್ಟ ವಿದ್ಯಾಲಯದಲ್ಲೇ ನಾನು ವಿದ್ಯೆ ಕಲಿತದ್ದು. ಈಗಿನ ಒಂದು ಮಣ ಓದುಬರಹಕ್ಕಿಂತ, ಒಂದು ಗುಲಗಂಜಿಯ ತೂಕ ಕಲಿತ ವಿದ್ಯವೇ ಮೇಲು. ಅದಕ್ಕೆ ಇವನು (ಆನಂದಪ್ಪನನ್ನು ತೋರಿಸಿ,) ನಾನೇ ಸಾಕ್ಷಿಗಳು.

**ಜ್ಯೋತಿಷ್ಕ**:— ತಮ್ಮ ವಂಶದ ಹಿರಿಯರೆಲ್ಲರಿಗಿಂತ ತಾವು ಹೆಚ್ಚು ಘನತೆಯನ್ನು ಸಂಪಾದಿಸಿದ್ದೀರಿ.

**ಲಕ್ಷ್ಮೀಪತಿ**:— ಹುಂ; (ಜಂಭದಿಂದ ಸುತ್ತಲೂ ನೋಡುತ್ತಾನೆ.)

**ಜ್ಯೋತಿಷ್ಕ**:— ಮುಂದೆ ತಮ್ಮನ್ನು ಮೀರಿಸುವವರು ಯಾರೂ ಬಹುಶಃ ಹುಟ್ಟಲಾರರು.

**ಲಕ್ಷ್ಮೀಪತಿ**:— ಹಾಗೆ ?

**ಜ್ಯೋತಿಷ್ಕ**:— ತಮ್ಮ ತಂದೆಯವರಿಗೆ ಎರಡು ಸಂಬಂಧವಿದ್ದಿರಬೇಕು. ಅದರಲ್ಲಿ ಚಿಕ್ಕಮ್ಮನವರಿಂದ ತಮಗೆ ಕೊಂಚ....

**ಲಕ್ಷ್ಮೀಪತಿ**:— ಹೌದು ಅಷ್ಟಿಷ್ಟಲ್ಲ ಲಟಾಪಟಿ. ನಾನೇ ಸುಮತಿಯ ಮಗ; (ಆನಂದಪ್ಪನನ್ನು ತೋರಿಸಿ) ಇವನೇ ಸುರುಚಿಯ ಪುತ್ರರತ್ನ.

**ಜ್ಯೋತಿಷ್ಕ**:— ಆದರೆ ತಮಗೆ ಸಂತತಿಯ ಯೋಗವಿಲ್ಲ.

**ಲಕ್ಷ್ಮೀಪತಿ**:— (ನಿಟ್ಟುಸಿರು ಬಿಡುತ್ತ) ಅದನ್ನು ನಾವು ಕೇಳಿಕೊಂಡು ಬರಲಿಲ್ಲ. ಪ್ರಾರಬ್ಧವನ್ನು ಮೀರುವುದಕ್ಕಾಗುತ್ತದೆಯೆ?

**ಜ್ಯೋತಿಷ್ಕ**:— ಹಾಗೆಂದು ತಮ್ಮ ಹಣವನ್ನೇನೂ ತಾವು ತಮ್ಮ ಸಂಬಂಧಿಗಳಿಗೆ ಬಿಡುವ ಯೋಗವಿಲ್ಲ.

**ಲಕ್ಷ್ಮೀಪತಿ**:— ನಾನು ಬದುಕಿರುವವರೆಗಂತೂ ಒಂದು ಪುಡಿಗಾಸೂ ಅವರಿಗೇನು ದಕ್ಕುವ ಹಾಗಿಲ್ಲ—ಎಷ್ಟೇ ಉರುಲು ಹಾಕಿಕೊಳ್ಳಲಿ.

**ಜ್ಯೋತಿಷ್ಕ**:— ಆದರೆ ಒಂದು ದೊಡ್ಡ ಗಂಡವಿದೆ.

**ಲಕ್ಷ್ಮೀಪತಿ**:— [ಚಕಿತನಾಗಿ] ಏನು?

**ಜ್ಯೋತಿಷ್ಕ**:— ಹಣದ ಬಹುಭಾಗವು ಅಪಹರಿಸಲ್ಪಡಬಹುದು.

**ಲಕ್ಷ್ಮೀಪತಿ**:— ಏನು, ಕಳ್ಳರು ನುಗ್ಗುತ್ತಾರೆಯೆ?

**ಜ್ಯೋತಿಷ್ಕ**:— ಅದನ್ನು ಹೇಳಲಾರೆ. ಅಂತೂ ತಾವು ಜೀವದಿಂದಿರುವಾಗಲೇ ಅಂತಹ ಸಂದರ್ಭ ಒಂದುಂಟು.

[ನಿರ್ವಾಣಯ್ಯ, ಆನಂದಪ್ಪ ಒಬ್ಬರ ಮುಖವನ್ನು ಒಬ್ಬರು ನೋಡುತ್ತಾರೆ. ಲಕ್ಷ್ಮೀಪತಿಯು ಪೆಚ್ಚಾಗುತ್ತಾನೆ. ಶಾನುಭೋಗನಲ್ಲಿ ತಳಮಳವು ಕಾಣಿಸುತ್ತದೆ.]

**ಲಕ್ಷ್ಮೀಪತಿ**:— ಛೇ! ಆಮೇಲೆ?

**ಜ್ಯೋತಿಷ್ಕ**:— ಇಲ್ಲಿಯ ವರೆಗೆ ದೇವರು ತಮಗೆ ಒಳ್ಳೆಯ ಆರೋಗ್ಯವನ್ನು ಪಾಲಿಸಿದ್ದಾನೆ.

**ಲಕ್ಷ್ಮೀಪತಿ**:— [ಅರೆಮನಸ್ಸಿನಿಂದ] ಹುಂ; ಏನೂ ಕಾಯಿಲೆ ಕಸಾಲೆಗಳನ್ನು ಕಂಡವನಲ್ಲ.

**ಜ್ಯೋತಿಷ್ಕ**:— ಆದರೆ...........

**ಲಕ್ಷ್ಮೀಪತಿ**:— (ಗಾಬರಿಯಿಂದ) ಆದರೆ! ಆದರೇನು?

**ಜ್ಯೋತಿಷ್ಕ**:— ಕೊಂಚ ತಾಳಿ. ಇದು ಬಹಳ ಮುಖ್ಯವಾದ ವಿಷಯ. ಮತ್ತೆ ಲೆಕ್ಕ ಹಾಕಿ ನೋಡುತ್ತೇನೆ.

(ಮತ್ತೆ ಹಲಿಗೆಯ ಮೇಲೆ ಬರೆಯುತ್ತಾನೆ. ಎಲ್ಲರೂ ನಿಶಬ್ದವಾಗಿ ಸಟ್ಟಗುದಿಯಿಂದ ಅವನನ್ನೇ ನೋಡುತ್ತಾರೆ. ಒಂದು ಬಾರಿ ನಿರ್ವಾಣಯ್ಯ ಮತ್ತು ಆನಂದಪ್ಪ ದೃಷ್ಟಿಗಳನ್ನು ಬದಲಾಯಿಸಿಕೊಳ್ಳುತ್ತಾರೆ.)

ಛೇ! ಅದೇ ಫಲಿತಾಂಶ!

**ಲಕ್ಷ್ಮೀಪತಿ**:— ಅದೇನು? ಹೇಳಿ.

**ಜ್ಯೋತಿಷ್ಕ**:— ಹೋಗಲಿ ಬಿಡಿ. ನಾನೇ ತಪ್ಪು ಮಾಡಿದ್ದರೂ ಮಾಡಿರಬಹುದು.

**ಲಕ್ಷ್ಮೀಪತಿ**:— ಅದೇನು ಹೇಳಿಬಿಡಬಾರದೇ ? ನಾನು ಮುಳ್ಳಿನ ಮೇಲೆ ಕುಳಿತಂತಾಗಿದೆ.

**ಜ್ಯೋತಿಷ್ಕ**:— ಇಲ್ಲ; ಕ್ಷಮಿಸಿ.

**ಲಕ್ಷ್ಮೀಪತಿ**:—ಜೋಯಿಸರೆ, ನಾನು ಯಾವುದಕ್ಕೂ—ಸಾವಿಗೂ ಹೆಂಜದ ಯುವಪನಲ್ಲ. ನನಗೂ ವಯಸ್ಸಾಗುತ್ತ ಬಂದಿದೆ. ಒಂದಲ್ಲ ಒಂದು ದಿನ ಸಾಯಬೇಕು. ಅದೇ ಆದರೂ ಚಿಂತೆಯಿಲ್ಲ. ಧೈರ್ಯದಿಂದ ಮರೆ ಮಾಜದೆ ಹೇಳಿಬಿಡಿ.

**ಜ್ಯೋತಿಷ್ಕ**:— ಸುಮ್ಮನೆ ತಮ್ಮನ್ನು ಹಿಂಸೆಗೊಳಗುಮಾಡುವುದು ಯಾವ ನ್ಯಾಯ ?

**ಲಕ್ಷ್ಮೀಪತಿ**:— ಹಿಂಸೆಯೂ ಇಲ್ಲ; ಗಿಂಸೆಯೂ ಇಲ್ಲ. ಹೇಳಿ, ನಾನೇನು ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡೇನೆ ? ನಾನು ಅಂಥ ಮೂಢ, ಜಳ್ಳೆದೆಯವನು ಅಂತ ತಿಳಿದುಕೊಂಡಿರ ?

**ಜ್ಯೋತಿಷ್ಕ**:— ಹಾಗಾದರೆ ಹೇಳಿಬಿಡಲೋ ?

**ಲಕ್ಷ್ಮೀಪತಿ**:— ನಿರ್ಭಯವಾಗಿ, ನಿಸ್ಸಂಕೋಚವಾಗಿ.

**ಆನಂದಪ್ಪ**:—ಹೋಗಲಿ ಬಿಡಣ್ಣ.

**ಲಕ್ಷ್ಮೀಪತಿ**:— ಸುಮ್ಮನಿರೊ, ನಿನಗೇನು ?

**ಶಾನುಭೋಗ**:— ಬೇಡ, ಜೋಯಿಸರೆ.

**ಲಕ್ಷ್ಮೀಪತಿ**:— ನಿನಗೇನಯ್ಯ, ಬಾಯಿ ಮುಚ್ಚು....ನನ್ನ ವಿಷಯ.

**ನಿರ್ವಾಣಯ್ಯ**:— ಹಾಗಲ್ಲ...........

**ಲಕ್ಷ್ಮೀಪತಿ** :— ಹಾಗೂ ಅಲ್ಲ, ಹೇಗೋ ಅಲ್ಲ. ನೀವು ಹೇಳಿ, ತಿಳಿದುಕೊಳ್ಳೋಣ.

**ಜ್ಯೋತಿಷ್ಕ**:— ಹಾಗಿದ್ದರೆ ನನ್ನ ಮೇಲೆ ದೋಷವಿಲ್ಲ.

**ಲಕ್ಷ್ಮೀಪತಿ** :— ಹಾಗೆಂದವರಾರು ? ಸುಖವನ್ನು ತಿಳಿಸುವಂತೆ ದುಃಖವನ್ನೂ ತಿಳಿಸುವುದೂ ನಿಮಗೆ ಯೋಗ್ಯವಾದುದು.

**ಜ್ಯೋತಿಷ್ಕ**:— ನನ್ನ ಲೆಕ್ಕದ ಪ್ರಕಾರ...........

**ಲಕ್ಷ್ಮೀಪತಿ**:— ಹುಂ.

**ಜ್ಯೋತಿಷ್ಕ**:— ಶ್ರೀಮಾರುತಿಯ ಪ್ರೇರಣೆಯ ಪ್ರಕಾರ.

**ಲಕ್ಷ್ಮೀಪತಿ**:— (ತಾಳ್ಮೆ ಮೀರಿ) ಯಾವುದರ ಪ್ರಕಾರವೋ .... ...ಏನು ?

**ಜ್ಯೋತಿಷ್ಕ**:— ತಮಗೆ ಸದ್ಯವಲ್ಲೇ ಒಂದು ಗಂಡವು ಪ್ರಾಪ್ತವಾಗುತ್ತದೆ.

**ನಿರ್ವಾಣಯ್ಯ**:— ಹಾಳು ಗೌಳಿ: ರಾಮ, ರಾಮ. [ನೆಲ ಬಡಿಯುತ್ತಾನೆ.]

**ಲಕ್ಷ್ಮೀಪತಿ**:— ಹ! ಗೌಳಿಯೇ ? ಜೋಯಿಸರೆ, ಗಂಡ ಅಂದಿರ? ಸದ್ಯ ವಲ್ಲೇ ಅಂದರೆ ?

**ಜ್ಯೋತಿಷ್ಕ**:— ಎರಡು ವಾರಗಳಲ್ಲಿ ?

**ಲಕ್ಷ್ಮೀಪತಿ**:— [ಮಾರುತ್ತರಗೊಡುತ್ತ] ಎರಡು ವಾರಗಳಲ್ಲಿ ?

**ಜ್ಯೋತಿಷ್ಕ**:— [ವ್ಯಸನದಿಂದ] ಹುಂ.

**ಲಕ್ಷ್ಮೀಪತಿ**:— ಗಂಡವೆಂದರೆ ಮಹತ್ತರವಾದದ್ದೇನು ?

**ಜ್ಯೋತಿಷ್ಕ**:— ಹುಂ.

**ಲಕ್ಷ್ಮೀಪತಿ**:— ಉಳಿಯುವ ಸಂಭವ.......... ?

**ಜ್ಯೋತಿಷ್ಕ**:— ಇಲ್ಲವೆಂದೇ ಹೇಳಬಹುದು. ಆದರೆ ಶ್ರೀಮಾರುತಿ ಪರ ಮಾತ್ಮನ ಲೀಲೆಯು ಅಗಾಧವಾದುದು.

**ಲಕ್ಷ್ಮೀಪತಿ**:— ಅದಿರಲಿ, ಯಮನೆಳೆಯುವಾಗ ಯಾರೂ ತಪ್ಪಿಸಲಾರರು.

**ಜ್ಯೋತಿಷ್ಕ**:— ಹಾಗಲ್ಲ.

**ಆನಂದಪ್ಪ**:— ಜೋಯಿಸರೆ, ಇನ್ನೂ ಸರಿಯಾಗಿ ನೋಡಿ.

**ಲಕ್ಷ್ಮೀಪತಿ**:— [ಕಿರಿಕಿರಿಯಿಂದ] ಇನ್ನೇನೋ ಸರಿಯಾಗಿ ? ಅವರೇನು ಹೆದ್ದರೆ ? ನಿನಗೆ ಬೇಕಾದದ್ದನ್ನೇ.... .......

**ಆನಂದಪ್ಪ**:— ಛೇ; ಶಿವ! ಶಿವ! ಇದೇನಣ್ಣಾ, ಹೀಗೆ ಹೇಳುತ್ತೀಯ ?

**ಲಕ್ಷ್ಮೀಪತಿ**:— [ನಿಷ್ಠುರದಿಂದ] ಪ್ರಪಂಚದ ತರಹವೆಲ್ಲ ನನಗೆ ಗೊತ್ತು ಕಣೊ. ಮನಸ್ಸಿನಂತೆ ನಾಲಗೆ ನುಡಿಯುತ್ತಿದ್ದರೆ ಈ ಕಾಲವೇಕೆ ಹೀಗೆ ಕುಲಗೆಟ್ಟು ಹೋಗಬೇಕು ? ನಮ್ಮ ದುಃಖಕ್ಕೆ ನಮ್ಮ ದ್ವಂದ್ವ

ಸ್ವಭಾವವೂ ಬಹುಪಟ್ಟಿಗೆ ಕಾರಣ.

**ಆನಂದಪ್ಪ**:— ನಾನು ಏನನ್ನೂ ಹೇಳುವದಿಲ್ಲ ಇನ್ನು.

**ಶಾನುಭೋಗ**:— [ಜೋತಿಷ್ಕರನ್ನುದ್ದೇಶಿಸಿ] ಗಂಡದಿಂದ ಪಾರಾಗುವುದಕ್ಕೆ ಏನಾದರೂ ಪೂಜೆ–ಪುನಸ್ಕಾರಗಳಿವೆಯೆ ?

**ಜ್ಯೋತಿಷ್ಕ**:— ನವಗ್ರಹಪೂಜೆ, ಸೂರ್ಯನಮುಸ್ಕಾರ, ಬ್ರಾಹ್ಮಣದಾನ ಇವುಗಳನ್ನು ಮಾಡಿ ನೋಡಬಹುದು.

**ಶಾನುಭೋಗ**:— ನಾಳೆಯಿಂದಲೇ ಮೊದಲು ಮಾಡಿಸುತ್ತೇವೆ.

**ಲಕ್ಷ್ಮೀಪತಿ**:— [ಚಿಂತಾಕ್ರಾಂತನಾಗಿದ್ದರೂ ಹುಸಿನಕ್ಕು] ನೋಡೋಣ– ಆ ಮೇಲೆ–ಜೋಯಿಸರೆ, ನನ್ನ ಹೆಂಡತಿಯ ಭವಿಷ್ಯವನ್ನೂ ಕೇಳಬೇಕು ಅಂತ ಇದ್ದೆ. ಈಗ ಅದು ಬೇಕಿಲ್ಲ. ಇನ್ನು ಯಾರೂ ಕೇಳುವರಿಲ್ಲ.

**ಜ್ಯೋತಿಷ್ಕ**:— [ಏಳುತ್ತ] ಹಾಗಾದರೆ ನಾನು ಹೋಗಿ ಬರುತ್ತೇನೆ.

**ಲಕ್ಷ್ಮೀಪತಿ**:— ಆಗಲಿ.

[ಜೋತಿಷ್ಕರು ಏಳುತ್ತಿದ್ದವರು ಮತ್ತೆ ಕುಳಿತು ತಾಂಬೂಲ ದಕ್ಷಿಣೆಗಳನ್ನು ತೆಗೆದುಕೊಂಡು ಎದ್ದು ಹೋಗುತ್ತಾರೆ. ಅವರೊಡನೆ ಶಾನುಭೋಗನೂ ಹೋಗುತ್ತಾನೆ.]

ಬೆಳಿಗ್ಗೆಯೇ ಅಪಶಕುನವಾಯ್ತು. ಏಕೋ ಅಂತ ಇದ್ದೆ. ಶಕುನಗಳು ಸುಳ್ಳಾಗುತ್ತವೆಯೆ–ಹಾಳು ?

**ಆನಂದಪ್ಪ**:— ಅಣ್ಣಾ.

**ಲಕ್ಷ್ಮೀಪತಿ**:— ಈಗೊಂದೂ ಬೇಡ. ಅದನ್ನೆಲ್ಲ ಕಡೆಗಿಟ್ಟುಕೊ. (ಹೋಗುತ್ತಾನೆ.)

**ನಿರ್ವಾಣಯ್ಯ**:— ಇಂಜಕ್ಷನ್ನು ಆಗಲೇ ಕೆಲಸ ಮಾಡುತ್ತಾ ಇದೆ.

**ಆನಂದಪ್ಪ** :— ಆದರೆ ಪರಿಣಾಮದ ವಿಷಯದಲ್ಲಿ ನನಗೇನೋ ಗಾಬರಿ.

**ನಿರ್ವಾಣಯ್ಯ**:— ನೋಡೋಣ. ಹೇಗಿದ್ದರೂ ನಾವು ಊರನ್ನು ಬಿಟ್ಟು ಓಡಿಹೋಗುವವರೆ. ನಾವು ನಿರೀಕ್ಷಿಸಿದಂತೆ ಆದರೆ ನಮ್ಮ ಅದೃಷ್ಟ.

**ಆನಂದಪ್ಪ**:— ಈ ಉಪಾಯವೆಲ್ಲ ಕೆಟ್ಟದ್ದು ಕಂಡ್ರಿ. ನನ್ನ ಮನಸ್ಸಿಗೇ

ಅಯ್ಯೋ ಅನ್ನಿಸಿದೆ, ಬೇಜಾರಾಗಿದೆ.

**ನಿರ್ವಾಣಯ್ಯ**:— ನೀನೇನು ಹೆಂಗಸೇನಯ್ಯಾ ಕರಗಿ ನೀರಾಗಿ ಹೋಗುವುದಕ್ಕೆ? ಅಥವಾ ಅಂಥ ಹರಿಶ್ಚಂದ್ರನೋ ಅಸತ್ಯಕ್ಕೆ ಬೇಜಾರುಪಡುವುದಕ್ಕೆ?

**ಆನಂದಪ್ಪ**:— ಅಲ್ಲ. ಆದರೂ.

**ನಿರ್ವಾಣಯ್ಯ**:— ಅದರಿಂದ ಆದ ನಷ್ಟವೇನು? ಲಕ್ಷ್ಮೀಪತಿ ಅಷ್ಟು ಒದ್ದಾಡುತ್ತಾನೆ. ಅಷ್ಟೆ. ಅವರ ಹಣ ಸಿಕ್ಕದಿದ್ದರೆ ನೀನೆಷ್ಟು ಒದ್ದಾಡಬೇಕು ಯೋಚಿಸಿಕೊ?

**ಆನಂದಪ್ಪ**:— ನಿಜ. ನಾನಂತೂ ಬಹಳ ಸಂಕಟಕ್ಕೆ ಸಿಕ್ಕಿಕೊಂಡಿದ್ದೇನೆ.

**ನಿರ್ವಾಣಯ್ಯ**:— ಮತ್ತೆ ತೆಪ್ಪಗಿರು. ನಾನು ಹೇಳಿದಂತೆ ನಡೆದುಕೊ.

**ಆನಂದಪ್ಪ**:— ಈಗಿನ್ನೇನು?

**ನಿರ್ವಾಣಯ್ಯ**:— ಈಗ ಏನೂ ಹೇಳುವುದಕ್ಕಾಗುವುದಿಲ್ಲ. ವಿಷಯವು ಬೆಳೆದಂತೆಲ್ಲ ನೀವೂ ಹೊಂದಿಸಿಕೊಂಡು ಹೋಗಬೇಕು. ನಾನು ಆಗಾಗ ಹೇಳುತ್ತೇನೆ. (ಇಸ್ಪೀಟಿನ ಪ್ಯಾಕು ತೆಗೆದು) ಇಬ್ಬರ ಆಟ ಹಾಕೋಣವೇನು?

**ಆನಂದಪ್ಪ**:— (ತೆಪ್ಪಗೆ) ಹುಂ.

[ ತೆರೆ. ]

## ದೃಶ್ಯ ೩

[ ಸ್ಥಳ : ಲಕ್ಷ್ಮೀಪತಿಯ ಮನೆಯ ಜಗುಲಿ. ಹಿಂದಿನಂತೆ ನಿರ್ವಾಣಯ್ಯ ಮತ್ತು ಆನಂದಪ್ಪ ಮಾತನಾಡುತ್ತಿರುತ್ತಾರೆ.
ಹೊತ್ತು : ಬುಧವಾರ ಬೆಳಿಗ್ಗೆ ಹನ್ನೊಂದು ಗಂಟೆಯ ಸಮಯ. ]

**ನಿರ್ವಾಣಯ್ಯ**:— ಹುಂ. ಹಾಗಾದರೆ ನಾವು ಮಾಡಿದ್ದು ಈಗಿನ ಡಾಕ್ಟರ ಔಷಧಿಯಂತಾಯಿತೆನ್ನು. ಶೀತಕ್ಕೆ ಔಷಧವನ್ನು ಕೊಟ್ಟರೆ ಪಿತ್ತ ವಾಗುವುದು ; ಪಿತ್ತಕ್ಕೆ ಕೊಟ್ಟರೆ ಊಷ್ಣ ; ಊಷ್ಣಕ್ಕೆ ಕೊಟ್ಟರೆ ವಾಯು. ಅಂತೂ ಸಮಧಾತುವಾಗುವುದು, ಮನುಷ್ಯ ನೆಟ್ಟಗಾಗು ವುದು ಬೇರೆ ಇಲ್ಲ.

**ಆನಂದಪ್ಪ**:— ಹಾಗೆಯೆ. ಆ ಭವಿಷ್ಯ ನಾವು ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಕಳವಳಕ್ಕೆ ದಾರಿ ಕೊಟ್ಟಿತು.

**ನಿರ್ವಾಣಯ್ಯ**:— ಏನು ನಮಗೋ ಅವನಿಗೋ ?

**ಆನಂದಪ್ಪ**:— ನಮಗಂತೂ ಸರಿಯೇ ಸರಿಯಲ್ಲ— ಅನಿರೀಕ್ಷಿತವಾದದ್ದು. ನಾನು ಹೇಳಿದ್ದು ಅವನಿಗೆ. ಹೊರಹೊರಗೆ ಉದಾಸೀನತೆಯನ್ನು ತೋರಿಸಲು ಯತ್ನಿಸುತ್ತಾನೆ. ಆದರೆ ಆ ಸುದ್ದಿ ಒಳಗೇ ಕುಯ್ದು ಕುಯ್ದು ತಿನ್ನುತ್ತಿದೆ. ಖಂಡಿತ. ಅವತ್ತಿನ ರಾತ್ರಿಯೆಲ್ಲ ಕಣ್ಣು ಮುಚ್ಚಿರ ಬೇಕಲ್ಲ. ಈಚೆ ಕೋಣೆಯಲ್ಲಿ ನನಗೇ ಕೇಳಿಸುತ್ತಿತ್ತು— ಅವನ ಸಂಕಟ. ಮಾರನೆ ಬೆಳಿಗ್ಗೆಯೆಲ್ಲ ಮಂಕುಬಡಿದಿದ್ದ. ಸುಮ್ಮನೆ ಯೋಚಿಸುತ್ತ ಶತಪಥ ತಿರುಗುತ್ತಿದ್ದ.

**ನಿರ್ವಾಣಯ್ಯ**:— ಹುಂ. ನಾನೂ ಕಂಡೆ. ಅದರಲ್ಲೇನು ವಿಶೇಷ ಕಾಣ ಲಿಲ್ಲ. ಅದು ಮನುಷ್ಯನಾದವನಿಗೆ ನ್ಯಾಯ ಅಂತ ಕಾಣಿಸಿತು. ಸರಿಯಾಗಿ ಜರುಗುತ್ತಾ ಇದೆ ಅಂದುಕೊಂಡೆ. ಹಣದ ಹಂಚಿಕೆಯ ವಿಚಾರ ಕೇವಲ ಗಂಟೆಗಳದ್ದು ಎಂದುಕೊಂಡೆ.

**ಆನಂದಪ್ಪ**:–ಹಾಗೆ ಆಗಿದ್ದರೆ! ಇಷ್ಟು ಹೊತ್ತಿಗೆ ಬೆಂಗಳೂರಿನಲ್ಲಿರುತ್ತಿದ್ದ. ಆದರೆ ಹಾಗಾಗಲಿಲ್ಲ. ಮಧ್ಯಾಹ್ನದ ಹೊತ್ತಿಗೆ ನಗುವುದಕ್ಕೇ ಪ್ರಾರಂಭಿಸಿದ.

ಅದೂ ಹುಚ್ಚು ಹುಚ್ಚು ನಗು. ನನಗೆ ಅದರ ಅರ್ಥವೇ ತಿಳಿಯಲಿಲ್ಲ — ನಿನ್ನೆಯ ವರೆಗೆ. ನಿನ್ನೆ ಲಾಯರು ಸೀತಾರಾಮಯ್ಯನವರು ಬಂದರು. ಅವರು ಹೇಳಿದೊಡನೆಯೇ ನನಗೆ ಎದೆಯು 'ಧಸ್ಸೆ'ಂದಿತು ಹೀಗೂ ಉಂಟೆ ಅಂದುಕೊಂಡೆ.

**ನಿರ್ವಾಣಯ್ಯ**:— ಹಾಗಾದರೆ ಮುದ್ದನ್ನೆಲ್ಲ ಕೊಟ್ಟುಬಿಟ್ಟನೆ—ದಾನಧರ್ಮಕ್ಕೆ?

**ಆನಂದಪ್ಪ**:— ಹುಂ. ಹೆಚ್ಚು ಕಡಿಮೆ. ಆಮೇಲೆ ನಾನು ಅವನ ಹೆಂಡತಿಯ ವಿಚಾರವನ್ನಾದರೂ ತಿಳಿಸುವುದು ನನ್ನ ಧರ್ಮವೆಂದು ತಿಳಿಸಿದೆ.

**ನಿರ್ವಾಣಯ್ಯ**:— ಅದಕ್ಕೆ ?

**ಆನಂದಪ್ಪ**:— ಏನಂದ ಅಂತೀರಿ ? 'ನೀನಿಲ್ಲವೆ? ನಿನ್ನನ್ನು ನಾನೆಷ್ಟು ದಿನ ಸಲಹಿದೆ. ನೀನು ಅವಳನ್ನು ನೋಡಿಕೊಳ್ಳಲಾರೆಯಾ? ಅಲ್ಲದೆ ಅವಳಿಗೆಷ್ಟು ಬೇಕು, ಮಹಾ,–ಅವಲಕ್ಕಿ ಮೊಸರಿಗೆ' ಅಂದುಬಿಟ್ಟ.

**ನಿರ್ವಾಣಯ್ಯ**:— ಈ ಗಟ್ಟಿ ತಲೆಯವರ ವಿಚಾರವೇ ಹೀಗೆ. ಈಗೊಂದು ಕೊನೆ-ಅದೇ ಕೊನೆಯ ನಿರ್ಧಾರವೋ ಅನ್ನುವ ಹಾಗೆ. ಏನಾದರೂ ಅದನ್ನು ತಿರುಗಿಸಿದರೆ ಪೂರ್ಣವಾಗಿ ಲಗಾಟೆ. ಆಗ ಮತ್ತೊಂದು ಕೊನೆ ಕೇವಲ ವಿರುದ್ಧವಾದದ್ದು. ಮಧ್ಯದ ಮಾತೇ ಇಲ್ಲ–ಇವರಿಗೆ. ಅಂತೂ ನೀಗಿಬಿಟ್ಟನೇನು ಎಲ್ಲವನ್ನೂ ?

**ಆನಂದಪ್ಪ**:— ಎಲ್ಲೋ ಕೊಂಚ ಉಳಿದಿರಬಹುದು.

**ನಿರ್ವಾಣಯ್ಯ**:— ಅದಕ್ಕೇನನ್ನಾದರೂ ಮಾಡಬೇಕು. ಎಲ್ಲೆಲ್ಲಿಗೆ ಬಿಸಾಡಿದ-ಇಲ್ಲಿಯವರೆಗೆ ಹೂಳಿಟ್ಟು ಸರ್ಪದಂತೆ ಕಾಯುತ್ತಿದ್ದ ಹಣವನ್ನು?

**ಆನಂದಪ್ಪ**: – ಲಾಯರು ಹೇಳಿದ್ದರಲ್ಲಿ ರಾಜಧಾನಿಯ ಬೊಬ್ಬೂರು ಕಮ್ಮೆ ಹಾಸ್ಟಲಿಗೆ ಅಷ್ಟು, ಬೊಬ್ಬೂರು ಕಮ್ಮೆ ವಿದ್ಯಾರ್ಥಿ ವೇತನಕ್ಕಾಗಿ ಅಷ್ಟು, ಬ್ರಾಹ್ಮಣ ಸಂಸ್ಕಾರ ಸಹಾಯಸಭೆಗೆ ಅಷ್ಟು, ಮುದಿ ಗೋರಕ್ಷಣ ಸಂಘಕ್ಕಷ್ಟು, ಬಿಳಿಗೂಡು ದೇವಸ್ಥಾನದಲ್ಲಿ ವರ್ಷ ವರ್ಷ ಸಮಾರಾಧನೆಗೆ ಮುಡುಪು ಅಷ್ಟು, ಕಾಶಿಯ ಗಂಗಾಸೋಪಾನಕ್ಕೆ ಅಷ್ಟು, ಹೀಗೆ ಹತ್ತಾರು ಅವನಿಷ್ಟದಂತೆ ಅಷ್ಟು. ಮತ್ತೆ ಲಾಯರ ಸೂಚನೆಯಂತೆ ನಮ್ಮ ಹಳೇದುರ್ಗದ ತಾಲ್ಲೂಕು ಟೌನ್ ಹಾಲ ಕಟ್ಟಡಕ್ಕೆ,

ದಿವಾನ್ ಸರ್ಕಲ್ಲಿಗೆ, ಲಕ್ಷ್ಮೀಪತಿ ಸ್ಕೂಲಿಗೆ, ಆಳಿದ ಮಹಾಸ್ವಾಮಿಯವರ ಶಿಲಾವಿಗ್ರಹಸ್ಥಾಪನೆಗೆ, ಲಕ್ಷ್ಮೀಪತಿ ಛತ್ರಕ್ಕೆ ಇವುಗಳಿಗೆ ಈಗಾಗಲೇ ಎರಡು ಲಕ್ಷ ಖರ್ಚಾಗಿದೆಯಂತೆ. ಸಂಸ್ಥಾನದ ಅಕ್ಷರ ಪ್ರಚಾರ ನಿಧಿಗೆ, ಕನ್ನಡ ಸಾಹಿತ್ಯ ಪರಿಷತ್ತಿಗೆ, ಹಳೇದುರ್ಗದಲ್ಲಿ ಶಿಶು ವಿಹಾರ ಸ್ಥಾಪನೆಗೆ, ಧರ್ಮದ ಆಸ್ಪತ್ರೆಗೆ, ಪುಸ್ತಕ ಭಾಂಡಾರ ಮತ್ತು ವಾಚನಾಲಯಗಳಿಗೆ, ವ್ಯಾಯಾಮಶಾಲೆಗೆ, ಏನಾದರೂ ಕೊಡಬೇಕೋ ಇಲ್ಲವೋ ಎಂಬುದು ಅನುಮಾನದಲ್ಲಿದೆಯಂತೆ.

**ನಿರ್ವಾಣಯ್ಯ**:— ಇದೊಂದು ದೊಡ್ಡ ಹುಚ್ಚೇ ಸರಿ. ಅಲ್ಲ, ನನ್ನ ತಮ್ಮನು ತಿಂಗಳುಗಟ್ಟಲೆ 'ನೇತು ಬಡಿದರೆ' ಮೂರು ಕಾಸು ಬಿಚ್ಚುವವಿಲ್ಲ; ಆದರೆ ಯಾವುದೋ ಊರು, ಕೇರಿ, ಕಾಣದೇ ಇದ್ದ ಕೇಳದೆ ಇದ್ದ ಸ್ಥಳಗಳ ಮೇಲೆಲ್ಲ ಹಣದ ಮಳೆ ಕರೆಯುತ್ತಿದ್ದಾನೆ. ಇದನ್ನೇನೆಂದು ಹೇಳಬೇಕು ? ಈ ಸಮಾಜದಲ್ಲೇ ಹೀಗೆ ಜನ—ಮನೆಗೆ ಮಾರಿ; ಪರರಿಗುಪಕಾರಿ.

**ಆನಂದಪ್ಪ**:— ಇದೆಲ್ಲ ಬೇಕಂತಲೇ. ಹಣವು ಉಳಿದರೆ ಎಲ್ಲಿ ನನಗೆ ನಾಲ್ಕು ಕಾಸು ಯಾವ ರೀತಿಯಿಂದಲಾದರೂ ಸಿಕ್ಕುಬಿಟ್ಟೀತೆಂಬ ಭಯ, ಸಿಕ್ಕಬಾರದೆಂಬ ಅಪೇಕ್ಷೆ. ಹಾಗಲ್ಲದಿದ್ದರೆ ಅವನ ಧರ್ಮಕಾರ್ಯಗಳನ್ನೆಲ್ಲ ನನಗೆ ಏಕೆ ಬಣ್ಣಿಸಬೇಕು ? ನನಗೆ ಹೊಟ್ಟೆ ಉರಿಯಲಿ ಅಂತ. ಅದರಿಂದ ತಾನೆ ಅವನಿಗೆ ಸಂತೋಷ. ಅದನ್ನೇ ನನಗೆ ತೋರಿಸುತ್ತಲೂ ಇದ್ದಾನೆ.

**ನಿರ್ವಾಣಯ್ಯ**:— ನಮ್ಮ ಮೂಗು ಹೋದರೂ ಇನ್ನೊಬ್ಬರಿಗೆ ಅಪಶಕುನ ಆದರೆ ಸಾಕು ಎನ್ನುವ ಮತ.

**ಆನಂದಪ್ಪ**:— ತೀರ ಅಷ್ಟೇನೂ ಅಲ್ಲ. ಏಕೆಂದರೆ ಅವನೇ ಇಲ್ಲದಿರುವಾಗ ಅದರಿಂದ ಅವನಿಗೇನು ಉಪಯೋಗ ?

**ನಿರ್ವಾಣಯ್ಯ**:—ಛೇ, ಬಿಡು. ಅಷ್ಟು ನಿಸ್ವಾರ್ಥವಾಗಿ, ನಿಷ್ಕಾಮ ಕರ್ಮವನ್ನು ಮಾಡುವ ಜೀವವೆ ಆ ಕೃಪಣನದ್ದು ? ಹತ್ತು ರೂಪಾಯಿಗೆ ಬಡ್ಡಿ ಬಿಡಲಾರದ ಅವನದ್ದು ? ನಾನು ನಂಬಲಾರೆ. ಉಹುಂ.

**ಆನಂದಪ್ಪ**:— ಹ! ಇದರಲ್ಲಿ ಒಂದು ಆಸೆ ಅವನಿಗಿರಬಹುದು. ಅವನ

ಲಾಯರು ಹೇಳಿದನಂತೆ “ ಹೀಗೆ ಒಟ್ಟಿಗೇ ಧರ್ಮಕಾರ್ಯಗಳು ಪ್ರಕಾಶವಾದರೆ ಸರಕಾರದಿಂದ ಪ್ರಶಸ್ತಿಯೇನಾದರೂ ಬರಬಹುದು” ಅಂತ.

**ನಿರ್ವಾಣಯ್ಯ**:— ಆಹ! ನಿಜವಾಗಿ? ( ಸ್ವಲ್ಪ ಯೋಚಿಸಿ) ಏ, ಮೊದಲೇ ಏಕೆ ಹೇಳಲಿಲ್ಲ? ಹೂಂ. ಪರವಾಯಿಲ್ಲ. ಈ ನಮ್ಮ ನಿರಾಶೆಯ ಕಾರ್ಮೋಡಕ್ಕೂ ಬೆಳ್ಳಿಯಂಚಿದೆ.

**ಆನಂದಪ್ಪ**:— ( ಆತುರದಿಂದ) ಹೇಗೆ? ಏನಾದರೂ ಅವಕಾಶವಿದೆಯೆ?

**ನಿರ್ವಾಣಯ್ಯ**:— ಹುಂ. ಸ್ವಲ್ಪ, ನಾನು ಹೇಳುವಂತೆ ಮಾಡು. ( ಬಾಗಿಲ ಕಡೆಗೆ ನೋಡಿ) ಹುಶ್ ! ( ಆಟದಲ್ಲಿ ಉದ್ಯುಕ್ತರಾಗುತ್ತಾರೆ. )

[ ಪ್ರವೇಶ : ಲಕ್ಷ್ಮೀಪತಿ. ಪೂಜೆಯ ಹೊತ್ತು ಮೀರಿದ್ದರೂ ಪೂಜೆ ಮಾಡಿಲ್ಲ. ಹಿಂದಿನ ಮಡಿ ಲವಲವಿಕೆಗಳು ಇಲ್ಲ. ಕಣ್ಣುಗಳ ಸುತ್ತ ಕಪ್ಪು ಕವಿದಿದೆ. ಆಯಾಸವು ಮುಖಭಾವ, ನಡತೆಗಳಲ್ಲಿ ಎದ್ದು ಕಾಣುತ್ತದೆ. ಸಣ್ಣ ಪಂಚೆಯುಟ್ಟು ಶಾಲನ್ನು ಹೊದ್ದಿದ್ದಾನೆ. ]

**ಲಕ್ಷ್ಮೀಪತಿ**:— ಏನಯ್ಯಾ, ಪ್ರಪಂಚ ಹೇಗಾದರೂ ನಡೆಯುತ್ತ ಇರಲಿ; ನಿಮ್ಮ ಆಟ ಮಾತ್ರ ಒಂದೇ ಸಮ ಸಾಗುತ್ತೆ. ಅಲ್ಲವೆ?

**ನಿರ್ವಾಣಯ್ಯ** :— ಹಾಗೇನೂ ಇಲ್ಲ. ಇಗೋ ನಿಲ್ಲಿಸಿಬಿಡುತ್ತೇವೆ. ( ಆಟವನ್ನು ನಿಲ್ಲಿಸುತ್ತಾರೆ. ) ಭಾನುವಾರ ತಮ್ಮನ್ನು ನೋಡುವುದಕ್ಕೆ ಆಗಲಿಲ್ಲ.

**ಲಕ್ಷ್ಮೀಪತಿ** :— ಪರವಾಯಿಲ್ಲ. ನನಗೂ ಯಾರನ್ನೂ ನೋಡುವುದಕ್ಕೂ ಇಷ್ಟವೇ ಇರಲಿಲ್ಲ.

**ನಿರ್ವಾಣಯ್ಯ**:— ತಾವು ಭವಿಷ್ಯ, ಗಿವಿಷ್ಯವನ್ನೆಲ್ಲ ಮನಸ್ಸಿಗೆ ಹಾಕಿಕೊಳ್ಳಬಾರದು. ಅವರಲ್ಲಿ ನಿಜಕ್ಕಿಂತ ಸುಳ್ಳೇ ಜಾಸ್ತಿ. ಯಾವುದು ತಾನೆ ನಿರ್ಧಾರವಾಗಿ ಹೇಳಬಲ್ಲ ವಿಷಯ— ಈ ಮಾಯಾ ಪ್ರಪಂಚದಲ್ಲಿ?

**ಲಕ್ಷ್ಮೀಪತಿ**:— ಆಗಲಿ, ಆಗಲಿ. ಈಶ್ವರನ ಇಷ್ಟವಿದ್ದಂತಾಗಲಿ.

**ನಿರ್ವಾಣಯ್ಯ**:— ನಾನು ದಿನೇ ದಿನೇ ತಮ್ಮ ದಾನಧರ್ಮದ ವಿಷಯವನ್ನು ಕೇಳಿ ಸಂತೋಷಿಸುತ್ತಿದ್ದೇನೆ.

**ಲಕ್ಷ್ಮೀಪತಿ**:— ಓಹೋ; ಅದು ನಿನ್ನ ವರೆಗೂ ಮುಟ್ಟಿತೇನು? ಹುಂ. ಮುಟ್ಟಲೇಬೇಕಲ್ಲ. (ವ್ಯಂಗ್ಯವಾಗಿ) ಅವರಿಂದ ನಿಮಗೆ ಸಂತೋಷ ವೆಂದೂ ನನಗೆ ತಿಳಿಯದೆ?

**ನಿರ್ವಾಣಯ್ಯ**:— ಇನ್ನೇನು ತಮ್ಮ ಕೀರ್ತಿಯು ದೇಶದಲ್ಲೆಲ್ಲ ಹಬ್ಬಿಬಿಡು ತ್ತದೆ. ನಾಳೆ ನಾಡಿದ್ದರಲ್ಲೇ ಪತ್ರಿಕೆಗಳಲ್ಲೆಲ್ಲ ಪ್ರಕಟವಾಗುತ್ತದೆ.

**ಲಕ್ಷ್ಮೀಪತಿ**:— ಅಷ್ಟೇ ಏನು?

**ನಿರ್ವಾಣಯ್ಯ**:— ಬಡಬಗ್ಗರು, ತಮ್ಮ ಸಹಾಯವನ್ನು ಹೊಂದಿದವರೆ ಲ್ಲರೂ ತಮಗಾಗಿ ಪ್ರಾರ್ಥಿಸುತ್ತಾರೆ.

**ಲಕ್ಷ್ಮೀಪತಿ** :— ಅವರಿಂದ ಇಹದಲ್ಲಿ ಬಂದ ಲಾಭವೇನು? ಅವರ ಪ್ರಾರ್ಥನೆ, ಶಾಪ ಎರಡೂ ಒಂದೇ. ಜಗತ್ತಿನಲ್ಲಿ ಎಷ್ಟು ದಾಸಿ ಗಳು ಇವುಗಳಿಂದಲೇ, ಇಷ್ಟರಲ್ಲೇ, ತೃಪ್ತಿಹೊಂದುತ್ತಾರೆ?

**ನಿರ್ವಾಣಯ್ಯ** :— ಹಾಗಾದರೆ ಇನ್ನು ಯಾವುದರ ಮೇಲೆ ತಮಗೆ ದೃಷ್ಟಿ ಇದೆ?

**ಲಕ್ಷ್ಮೀಪತಿ**:— ನೀವೇ ಯೋಚಿಸಿ ನೋಡಿ. ಒಂದು ವೇಳೆ ನೀವೇ ಇಷ್ಟೊಂದು ಹಣವನ್ನು— ಮೂರು ಲಕ್ಷವನ್ನು—ಚೆಲ್ಲಿದ್ದರೆ ಏನು ಏನನ್ನು ನಿರೀಕ್ಷಿಸುತ್ತಿದ್ದಿರಿ?

**ನಿರ್ವಾಣಯ್ಯ**:— (ಚಿಂತೆಯನ್ನು ನಟಿಸಿ) ಹಂ; ಸುತ್ತುಮುತ್ತಲಿನವರೆಲ್ಲ ನನ್ನನ್ನು ಓಲೈಸಬೇಕೆಂದು.

**ಲಕ್ಷ್ಮೀಪತಿ** :— ಛೇ! ಅದು ನಾನು ಒಂದು ಕಾಸನ್ನೂ ಕಳೆಯದಿದ್ದಾ ಗಲೂ ನಡೆಯುತ್ತಿದ್ದಿತು. ಅದಿನ್ನು ಹೆಚ್ಚು ನಡೆಯುವ ಸಂದರ್ಭವೇ ಇಲ್ಲವಲ್ಲ.

**ನಿರ್ವಾಣಯ್ಯ**:— ಇನ್ನೇನು ತಮ್ಮ ಚಿತ್ರ ಅನಾವರಣಗಳು ನಡೆಯಬೇಕೆ?

**ಲಕ್ಷ್ಮೀಪತಿ**:— ಅದೂ ಕ್ರಮೇಣ ಆಗುತ್ತದೆ.

**ನಿರ್ವಾಣಯ್ಯ**:— ಟೀಪಾರ್ಟಿಗಳು, ಸನ್ಮಾನ ಸಭೆಗಳು ನಡೆಯಬೇಕೇ?

**ಲಕ್ಷ್ಮೀಪತಿ**:— ಈ ಮೂಲೆಹಳ್ಳಿಯಲ್ಲಿ 'ಟೀಪಾರ್ಟಿ'ಯ ಹುಚ್ಚು ಯಾರಿಗೆ?

ಸನ್ಯಾಸ ಸಭೆ ಅಲ್ಲಿ ಇಲ್ಲಿ ಆಪದೂ ಅವರದ್ದೇನು ಶಾಶ್ವತವಾದ ನೆನಪು ಇರುತ್ತದೆಯೆ ?

**ನಿರ್ವಾಣಯ್ಯ**:— ಓಹೋ ತಿಳಿಯಿತು. ಸರಕಾರದಿಂದ ಬಿರಿದು........

**ಲಕ್ಷ್ಮೀಪತಿ**:— ಛ್ಛ ! ಅದು ತೂಕವಾದದ್ದು. ಅಲ್ಲಿ ಬಿದ್ದಿತು-ಮೊಳೆಯು ತಲೆಯ ಮೇಲೆ ಪೆಟ್ಟು. ನನ್ನ ಧರ್ಮಕಾರ್ಯಗಳು ಯಾವುದಾದರೂ ಪ್ರಶಸ್ತಿಗೆ ತಕ್ಕವಾಗಿಲ್ಲವೇ ?

**ನಿರ್ವಾಣಯ್ಯ**:— ಆಗಿಲ್ಲವೆ ಅಂತ ಕೇಳುತ್ತೀರ? ಇದರಲ್ಲಿ ಅರ್ಧ ನಡೆಸಿದ ವರೆಲ್ಲ 'ಧರ್ಮಪ್ರಕಾಶ' 'ಧರ್ಮವರ್ತಕ' ಫೆ 'ಧರ್ಮಪ್ರವರ್ತಕ' ಆಗಿ ಹೋಗಿದ್ದಾರೆ.

**ಲಕ್ಷ್ಮೀಪತಿ**:— ನಿಜ. ಇರಬಹುದು. ಆದರೆ ಸರಕಾರದ ನಡೆಗೆ ಬಹಳ ನಿದಾನ-ಅನುಮಾನ.

**ನಿರ್ವಾಣಯ್ಯ**:— ನಿದಾನವೇನೋ ನಿಜ. ಅದು ಅದರ ಹುಟ್ಟುಗುಣ. ಅನುಮಾನಕ್ಕೆ ಏನೂ ದಾರಿಯಿಲ್ಲ ಅಂತ ಕಾಣುತ್ತದೆ.

**ಲಕ್ಷ್ಮೀಪತಿ**:— ನಿರ್ವಾಣಯ್ಯ, ನನ್ನ ಆತುರ ಏಕೆಂಬುದು ನಿಮಗೆ ತಿಳಿದೇ ಇದೆ. ನಾನು ಇನ್ನೆಷ್ಟು ದಿನ ಜೀವಸಹಿತ ಇರುತ್ತೇನೋ ತಿಳಿಯದು. ನಾನು ಇಲ್ಲಿಯ ವರೆಗೆ ಹಣವೊಂದಕ್ಕಲ್ಲದೆ ಬೇರೆ ಯಾವುದಕ್ಕೂ ಆಸೆ ಪಟ್ಟವನಲ್ಲ ಆದರೆ ಈಗ ಅದೆಲ್ಲವನ್ನೂ ಕೊಟ್ಟು ಇದೊಂದು ಸೌಖ್ಯ ವನ್ನು ಕೊಳ್ಳಲು ಯತ್ನಿಸಿದ್ದೇನೆ. ಇದು ಕೆಲವರಿಗೆ ಆಶ್ಚರ್ಯವಾಗಿ, ಕೆಲವರಿಗೆ ತುಚ್ಛವಾಗಿ ಕಾಣಬಹುದು.

**ನಿರ್ವಾಣಯ್ಯ**:— ಛೆ! ಛೆ! ಸಾವಿರದಲ್ಲಿ ಒಂಭೈನೂರು ತೊಂಬ ತ್ತೊಂಭತ್ತು ಜನರು ಇದೇ ಅಭಿಲಾಷೆಗಳನ್ನಿಟ್ಟುಕೊಂಡು ನಡೆಯು ವಾಗ ಅದರಲ್ಲಿ ಎಲ್ಲಿ ಬಂದಿತು-ತುಚ್ಛಭಾವ ? ಫಲಾಪೇಕ್ಷೆಯಿಲ್ಲದೆ ಕರ್ತವ್ಯವೆಂದು ಕಾರ್ಯ ಮಾಡುವುದಕ್ಕೆ ನಾವುಗಳೆಲ್ಲರೂ ಸನ್ಯಾಸಿ ಗಳೇನು ? ಅದೆಲ್ಲ ಗೀತಾಪ್ರವಚನದ ಹೊತ್ತಿನಲ್ಲಿ ಮಾತ್ರ ಸರಿ.

**ಲಕ್ಷ್ಮೀಪತಿ**:— ನಾನೇನು ಸನ್ಯಾಸಿಯಲ್ಲ, ಅದರಿಗೂ ಮೋಕ್ಷಾಪೇಕ್ಷೆ ಇದೆ—ಹಾಗೆಂದುಕೊಂಡೂ ಇಲ್ಲ. ಸಾಮಾನ್ಯ ಮನುಷ್ಯ. ನೀವು

ಹೇಳಿದ ಒಂಭೈನೂರತೊಂಭತ್ತೊಂಭತ್ತರಲ್ಲಿ ಒಬ್ಬ. ಗೀತೆಯ ಉಪದೇಶವೇನೋ ಸರಿಯೆ. ಆದರೆ ಉಪದೇಶಕ್ಕೂ ಆಚರಣೆಗೂ ಯಾವಾಗಲೂ ಎಷ್ಟೊಂದು ಅಂತರವಿದೆ.

**ನಿರ್ವಾಣಯ್ಯ**:— ಸಪ್ತ ಸಮುದ್ರಗಳಷ್ಟು.

**ಲಕ್ಷ್ಮೀಪತಿ**:— ಹೀಗಿದ್ದು, ನಾನು ಇದೊಂದು ಫಲಕ್ಕಾಗಿಯೇ ಜೀವವನ್ನು ಹಿಡಿದುಕೊಂಡಿದ್ದೇನೆಂದು ಹೇಳಿದರೂ ಸರಿಯಾಗುತ್ತದೆ.

**ನಿರ್ವಾಣಯ್ಯ**:— ಲಾಯರು ಏನನ್ನಾದರೂ ಈ ಬಗ್ಗೆ ಹೇಳಿದರೇನು?

**ಲಕ್ಷ್ಮೀಪತಿ**:— ಹುಂ. ಅನುಮಾನವಾಗಿ. ಅದು ಯಾವಾಗಲೋ ಏನೋ. ಅದನ್ನು ತಿಳಿಯುವುದಕ್ಕೆ ನಾನು ಇರುತ್ತೇನೆಯೋ ಇಲ್ಲವೋ.

**ನಿರ್ವಾಣಯ್ಯ**:— ಇಲ್ಲ. ಅದಕ್ಕೇನಾದರೂ ಮಾಡಬೇಕು.

**ಆನಂದಪ್ಪ**:— ಏನು?

**ನಿರ್ವಾಣಯ್ಯ**:— ಸರ್ಕಾರದಲ್ಲಿ ನಿನಗೆ ಪರಿಚಯದ ಅಧಿಕಾರಿಗಳು ಬಹಳ ಇದ್ದಾರೆಂದು ಆಗಾಗ ಜಂಭ ಹೊಡೆದುಕೊಳ್ಳುತ್ತೀಯಲ್ಲವೆ?

**ಲಕ್ಷ್ಮೀಪತಿ**:— ಇವನ ನೂರು 'ಥೋಂಗಿ'ಯಲ್ಲಿ ಅದೂ ಒಂದು.

**ನಿರ್ವಾಣಯ್ಯ**:— ಅಷ್ಟೇನು ಸುಳ್ಳಾಗಿರಲಾರದು; ಜ್ಯೋತಿಷ್ಯರೂ ಈ ವಿಷಯವನ್ನು ಒತ್ತಿ ಹೇಳಲಿಲ್ಲವೆ?

**ಲಕ್ಷ್ಮೀಪತಿ**:— ಹುಂ....ಏನೋ, ಹೇಗೋ.

**ನಿರ್ವಾಣಯ್ಯ**:— ಏನಯ್ಯ ಆನಂದಪ್ಪ? ಏನನ್ನಾದರೂ ಮಾಡಬಲ್ಲೆಯ? ಬೇಕಾದರೆ ಸಂಭಾವನೆ.......

**ಲಕ್ಷ್ಮೀಪತಿ**:— ಹುಂ. ಅದಕ್ಕೇನು ಎಷ್ಟು ಕೊಟ್ಟರಾಯಿತು — ಈ ವರ್ಧಂತಿ ಉತ್ಸವದ ಪಟ್ಟಿಯಲ್ಲೇ ಬರುವುದಾದರೆ.....

**ನಿರ್ವಾಣಯ್ಯ**:— ಓಹೋ, ಆನಂದಪ್ಪನು ಏರ್ಪಾಡು ಮಾಡುತ್ತಾನೆ. ಇಲ್ಲವೇನಯ್ಯ? [ಭ್ರಾಂತನಾದ ಆನಂದಪ್ಪನನ್ನು ತಿವಿಯುತ್ತಾನೆ.]

**ಆನಂದಪ್ಪ**:— [ಭ್ರಾಂತಿಯಿಂದೆದ್ದು] ಓಹೋ, ಅಡ್ಡಿಯೇನು?

**ನಿರ್ವಾಣಯ್ಯ**:— ಎಷ್ಟು ದುಡ್ಡು ಬೇಕಾಗುತ್ತದೆ?... ನೂರು.... ನಾಲ್ಕು ಸಾವಿರ?

**ಆನಂದಪ್ಪ**:— ಹ, ನಾಲ್ಕು ಸಾವಿರ ಬೇಕಾದೀತು.

**ಲಕ್ಷ್ಮೀಪತಿ**:— ಆನಂದ ಜೋಪಾನ, ನೋಡಿಕೊ. ಆಟ ಗೀಟ ಕಟ್ಟಿ ಬೇಡ.

**ನಿರ್ವಾಣಯ್ಯ**:— ಛೇ! ಹಾಗಿಲ್ಲ. ಅಲ್ಲವೇನಯ್ಯ?

**ಆನಂದಪ್ಪ**:— ಅಲ್ಲದೆ?

**ಲಕ್ಷ್ಮೀಪತಿ**:— ದುಡ್ಡನ್ನೇನೋ ಕೊಡಲು ನಾನು ಯಾವಾಗಲೂ ಸಿದ್ಧ. ಆದರೆ ನನಗೆ ಆನಂದನಲ್ಲಿ ನಂಬಿಕೆ ಸಾಲದು. ಅವನು ವಿಷಯ ಸಾಧಿಸಲಿ. ಅನಂತರ ಹಣ.

**ನಿರ್ವಾಣಯ್ಯ**:— ಹಾಗಾದರೆ ಕಷ್ಟವಾಗಬಹುದು. ಕಡೆಯೂ ಆಗಬಹುದು.

**ಲಕ್ಷ್ಮೀಪತಿ**:— ನನಗೇನೋ ಪ್ರಶಸ್ತಿಯ ಮೇಲೆ ಆಸೆಯಿದೆ. ಆದರೆ ಅದು ಖಂಡಿತವಾಗಿ ಸಿಕ್ಕುವವರೆಗೆ ಇವನ ಮೂಲಕ ಹಣವನ್ನು ಕಳೆದುಕೊಳ್ಳುವದಿಲ್ಲ—ಖಂಡಿತವಾಗಿ.

**ನಿರ್ವಾಣಯ್ಯ**:— ಇಲ್ಲ. ನೀವೇ ಯೋಚಿಸಿ. ಈ ಕಾಲದಲ್ಲಿ ಬರಿಯ ಮಾತಿನ ನಂಬಿಕೆಯ ಮೇಲೆ ಯಾವುದು ತಾನೆ ನಡೆದೀತು?

**ಲಕ್ಷ್ಮೀಪತಿ**:— ಅಧಿಕಾರಿಗಳೊಡನೆ ಇವನ ಸ್ನೇಹವೆಂದರೆ ಇಷ್ಟು ನಂಬಿಕೆ ಕೊಡಲಾರದದ್ದೆ?

**ನಿರ್ವಾಣಯ್ಯ**:— ಏನೋ ಬೇಗ ಆಗಲಿ ಅಂತ; ಯಾವ ಅಡ್ಡಿಯೂ ಇರದೇ ಇದ್ದ ಹಾಗೆ........

**ಲಕ್ಷ್ಮೀಪತಿ**:— ಊಹುಂ. ಮೊದಲು ಕೆಲಸ; ಅನಂತರ ಸಂಭಾವನೆ. ಕೆಲಸವಾದ ಗಳಿಗೆಯಲ್ಲಿಯೇ ಬೇಕಾದರೆ.

**ನಿರ್ವಾಣಯ್ಯ**:— (ಸಪ್ಪೆಯಾಗಿ) ಹಾಗಾದರೆ ವಿಧಿಯಿಲ್ಲ. ಒಂದೇ ದಾರಿ ಆನಂದಪ್ಪ; ಯತ್ನಿಸಯ್ಯ.

**ಆನಂದಪ್ಪ**:— ಆಗಲಿ.

**ಲಕ್ಷ್ಮೀಪತಿ**:— ವರ್ಧಂತಿಯು ಮುಂದಿನ ಬುಧವಾರ ಅಲ್ಲವೆ ?

**ನಿರ್ವಾಣಯ್ಯ**:— ಹುಂ. ಹೌದು. ಅಂದು ನಮ್ಮ ಸ್ಕೂಲಿಗೆ ರಜ. ಗುರುತು ಮಾಡಿಟ್ಟಿದ್ದೇನೆ. ಇನ್ನೂ ಒಂದು ವಾರವಿದೆ. ಅಷ್ಟರಲ್ಲಿ ಆನಂದಪ್ಪನು ಸಾಧಿಸುತ್ತಾನೆ. ನಿಜವಾಗಿ, ಅಲ್ಲವೇನಯ್ಯ ?

**ಆನಂದಪ್ಪ**:— ಓಹೋ ಅಗತ್ಯವಾಗಿ

**ಲಕ್ಷ್ಮೀಪತಿ**:— ಏನು 'ಅಗತ್ಯವಾಗಿ' ಯೋ ನೋಡೋಣ. ಹೊತ್ತಾಯಿತು. ಇನ್ನೂ ಮುಡಿಯುಟ್ಟಿಲ್ಲ. (ಹೋಗುತ್ತಾನೆ.)

**ಆನಂದಪ್ಪ**:— ಇದೇನ್ರಿ, ಚಿಕ್ಕಟ್ಟಿಗೆ ತಂದು ಸಿಕ್ಕಿಸಿದಿರಿ ?

**ನಿರ್ವಾಣಯ್ಯ**:— ಏನು ?

**ಆನಂದಪ್ಪ**:— ಸಂಭಾವನೆಗೆ ಬಿರುದು ಮಾರುವ ಅಧಿಕಾರಿಗಳಿರುತ್ತಾರೆಯೆ ? ಇದ್ದರೆ ನನಗೂ ಅವರಿಗೂ ಸ್ನೇಹ ಹೇಗೆ ? ಇದೇನೂ ಒಂದೂ ಅರ್ಥವಾಗುವದಿಲ್ಲವಲ್ಲ.

**ನಿರ್ವಾಣಯ್ಯ**:— ಸುಮ್ಮನಿರು. ನಾನು ಅದೆಲ್ಲವನ್ನೂ ಯೋಚಿಸಿದ್ದೇನೆ. ನಿನ್ನ ಬಂಡವಾಳ ನನಗೆ ಗೊತ್ತಿಲ್ಲವೆ?

**ಆನಂದಪ್ಪ**:— ಹಾಗಾದರೆ? ಇದು ಹೇಗೆ ಸಾಧ್ಯ ?

**ನಿರ್ವಾಣಯ್ಯ**:— ಸಾಧ್ಯವಿಲ್ಲ.

**ಆನಂದಪ್ಪ**:— ಮತ್ತೆ ?

**ನಿರ್ವಾಣಯ್ಯ**:—ಲಕ್ಷ್ಮೀಪತಿಯೊಬ್ಬನಿಗೆ ತಿಳಿಯುವ ಹಾಗೆ ಸಾಧ್ಯಮಾಡಿಸುವುದು-ಏನಾದರೂ ಮಾಡಿ. ಪ್ರಪಂಚಕ್ಕೆ ತಿಳಿಯದಿದ್ದರೇನು. ನಿಜವು ಗೊತ್ತಾಗುವ ವರೆಗೆ ಅವನು ಬದುಕಿರುತ್ತಾನೆಯೋ ಇಲ್ಲವೋ ನನಗೆ ನಂಬಿಕೆಯಿಲ್ಲ. ಅವನ ಸ್ವರೂಪ ನೋಡಿದೆಯಲ್ಲವೆ ? ಹೇಗಾದರೂ ಹಣ ಸಿಕ್ಕಿದ ಗಳಿಗೆಯಲ್ಲೇ ನಾವು ಗಾಡಿಬಿಟ್ಟರಾಯಿತು. ನೋಡಿಕೊಳ್ಳೋಣ ಆ ಮೇಲೆ. ಬದುಕಿದ್ದರೆ ರಸಿಸಲಿ.

**ಆನಂದಪ್ಪ**:— ಪೋಲೀಸು ?

**ನಿರ್ವಾಣಯ್ಯ**:—ಉಹುಂ. ಇದರ ಪ್ರಕಟನೆ ಆವನಿಗೇ ಬೇಕಾಯುವಲ್ಲವೆ? ಅಷ್ಟು ವಿವೇಕ ಆವನ ತಲೆಯನ್ನು ಬಿಟ್ಟು ಎಂದಿಗೂ ಹೋಗುವದಿಲ್ಲ. ತಪ್ಪನ್ನು ನುಂಗಿಕೊಂಡು ಸುಮ್ಮನಿರುವವರಲ್ಲಿ ಸಂಶಯವಿಲ್ಲ.

**ಆನಂದಪ್ಪ**:—ಏನೋ ಕೆಟ್ಟದರಲ್ಲಿ ಹೆಚ್ಚು ಹೆಚ್ಚು ಮುಳುಗುತ್ತಿದ್ದೇನೆ. ಭಯವಾಗುತ್ತದೆ.

**ನಿರ್ವಾಣಯ್ಯ**:—ಛೇ! ನೀನೊಬ್ಬ ಅಳ್ಳೆದೆಯವನು. ಕಷ್ಟವು ಬೇಡವೇ ಇದ್ದರೆ ಲಾಭವೂ ಇಲ್ಲ. ನನ್ನನ್ನು ನಂಬು. ಸುಮ್ಮನೆ ಆಟ ಹಾಕು. (ಆನಂದಪ್ಪನ ಇಸ್ಪೀಟನ್ನು ಕಲಿಸುತ್ತಾನೆ.)

... ತೆರೆ ...

# ದೃಶ್ಯ ೪

[ಸ್ಥಳ: ಲಕ್ಷ್ಮೀಪತಿಯ ಮನೆಯ ಹಜಾರ. ಲಕ್ಷ್ಮೀಪತಿಯು ಶಾಲನ್ನು ಹೊದ್ದು ಕೊಂಡು, ಹಾಸಿಗೆಯೊಂದನ್ನು ಒರಗಿಕೊಂಡು ಕುಳಿತಿದ್ದಾನೆ. ತೀರ ಬಡವಾಗಿದ್ದಾನೆ. ಅವನಿಗೆ ನಾಲ್ಕೈದು ಮೊಳ ದೂರದಲ್ಲಿ ನಿರ್ವಾಣಯ್ಯನು ಕುಳಿತು ಪತ್ರಿಕೆಯನ್ನು ಹಿಡಿದುಕೊಂಡಿದ್ದಾನೆ. ಅವನ ಉಡುಪು ಹಿಂದಿನಂತೆಯೆ.]

ಕಾಲ: ಸೋಮವಾರ ಬೆಳಿಗ್ಗೆ ಹತ್ತು ಗಂಟೆ.

**ನಿರ್ವಾಣಯ್ಯ**:-(ಪತ್ರಿಕೆಯನ್ನು ನೋಡುತ್ತಾ) ಇದು ಬ್ರಾಹ್ಮಣ ಸಂಸ್ಕಾರ ಸಭೆಯಿಂದ. ತಮಗೆ ಕೃತಜ್ಞತೆಯನ್ನು ಸೂಚಿಸುವುದಕ್ಕಾಗಿಯೇ ವಿಶೇಷ ಅಧಿವೇಶನವನ್ನು ಕರೆದಿದ್ದರಂತೆ. ಕೇಳಿ-ಠರಾವನ್ನು. (ಓದುತ್ತಾನೆ.) ಅಖಿಲ ಮೈಸೂರಿನ ಬ್ರಾಹ್ಮಣ ಸಂಸ್ಕಾರ ಸಭೆಯು ಈ ವಿಶೇಷ ಅಧಿವೇಶನವು, ಮೂಲೇಹಳ್ಳಿ ಸಾಹುಕಾರರು ಶ್ರೀಮಾನ್ ರಾಜರಾಜೇಶ್ರೀ ಲಕ್ಷ್ಮೀಪತಿರಾಯರು ತಮ್ಮ ಉದಾರ ಹಸ್ತದಿಂದ ದಯಪಾಲಿಸಿದ ದಾನವನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದೆ. ಮತ್ತು ಅವರಿಗೆ ಈ ಮೂಲಕ ಅದರ ಅನಂತ ವಂದನೆಗಳನ್ನು ಸಮರ್ಪಿಸುತ್ತದೆ. ಈ ದಾನದಿಂದ ಶ್ರೀಮಾನ್ ರಾಜರಾಜೇಶ್ರೀಯವರು ತಮ್ಮ ಧಾರ್ಮಿಕ ಹೃದಯವನ್ನೂ ಶ್ರೇಷ್ಠ ವೈದಿಕ ಮನೋವೃತ್ತಿಯನ್ನೂ, ಸನಾತನ ಧರ್ಮದಲ್ಲಿ ತಮಗಿರತಕ್ಕ ಗೌರವ ವಿಶ್ವಾಸಗಳನ್ನೂ ಪ್ರಕಟಪಡಿಸಿದ್ದಾರೆ. ಇಂತಹ ಮಹನೀಯರು ನಮ್ಮ ದೇಶದಲ್ಲಿ, ನಮ್ಮಗಳ ಮಧ್ಯದಲ್ಲಿ ಇರುವುದು ನಮ್ಮ ಹೆಮ್ಮೆ, ಮತ್ತು ವೈದಿಕ ಮತದ ಸ್ಥಿರತ್ವಕ್ಕೆ ಕುರುಹು ಎಂದು ಎಣಿಸುತ್ತದೆ ಇದಲ್ಲದೆ....

**ಲಕ್ಷ್ಮೀಪತಿ**:— ಸಾಕು ಮಾಡಿ. ಈ ಪತ್ರಿಕೆಯಲ್ಲಿ ತುಂಬಿರುವುದು ಈ ಒಣ ಶ್ಲಾಘನೆ ತಾನೆ? ಎರಡು ಮೂರು ದಿನಗಳಿಂದ ಇದನ್ನೆಲ್ಲ ಕೇಳಿಕೇಳಿ ತಲೆ ಚಿಟ್ಟು ಹಿಡಿದು ಹೋಗಿದೆ.

**ನಿರ್ವಾಣಯ್ಯ**:— ಈ ಠರಾವನ್ನು ತಮಗೆ ಅಂಚೆಯ ಮೂಲಕ ಕಳುಹಿಸುತ್ತಾರಂತೆ.

**ಲಕ್ಷ್ಮೀಪತಿ**:— ಅದೊಂದು ಅಂಚೆಯ ಖರ್ಚು.

**ನಿರ್ವಾಣಯ್ಯ**:— ಅಷ್ಟು ಆತುರರಾಗಬೇಡಿ ಸ್ವಾಮಿ; ಇವೆಲ್ಲ ನೋಡ ಗಳಂತೆ—ಮುಂಬೆ ಬರಲಿರುವ ಮಳೆಗೆ.

**ಲಕ್ಷ್ಮೀಪತಿ**:— ನೋಡವೇನೋ ಸಾಕಾದಷ್ಟು ನನ್ನ ಮೇಲೆ ಕವಿದಿವೆ. ಆದರೆ ಒಂದು ಹನಿ ಮಳೆಯೂ ಬೀಳುವಂತಿಲ್ಲ.

**ನಿರ್ವಾಣಯ್ಯ**:— ಹೀಗೇಕೆ ಅನ್ನುತ್ತೀರಿ ? ಇವತ್ತೋ ನಾಳೆಯೋ ಶುಭ ಸಮಾಚಾರವು ಬರುವುದರಲ್ಲಿ ಸಂದೇಹವಿಲ್ಲ.

**ಲಕ್ಷ್ಮೀಪತಿ**:— ಶುಭ! ಆ ಜೋಯಿಸರು ಹೇಳಿದ ಮೇಲೆ ?

[ಪ್ರವೇಶ ಆನಂದಪ್ಪ. ಬಹಳ ಆತುರದಿಂದ ಏದುಸುಗುಟ್ಟುತ್ತಾನೆ. ಕೈಯಲ್ಲಿ ಕಾಗದವೊಂದಿದೆ. ]

ಇದೇನಯ್ಯಾ ಇಷ್ಟು ಆತುರ ? ಏನಾದರೂ........ ?

**ಆನಂದಪ್ಪ**:— ಇಗೊ 'ಟೆಲಿಗ್ರಾಂ' ನನಗೆ ಉಸಿರೇ ಇಲ್ಲ.

**ನಿರ್ವಾಣಯ್ಯ**:— (ತಾರನ್ನು ತೆಗೆದುಕೊಂಡು ನೋಡಿ) ಸಾಹುಕಾರರೆ ನನ್ನ ಹೃತ್ಪೂರ್ವಕ ಅಭಿನಂದನೆಗಳು !

**ಲಕ್ಷ್ಮೀಪತಿ**:— ಏನು ? ಏನನ್ನು ಬರೆದಿದೆ—ಅಲ್ಲಿ ? (ಕಾಗದ ತೋರಿಸುತ್ತ.)

**ನಿರ್ವಾಣಯ್ಯ**:— ಏನೇ ! 'ಕೆಲಸವು ಫಲದಾಯಕವಾಯಿತು' ಅಂತ ಇಟ್ಟುಕೊಳ್ಳಿ.

**ಲಕ್ಷ್ಮೀಪತಿ**:— ಈ ಹಾಳು ಇಂಗ್ಲೀಷು ನನಗೆ ಬರದೆ ಬಹಳ ಪೇಚಾಟವಾಗಿದೆ. ಆಮೇಲೆ ?

**ನಿರ್ವಾಣಯ್ಯ**:— ಟೆಲಿಗ್ರಾಂನಲ್ಲಿ ಎಷ್ಟು ಬರೆಯುವದಕ್ಕಾಗುತ್ತದೆ? ಮತ್ತೆ "ಮಾತನ್ನು ನಡೆಸಿಕೊಡಿ" ಎಂದು ಬರೆದಿದೆ.

**ಲಕ್ಷ್ಮೀಪತಿ**:— ಅದಕ್ಕೇನು. ಇವತ್ತೇ ಕಳುಹಿಸಿದರಾಯಿತು.

**ಆನಂದಪ್ಪ**:— ಹು. ಇಂದೇ ಕಳುಹಿಸಬೇಕು.

**ಲಕ್ಷ್ಮೀಪತಿ**:— ಟೆಲಿಗ್ರಾಂ ಎಲ್ಲಿಂದ ?

**ನಿರ್ವಾಣಯ್ಯ** :—( ಮತ್ತೆ ನೋಡಿ) ಇನ್ನೆಲ್ಲಿಂದ? ಹುಜೂರು ಸೆಕ್ರೆಟರಿಯವರಿಂದಲೇ—ಅವರ ಪರವಾಗಿಯೇ.

**ಲಕ್ಷ್ಮೀಪತಿ**:— ಹುಂ ! ಪರವಾಯಿಲ್ಲ ಆನಂದ. ಎಷ್ಟು ಬೇಗ ಆಯಿತು ? (ಅನುಮಾನವಾಗಿ.)

**ನಿರ್ವಾಣಯ್ಯ**:— ಹುಂ. ಮಾಡುವ ತರಹದಲ್ಲಿ ಮಾಡಿದರೆ, ಸರಿಯಾದ ಬಾಗಿಲನ್ನು ಬಡಿದರೆ ಹತ್ತು ತಿಂಗಳಿನಲ್ಲಿ ಆಗುವದೆಲ್ಲವೂ ಹತ್ತೇ ನಿಮಿಷ ದಲ್ಲಿ ಆಗುತ್ತದೆ. ಅದಲ್ಲದೆ ತಾವಾಗಲೇ ದೀಪಕ್ಕೆ ಎಣ್ಣೆ ಎರೆದಿದ್ದಿರಿ. ಇವನು ಬತ್ತಿಯನ್ನು ಹತ್ತಿಸಿದ ಅಷ್ಟೆ.

**ಲಕ್ಷ್ಮೀಪತಿ**:— ಇದನ್ನೆಲ್ಲ ನಂಬುವದೆ ಕಷ್ಟ ಅನ್ನುವಷ್ಟು ಬೇಗ ಆಗಿದೆ. ಆದರೆ ಮಹಾಸ್ವಾಮಿಯವರಿಗೆ ನನ್ನ ವಿಷಯ ಗೊತ್ತಿರಬೇಕು ........ ಏನು ಪ್ರಶಸ್ತಿ ?

**ನಿರ್ವಾಣಯ್ಯ**:— ಗೊತ್ತಿಲ್ಲದೆ ಉಂಟೆ ? ಆನಂದಪ್ಪ, ನೀನು ಏತಕ್ಕಾಗಿ ಬರೆದಿದ್ದೆ ? ಧರ್ಮಪ್ರಕಾಶ, ಧರ್ಮಪ್ರವರ್ತಕ ?

**ಆನಂದಪ್ಪ**:— ಧರ್ಮಪ್ರಕಾಶ.

**ಲಕ್ಷ್ಮೀಪತಿ**:— ಓ. ಭಲೆ. ಇವರ ವಿಷಯವಾಗಿ ಅಲಮುಸಿಯುವ ಪ್ರಶಸ್ತಿ ಪತ್ರ, ಮತ್ತೆ........

**ನಿರ್ವಾಣಯ್ಯ**:— ಅವೆಲ್ಲ ಬಂದೇ ಬರುತ್ತವೆ, ಇವತ್ತಲ್ಲ ನಾಳೆ–ರಾತ್ರಿ ಯನ್ನು ಹಿಂಬಾಲಿಸಿ ಬರುವ ದಿನದಂತೆ. ಇನ್ನೂ ಇದು ಕೇವಲ ವರ್ತ ಮಾನ ತಾನೆ–ಅದೂ ಟೆಲಿಗ್ರಾಂ. ಸಂಜೆಯ ಅಂಚೆಯಲ್ಲಿ ಏನಾದರೂ ಬರಬಹುದು.

**ಲಕ್ಷ್ಮೀಪತಿ**:— ಹುಂ; ನಿಜ.

**ನಿರ್ವಾಣಯ್ಯ**:— ಇನ್ನು ಆನಂದಪ್ಪನು ಜಾಗ್ರತೆಯಾಗಿ ಹೊರಡುವುದು ನ್ಯಾಯ.

**ಆನಂದಪ್ಪ**:— ಹೌದು, ಹೌದು.

**ಲಕ್ಷ್ಮೀಪತಿ**:— ಇರಲಿ. ಏನು ಅವಸರ ?

**ನಿರ್ವಾಣಯ್ಯ**:— ಹಾಗಲ್ಲ. ಅವರೆಷ್ಟು ಬೇಗ ಮಾಡಿಕೊಟ್ಟಿದ್ದಾರೆಯೋ ಅಷ್ಟೇ ಬೇಗ ನಾವೂ ನಮ್ಮ ಭಾಗವನ್ನು ನಡೆಯಿಸಿಕೊಡಬೇಡವೆ ?

**ಆನಂದಪ್ಪ**:— ಹುಂ. ಬೇಡವೆ ?

**ಲಕ್ಷ್ಮೀಪತಿ**:— ಹಾಗಾದರೆ ನಿಮ್ಮ ಇಷ್ಟ. ಯಾವಾಗ ಬೇಕಾದರೂ ನನ್ನ ಹಣ ಸಿದ್ಧವಾಗಿದೆ. ಕೊಡಲೇನು? (ತನ್ನ ಹತ್ತಿರದ ಕೇಸನ್ನು ಜನಿವಾರದ ಬೀಗದ ಕೈಯಿಂದ ತೆಗೆದು) ಇಡಿ. ಸಾವಿರದ ನಾಲ್ಕು ನೋಟು ಜೋಪಾನ ಕಳೆದೀರಿ.

(ನೋಟುಗಳನ್ನು ಕೊಡುತ್ತಾನೆ. ಮರುಕ್ಷಣದಲ್ಲಿ ಶಾನಭೋಗನು ಸಂಭ್ರಮದಿಂದ ಪ್ರವೇಶಿಸುತ್ತಾನೆ.)

ಓಹೋ; ಎಡವೀರಿ.

**ಶಾನುಭೋಗ**:— ನನಗೆಲ್ಲ ಸಂತೋಷ! ಊರಿಗೆ ಊರೇ ಕುಣಿಯುತ್ತಿದೆ. ಎಲ್ಲರಿಗೂ ಗೊತ್ತಾಗಿದೆ. ಈ ಹಳ್ಳಿಗೆ ದೊಡ್ಡ ಗೌರವ........

**ಲಕ್ಷ್ಮೀಪತಿ**:— (ನಗುನಗುತ್ತ) ಹುಂ. ಹುಂ-ಸ್ವಲ್ಪ ಉಸಿರನ್ನು ತೆಗೆದುಕೊ. ಇದಾಗಲೇ ಊರಿಗೆಲ್ಲ ಗೊತ್ತಾಗಿ ಹೋಯಿತೆ?

**ಶಾನುಭೋಗ**:— ಇಲ್ಲದೆ? ಆನಂದಪ್ಪನವರು ಅವರ ಸಡಗರವನ್ನು ಕೇಳಿದ ಎರಡು ಮೂರು ಜನರಿಗೆ ತಿಳಿಸಿದರು—ತತ್‌ಕ್ಷಣವೇ ಊರಿನಲ್ಲೆಲ್ಲ ಸಮಾಚಾರವು ಕಾಳ್ಗಿಚ್ಚಿನಂತೆ ಹಬ್ಬಿ ಬಿಟ್ಟಿತು.

**ಲಕ್ಷ್ಮೀಪತಿ**:— ಸಾಕಯ್ಯ ನಿಮ್ಮ ಉಪಮಾನ. ಅದೇನು ಅಷ್ಟೊಂದು ಉಪದ್ರವವೆ?

**ಶಾನುಭೋಗ**:— ಛೇ, ಅಲ್ಲ. ತಪ್ಪು. ಆಗಲೇ ಸನ್ಮಾನ ಸಭೆಗೆ ಏರ್ಪಾಡು ಆಗುತ್ತಿದೆ. ಸಂಜೆ ಆರು ಘಂಟೆಗೆ. ಚಾವಡಿಯಲ್ಲಿ.

**ಲಕ್ಷ್ಮೀಪತಿ**:— ಎಲಾ! ಎಲಾ! ಎಲ್ಲವೂ ಎಷ್ಟೆಷ್ಟು ಬೇಗ!

**ಶಾನುಭೋಗ**:— (ಆನಂದಪ್ಪ, ನಿರ್ವಾಣಯ್ಯನವರನ್ನು ತೋರಿಸಿ) ತಾವೂ ದಯ ಮಾಡಿಸಿ.

**ನಿರ್ವಾಣಯ್ಯ**:- ಇಲ್ಲ. ಆನಂದಪ್ಪ ಇಗಲೇ........

**ಲಕ್ಷ್ಮೀಪತಿ**: — ಇದೇಕೆ ನಿರ್ವಾಣಯ್ಯನವರೆ-ಇಷ್ಟೊಂದು ತವಕ? ಮೂರು ನಾಲ್ಕು ಗಂಟೆಗಳಲ್ಲಿ ಎಷ್ಟು ತಡವಾಗಿ ಹೋಗುತ್ತದೆ? ನಡು ರಾತ್ರಿಗೆ ತಾನೆ ರೈಲು ಸಿಕ್ಕುವುದು? ಏನಯ್ಯ ಆನಂದ?

**ಆನಂದಪ್ಪ**:— ಹಾಗೇ ಆಗಲಿ.

**ಶಾನುಭೋಗ:**— ಹಾಗಾದರೆ ಎಲ್ಲರೂ ಬನ್ನಿ. ನನಗಿನ್ನೂ ಬಹಳ ಕೆಲಸವಿದೆ. (ಹೋಗುತ್ತಾನೆ.)

**ಲಕ್ಷ್ಮೀಪತಿ:**— ನನಗೀಗ ದಿಗ್ಭ್ರಮೆ ಹಿಡಿದಿದೆ. ಏನೂ ಗೊತ್ತಾಗುವಂತೆಯೇ ಇಲ್ಲ. ಪ್ರಶಸ್ತಿ ಸಿಕ್ಕುವುದಕ್ಕೆ ಮುಂಚೆಯೇ ಇಲ್ಲಿ ಸನ್ಮಾನವೇ ? ಇದಕ್ಕೆ ನಾನೂ ಒಪ್ಪಿಕೊಂಡೆ ! ಚೆನ್ನಾಯಿತು.

**ನಿರ್ವಾಣಯ್ಯ:**— ಹಾಗಂದರೇನು. ಇನ್ನು ಎಲ್ಲಿಯ ಅನುಮಾನ ?

**ಲಕ್ಷ್ಮೀಪತಿ:**— ಹುಂ. ಊರಿನ ಸಂತೋಷ. ಹೇಗಾದರೂ ನಡೆಯಲಿ. ನನಗೂ ಪ್ರತಿಯೊಂದು ನಿಮಿಷವೂ ಮುಖ್ಯ. ಯಾವ ಗಳಿಗೆಯಲ್ಲಿ ಏನೋ.

**ನಿರ್ವಾಣಯ್ಯ:**— ಆಗಲಿ ಬಿಡಿ. " ಶುಭಸ್ಯ ಶೀಘ್ರಂ. "

— ತೆರೆ —

# ದೃಶ್ಯ ೫

[ ಸ್ಥಳ: ಮಾಲೇಹಳ್ಳಿಯ ಬೀದಿಯೊಂದು. ಕಾಲ: ಸೋಮವಾರ ಸಂಜೆ ಸುಮಾರು ಐದೂವರೆ ಗಂಟೆ. ಪ್ರವೇಶ ಲಕ್ಷ್ಮೀಪತಿ. ಜರತಾರಿಯ ಪಂಚೆಯನ್ನುಟ್ಟಿದ್ದಾನೆ. ಕಾಲಿಗೆ ಎಕ್ಕಡ ಹಾಕಿದ್ದಾನೆ. ರೇಷ್ಮೆಯ ನಿಲುವಂಗಿ. ಪದ್ಧತಿಯಂತೆ ಮಡಿಸಿದ ಶಲ್ಯ. ನಾಲ್ಕು ಬೆರಳು ಅಗಲದ ಜರತಾರಿಯ ಪೇಟ. ಕೈಯಲ್ಲಿ ಬೆಳ್ಳಿ ಹಿಡಿಯ ಕೋಲು. ಶಲ್ಯವನ್ನು ಸರಿಮಾಡಿಕೊಳ್ಳುವುದು, ಮತ್ತೆ ಪೇಟಕ್ಕೆ ಕೈ ಹಾಕುವುದು, ಅನಂತರ ಕೈಯುಂಗುರಗಳನ್ನು ತಿರುಗಿಸಿಕೊಳ್ಳುವುದು ಇವುಗಳಿಂದ ಅವನ ಸಡಗರವು ಗೊತ್ತಾಗುತ್ತದೆ. ]

**ಲಕ್ಷ್ಮೀಪತಿ**:— (ತನ್ನೊಳಗೇ) ಅಂತೂ ಜೀವಸಹಿತ ಇರುವಾಗಲೇ ದೊರಕಿತಲ್ಲ—ಈ ತೃಪ್ತಿ! ಇಷ್ಟೊಂದು ವೆಚ್ಚಮಾಡಿದುದೂ ಸಾರ್ಥಕವಾಯಿತು. ಇನ್ನು ನನಗೆ ಏನಾದರೂ ಆಗಲಿ. (ತಿರುಗಾಡುವ ಜನರನ್ನು ನೋಡಿ) ಇವರೆಲ್ಲಾ ನನಗೆ ಹುಚ್ಚು ಹಿಡಿದಿದೆ ಅಂದುಕೊಂಡಾರು.

**ಒಬ್ಬ ಹಳ್ಳಿಯವ**: -- (ಪ್ರವೇಶಿಸಿ) ನಮಸ್ಕಾರ ಸಾಹುಕಾರರಿಗೆ-ಧರ್ಮಪ್ರಕಾಶರಿಗೆ!

**ಲಕ್ಷ್ಮೀಪತಿ**:— ನಮಸ್ಕಾರ! (ಹಳ್ಳಿಯವನು ಹೋಗುತ್ತಾನೆ)

**ಎರಡನೆಯವನು**: -- (ಪ್ರವೇಶಿಸಿ) ಕಾಲಿಗೆ ಬಿದ್ದೆ ಬುದ್ಧಿ. ತಮಗೆ ಬಿದಿರು ಬಂದೈತಂತೆ. ನಮಗೆಲ್ಲ ಬಲು ಸಂತೋಸ.

**ಲಕ್ಷ್ಮೀಪತಿ**:— ಬಿದಿರು ಅಲ್ಲವೋ. ಬಿರುದು—ಪ್ರಶಸ್ತಿ.

**ಎರಡನೆಯವನು**:— ಹಾಗೇ ಆಗ್ಲಿ. ನಮಗೆ ಹಳ್ಳಿಯೋರ್ಗೆ ಅದರದರ ಯತ್ವಾಸನೇ ಕಾಣೋಕಿಲ್ಲ. ತಪ್ಪಾಯ್ತು.

**ಲಕ್ಷ್ಮೀಪತಿ**:— ಛೇ! ಅದರಲ್ಲೇನು ತಪ್ಪು? ಎಲ್ಲಿಗೆ ಹೊರಟೆ?

**ಎರಡನೆಯವನು**:— ತಮಗೆ ಊರಲ್ಲಿ ಸುಮ್ಮಾನ ತೋರಸ್ತದಂತೆ. ನಾನು ಅಲ್ಲಿಗೇ.

**ಲಕ್ಷ್ಮೀಪತಿ**:— (ನಕ್ಕು) ನಿನ್ನ ನಾಲಿಗೆ ಚೆನ್ನಾಗಿ ಹೊರಳುತ್ತದೆ.

**ಎರಡನೆಯವನು**:-- ನಾವು ಹಳ್ಳಿಯೋರಲ್ಲ, ಬುದ್ಧಿ? (ಹೋಗುವನು)

[ ಪ್ರವೇಶ ಅಂಚೆಯವನು ]

**ಲಕ್ಷ್ಮೀಪತಿ**: — ಏನು ರಾಮಯ್ಯ, ಏನಾದರೂ ಉಂಟೋ ?

**ಅಂಚೆ**:— ತಮಗಿಲ್ಲದೆ ಉಂಟೆ ಸ್ವಾಮಿ? ಈಚೀಚೆಗೆ ಊರಿಗೆ ಬರುವ ಕಾಗದಗಳೆಲ್ಲವೂ ಒಂದು ತೂಕ, ತಮ್ಮವೇ ಒಂದು ತೂಕ. (ಹುಡುಕುತ್ತ ಶೇಖರಿಸುತ್ತ) ನನಗೆ ತಾವು ವಿಶೇಷ ಬಹುಮಾನವನ್ನು ಕೊಡಬೇಕು.

**ಲಕ್ಷ್ಮೀಪತಿ**:— ಆಗಲಿ. ಒಳ್ಳೆಯ ಸಮಾಚಾರವನ್ನು ತಂದಿದ್ದರೆ.

**ಅಂಚೆ**:- ಒಳ್ಳೆಯದಲ್ಲದೆ ಕೆಟ್ಟದ್ದು ತಮಗೆ ಹೇಗೆ ಬಂದೀತು ? (ಒಂದು ಕಟ್ಟು ಕಾಗದಗಳನ್ನು ತೆಗೆದುಕೊಡುತ್ತಾನೆ. ಲಕ್ಷ್ಮೀಪತಿಯು ಆತುರದಿಂದ ಒಂದನ್ನು ಒಡೆಯುತ್ತಾನೆ.)

**ಲಕ್ಷ್ಮೀಪತಿ**:— ಛೇ ! ಇದೇನೋ ಇಂಗ್ಲೀಷು ಪ್ರಸಂಗ ! ಇನ್ನಷ್ಟು ಯೋಗಕ್ಕೆ ಇರಬೇಕು.

(ಇನ್ನೊಂದನ್ನು ಒಡೆಯುತ್ತಾನೆ.)

ಓಹೊ ! ಮತ್ತೊಂದು ಅಭಿನಂದನೆ. ಇದು ಯಾಕೋ ಬೇಸರವಾಯಿತು.

(ಕಾಗದಗಳನ್ನೆಲ್ಲ ಪರೀಕ್ಷಿಸಿ ಒಂದನ್ನು ಆರಿಸಿಕೊಂಡು)

ಇದು ಲಾಯರು ಸೀತಾರಾಮಯ್ಯನವರಿಂದ. ಏನಿರಬಹುದು ? ಅವನ್ನೇ ಅವರೂ ಸೂಚಿಸುತ್ತಾರೆಯೊ ? (ಒಡೆದು ನೋಡಿ, ಓದಿ ಖಿನ್ನನಾಗಿ ಮತ್ತೆ ನೋಡಿ) ಇದೇನು ? ನನಗೆ ಕನಸುಗಿನಸಾಗುತ್ತಿದೆಯೆ ? (ಕೈ ಚಿಗುಟಿಕೊಂಡು) ಇಲ್ಲ. ಮತ್ತೆ ಇದೇನು ಇವರು ಬರೆದಿರುವುದು ? ಯಾವುದು ನಿಜ ? ಚೆನ್ನಾಗಿ ನೋಡೋಣ. (ಗಟ್ಟಿಯಾಗಿ ಓದುತ್ತಾನೆ) "ನಾನೂ ತಮ್ಮ ಪ್ರಶಸ್ತಿಗಾಗಿ ಬಹಳ ಪ್ರಯತ್ನಪಟ್ಟೆ. ಆದರೆ ಅದು ಸದ್ಯಕ್ಕೆ ಸಾಧ್ಯವಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ." (ಕಾಗದದಿಂದ ಕಣ್ಣು ತೆಗೆದು) ಅಸಾಧ್ಯ ? ಮತ್ತೆ ಆನಂದನು ಮಾಡಿದುದು ? (ಮತ್ತೆ ಓದುತ್ತ) "ಕಟ್ಟಕಡೆಯ ಯತ್ನವಾಗಿ ನಾನು ಹುಜೂರು ಸೆಕ್ರೆಟರಿಯವರನ್ನೇ ಈ ದಿನ ನೋಡಿದ್ದೆ." " (ಕಾಗದದಿಂದ ಕಣ್ಣು ತೆಗೆದು)

ಹ! ಹುಜೂರು ಸೆಕ್ರೆಟರಿಯವರು! ಆನಂದನ ಸ್ನೇಹಿತರು! ನಿನ್ನೆಯ ದಿನದ ಸಮಾಚಾರ! (ಮತ್ತೆ ಓದುತ್ತ) ಅವರು ತಮ್ಮನ್ನು ಬಹಳ ಶ್ಲಾಘಿಸಿದರು. ಅವರಿಗೆ ಈ ವರ್ಷದ ವರ್ಧಂತಿ ಉತ್ಸವದ ಪ್ರಶಸ್ತಿ ಪಟ್ಟಿಯು ಆಗಲೇ ಮಂಜೂರಾಗಿ ಎರಡುವಾರದ ಮೇಲಾಯಿತೆಂದೂ, ಮುಂದಿನ ವರ್ಷದ ವರೆಗೂ ಕಾಯದಿದ್ದರೆ ವಿಧಿಯಿಲ್ಲವೆಂದೂ ತಿಳಿಸಿದರು. ಮುಂದಿನ ವರ್ಷ ತಮ್ಮ ಯೋಗ್ಯತೆಗೆ ತಕ್ಕಂತೆ ಸನ್ಮಾನವು ದೊರಕುವುದೆಂಬ ಭರವಸೆಯು ನನಗಿದೆ. ಈಗ ಮತ್ತೇನನ್ನೂ ಮಾಡುವಂತಿಲ್ಲ." (ಕಾಗದವನ್ನು ಉಂಡೆಮಾಡಿ) ಛೀ! ಪ್ರಶಸ್ತಿಪಟ್ಟಿಯು ಮಂಜೂರಾಗಿ ಎರಡು ವಾರಗಳ ಮೇಲಾಯಿತು! ನಾನು ಮೂರ್ಖನಾಗಿ ನಾಲ್ಕು ದಿನಗಳಿಂದ ಯತ್ನಿಸುತ್ತಿದ್ದೇನೆ! ಇವರೇನಾದರೂ ತಪ್ಪನ್ನು ಮಾಡಿರಬಹುದೆ? ಊಹುಂ. ಎಂದಿಗೂ ಇಲ್ಲ. ಈ ಕೆಲಸ ಇಷ್ಟು ಆತುರದಲ್ಲಿ ಆಗಬಹುದೆಂದು ನಂಬಿದುದು ನನ್ನದೇ ತಪ್ಪು. ಛೀ! ನಾನೆಂಥ ಮೂರ್ಖ! ಬೆಪ್ಪ! ಇದೆಲ್ಲ ಆ ಪಾಪಿ ಆನಂದನ ಮತ್ತು ಆ ಶಕುನಿ ನಿರ್ವಾಣಯ್ಯನ ಹಂಚಿಕೆ. ನಾನು ಸುಲಭವಾಗಿ ಅವರ ಬಲೆಗೆ ಬಿದ್ದೆನಲ್ಲ. ನನ್ನ ವಿವೇಕವು ಆಸೆಯ ಬೆಂಕಿಯಲ್ಲಿ ಬೆಂದು ಹೋಯಿತು. (ಆಲೋಚನಾಪರನಾಗುತ್ತಾನೆ. ತುಟಿಗಳು ಅಲುಗುತ್ತವೆ)

[ಪ್ರವೇಶ ಶಾನುಭೋಗ. ಮೇಲುಕೋಟೆ ಅಂಚಿನ ಪಂಚೆ, ಹಳೆಯ ಕೋಟು, ಟೋಟುಪ್ಪ ಬಿಳಿಯ ಪೇಟದಿಂದ ಅಲಂಕೃತನಾಗಿದ್ದಾನೆ.]

ಇವನಿಗೆ ಹೇಳಿ ಈ ಸಮಾರಂಭವನ್ನು ನಿಲ್ಲಿಸಬೇಕಲ್ಲವೆ? (ಯೋಚಿಸಿ) ಇರಲಿ. ಏನಯ್ಯ, ಮತ್ತೇನೋ ಸಮಾಚಾರವನ್ನು ತಂದಂತಿದೆ?

**ಶಾನುಭೋಗ**:— [ಆತುರದಿಂದ] ಹುಂ. ಸ್ವಾಮಿ ಆ ಜೋಯಿಸರು ಬಂದಿರಲಿಲ್ಲವೆ? ಅವರ ದಸ್ತಗಿರಿಯಾಯಿತಂತೆ. ಪಟ್ಟಣವಾಸದ ಕೇಡಿಯಂತೆ-ಅತ.

**ಲಕ್ಷ್ಮೀಪತಿ**:— [ಆಶ್ಚರ್ಯದಿಂದ] ಹುಂ.! ನಿಜವಾಗಿ!

**ಶಾನುಭೋಗ**:— ದೇವರಾಣೆಗೂ ಇಲ್ಲ. ನನ್ನ ಮನೆಯಲ್ಲಿದ್ದುದರಿಂದ ಪೋಲೀಸಿನವರು ನನ್ನನ್ನು ವಿಚಾರಿಸಲು ಬಂದಿದ್ದರು. 'ಏನಾದರೂ ಕಳವಾಯಿತೆ? ಮೋಸವಾಯಿತೆ? ಎಂದು ಕೇಳಿದರು. ವರದಿಯನ್ನು ಬರೆದುಕೊಂಡರು.

**ಲಕ್ಷ್ಮೀಪತಿ:**— ಆಹಾ !

**ಶಾನುಭೋಗ:**— ಮತ್ತೊಂದು ವಿಶೇಷವೆಂದರೆ.......

**ಲಕ್ಷ್ಮೀಪತಿ:**— ಏನು ?

**ಶಾನುಭೋಗ:**— ತಾವೇನೂ ಮನಸ್ಸಿಗೆ ತೆಗೆದುಕೊಳ್ಳದಿದ್ದರೆ, ಒಡೆಯ ನನ್ನ ಮನ್ನಿಸುವುದಾದರೆ.......

**ಲಕ್ಷ್ಮೀಪತಿ:**— [ಆತುರದಿಂದ] ಅದೆಲ್ಲ ಇರಲಿ. ಹೇಳಯ್ಯ—ನಿನ್ನ ಕತ್ತನ್ನು ಕತ್ತರಿಸುತ್ತೇನೆಯೆ ?

**ಶಾನುಭೋಗ:**— ಅವನು ಇಲ್ಲಿಗೆ ಬಂದುದು ಆನಂದಪ್ಪನವರ ಕೆಲಸಕ್ಕಂತೆ ಅವರೇ ಕರಿಸಿದರಂತೆ.

**ಲಕ್ಷ್ಮೀಪತಿ:**— ಹ !

**ಶಾನುಭೋಗ:**— ಛಡಿ ಏಟು ಬಿದ್ದಾಗ ಹೇಳಿಕೊಂಡನಂತೆ.

**ಲಕ್ಷ್ಮೀಪತಿ:**— ನಿಜವಾಗಿ ? ಎಲ, ಎಲ, ಇದು ಎರಡನೆಯ ಕಡೆ ನಾನು ಹಳ್ಳಕ್ಕೆ ಬಿದ್ದದ್ದು; ಇದಕ್ಕೂ ಅವರೇ ಕಾರಣರು. ಇದರಿಂದ ನನಗೆಷ್ಟು ಹಿಂಸೆಯಾಯಿತು ? ಎಷ್ಟು ನಷ್ಟ ?

**ಶಾನುಭೋಗ:**— ಆದರೆ ಅವನ ಭವಿಷ್ಯ—ತಮ್ಮ ಬಗ್ಗೆ—ಸುಳ್ಳಾಯಿತಲ್ಲ ಎಂದು ನನಗೆ ಮಹಾ ಸಂತೋಷ.

**ಲಕ್ಷ್ಮೀಪತಿ:**— ನಿಜ. ಅದೇನೋ ಈ ಕೆಟ್ಟ ಚಿತ್ರದಲ್ಲಿ ಒಂದಿಷ್ಟಾಗಲ ಒಳ್ಳೆಯ ಬಣ್ಣ. ದಪ್ಪ ಶನಿಯೊಂದು ಕಳೆಯಿತು. ನಾನು ಇನ್ನು ಭಯದಿಂದ ಮುದುರಿಕೊಳ್ಳದೆ ಧಾರಾಳವಾಗಿ ಉಸಿರಾಡಬಹುದು. ಸರಿ ಆನಂದನು. ಎಲ್ಲಿ ?

**ಶಾನುಭೋಗ:**— ಚಾವಡಿಯಲ್ಲಿರಬೇಕು ಏಕೆ ?

**ಲಕ್ಷ್ಮೀಪತಿ:**— (ಯೋಚಿಸಿ) ಏಕೂ ಇಲ್ಲ. ಏನೋ ಯೋಚನೆ ಬಂದಿತು. ಆದರೆ ಅದು ಸರಿಯಿಲ್ಲ.

**ಶಾನುಭೋಗ:**— ಆರು ಗಂಟೆಯಾಗುತ್ತ ಬಂದಿತು. ತಾವು ನಿಂತುಬಿಟ್ಟಿರಲ್ಲ ?

**ಲಕ್ಷ್ಮೀಪತಿ**:— ಇರಲಿ, ನಾನು ಐದು ನಿಮಿಷ ಹೊತ್ತಾಗಿ ಬಂದೇನು. ಯೋಚಿಸುವುದು ಬಹಳ ವಿಷಯಗಳಿವೆ. ಸ್ವಲ್ಪ ಸಮಾಧಾನವಾಗಿ ನಿರ್ಧರಕ್ಕೆ ಬಂದು ಅಲ್ಲಿಗೆ ಬರುತ್ತೇನೆ.

**ಶಾನುಭೋಗ**:— ತಮ್ಮ ಚಿತ್ತ.

**ಲಕ್ಷ್ಮೀಪತಿ**:— ಏನಾದರೂ ಆನಂದ, ನಿರ್ವಾಣವನ್ನು ತಪ್ಪಿಸಿಕೊಂಡಾರು. ತಳವಾರನಿಗೆ ಹೇಳು.

**ಶಾನುಭೋಗ**:— ಆಗಲಿ [ಹೋಗುತ್ತಾನೆ.]

**ಲಕ್ಷ್ಮೀಪತಿ**:— ಈಗ ಇವನಿಗೆ ಏನನ್ನು ಮಾಡಬೇಕು? ಈ ಸಭೆಗೆ ಹೇಗೆ ಉತ್ತರವನ್ನು ಕೊಡಬೇಕು?

[ನಿದಾನವಾಗಿ ಹೋಗುತ್ತಾನೆ]

— ತೆರೆ —

# ದೃಶ್ಯ. ೬

(ಸ್ಥಳ: ಮೂಲೆಹಳ್ಳಿಯ ಚಾವಡಿ. ಚಾವಡಿಯು ತಳಿರು ತೋರಣಗಳಿಂದ ಅಲಂಕೃತವಾಗಿದೆ. ಒಂದು ಭಾಗದಲ್ಲಿ ಒಂದು ಮೇಜ ಮತ್ತು ಒಂದು ಕುರ್ಚಿ ಇಡಲ್ಪಟ್ಟಿವೆ. ಎದುರಿಗೆ ಸಾಲಾಗಿ ಬೆಂಚುಗಳು. ಅವುಗಳ ಮೇಲೆ ಜನರು ಇಕ್ಕಟ್ಟಾಗಿ ಕುಳಿತಿದ್ದಾರೆ. ಒಂದು ಕಡೆ ಮುದುಸೀಯರು, ಇನ್ನೊಂದು ಕಡೆ ಮಹಿಳೆಯರು. ಜನರ ಗುಜುಗುಜು ಬಹಳವಾಗಿದೆ. ಶಾನುಭೋಗ ಮತ್ತು ಅವನ ಸಹಾಯಕರು ಗಡಿಬಿಡಿಯಿಂದ ಓಡಾಡುತ್ತಿರುತ್ತಾರೆ. ದೃಶ್ಯವು ತೆರೆದ ಅರ್ಧ ನಿಮಿಷದಲ್ಲಿ ನಿರ್ವಾಣಯ್ಯನೂ ಆನಂದಪ್ಪನೂ ಪ್ರವೇಶಿಸುತ್ತಾರೆ.)

**ನಿರ್ವಾಣಯ್ಯ:**— [ಆನಂದಪ್ಪನೊಡನೆ ಮಾತ್ರ ತಗ್ಗುಧ್ವನಿಯಲ್ಲಿ ಮಾತನಾಡುತ್ತ] ಈ ತಮಾಷೆಯನ್ನು ನೋಡಿಯೇ ಬಿಡೋಣ.

**ಆನಂದಪ್ಪ:**— ಇದೇನೋ ಅತಿಶಯವಾಗಿ ಕಾಣಿಸುತ್ತದೆ ನನಗೆ ಭಯ.

**ನಿರ್ವಾಣಯ್ಯ:**— ನೀನೊಬ್ಬ ತೆಪ್ಪ. ಸುಮ್ಮನಿರು; ಎಲ್ಲವೂ ಸರಿಯಾಗುತ್ತದೆ. ಇನ್ನು ಐದು ಗಂಟೆಯ ಕಾಲದಲ್ಲಿ ನಾವು ರೈಲಿನಲ್ಲಿ. ಆನಂತರ ನಮಗೂ ಇವರಿಗೂ ಗಳಿಗೆಗಳಿಗೂ ದೂರ ಹೆಚ್ಚುತ್ತಿರುತ್ತದೆ. ನಮಗೇನು ಚಿಂತೆ?

**ಶಾನುಭೋಗ:**— (ಶಾನುಭೋಗನು ಮುಂದೆ ಬಂದು) ಹೀಗೆ ದಯಮಾಡಿ. (ಮುಂದಿನ ಸಾಲಿನಲ್ಲಿ ಇಬ್ಬರಿಗೂ ಬೇರೆಬೇರೆ ಸ್ಥಳ ಮಾಡಿಕೊಡುತ್ತಾನೆ. ಇವರು ಕುಳಿತ ಹೊತ್ತಿನಲ್ಲೇ ಲಕ್ಷ್ಮೀಪತಿಯು ಪ್ರವೇಶಿಸುತ್ತಾನೆ. ಶಾನುಭೋಗ ಮತ್ತು ಅವನ ಸಹಾಯಕರೆಲ್ಲ ಓಡಿಬಂದು ಓಲೈಸುತ್ತ ಕುರ್ಚಿಯ ಕಡೆಗೆ ಕರೆದೊಯ್ಯುತ್ತಾರೆ. ಜನರು ಶಬ್ದವನ್ನು ತಟ್ಟನೆ ನಿಲ್ಲಿಸಿ ಬಿಡುತ್ತಾರೆ.)

**ಲಕ್ಷ್ಮೀಪತಿ:**- (ಕುರ್ಚಿಗೆ ಬಂದು) ಕುಳಿತುಕೊಳ್ಳಿ.. ಎಲ್ಲರೂ ಕುಳಿತುಕೊಳ್ಳಿ.. (ಜನರೆಲ್ಲರೂ ಕುಳಿತುಕೊಳ್ಳುತ್ತಾರೆ. ಶಾನುಭೋಗನು ಲಕ್ಷ್ಮೀಪತಿಗೆ ಏನು ಮಾತನ್ನು ಹೇಳಿದಂತೆ ನಟಿಸಿ, ಮಹಿಳೆಯರ ಗುಂಪಿನಲ್ಲಿದ್ದ ಸಣ್ಣ ಹುಡುಗಿಯರಿಗೆ ಕೈಸನ್ನೆ ಮಾಡುತ್ತಾನೆ. ಹತ್ತು ವರ್ಷದ ಮೂರು ಮಕ್ಕಳು ಮುಂದೆ ಬಂದು ಜನರಿಗಿದಿರಾಗಿ ನಿಲ್ಲುತ್ತಾರೆ. ಪ್ರಾರ್ಥನೆಯು ಮೊದಲಾಗುತ್ತದೆ. ಎಲ್ಲರೂ ಎದ್ದು ನಿಲ್ಲುತ್ತಾರೆ.)

ಜಯ ಜಯ ಕರ್ನಾಟಕ ಜನನಿ ।
ಮಂಗಳದಾಯಿನಿ ॥ ಪ ॥

ಪ್ರಕೃತಿ ಶರೀರೆ, ಸೌಂದರ್ಯಾಂಬರೇ ।
ಜ್ಞಾನ ಕಾಂತಿಯುತೆ, ಶಾಂತಿಭೂಷಿತೇ ।
ಕರುಣ ಕಟಾಕ್ಷಿಣಿ, ಸುಧರ್ಮ ಪಾಣೇ ।
ಪ್ರೇಮ ವಿಕಾಸಿನಿ, ಮಂಗಳ ರೂಪಿಣಿ ॥೧॥

ಚಿತ್ತಮಲದ ಕಲ್ಮಷಗಳ ತೊಳೆದೂ ।
ಭ್ರಾತೃಭಾವದಲಿ ಪಾರದ ಹೆಣೆದೂ ।
ನಿನ್ನಯ ಪವಿತ್ರಪಾದದೊಳಿಡುವೆವು ।
ಬಾಗುತ ಹರಕೆಯ ಬೇಡುತ ಮಣಿವೆವು. ॥೨॥

ನಾಡಿನ ಕೀರ್ತಿ ಜ್ಯೋತಿಯು ಬೆಳಗಲಿ
ಸತ್ಯ ನೀತಿ ಎಲ್ಲೆಲ್ಲಿಯು ಬೆಳೆಯಲಿ ।
ತೃಪ್ತಿ ಸೌಖ್ಯ ಚಿರಕಾಲದೊಳಾಳಲಿ ।
ನಿನ್ನ ಸೇವೆಯೇ ಪದ್ಧತಿಯಾಗಲಿ ॥೩॥

(ಪ್ರಾರ್ಥನೆಯು ಮುಗಿದೊಡನೆ ಹುಡುಗಿಯರು ತೆರವಾಗಿ ಗುಂಪಿಗೆ ಹೋಗುತ್ತಾರೆ. ಜನರು ಮತ್ತೆ ಕುಳಿತುಕೊಳ್ಳುತ್ತಾರೆ. ತಕ್ಷಣವೇ ಶಾನುಭೋಗನು ಸಡಗರದಿಂದ ಮುಂದೆ ಬಂದು ತನ್ನ ಹಳೆಯ ಕೋಟಿನ ಜೇಬಿನಿಂದ ಕಾಗದದ ಸುರುಳಿಯನ್ನು ತೆಗೆದು ಓದಲು ಸಿದ್ಧನಾಗುತ್ತಾನೆ.]

**ಶಾನುಭೋಗ**:— [ಗಂಟಲನ್ನು ಸರಿಮಾಡಿಕೊಂಡು] ಮಹನೀಯರೆ, ಇಲ್ಲ. ಮಹಿಳೆಯರೆ ಮತ್ತು........

**ಲಕ್ಷ್ಮೀಪತಿ**:— [ಎದ್ದುನಿಂತು] ಶಾನುಭೋಗರೆ, ಕೊಂಚ ತಾಳಿ. ನಾನು ನಾಲ್ಕು ಮಾತುಗಳನ್ನಾಡಬೇಕು—ಮೊದಲು.

[ಶಾನುಭೋಗನು ಸಂಶಯದಿಂದ ಹಿಂದೆ ಸರಿಯುತ್ತಾನೆ.]

ಸ್ನೇಹಿತರೆ; ಇಂದು ನನ್ನನ್ನು ಸನ್ಮಾನಿಸಲು ತಾವೆಲ್ಲರೂ ಬಹಳ ಶ್ರಮಪಟ್ಟು, ತಮ್ಮ ಕೆಲಸಗಳನ್ನು ಬಿಟ್ಟು ಇಲ್ಲಿ ನೆರೆದಿರುತ್ತೀರಿ. ನಾನು ಅದಕ್ಕೆ ತುಂಬ ಕೃತಜ್ಞನಾಗಿದ್ದೇನೆ. ಆದರೆ ತಾವು ಯಾವ ಪ್ರಶಸ್ತಿಯ ಬಗ್ಗೆ ತಮ್ಮ ಉತ್ಸಾಹವನ್ನು ಪ್ರಕಟಿಸಲು ಇಲ್ಲಿ ಕೂಡಿರು

ವಿದೆ, ಅದರ ಬಗ್ಗೆ ನನಗೆ ದೊರಕಿರುವ ಇತ್ತೀಚಿನ ಅಧಿಕಾರಯುತವಾದ ಸಮಾಚಾರದಿಂದ ಅನುಮಾನ ಉಂಟಾಗಿದೆ. (ಆನಂದಪ್ಪನು ಗಾಬರಿಯಿಂದ ಏಳುತ್ತಾನೆ. ಲಕ್ಷ್ಮೀಪತಿಯು ನಸುನಗುತ್ತಾನೆ.) ಹಾಗೆಂದರೆ ಈಗ ತಾವು ಎದ್ದುಹೋಗಬೇಕೆಂದು ನಾನು ಸೂಚಿಸಿದಂತಾಗಲಿಲ್ಲ. ಏಕೆಂದರೆ ಈ ಸಮಾರಂಭಕ್ಕೆ ಅವಕಾಶವಿರುವ ಮತ್ತೊಂದು ಸಂತೋಷದ ಸಂಗತಿಯು ಜರುಗಿದೆ. ಅದೇನೆಂದರೆ ಈ ಊರಿಗೆ ಒಂದು ದತ್ತಿ. (ಎಲ್ಲರೂ ಕೈತಟ್ಟುತ್ತಾರೆ.) ಇದನ್ನು ಕೊಟ್ಟವರು ನನಗಿಂತಲೂ ತಮ್ಮ ಕೃತಜ್ಞತೆಗೆ, ಅಭಿನಂದನೆಗೆ ಅರ್ಹರು (ಯಾರು? ಯಾರು? ಎಂಬ ಪಿಸಪಿಸ) ನಾನಾದರೂ ಹಳ್ಳಿಯಿಂದ ಸಂಪಾದಿಸಿದ ಹಣವನ್ನು ಪದ್ಧತಿಯಂತೆ ಪಟ್ಟಣಕ್ಕೆ ಮತ್ತು ಅಲ್ಲಿನ ಸಂಸ್ಥೆಗಳಿಗೆ ದಾನಮಾಡಿದೆ. ಅದರಲ್ಲೇನೂ ಹೆಚ್ಚುಗಾರಿಕೆಯಿಲ್ಲ. ಆದರೆ ಈ ಮಹಾನುಭಾವರು ಪಟ್ಟಣವಾಸದವರು, ಈ ಗ್ರಾಮದ ಪುನರುದ್ಧಾರಕ್ಕೆಂದು ನಾಲ್ಕು ಸಾವಿರ ರೂಪಾಯಿಗಳನ್ನು ದಾನಮಾಡಿದುದು ವಿಶೇಷ. (ಕರತಾಡನ) ಇವರು ಈ ಹಣಕ್ಕಾಗಿ ಎಷ್ಟು ಕಷ್ಟಪಟ್ಟರೆಂಬುದು ತಮಗೆ ಯಾರಿಗೂ ತಿಳಿಯದಿದ್ದರೂ ನನಗೆ ಚೆನ್ನಾಗಿ ಗೊತ್ತಿದೆ—ಇಂಥ ಮಹಾನುಭಾವರು ನನ್ನ ನೆಂಟರು—ನನ್ನ ತಮ್ಮಂದಿರು ಆನಂದಪ್ಪನವರೆಂದು ಹೇಳಲು ನನಗೆ ಬಹಳ ಸಂತೋಷ ಮತ್ತು ಹೆಮ್ಮೆ. [ಆನಂದಪ್ಪನು ಹೇಚಾಟದಿಂದ ಅತ್ತಿತ್ತ ಜರಗುತ್ತಾನೆ.] ತಾವು ಆಗಲೇ ಇವರು ಎದ್ದುದನ್ನು ಕಂಡು ಇವರ ಉತ್ಸಾಹವನ್ನು ಊಹಿಸಿರಬಹುದು. ಇನ್ನು ಇವರನ್ನು ತಡೆಯುವದಿಲ್ಲ. ನಿಮ್ಮ ಮತ್ತು ಅವರ ಮಧ್ಯೆ ನಿಲ್ಲುವದಿಲ್ಲ. ಆನಂದಪ್ಪನವರೆ, ದಯಮಾಡಿ ಇಲ್ಲಿ ಬನ್ನಿರಿ. (ಆನಂದಪ್ಪನು ಏಳುವದಿಲ್ಲ.) ಅವರದ್ದು ಸಂಕೋಚ ಪ್ರಕೃತಿ. ಶಾನುಭೋಗರೆ, ಕರೆದುಕೊಂಡು ಬನ್ನಿ. [ಶಾನುಭೋಗ ಇನ್ನೊಬ್ಬ ಮುಗ್ಗಿ ಬರುತ್ತಾರೆ. ಆನಂದಪ್ಪನು ಕೈದಿಯಂತೆ ಮುಂದೆ ಬಂದು ಲಕ್ಷ್ಮೀಪತಿಯ ಬಳಿಗೆ ಸಾಗುತ್ತಾನೆ. ಲಕ್ಷ್ಮೀಪತಿಯು ಆವನ ಕಿವಿಯಲ್ಲಿ ಏನನ್ನೋ ಹೇಳುತ್ತಾನೆ. ಆನಂದಪ್ಪನು ಬೆಚ್ಚಿಬೆದರುತ್ತಾನೆ. ನಡುಗುವ ಕೈಗಳಿಂದ ಜೇಬಿನ ನೋಟುಗಳನ್ನು ತೆಗೆದು ಲಕ್ಷ್ಮೀಪತಿಗೆ ಕೊಟ್ಟುಬಿಡುತ್ತಾನೆ. ಎಲ್ಲರೂ ಕೈತಟ್ಟುತ್ತಾರೆ.] ಇವರಿಗೆ ಸಭಾಕಂಪ ಬಹಳ ಜಾಸ್ತಿ ಅಷ್ಟೇ ಆದಿರಲಿ ಈ ಮುಡುಪಿಗೆ ಶಾನುಭೋಗರೂ ನಾನೂ ರಕ್ಷಕ

ರಾಗಿರಬೇಕೆಂಬುದು ಇವರ ಅಭಿಲಾಷೆ. ಇದಕ್ಕೆ ಆಕ್ಷೇಪಗಳಿಲ್ಲವೊ....

**ಎಲ್ಲರೂ**:— ಹುಂ. ಹುಂ. ಆಗಬಹುದು. ( ಲಕ್ಷ್ಮೀಪತಿಯ ಸೂಚನೆಯ ಮೇಲೆ ಆನಂದಪ್ಪನಿಗೆ ಹಾರ-ತುರಾಯಿಗಳು ಅವನಿಂದಲೇ ಅರ್ಪಿಸಲ್ಪಡುತ್ತವೆ. ಎಲ್ಲರೂ ಕೈತಟ್ಟುತ್ತಾರೆ. ಆನಂದಪ್ಪನು ಪೆಚ್ಚಾಗಿ ನಮಸ್ಕರಿಸಿ ತನ್ನ ಸ್ಥಳಕ್ಕೆ ಬಂದು **ಕುಳಿತುಕೊಳ್ಳುತ್ತಾನೆ.**)

**ಲಕ್ಷ್ಮೀಪತಿ**:— ಒಳ್ಳೆಯದು ಇನ್ನು ತಮಗೆ ತಾಳ್ಮೆ ಇದ್ದರೆ ನನ್ನ ವಿಷಯವಾಗಿ ಒಂದೆರಡು ಮಾತುಗಳನ್ನು ಬಿನ್ನವಿಸಿಕೊಳ್ಳುತ್ತೇನೆ.... ಮೊಟ್ಟಮೊದಲಿನಲ್ಲಿ ನಾನು ಹಣವನ್ನು ಕೂಡಿಡುವುದೇ ಅತಿ ಹಿರಿಯ ಸಂತೋಷವೆಂದು ನಂಬಿಕೊಂಡು ಕೂಡಿಡುತ್ತಿದ್ದೆ. ಎರಡನೆಯ ಮೆಟ್ಟಿಲಿನಲ್ಲಿ ಅದನ್ನು ಪ್ರಶಸ್ತಿ ಹೊಗಳಿಕೆಗಳಿಗೆ ಬದಲಾಯಿಸಿಕೊಳ್ಳುವುದು ಇನ್ನೂ ಹೆಚ್ಚಿನದೆಂದು ಸಾವಿನ ನೆರಳಿನಲ್ಲಿ ಕಂಡುಕೊಂಡು ದಾನ ಮಾಡಿದೆ. ಇದಕ್ಕೆ ಹಂಚಿಕೆಯ ಮೂಲಕ ದಾರಿಮಾಡಿದ ಪುಣ್ಯಾತ್ಮರೆಂದರೆ ಮಹಾರಾಜ ರಾಜೇಶ್ರೀ ನಿರ್ವಾಣಯ್ಯನವರು ಮತ್ತು ನನ್ನ ತಮ್ಮಂದಿರು. ಇವರಿಗೆ ನನ್ನ ಕೃತಜ್ಞತೆಗಳು. ( ನಸುನಗುತ್ತಾನೆ ) ಮೂರನೆಯದರಲ್ಲಿ ಇಂದು ಪ್ರತಿಫಲವನ್ನು ತಡೆಗಟ್ಟಿ ದೈವವು ಪ್ರತಿಫಲಾಪೇಕ್ಷೆಯಿಲ್ಲದೆಯೇ ತ್ಯಾಗಮಾಡುವುದು ಅತ್ಯಂತ ಆನಂದವಾದುದೆಂಬುದನ್ನು ನನಗೆ ಕಲಿಸಿದೆ. ಇಂದು ಪ್ರತಿಫಲವೊದಗದಿದ್ದರೂ ನನ್ನ ಸಂತೋಷಕ್ಕೇನೂ ಕುಂದು ಬಂದಿಲ್ಲವೆಂಬುದು ನನಗೆ ಗೊತ್ತು. ಆದುದರಿಂದಲೇ ಈ ಸಮಾರಂಭದಲ್ಲಿ ನಾನೂ ಈಗ ಭಾಗಿಯಾಗಿದ್ದೇನೆ.

( ಕುಳಿತುಕೊಳ್ಳುತ್ತಾನೆ. ಕೈತಟ್ಟುತ್ತಾರೆ. 'ವಂದೇ ಮಾತರಂ' ಜಯಘೋಷ ಗಾನದ ಮೇಲೆ ನಿರ್ವಾಣಯ್ಯ, ಆನಂದಪ್ಪ ಇಬ್ಬರನ್ನು ಬಿಟ್ಟು ಬಾಕಿಯವರೆಲ್ಲರೂ ಹೋಗುತ್ತಾರೆ. )

**ಆನಂದಪ್ಪ**:— ( ತುರಾಯಿಯನ್ನು ಬಿಸುಟು, ಹಾರವನ್ನು ಹರಿದು ತುಳಿದು ) ಈ ಹಾಳು ಹಾರತುರಾಯಿ ಯಾರಿಗೆ ಬೇಕು ? ನನಗೆ ಬೇಕಾದದ್ದು ನಾಲ್ಕು ಕಾಸು....... ಗ್ರಾಮ ಪುನರುದ್ಧಾರವಂತೆ-ನನ್ನ ಮನೆ ಅಲ್ಲಿ ಉರಿದು ಹೋಗುತ್ತಿರುವಾಗ ! ಈ ಗ್ರಾಮವು ಇದ್ದರೇನು, ಹಾಳಾದರೇನು ನನಗೆ ? ಛೀ ! ಛೀ !

**ನಿರ್ವಾಣಯ್ಯ**:- ನೀನೊಬ್ಬ ಬೆಪ್ಪ ತಕ್ಕಡಿ. ಹಣವನ್ನೇಕೆ ವಾಪಸು ಕೊಟ್ಟೆ?

**ಆನಂದಪ್ಪ**:— ಓಹೋ; ಇನ್ನೇನು ಪೋಲೀಸಿನವರು ಬರುವವರೆಗೂ

ಕಾಯಬೇಕಾಗಿದ್ದಿತೇನು ? ನಮ್ಮೆಣ್ಣ ನಿಗೆಲ್ಲವೂ ತಿಳಿದುಹೋಗಿದೆ-ಆ ಜ್ಯೋತಿಷ್ಕನದ್ದು, ಆ ಪ್ರಶಸ್ತಿಯದು. ಅವನೇನು ನಾನು ಪಾತಾಳಕ್ಕೆ ಹೋದರೂ ಸೆಳೆದು ತರುವಂಥವನು. ತಿಳಿಯಿತೇ ?

**ನಿರ್ವಾಣಯ್ಯ**:— ನೀನು ಸ್ವಲ್ಪ ಸುಮ್ಮನೆ ಇದ್ದಿದ್ದರೆ ನಾನು ಉಪಾಯ ವನ್ನು ಹೇಳಿಕೊಡುತ್ತಿದ್ದೆ.

**ಆನಂದಪ್ಪ**:— ಸಾಕು ನಿಮ್ಮ ಉಪಾಯ, ಸಾಹಸ, ಸಹವಾಸಗಳೆಲ್ಲ. ನಿಮ್ಮ ಆಟಕಟ್ಟಿಯೇ ನನ್ನ ಆಟ ಹೀಗೆ ಆಯಿತು. ಇದ್ದ ಎರಡು ಕಾಸೂ ಆ ಜ್ಯೋತಿಷ್ಕನ ಮೇಲೆ, ಆ ಟೆಲಿಗ್ರಾಮಿನ ಮೇಲೆ ಹಾಕಿ ಸುದಾಮ ನಾದೆ. ಊರಿಗೆ ಹೋಗೋಣ ಅಂದರೆ ರೈಲು ಖರ್ಚು ಸಹ ಇಲ್ಲ; ಇಲ್ಲಿ ಮನೆಗೆ ಹೋಗೋಣ ಅಂದರೆ ಮುಖವಿಲ್ಲ. ಇಂಥ ಪೇಚಾಟಕ್ಕೆ ಸಿಕ್ಕಿಸಿದೆ- ನಿಮ್ಮ ಉಪಾಯ !

**ನಿರ್ವಾಣಯ್ಯ**:—ಈಗ ಹೀಗೆ ಹೇಳುತ್ತೀಯೆ. ಏನಾದರೂ ದಕ್ಕಿದ್ದರೆ ಆಗ?

**ಆನಂದಪ್ಪ**:— ಮೋಸದಿಂದ ದಕ್ಕಿದ್ದನ್ನೆಲ್ಲ ಕಕ್ಕಲೇಬೇಕಾಗುತ್ತೆ. ಇದೇ ನಿದರ್ಶನ.

**ನಿರ್ವಾಣಯ್ಯ**:-(ಸಿಟ್ಟಿನಿಂದ) ಹಾಗಾದರೆ ಹೋಗು, ಅವನ ಕಾಲಿಗೇ ಬೀಳು.

**ಆನಂದಪ್ಪ**:- ನಿಮ್ಮ ಮಾತನ್ನು ಕೇಳದೆ ಅವನ ಕಾಲಿಗೆ ಬಿದ್ದಿದ್ದರೆ ಇಲ್ಲಿಯ ವರೆಗೆ ಒಳ್ಳೆಯದು ಎರಡು ದುಡ್ಡಾದರೂ ಎಲ್ಲ ಸಲದಂತೆ ಸಿಕ್ಕುತ್ತಿತ್ತು.

**ನಿರ್ವಾಣಯ್ಯ**:—[ತಿರಸ್ಕಾರದಿಂದ] ಹೋಗು ಹಾಗೆಯೇ ಮಾಡು. ಈಗಲೂ.

**ಆನಂದಪ್ಪ**:— ಹಾಗೆ ಮಾಡದಿದ್ದರೆ ವಿಧಿಯೇ ಇಲ್ಲ. ನಿಮ್ಮ ಮೋಸದ ತಲೆಗಿಂತ ಅವನ ಒದೆಯುವ ಕಾಲೇ ಮೇಲು. [ಹೋಗುತ್ತಾನೆ]

**ನಿರ್ವಾಣಯ್ಯ**:— (ಹೋಗುವವನ ಕಡೆಗೆ ನೋಡಿ) ಬೆಪ್ಪ ! ........ ಇನ್ನು ಇಲ್ಲಿ ನನ್ನ ಕಾಲ ಮುಗಿಯಿತು. ಬೇರೆ ಗ್ರಾಮದಲ್ಲಿ ನೋಡೋಣ ನನ್ನ ಅದೃಷ್ಟ. ಪ್ರಪಂಚದಲ್ಲಿ ಇನ್ನೂ ಎಷ್ಟೋ ಮೂಢರಿದ್ದಾರೆ. ನನ್ನ ತಲೆ ಯಲ್ಲಿ ಹಂಚಿಕೆಗಳಿಗೇನು ಬರವಿಲ್ಲ. ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು. ಫಲಿಸದಿರೆ, ಬಿಡಬೇಡ ಫಲಸಿಗುವತನಕ. ಹ್ಞ ! [ ಹೋಗುತ್ತಾನೆ.]

— ತೆರೆ —

# ಭಕ್ತನ ಕನಸು

( ಸಣ್ಣ ಕತೆ )

ಬರೆದವರು:

**ಕೆ. ಎ. ಎನ್. ರಾವ್**

ಮೋಠಾಭಾಯಿ—ಈ ಹೆಸರಿನಿಂದಲೇ ಆತನು ಬಾಲಚಂದ್ರ ನಿವಾಸದ ವಠಾರಕ್ಕೆಲ್ಲ ಪರಿಚಯ. ಹೆಸರಿಗೆ ತಕ್ಕಂತೆ ದಪ್ಪನಾದ ದೃಢವಾದ ಪ್ರಕೃತಿ. ಕೊಂಚ ಗಡಿಬಿಡಿಯ ಸ್ವಭಾವ. ಎಲ್ಲರಲ್ಲಿಯೂ ಸಲಿಗೆಯಿಂದ ನಡೆದುಕೊಳ್ಳುವ ವ್ಯಕ್ತಿ. ಜಾತಿಯಿಂದ ಮಹಾಬ್ರಾಹ್ಮಣ. ಮೇಲಾಗಿ ವೈದಿಕಶಿಖಾಮಣಿ, ಭಾಗವತೋತ್ತಮ, ಭಕ್ತಾಗ್ರಣಿ. ಉದ್ಯೋಗವೆಂದರೆ ಗ್ರೀವ್ಸ್ ಕಾಟನ್ ಕಂಪನಿಯಲ್ಲಿ ಖಜಾಂಚಿಯದು. ಇವನ ಹುಟ್ಟು, ಹುಟ್ಟಿಗಳಿಗನುಸಾರವಾಗಿ ಈತನಲ್ಲಿ ವೈದಿಕ ಲೌಕಿಕಗಳು ಗಂಗೆ-ಯಮುನೆಯರ ಸಮ್ಮಿಳನದಂತೆ ಬೆರೆದು ಕಾಣುತ್ತಿದ್ದವು. ತಲೆಯ ಮುಂದೆ ಲೌಕಿಕದ ಕ್ರಾಪು ಕಂಡರೆ, ಅದರ ಹಿಂದೆಯೇ ವೈದಿಕದ ಕೇಶ. ಹೀಗೆಯೇ ಮೇಲೆ ಓಪನ್ ಕಾಲರಿನ ಕೋಟು ಮತ್ತು ಕೆಳಗೆ 'ಷೂ' ಇವುಗಳ ಮಧ್ಯೆ ನಾಲ್ಕು ಬಿಟ್ಟಿಸಂಚಿನ ಕಚ್ಚೆಪಂಚೆ. ಹೊರಗಿನ ಕೋಣೆಯಲ್ಲಿ ಮುಖಕ್ಷೌರ, ಒಳಗಿನವರಲ್ಲಿ ಮುಗುಟ. ಮಂಗಳಾರತಿಯ ಹೊಗೆಯು ಮುಗಿಯುವಲ್ಲಿ ಬೀಡಿಯದು ಮೊದಲಾಗುತ್ತಿದ್ದಿತು. ಹೊರಗಿನ ವೇಷವು ಹೇಗೋ ಒಳಗಿನ ಮನುಷ್ಯನೂ ಹಾಗೆಯೇ. ಇಹದ ಸುಖಸಾಧನೆಗೆ ಎಷ್ಟೋ ಅಷ್ಟೇ, ಪರದ ಮುಕ್ತಿ ಸಾಧನೆಗೂ ಕಷ್ಟಪಡುತ್ತಿದ್ದನು.

ಹೀಗಿದ್ದು ಬೆಳಿಗ್ಗೆ ಹತ್ತು ಘಂಟೆಯ ಲೌಕಿಕವನುಕೂಲಕ್ಕಾಗಿ ಈತನ ನಿತ್ಯವೈದಿಕವು ಸೂರ್ಯೋದಯಕ್ಕೆ ಬಹು ಮುಂಚೆಯೇ ಮೊದಲಾಗುತ್ತಿದ್ದಿತು. ಕತ್ತಲೆಯಲ್ಲೇ ಎದ್ದವನೆ ಎರಡು ಮೂರು ಬಾಗಿಲುಗಳ ಅಗಣಿಗಳನ್ನು ರಭಸದಿಂದೆಳೆದು, ಕದಗಳನ್ನು ತೆಗೆದು ಮತ್ತೆ ಝಾಡಾಯಿಸಿಕೊಂಡು ಲಾಂದ್ರವನ್ನು ಅಲ್ಲಲ್ಲಿ ಎಳೆದು ಹತ್ತಿಸಿಕೊಂಡು, ಯಜ್ಞೋಪವೀತವನ್ನು ಕಿವಿಗೆ ಸುತ್ತಿಕೊಂಡು ದೂರದ ಕಕ್ಕಸ್ಸಿಗೆ ಹೋಗಿಬಂದು, ಜಗಲಿಯ ಮೇಲೆ ಕುಳಿತು ಹಲ್ಲಿನ ಶುದ್ಧಿಗಾಗಿ ಕಡ್ಡಿಯನ್ನಗಿಯಲು ಮೊದಲು ಮಾಡುತ್ತಿದ್ದನು. ಮಧ್ಯಮಧ್ಯೆ ದೀರ್ಘವಾಗಿ ಕ್ಯಾಕರಿಸುವುದು, ಉಗುಳುವುದು ಇವು ಈ ಕಾರ್ಯಕ್ರಮದ ಅಂಗಗಳು. ಇವು ಅಲ್ಲದೆ ಸ್ವಾಭಾವಿಕವಾಗಿಯೋ, ಹೊತ್ತಿನ ಪರಿಣಾಮವಾಗಿಯೋ, ಹವದ ಗುಣವಾಗಿಯೋ ಕೆಮ್ಮು ಸೀನುಗಳೂ ಬೇರೆ ಈತನನ್ನು ಆವರಿಸಿಕೊಂಡಿದ್ದು, ಇವೂ ಮಧ್ಯೆ ಮಧ್ಯೆ ತಲೆಹಾಕುತ್ತಲೇ ಇರುತ್ತಿದ್ದವು. ಅಂತೂ ಈತನು ತನ್ನ ದಂತಕ್ರಿಯೆಯನ್ನು ಮುಗಿಸುವ ಹೊತ್ತಿಗೆ, ಆತನ ಧರ್ಮಪತ್ನಿ ಸುಶೀಲಾಬಾಯಿಯು ಆಗಲೇ ಎದ್ದು, ಅಷ್ಟು ಬೇಗ ಎದ್ದುದರ ರೋಷದಿಂದಲೋ ಎನ್ನುವಂತೆ ಬಕೀಟುಗಳನ್ನು ಅಲ್ಲಿ ಇಲ್ಲ

ಕುಕ್ಕಿ, ಜರುಗಿಸಿ, ಒಣಿದ 'ಬಂಬ'ದ* ಬಾಯನ್ನು ಕಿತ್ತು, ನೀರನ್ನು ತುಂಬಿ ಮುಚ್ಚಿ ಬೆಂಕಿಯೊಟ್ಟಿ ನೀರನ್ನು ಕಾಯಿಸಿ, ತಾನು ಮಡಿಯುಟ್ಟಿರುತ್ತಿದ್ದಳು. ಹೀಗೆಂದ ಮೇಲೆ, ಪಾಪ, ಬಾಗಿಲು ಅಗಣಿಗಳ ಮೇಲೆ ತನ್ನ ಪತಿಯ ಕಿಂತ ಈ ಮಹಾಸತಿಯು ಕೈ ಒಂದು ಮುಟ್ಟಿ ಹೆಚ್ಚಿನವೆಂದು ಯಾರಾದರೂ ಊಹಿಸಬಹುದು.

ಮುಖತೊಳೆದು ಮೋರಾಭಾಯಿಯು ಸ್ನಾನದ ಮನೆಯನ್ನು ಸೇರಿ, ಘಂಟೆ ಕಂಠದಿಂದ ಮಂತ್ರೋಚ್ಚಾರ ಮಾಡುತ್ತ ಮಡಿಯನ್ನು ಮುಗಿಸಿಕೊಂಡು, ಪೂಜಾಗೃಹ-ಇದೂ ಅಡಿಗೆಯ ಮನೆ ಎರಡೂ ಒಂದೇ-ವನ್ನು ಸೇರುತ್ತಿದ್ದನು. ಇಷ್ಟು ಹೊತ್ತಿಗೆ ಈ ದಂಪತಿಯ ಮೊದಲ ಹೆಣ್ಣು, ಹನ್ನೆರಡು ವರ್ಷದ 'ಹಂಸ' ತನ್ನ ತಂದೆ-ತಾಯಿಯರ ಹೆಜ್ಜೆಯಲ್ಲಿ ನಡೆದು ನಿತ್ಯಕರ್ಮವನ್ನು ಬೇಗನೇ ಮುಗಿಸಿ, ವಠಾರದ ಯಜಮಾನಿ-'ಆ ರಾಕ್ಷಸಿ'-ಏಳುವುದಕ್ಕೆ ಮುಂಚೆಯೇ ಅಷ್ಟು ಹೂವನ್ನು ಕುಯ್ದು ತರುತ್ತಿದ್ದಳು. ಒಂದೊಂದು ವೇಳೆ ಆಯಾಸದಿಂದಲೊ, ಬೇಸರದಿಂದಲೊ, ನಿದ್ದೆ ಹರಿಯದೆಯೋ ಹುಡುಗಿಯು ಏಳದಿದ್ದರೆ ಮೋರಾಭಾಯಿಯು "ಏ ಹಂಸೀ, ಏಳು ಬೇಗ. ಬೆಳಕು ಹರಿದರೆ ದೇವರಿಗೆ ಹೂವೆಲ್ಲಿ? ಹುಂ. ಬೇಗ" ಎಂದು ಕೂಗುತ್ತಿದ್ದನು. ಸಕಲ ಪೂಜಾಸಾಮಗ್ರಿಯೂ ಜೊತೆಯಾಗುವಷ್ಟರಲ್ಲಿ ಆತನು ತನ್ನ ಪ್ರಾತರ್ವಿಧಿಯನ್ನು ಮುಗಿಸಿಕೊಂಡು, ತನ್ನ ದೊಡ್ಡ ಗಂಟೆಯಿಂದ ದೇವರನ್ನೆಚ್ಚರಿಸಿ, ಸ್ವರ್ಗಲೋಕದಿಂದ ಮಂತ್ರಪೂರ್ವಕವಾಗಿ ಆಹ್ವಾನಿಸಿ, ಪೂಜೆಗೆ ಮೊದಲು ಮಾಡುತ್ತಿದ್ದನು. ದೇವರಿಗೆ ಪುರುಷಸೂಕ್ತ ಸಹಿತ ಕ್ಷೀರಾಭಿಷೇಕ-ಒಂದೊಂದು ದಿನ ಹಾಲಿನವನು ಹೊತ್ತಾದರೆ ಈತನ ಕೊರಗೂ, ಹಾಲಿನವನಿಗೆ ಶಾಪವೂ ಹೇಳಿಮುಗಿಸುವಂತಿಲ್ಲ-ಮೊದಲಾಗಿ ಪಂಚಾಷೇಕ. ಅನಂತರ ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದಾ ಸಿಂಧೂ ಕಾವೇರಿಯರ ಪವಿತ್ರ ತೀರ್ಥಾಭಿಷೇಕ. ಇವಕ್ಕಾಗಿ ನಲ್ಲಿಯ ನೀರನ್ನೊಲ್ಲದೆ ಹಿತ್ತಲಿನ ಭಾವಿಯ ನೀರನ್ನೇ ಸೇದಿತಂದು ಉಪಯೋಗಿಸುತ್ತಿದ್ದನು. ಇದಾದ ನಂತರ ಶೋಭಾಯುತ ರತ್ನಖಚಿತ ಮಂಟಪೋಖ್ಯಾನವನ್ನು ಹೇಳಿ ವಿಗ್ರಹವನ್ನು ಕಾಲುಮಣೆಯ ಮೇಲೆ ಕೂಡಿಸಿ, ಪಾರಿಜಾತ, ಸೇವಂತಿಕಾ,

* 'ಬಂಬ' ಎಂದರೆ ಹಂಡೆ.

ಜಾಜಿ, ಮಲ್ಲಿಕಾ ಮೊದಲಾದ ನೂರಾರು ಸುಗಂಧಪೂರಿತವಾದ ಹೂವು ಗಳನ್ನು ಕಣಿಗಲೆ ಹೂ ಮತ್ತು ಮಂತ್ರಾಕ್ಷತೆಗಳ ಮೇಲೆ ಪ್ರೇರೇಪಿಸಿ ಶತಾ ಷ್ಟೋತ್ತರವನ್ನು ಪೂರೈಸುತ್ತಿದ್ದನು. ಅನಂತರ ಮನೋಹರವಾದ ದಶಾಂಗ ಗುಗ್ಗುಳ ಧೂಪವೆಂದ ಊದಬತ್ತಿ. ಅದರ ಮೇಲೆ ಲೋಕವನ್ನೇ ಬೆಳಗುವ ಎಣ್ಣೆಯ ಬತ್ತಿಯಿಂದ ದೀಪಾರತಿ. ಮುಂದೆ ಕದಳಿ, ಜಂಬೂ, ಬಹುಬೀಜ ಮೊದಲಾದ ಫಲನೈವೇದ್ಯ - ಮಂತ್ರಾಕ್ಷತೆಯ ಮೂಲಕ ಸಾಗುತ್ತಿದ್ದಿತು. ಮಹಾನೈವೇದ್ಯಕ್ಕೆ ಆಗತಾನೆ ಒಲೆಯಿಂದಿಳಿಸಿದ ಅನ್ನದ ತಪ್ಪೇಲೆಯನ್ನೇ ತಂದು ಇರಿಸುತ್ತಿದ್ದಳು – ಆ ಸತೀಮಣಿ ಸುಶೀಲಾಬಾಯಿ. ಒಂದೊಂದು ದಿನ ಇದಕ್ಕೆ ಆತಂಕ ಬರುತ್ತಿದ್ದಿತು. ಆಗ ಬರಿಯ ತೆಂಗಿನಕಾಯಿನಿಂದಲೇ ಕೆಲಸ ಮುಗಿದರೂ ಮೋತಾಭಾಯಿ "ಛೇ! ಈದಿನ ದೇವರಿಗೆ ಮಹಾ ನೈವೇದ್ಯ–ಇಲ್ಲದ ಹಾಗೇ ಆಯಿತಲ್ಲ" ಎಂದು ದಿನವೆಲ್ಲ ಹಿಂಸೆಪಟ್ಟು ಕೊಳ್ಳುತ್ತಿದ್ದನು. ಹೀಗೆ ಸಕಲ ಪರಮಾನ್ನ, ಭಕ್ಷ್ಯಭೋಜ್ಯಗಳ ನೈವೇದ್ಯ ವಾದ ಮೇಲೆ ಎರಡು ವೀಳೆಯದೆಲೆಯ ತೊಟ್ಟು ಮುರಿದು ಕರ್ಪೂರಚೂರ್ಣ ಸಂಯುಕ್ತ ತಾಂಬೂಲ. ಅನಂತರ ಮಹಾಮಂಗಳಾರತಿ. ಈ ಹೊತ್ತಿನ ಲ್ಲಂತೂ ಆತನ ಕಂಠವು ಮುಗಿಲನ್ನು ಮುಟ್ಟುತ್ತಿದ್ದಿತು. ಇದರ ಜೊತೆಗೆ ಗಂಟೆ. ಮೇಲಾಗಿ ಈ ಗಳಿಗೆಗಾಗಿಯೇ ಎಬ್ಬಿಸಲ್ಪಟ್ಟಿದ್ದ ಸಣ್ಣ ದಿನ್ನನ-ಇವನು ಮೋತಾಭಾಯಿಯ ಐದು ವರ್ಷದ ಮಗ ದಿನೇಶ-ಜಾಗಟೆ. ಈ ಮಂಗಳಾರ ತಿಯು ಮುಗಿದೊಡನೆ ಪೂಜೆಯು ಮುಗಿದಂತೆಯೇ. ಕೇವಲ ನ್ಯೂನಾತಿರಿಕ್ತ ದೋಷ ಪ್ರಾಯಶ್ಚಿತ್ತಾರ್ಥಕ್ಕೆ ಗೋವಿಂದ, ಅಚ್ಯುತ, ಅನಂತನ ನಾಮ ತ್ರಯ ಜಪಮಾಡಿ 'ಶ್ರೀಕೃಷ್ಣಾರ್ಪಣಮಸ್ತು' ಅಂದು ಹಣೆಗೆ ಗಂಧಾಕ್ಷತೆ ಗಳನ್ನಿಟ್ಟುಕೊಂಡು, ಸಿದ್ಧವಾಗಿದ್ದ ಊಟದ ತಟ್ಟೆಯ ಮುಂದೆ ಕುಳಿತು ಕೊಳ್ಳುತ್ತಿದ್ದನು. ಊಟವು ಮುಗಿದು, ಮುಗುಟವು ಆಫೀಸಿನ ಉಡುಪಿಗೆ ಸ್ಥಳಗೊಡುವಲ್ಲಿ ಒಂಭತ್ತು ಗಂಟೆಯ ರೈಲಿಗೆ ಸರಿಯಾದ ಹೊತ್ತಾಗಿ ಆತನು ಧಾವಿಸುತ್ತ ಸ್ಟೇಷನ್ನಿಗೆ ಹೋಗುತ್ತಿದ್ದನು.

ಈ ಸಮಯದಲ್ಲಿ ನೆರೆಯ ಒಕ್ಕಲಿನ ರಾಯರು ಎದ್ದು ನಿತ್ಯಕರ್ಮವನ್ನು ಮುಗಿಸಿ, ಕಾಫಿಯನ್ನು ಕುಡಿದು ಪತ್ರಿಕೆಯನ್ನು ನೋಡುತ್ತಿರುತ್ತಿದ್ದರು. ಹೇಗೆಂದರೆ ರಾಯರು ಏಳು ಎಂಟು ಗಂಟೆಗಳ ವರೆಗೂ ಸುಖವಾಗಿ ನಿದ್ರಿ ಸುತ್ತಿದ್ದರೆಂದು ಯಾರೂ ಭಾವಿಸಬಾರದು. ರಾಯರ ಮನೆಗೂ ಮೋತಾ

ಛಾಯಿಯದಕ್ಕೂ ಮಧ್ಯೆ ಇದ್ದುದು ಕೇವಲ ಒಂದು ಗೋಡೆ. ಅದರಲ್ಲಿಯೂ ಎರಡು ಬಾಗಿಲುಗಳು. ಹೊರಗಿನ ಎರಡು ಕಡೆಯ ವರಾಂಡಗಳೂ ಇಬ್ಬರಿಗೂ ಸೇರಿದುವು. ಇದರಿಂದ ನೆರೆಯವರು ಯಾರನ್ನಾದರೂ ಮೋತಾಛಾಯಿಯ ಮುಂಜಾನೆಯ ಸಡಗರವು ನಿದ್ದೆಯಿಂದ ಎಚ್ಚರಿಸುತ್ತಿದ್ದಿತೆಂದು ಊಹಿಸುವುದು ಸುಲಭ. ಅದರಲ್ಲಿಯೂ ಕೊಂಚ ಸೂಕ್ಷ್ಮಸ್ವಭಾವದ ರಾಯರಿಗೆ ಮೊದಲನೆಯ ಕೆಮ್ಮಿನಿಂದಲೇ ಅಥವಾ ಅಗಣಿಯ ಶಬ್ದದಿಂದಲೇ ಎಚ್ಚರವಾಗುತ್ತಿದ್ದಿತು. ಆದರೆ ತಮ್ಮ ಉದ್ಯೋಗದ ರೀತಿಯಿಂದ ಹೊತ್ತಾಗಿ ಮನೆಗೆ ಸೇರಿ, ರಾತ್ರಿ ಹೊತ್ತಾಗಿ ಮಲಗುತ್ತಿದ್ದ ರಾಯರಿಗೆ ಎಚ್ಚರವಾದರೂ ನಿದ್ದೆ ಸಾಲದೆ ಇನ್ನೂ ಅಷ್ಟು ಬೇಕೆಂದೆನಿಸುತ್ತಿತ್ತು. ಅದಕ್ಕಾಗಿ ಮೋತಾಛಾಯಿಯ ಸಂಭ್ರಮದ ದೊಡ್ಡ ದೊಡ್ಡ ಶಬ್ದಗಳ ಮಧ್ಯೆ ಮಧ್ಯೆ ಕೊಂಚ ಕೊಂಚ ತೂಕಡಿಸಲು ಅವರು ವೀರಪ್ರಯತ್ನವನ್ನು ಮಾಡುತ್ತಿದ್ದರು. ಆದರೆ ಮುಕ್ಕಾಲು ಮೂರು ಪಾಲು ದಿನ ಇದು ವಿಫಲವಾಗುತ್ತಿದ್ದಿತು. ಆದರೆ ನಿರಾಶೆಯಲ್ಲಿಯೂ ಆಸೆಗಾಣುವುದೂ ಮನುಷ್ಯನ ದುರ್ಬಲತೆಯಾಗಿ, ರಾಯರು ಹಾಸಿಗೆಯನ್ನು ಒಮ್ಮೆಲೇ ಬಿಟ್ಟುಬಿಡದೆ ಅಲ್ಲಿ ಅತ್ತಿತ್ತ ಹೊರಳುತ್ತ, ಆಗಾಗ ಗೊಣಗುತ್ತ ಬೆಳಕಾಗುವ ವರೆಗೆ ಮಲಗಿರುತ್ತಿದ್ದರು. ಇದೂ ಅಲ್ಲದೆ ಮುಂಚೆ ಎದ್ದಾದರೂ ರಾಯರು ಮಾಡುವುದೇನನ್ನು? ಅವರೂ ಹುಟ್ಟಿನಿಂದ ಬ್ರಾಹ್ಮಣರೇನೋ ನಿಜ. ಆದರೆ ನಡೆವಳಿಕೆಯಿಂದ ಕಾಸ್ಮಾಪಾಲಿಟನ್. ಪೂಜೆ ಪುನಸ್ಕಾರಗಳಲ್ಲಿ ನಂಬಿಕೆಯಿಲ್ಲ. ತಮ್ಮ ಯೋಚನೆ ಮತ್ತು ಕಾರ್ಯಗಳಲ್ಲಿ ತಮಗೆ ತೋರಿದಂತೆ ಶುದ್ಧ ನೀತಿಯನ್ನನುಸರಿಸುವ ಧರ್ಮವೊಂದೇ ಸಾಕೆಂದುಕೊಳ್ಳುತ್ತಿದ್ದರು. ಇಹದಲ್ಲಿ ಬಂದುದನ್ನೆಲ್ಲ ಒಂದೇ ರೀತಿಯಿಂದ ಅನುಭವಿಸುತ್ತಿದ್ದರು. ಪರದ ಸದ್ಗತಿಯ ವಿಷಯವನ್ನು ಅವರು ಮನಸ್ಸಿಗೇ ಹಾಕಿಕೊಂಡಿರಲಿಲ್ಲ. ಸಮಾಜದಲ್ಲಿ ಶ್ರೇಷ್ಠಜೀವಿಯಾಗಿರಬೇಕೆಂಬುದು ಇವರ ಸಾಧನೆ. ಸಾಧ್ಯವಾದರೆ ಸಮಾಜದ ಒಟ್ಟು ಸುಖಕ್ಕೆ ತಮ್ಮದನ್ನು ಕಾಣಿಕೆಯನ್ನು ಸಲ್ಲಿಸಬೇಕೆಂಬುದೊಂದು ಆಸೆಯೂ ಇದ್ದಿತು. ಹೀಗೆಂದರೆ ಅವರು ಇತರ ದಾರಿ ಸಂಪ್ರದಾಯಗಳನ್ನು ಅನುಸರಿಸುವವರನ್ನು ಪರಿಹಾಸ್ಯ ದೂಷಣೆಗೊಳಗು ಮಾಡುತ್ತಿದ್ದರೆಂದಲ್ಲ. ಅವರನ್ನು ತಾಳ್ಮೆಯಿಂದಲೇ ನೋಡುತ್ತಿದ್ದರು. ಯಾವ ತತ್ವವೂ ಮತವೂ ನಿಶ್ಚಿತ ನಿತ್ಯವಾದುದಲ್ಲವೆಂಬ ಅವರ ನಂಬಿಕೆಯೇ ಇದಕ್ಕೆ ಕಾರಣ.

ಇವರು ಪೂಜೆವ್ರತಗಳನ್ನು ಮಾಡುವುದು ಹಾಗಿರಲಿ; ಹಬ್ಬ-ಹರಿದಿನಗಳೂ ಕೂಡ ಇವರ ಪಂಚಾಂಗದಲ್ಲಿರಲಿಲ್ಲ. ರಾಯರಿಗೆ ರಜವಿದ್ದು ಅವರ ಹೆಂಡತಿಗೆ ಮನಸ್ಸು ಬಂದ ದಿನವೇ ಸಣ್ಣ ಹಬ್ಬದ ಕಟ್ಟಲೆ ನಡೆದುಹೋಗುತ್ತಿದ್ದಿತು. ವರ್ಷಾವಧಿ ಹಬ್ಬಗಳಲ್ಲಿ ಎಲ್ಲರೂ ಹಿಟ್ಟುಬಟ್ಟುಗಳನ್ನು ಕುಟ್ಟಿ, ತಳಿರು ತೋರಣಗಳನ್ನು ಕಟ್ಟಿ, ಸಂಭ್ರಮಿಸಿ ಶ್ರಮಿಸುವಾಗ ಇವರು ಹಾಯಾಗಿ ಇರುತ್ತಿದ್ದರು. ಎರಡು ವರ್ಷಗಳಲ್ಲಿ ಒಂದು ಹಬ್ಬದ ದಿನದ 'ಗಡಬಡ'ವೂ ಜರುಗದಿದ್ದ ಸಂಸಾರವಿದನ್ನು ಕಂಡು ಮೋತಾಭಾಯಿಯು ಒಂದು ದಿನ ರಾಯರನ್ನು ಕುರಿತು ಆಶ್ಚರ್ಯದಿಂದ "ಏನು ನೀವು ಯಾವ ಹೆಚ್ಚು ಹವ್ಯಾಸಕ್ಕೂ ಹೋಗುವುದೇ ಇಲ್ಲ. ನಿಮ್ಮ ಮನೆಯ ನಿಶ್ಶಬ್ದತೆಯಂತೆ ನಿಮ್ಮ ಜೀವನವೂ ಸಪ್ಪೆಯಾಗಿರಬೇಕು ಅಲ್ಲವೆ?" ಎಂದು ಕೇಳಿದನು. ಅದಕ್ಕೆ ರಾಯರು "ಹೆಚ್ಚಿನ ಹವ್ಯಾಸಕ್ಕೆ ಉತ್ಸಾಹವಾಗಲಿ, ಶಬ್ದಕ್ಕೆ ಶಕ್ತಿಯಾಗಲಿ ನನ್ನಲ್ಲಿಲ್ಲ. ಅವುಗಳನ್ನೆಲ್ಲ ನಿಮಗೆ ಬಿಟ್ಟಿದ್ದೇನೆ." ಎಂದರು. ಇಬ್ಬರೂ ನಕ್ಕರು ಮೋತಾಭಾಯಿಯು ಮತ್ತೆ " ಈಗ ಏನೋ ನೀವು ಹೀಗಿರಬಹುದು. ಆದರೆ ದೇವರು ಪೂಜೆ ಪ್ರಾರ್ಥನೆಗಳ ಕಾಲವೂ ಬರುತ್ತದೆ." ಅಂದನು. ರಾಯರು "ನಾನು ಆಗಾಗ ಪ್ರಾರ್ಥನೆಯನ್ನೇನೋ ಮಾಡುತ್ತೇನೆ-ಅಂಥ ಕಾಲವು ಬಾರದಿರಲಿ" ಎಂದು ಹೇಳಿಬಿಟ್ಟರು. ಮತ್ತೆ ಇಬ್ಬರೂ ನಕ್ಕರು. ಈ ಗಂಡಸರಂತೆಯೇ ಹೆಂಗಹೆಂಗಸರಿಗೂ ಮಾತುಕತೆಗಳಾಗುತ್ತಿದ್ದವು. ಸುಶೀಲಾಬಾಯಿಯು ಅನೇಕ ವೇಳೆ " ನೋಡಿ ಗಂಡು ಮಕ್ಕಳು ಇರುವ ಮನೆಯಲ್ಲಿ ಹೀಗೆ ಆಚಾರಗಳನ್ನು ಅನುಸರಿಸದಿರುವದು ಎಂದಿಗೂ ಶ್ರೇಯಸ್ಸಲ್ಲ. ನಿಮಗೆ ಏನಾದರೂ ಅಡಿಗೆ ಭಕ್ಷ್ಯ ಮಾಡಲು ತಿಳಿ ದಿರದಿದ್ದರೆ ನಾನು ಹೇಳಿಕೊಡುತ್ತೇನೆ." ಎಂದು ಹೇಳಿದಳು. ಆದರೆ ಇದು ರಾಯರ ಹೆಂಡತಿಯ ಮೊಂಡುತನದ ಮೇಲೆ ಪರಿಣಾಮಕಾರಿಯಾಗಲಿಲ್ಲ. ಸುಮ್ಮನೆ "ಆಗಲಿ ನೋಡೋಣ" ಎನ್ನುವುದನ್ನು ಕೇಳುವುದರಲ್ಲಿ ನೆರೆಗರತಿಯ ಉತ್ಸಾಹವು ಕೊನೆಗಾಣಬೇಕಾಗುತ್ತಿದ್ದಿತು. ನಡೆವಳಿಕೆ ನಂಬಿಕೆಗಳು ವಿರುದ್ಧವಾದವರೂ ಈ ನೆರೆಯ ಎರಡು ಸಂಸಾರಗಳ ಅನ್ಯೋನ್ಯತೆಗೇನೂ ಅವು ಕುಂದನ್ನುಂಟು ಮಾಡಿರಲಿಲ್ಲ. ಆದರೆ ಮೋತಾಭಾಯಿಯ ನಿತ್ಯದ ಮುಂಜಾನೆಯ ಪೂಜೆಯ ಗಡಿಬಿಡಿಯು ಮಾತ್ರ ರಾಯರಿಗೆ ತಲೆಯ ನೋವನ್ನು ತಂದಿದ್ದಿತು.

# ಭಕ್ತನ ಕನಸು.



ರಾಯರು ಒಳ್ಳೆ ಮೃದುಸ್ವಭಾವದವರಾದುದರಿಂದ ಮೊದಮೊದಲು ಮನಸ್ಸಿಗೆ ಹಚ್ಚಿಕೊಳ್ಳದಿರಲು ಯತ್ನಿಸಿದರು. ಅದು ಸ್ವಲ್ಪ ಸಾಧ್ಯವಾಯಿತು. ಉದ್ಯೋಗದ ರೀತಿಯಿಂದ ರಾತ್ರಿ ಹೊತ್ತಾಗಿ ಮಲಗಬೇಕಾಗಿ ಬರುವುದೇನೊ ಸರಿಯೆ. ಆದರೆ ತಕ್ಕಷ್ಟು ವಿಶ್ರಾಂತಿ ದೊರೆಯಲಾಗದೆ ಅನಾವಶ್ಯಕವಾಗಿ ನಿತ್ಯವೂ ಮುಂಜಾನೆ ನಿದ್ರಾಭಂಗವಾಗುವ ಪ್ರಸಂಗವು ಒದಗುವುದು ಅವರಿಗೆ ಕಿರಿಕಿರಿಯನ್ನುಂಟುಮಾಡಿತು. ನೆರೆಯವರು ಹೇಗಾದರೂ ಕೊಂಚ ಇವರ ಕಷ್ಟವನ್ನು ಯೋಚಿಸಿಕೊಂಡು ಹೆಚ್ಚು ಅರ್ಭಟ ಮಾಡದೆ ತಮ್ಮ ಕೆಲಸವನ್ನು ಜರುಗಿಸಿಕೊಂಡು ಹೋದರೆ ಸ್ವಲ್ಪ ಜೊಂಪನ್ನಾದರೂ ಅನುಭವಿಸಬಹುದೆಂಬ ಯೋಚನೆಯಿಂದ ಕೆಲವು ದಿನ ತಮ್ಮ ನಿದ್ರಾಭಂಗತೆಯನ್ನು ಸ್ಪಷ್ಟವಾಗಿ ನಟಿಸಿ, ನೋವಿನ ಸ್ವರಗಳನ್ನುಚ್ಚರಿಸಿ ನೋಡಿದರು. ಇದೂ ಫಲಕಾರಿಯಾಗಲಿಲ್ಲ. ಅಲ್ಲದೆ ತಮ್ಮ ನಿರೀಕ್ಷಣೆಗೆ ಪ್ರತಿಯಾಗಿ, ರಾಯರು ಎದ್ದಿರುವರೆಂದೇ ಪಕ್ಕದವರು ತಿಳಿದುಕೊಂಡು ಮತ್ತಷ್ಟು ಗಲಭೆಯನ್ನು ಮಾಡಲುಪಕ್ರಮಿಸಿದರೆಂದು ರಾಯರಿಗೆ ತೋರಿತು. ಇನ್ನೊಂದು ಸಲ ತಮ್ಮ ತೊಂದರೆಯನ್ನು ಸೋಮಾಭಾಯಿಗೆ ಹೇಳಿ ಅವನಿಂದ ಪರಿಹಾರ ಪಡೆಯಬೇಕೆಂದೆನ್ನಿಸಿತು. ಆದರೆ ರಾಯರ ದಾಕ್ಷಿಣ್ಯ ಪ್ರವೃತ್ತಿಯು ಅಡ್ಡಬಂದು ಈ ಯತ್ನಕ್ಕೂ ಕಲ್ಲನ್ನು ಹಾಕಿತು. ಇದಕ್ಕೆ ಬದಲಾಗಿ ಮನೆಯನ್ನೇ ಬಿಟ್ಟು ಬಿಡುವುದೆಂದು ನಿರ್ಧರಿಸಿದರಾದರೂ ಸಾಂತಾಕ್ರೂಜ, ಪಾರ್ಲೆ ಅಂಧೇರಿಗಳಲ್ಲೇ ಅಲ್ಲದೆ ದಹಿಸಾರಿನ ವರೆಗೂ* ಹೋಗಿ ಅರಸಾಡಿದರು. ಮುಂಬಾಯಿನಲ್ಲಿ ಆಗ ಇದ್ದ ಮನೆಗಳ ಬಿಕ್ಕಟ್ಟಿನಲ್ಲಿ ಅಗ್ಗದ ಜಾಗವೂ ದೊರಕದೆ ಹೋಯಿತು. ಮತ್ತಷ್ಟು ಹಣವು ಕಾಲವು ಕಳೆಯಿತೇ ಹೊರತು ಪ್ರಯೋಜನವೇನೂ ಆಗಲಿಲ್ಲ.

ಹೀಗೆಯೇ ಒಂದು ವರ್ಷ ಬಾಧಿತರಾಗಿ, ಬೆಂದು ನೊಂದು, ಸಾಕಾಗಿ ಕಟ್ಟಕಡೆಗೆ ಸ್ಮರಣೆಯು ಮೂಡಿ, ಇನ್ನು ಹೆಚ್ಚಿನ ಸಮಾಧಾನವೆಂದರೆ ಹುಟ್ಟಿಗೆ ದಾರಿಯೊಂದು ಕಂಡುಬಂದಾಗ ರಾಯರು ಧೈರ್ಯಮಾಡಿ ಮೃದುತನ ದಾಕ್ಷಿಣ್ಯಗಳನ್ನು ಮೂಲೆಗೊತ್ತರಿಸಿ ಕಾಗದವೊಂದನ್ನು ಬರೆದರು. ಅದು ಹೀಗಿದ್ದಿತು:
" ಪ್ರಿಯಮಿತ್ರ ಸೋಮಾಭಾಯಿ, ಈಗ್ಗೆ ಹಲವು ತಿಂಗಳಿಂದ ಒಂದು ವಿಷಯ

---

* ಇವು ಮುಂಬಯಿಯ ' ಸಬರ್ಬ 'ಗಳು.

ವನ್ನು ತಮ್ಮಲ್ಲಿ ಅರಿಕೆಮಾಡಿಕೊಳ್ಳಲು ಇಷ್ಟಪಡುತ್ತಿದ್ದೆ. ಆದರೆ ವಿಥ್ಯಾ ದಾಕ್ಷಿಣ್ಯವು ಅದಕ್ಕೆ ಅಡ್ಡಿಮಾಡುತ್ತಿತ್ತು. ಇನ್ನು ನನ್ನ ಬೇಡಿಕೆಯು ಇದು. ನೀವು ಕಂಡ ಹಾಗೆ ನಾನು ರಾತ್ರಿ ಹೊತ್ತಾಗಿ ಮಲಗುವವನು. ಬೆಳಿಗ್ಗೆ ಆರು ಘಂಟೆಯು ವರೆಗಾದರೂ ನನಗೆ ವಿಶ್ರಾಂತಿಯು ಅಗತ್ಯವಿದೆ. ಹೀಗಾಗಿ ಇದಕ್ಕೆ ಮುಂಚೆ ತಾವು ಎದ್ದಿರುವ ಸಮಯದಲ್ಲಿ ಅದನ್ನು ಕಮ್ಮಿ ಶಬ್ದಮಾಡಿದರೆ ನನಗೆ ಮಹೋಪಕಾರ ಮಾಡಿದಂತಾಗುತ್ತದೆ. ಈ ಕೋರಿಕೆಯನ್ನು ತಾವು ಅನ್ಯಥಾ ಭಾವಿಸಬಾರದು." ಈ ನಮ್ರವಾದ ಕಾಗದವನ್ನು ಬರೆದರೂ ಇದನ್ನು ತಲುಪಿಸಬೇಕೋ ಬೇಡವೋ ಎಂಬ ಚರ್ಚೆಗೆ ಮತ್ತೆ ಮೂರು ದಿನ ಗಳು ಹಿಡಿದುವು. ನಾಲ್ಕನೆಯ ದಿನ ತಲುಪಿಸುವುದನ್ನೇ ನಿಶ್ಚಯಮಾಡಿ ಪಕ್ಕದ ಮನೆಯಲ್ಲಿ ಎಲ್ಲರೂ ಒಳಗಿರುವ ಸಮಯವನ್ನು ಕಾಯ್ದು ಅವರ ಹೊರಗೆ ನೇತುಹಾಕಿದ್ದ ಟಪ್ಪಾಲು ಪೆಟ್ಟಿಗೆಯೊಳಕ್ಕೆ ಅದನ್ನು ಹಾಕಿ, ಬೇಗ ಬೇಗನೆ ತಮ್ಮ ಮನೆಯೊಳಕ್ಕೆ ಹೊರಟು ಹೋದರು.

ಕೊಂಚ ಹೊತ್ತಾದ ಮೇಲೆ ಆಫೀಸಿಗೆಂದು ಹೊರಟಿದ್ದ ಮೋತಾ ಭಾಯಿಯು ಟಪ್ಪಾಲ ಪೆಟ್ಟಿಗೆಯ ಗಾಜಿನಲ್ಲಿ ಕಾಣುತ್ತಿದ್ದ ಕಾಗದವನ್ನು ಕಂಡು "ಓಹೋ ಇದೇನು ಆಶ್ಚರ್ಯ" ಎಂದು ಪೆಟ್ಟಿಗೆಗೆ ಕೈಹಾಕಿದನು. ಆಗ ತಾನೆ ಬಾಗಿಲನ್ನು ಹಾಕಿಕೊಳ್ಳಲು ಬಂದಿದ್ದ ಸುಶೀಲಾಬಾಯಿಯು "ಅದೇನು?" ಅಂದಳು.

"ಆಗಲೇ ಟಪಾಲು ಬಂದಿದೆ!"

"ಹಾಗೇ! ಎಲ್ಲಿ?"

ಮೋತಾಭಾಯಿಯು ಕಾಗದವನ್ನು ತೆಗೆದುಕೊಂಡು ಒಳಕ್ಕೆ ಬಂದನು. ತನ್ನಲ್ಲೇ ಓದಿಕೊಂಡನು. ಸುಶೀಲಾಬಾಯಿಯು ತನ್ನ ಕುತೂಹಲವನ್ನು ತಡೆದುಕೊಳ್ಳಲಾಗದೆ,

"ಎಲ್ಲಿಯದು?" ಎಂದಳು.

"ಪಕ್ಕದ ಮನೆಯ ರಾಯರದು."

"ಓಹೋ, ಇದೇನು ವಿಚಿತ್ರ? ಏನು ಸಮಾಚಾರ?"

"ಏನೋ ಬೆಳಿಗ್ಗೆಯ ಹೊತ್ತು ನಮ್ಮಿಂದ ಗಲಾಟೆಯಾಗಿ ಅವರಿಗೆ ತೊಂದರೆಯಾಗುತ್ತದೆಯಂತೆ."

"ಜಾಸ್ತಿಯಾಯಿತು. ನಮ್ಮ ಮನೆಯಲ್ಲಿ ನಾವು ಮಾಡುವ ಕೆಲಸಕ್ಕೆ ಇವರಷ್ಟೇನು ಅಂಕೆ?"

"ಇವರಿಗೇನೋ ದೇವರು ದಿಂಡರು ಯಾರೂ ಬೇಡದಿದ್ದರೆ, ಇನ್ನು ಯಾರಿಗೂ ಬೇಡವೆ?"

"ಕೆಟ್ಟ ನೆರೆಯ ಸಹವಾಸ!"

"ಹುಷ್!"

"ನಮ್ಮ ದೇವರಪೂಜೆಗೆ ಈ ಮನುಷ್ಯನಿಂದ ಅಡ್ಡಿಯೆ?"

"ಕಪಿ ತಾನೂ ಕೆಟ್ಟು ವನವನ್ನೂ ಕೆಡಿಸಿತು ಅಂತ ಹೇಳುವುದಿಲ್ಲವೆ? ಹಾಗಾಯಿತು ಇವರ ಕತೆಯೂ."

"ಇದಕ್ಕೆ ಯಾಕೆ ಯೋಚನೆ ಬಿಡಿ. ಆಫೀಸಿಗೆ ಹೊತ್ತಾಗುತ್ತ ಬಂತು."

ಹಾಗೆಂದೊಡನೆ ಆತನು ಕೈಗಡಿಯಾರವನ್ನು ನೋಡಿಕೊಂಡು "ಛೇ, ಇವರ ದೆಸೆಯಿಂದ ಆಫೀಸಿಗೂ ಹೊತ್ತು ಇವತ್ತು" ಎನ್ನುತ್ತ ಹಾರಿ ಹೋದನು.

ಇದು ಹೇಗಾದರೂ ಮಾರನೆಯ ದಿನ ಗಲಾಟೆಯು ಕೊಂಚ ಕಡಿಮೆಯಾದ ಹಾಗೆ ರಾಯರಿಗೆ ತೋರಿತು. ಅವರು ಹಿಗ್ಗಿ ಹೋದರು. ನೆರೆಯನ್ನು ಹೊಗಳಿದರು. ತಮ್ಮ ಹೆಂಡತಿಯನ್ನು ಸಂಬೋಧಿಸಿ,

"ನೋಡು ಪಾಪ! ನನ್ನ ಕಷ್ಟವು ಗೊತ್ತಾದೊಡನೆ ತಿದ್ದಿಕೊಂಡಂತೆ ಕಾಣಿಸುತ್ತದೆ. ಎಂತಹ ಒಳ್ಳೆಯ ಜನ!" ಎಂದು ಹೇಳಿದರು.

"ನೀವು ಏನನ್ನು ಬರೆದಿದ್ದಿರೋ. ಅವರು ಎಷ್ಟು ನೊಂದುಕೊಂಡರೋ ಏನೋ!"

"ನಾನೂ ಬಹಳ ನಮ್ರವಾಗಿಯೇ ಬರೆದಿದ್ದೆ. ಬರೆಯದೆ ಇನ್ನು ಅವರಿಗೆ ತಿಳಿಯುವ ಬಗೆ ಹೇಗೆ? ನಮ್ಮ ಕಷ್ಟ ಕೊನೆಗಾಣುವುದೆಲ್ಲಿ?"

"ಏನೋ ಮಾತಿಗೆ ಮಾತು ಬಂದಾಗ ಸೂಕ್ಷ್ಮವಾಗಿ ತಿಳಿಸಿದ್ದರಾಗುತ್ತಿತ್ತು."

"ಅದಕ್ಕೆ ಅವಕಾಶವೇ ಸಿಕ್ಕಲಿಲ್ಲ—ಇಷ್ಟು ದಿನ ಹೋಗಲಿ ಬಿಡು. ಒಂದು ವೇಳೆ ನಿಷ್ಠುರ ಕಟ್ಟಿಕೊಂಡರೂ ಅದೂ ಒಳ್ಳೆಯ ಬೆಲೆಯೆ. ನಾನು

ಎಂತಹ ಮೂರ್ಖ! ಇಷ್ಟನ್ನು ಮಾಡಲಾರದೆ ಇಷ್ಟು ದಿನ ಕಷ್ಟವನ್ನು ಸಹಿಸಿ ದೆನಲ್ಲ ?"

"ಹೋಗಲಿ ಬಿಡಿ. ನೀವು ಇನ್ನು ಹಾಯಾಗಿ ನಿದ್ದೆ ಮಾಡಬಹುದು."

"ನಿಜ."

ಇದಾದ ಎರಡು ಮೂರು ದಿನಗಳ ಪರೀಕ್ಷೆಯೂ ಉತ್ತೇಜನಕರವಾಗಿ ದ್ದುವು. ರಾಯರ ಸಂತೋಷಕ್ಕೆ ಪಾರವಿಲ್ಲವಾಯಿತು. ಆದರೆ ನಾಲ್ಕನೆಯ ದಿನ ಮತ್ತೆ ರಾಯರಿಗೆ ಅಗಣಿ ಬಾಗಿಲಿನ ಬಡಿತಗಳಿಂದ ಎಚ್ಚರವಾಯಿತು. ಅವರಿಗೆ ಆಶ್ಚರ್ಯ, ರೋಷಗಳು ಏಕಕಾಲದಲ್ಲಿ ಆದುವು. "ಛೀ ರಾಮ! ರಾಮ!" ಎಂದು ಗಟ್ಟಿಯಾಗಿ ಕೂಗಿದರು. ಆದರೆ ರಾಮನಾಮವು ಸಹ ಕಾರಿಯಾಗಲಿಲ್ಲ. ಇದೇನು ಹೀಗೆ ಬದಲಾವಣೆಯಾಯಿತೆಂದು ರಾಯರು ವಿಚಾರಪರರಾದರು. ಅಂದು ಮಧ್ಯಾಹ್ನ ವಿಷಯವು ಬಗೆಹರಿಯಿತು. ರಾಯರು ಹೊರಗೆ ಹೋಗುವ ಸಮಯದಲ್ಲಿ ಮೋಹನಾಚಾರಿಯು ಶಾಲನ್ನು ಹೊದ್ದುಕೊಂಡು ಕುರ್ಚಿಯ ಮೇಲೆ ಕುಳಿತುಕೊಂಡಿದ್ದನು. ಅವನನ್ನು ಕಂಡು ರಾಯರು, "ಏನು ಸಮಾಚಾರ? ಆಫೀಸಿಗೆ ಹೋಗಲಿಲ್ಲ ?"

"ಇಲ್ಲ. ಈ ದಿನ ಸ್ವಲ್ಪ ಆರಾಮ ತೆಗೆದುಕೊಳ್ಳುತ್ತಿದ್ದೇನೆ. ಮೂರು ದಿನಗಳಿಂದ ನನಗೆ ಜ್ವರವಿದ್ದು ಏಳುವುದಕ್ಕೇ ಆಗುತ್ತಿರಲಿಲ್ಲ. ಈ ದಿನವೇ ಕೊಂಚ ನಿತ್ಯಕರ್ಮಗಳು ಸಾಧ್ಯವಾದ್ದು. ಆಫೀಸಿಗೇನು ನಾಳೆ ಹೋದ ರಾಯಿತು."

"ಹಾಗೇ ?"

ಓಹೋ, ಮೂರು ದಿನದ ನಿಶ್ಶಬ್ದತೆಗೆ ಇದೇ ಕಾರಣವೋ? ರಾಯರು ನಿರಾಶಾಪರರಾದರು.

ಇಷ್ಟರಲ್ಲೇ ಮೋಹನಾಚಾರಿಯ ಮನೆಗೆ ದೂರದಿಂದ ಒಬ್ಬ ಅತಿ ಥಿಯು ಬಂದನು. ಆತನು ಆಜಾನುಬಾಹು. ಇಳಿಬಿದ್ದ ತಲೆಗೂದಲು, ಉದ್ದವಾದ ಗಡ್ಡ ಇವುಗಳೇ ಆತನ ವಿಶೇಷ ಚಿಹ್ನೆಗಳು. ಒಂದು ದಿನ ಸಂಜೆ ಮೋಹನಾಚಾರಿಯು ರಾಯರೊಡನೆ ಮಾತನಾಡುತ್ತ, "ಇವರು ಮಹಾಯೋಗಿಗಳು. ಭಗವದುಪಾಸಕರು. ಸಮಾಧಿ ಹೊಗಬಲ್ಲರು. ಇವ

ಕ್ಷೇತ್ರದಲ್ಲೂ ಅತ್ಯದ್ಭುತವಾದ ವಿಷಯವೆಂದರೆ ಬಬ್ಬರನ್ನು ನೋಡಿದ ಮಾತ್ರದಿಂದಲೇ ಅವರ ಭವಿಷ್ಯವನ್ನು ಲೀಲಾಜಾಲವಾಗಿ ಹೇಳಬಲ್ಲರು. ಸೌರಾಷ್ಟ್ರದ ಸುತ್ತುಮುತ್ತಿನಲ್ಲೆಲ್ಲ ಬಹಳ ಪ್ರಸಿದ್ಧಿಯಾಗಿದ್ದಾರೆ. ನಾನು ಅಲ್ಲಿಗೆ ಹೋಗಿದ್ದಾಗ ಅವರ ದರ್ಶನ ತೆಗೆದುಕೊಂಡು ಇಲ್ಲಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದೆ. ಅವರು ನನ್ನ ಬೇಡಿಕೆಯನ್ನು ಲಾಲಿಸಿ ಚಿತ್ತೈಸಿದ್ದಾರೆ" ಎಂದು ಹೇಳಿದರು. ರಾಯರು ಸುಮ್ಮನೆ "ಹಾಗೇನು! ಸಂತೋಷ" ಎಂದರು. "ನನ್ನದಲ್ಲೇ ನೀವೂ ದರ್ಶನ ತೆಗೆದುಕೊಳ್ಳಿ" ಎಂದ ಮೋಹನಭಾಯಿ.

"ಆಗಲಿ ನೋಡೋಣ" ಎಂದರು ರಾಯರು.

ಅತನು ಬಂದಾರಭ್ಯ ಮೋಹನಭಾಯಿಯ ಸ್ನೇಹಿತರು ಅವರ ಪರಿವಾರ, ಅವನಿಗೆ ತಿಳಿದವರು, ಆ ತಿಳಿದವರಿಗೆ ತಿಳಿದವರು ಇತ್ಯಾದಿ ಇತ್ಯಾದಿ ಸಾಲುಸಾಲಾಗಿ ದರ್ಶನಕ್ಕಾಗಿ ಬರಲಾರಂಭಿಸಿದರು. ದರ್ಶನವು ಮುಗಿದೊಡನೆ — ಅದೆಷ್ಟರ ಕೆಲಸ — ಭವಿಷ್ಯವು ಮೊದಲಾಗುತ್ತಿದ್ದಿತು. ಯೋಗಿಯು ಅರೆನಿಮಿಷ ಕಣ್ಣು ಮುಚ್ಚಿಕೊಂಡಿದ್ದು ಅನಂತರ ಕಣ್ಣು ತೆಗೆದು ಭವಿಷ್ಯವನ್ನು ಹೇಳುತ್ತಿದ್ದನು. ಕೇಳಿದವರೆಲ್ಲರೂ ಭಕ್ತಿ ಭಯ ವಿಸ್ಮಯಗಳಿಂದ ತುಂಬಿಹೋಗುತ್ತಿದ್ದರು. ಭವಿಷ್ಯವಾದ ಮೇಲೆ ಯೋಗಿಯು ಆಸ್ತಿಕತೆಯ ವಿಷಯವಾಗಿ ಉಪದೇಶಿಸಿ ಭಗವಂತನ ಪೂಜೆಯನ್ನು ಮಾಡಿ ಶ್ರೇಯಸ್ಸು ಪ್ರೇಯಸ್ಸುಗಳನ್ನು ಪಡೆಯುವಂತೆ ಹೇಳಿಕಳುಹಿಸುತ್ತಿದ್ದನು. ದಿನದಿನ ಬರುತ್ತ ದರ್ಶನಾಪೇಕ್ಷಿತರ ಸಂಖ್ಯೆಯು ಹೆಚ್ಚುತ್ತ ಬಂದಿತು. ಆಫೀಸು ಮೊದಲಾದುವುಗಳ ಹವ್ಯಾಸವಿರುವರಂತೂ ಸಂಜೆಯಿಂದ ರಾತ್ರಿ ಬಹಳ ಹೊತ್ತಿನ ವರೆಗೂ ಬಂದು ತಮ್ಮ ಭವಿಷ್ಯದ ಬಗ್ಗೆ ಕುತೂಹಲವನ್ನು ನೀಗಿಕೊಳ್ಳುತ್ತಿದ್ದರು. ಇವಾದನಂತರ ವಠಾರದವರು, ಆಚೆ ಈಚೆ ಮನೆಯವರು, ಹೊರಗಿನಿಂದ ಬಂದವರಲ್ಲಿ ಧರ್ಮೋಪದೇಶದಲ್ಲಿ ಆಸಕ್ತಿ ಹೊಂದಿದ್ದವರು, ಎಲ್ಲರೂ ಕುಳಿತು ಯೋಗೀಶ್ವರನ ತತ್ತ್ವೋಪದೇಶವನ್ನು ಕೇಳುತ್ತಿದ್ದರು. ಅತನಾದರೋ ಪ್ರಹ್ಲಾದ, ಅಂಬರೀಷ, ರುಕ್ಮಾಂಗದ, ಗಜೇಂದ್ರ, ಮಾರ್ಕಂಡೇಯ ಮೊದಲಾದ ಮಹಾಭಕ್ತಶಿರೋಮಣಿಗಳ ಚರಿತ್ರೆಯ ಮೂಲಕ ಭಗವದ್ಭಕ್ತಿಯ ಪೂಜೆಯ ಮಹಾಮಹಿಮೆಯನ್ನು ಬಾರಿ ಬಾರಿ

ಸಾರಿ ಸಾರಿ ಹೇಳಿ ಕೇಳುವವರನ್ನು ಪರಿಶುದ್ಧಗೊಳಿಸಿ, ಭಕ್ತಿದಾರಿ ಪೂಜಾವಿಧಿ ಗಳಿಗೆ ತಿರುಗಿಸಲು ಯತ್ನಿಸುತ್ತಿದ್ದನು. ಈ ಬಗೆಯ ಉಪನ್ಯಾಸಗಳು ಆಗಾಗ ರಾತ್ರಿ ಹನ್ನೆರಡು, ಒಂದು, ಎರಡು ಗಂಟೆಗಳವರೆಗೂ ನಡೆಯಲು ಮೊದ ಲಾಗಿ ಒಂದೆರಡು ವಾರಗಳಲ್ಲಿ ನಿತ್ಯಪದ್ಧತಿಯಾಗಿಬಿಟ್ಟಿತು. ಉಪದೇಶದ ಕಾಲದಲ್ಲಿ ಮೋತಾಭಾಯಿಯ ಮನೆಯ ಬಾಗಿಲು ತೆಗೆಯಲ್ಪಟ್ಟು ಜನರು ವರಾಂಡದಲ್ಲಿ ಕುಳಿತಿರುತ್ತಿದ್ದರು. ಇವರಿಗಾಗಿ ಯೋಗೀಶ್ವರನು ಗಟ್ಟಿಯಾಗಿ ಹೇಳಬೇಕಾಗಿದ್ದಿತು. ಅಲ್ಲದೆ ಆತನ ಧ್ವನಿಯು ಒಂದೇ ಸಮನಗಿಲ್ಲದೆ ಸೈರನ್ ಗೆರೆಯಂತೆ ಹ್ರಸ್ವದಿಂದ ದೀರ್ಘ, ದೀರ್ಘದಿಂದ ಕೂಗು, ಕೂಗಿನಿಂದ ಮತ್ತೆ ಇಳಿತ ಈ ರೀತಿಯಾಗಿರುತ್ತಿದ್ದಿತು.

ಈ ತತ್ತ್ವೋಪದೇಶದಲ್ಲಿ ಆಸಕ್ತಿ ಇಲ್ಲದ ರಾಯರಿಗೆ ಹೊಸದೊಂದು ಆತಂಕವು ಮೊದಲಾಯಿತು. ಬೆಳಗ್ಗಿನ ಗಲಾಟೆಯಿಂದ ಪರಿಹಾರ ಹೊಂದಿರು ವುದೆ ಸಾಲದೆ ರಾತ್ರಿಯ ಮೂರು ಜಾವದ ವರೆಗೂ ಜಾಗರಣೆ ಮಾಡುವ ಹೊತ್ತು ಅವರಿಗೆ ಬಂದಿತು. ಈ ಹಿಂಸೆಗೆ ಸಿಕ್ಕು ಅವರು ನಲುಗಿ ಹೋದರು. ಅವರ ಆರೋಗ್ಯವು ಸಡಿಲಾಗುವಂತೆ ತೋರಿತು. ಈ ಶಬ್ದದ ಅಡಚಣೆಗಳನ್ನು ಮನಸ್ಸಿಗೆ ತಂದುಕೊಳ್ಳದೆ ಕೊಂಚ ವಿಶ್ರಾಂತಿ ಪಡೆಯಬೇಕೆಂದು ಅವರು ಎಷ್ಟೇ ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ಪ್ರಯತ್ನವು ಹೆಚ್ಚು ಹೆಚ್ಚು ಮನೋವೇದನೆಗೆ ಕಾರಣವಾಯಿತು. ರಾಯರು ದಿಕ್ಕುಗೆಟ್ಟರು, ತಮ್ಮಲ್ಲೇ ಸಿಟ್ಟಾದರು. ಏನು ಮಾಡಬೇಕು? ಈ ಪ್ರಶ್ನೆಯ ರೂಪು ಧರ್ಮಸಂಕಟದ್ದು. ನಿಷ್ಠುರವನ್ನಾಡಿದರೆ ಫಲಿಸಬಹುದು. ಇಲ್ಲವೆ ಜಗಳವಾಗಬಹುದು. ಹೇಗೂ ಅಪವಾದವು ಮಾತ್ರ ತಪ್ಪುವದಿಲ್ಲ. ಖಂಡಿತ. ಇದಕ್ಕೆ ಏನು ಉಪಾಯ ವೆಂದು ರಾಯರು ಯೋಚಿಸತೊಡಗಿದರು.

ಇವರಂತೆ ಕ್ಲೇಶಪಟ್ಟವರು ಇನ್ನೂ ಕೆಲವರುಂಟು. ಯೋಗೀಶ್ವರನು ಬಂದಾರಭ್ಯ ಮೋತಾಭಾಯಿಯ ಮನೆಯವರಿಗೆ ತಮ್ಮ ಮನೆಯೇ ಹೊಸ ದಾಯಿತು. ಒಳಗೆಲ್ಲೆಲ್ಲೂ ಬಂದು ಹೋಗುವ ಗಂಡಸರು, ಹೆಂಗಸರು ಮಕ್ಕಳ ಓಡಾಟವೇ. ರಾತ್ರಿ ಉಪದೇಶವು ಮುಗಿದು ಆ ದಿನದ ಜನದ ಬಗ್ಗೆ ಖಾಸಗಿ ಮಾತುಗಳಾದ ಮೇಲೆ ಮಲಗುವ ಯತ್ನ, ಒಡನೆಯೇ ಎದ್ದು ಬೆಳ ಗಿನ ಪೂಜೆ ಸಂಭ್ರಮಗಳಿಗೆ ಸಿದ್ಧತೆ, ಇವುಗಳಲ್ಲಿ ಸುಶೀಲಾಬಾಯಿಯು ಕೃಶಿಸಿ

ಹೋದಳು. ಪರೀಕ್ಷೆಗೆ ಓದುತ್ತಿದ್ದ 'ಹಂಸ'ನಿಗೆ ಸ್ಥಳವಿಲ್ಲವಾಗಿ ರಾಯರ ಮನೆಯನ್ನು ಹೊಗಬೇಕಾಯಿತು. ಪಾಪ, ಸಣ್ಣ ದಿನ್ಯನನ್ನಂತೂ ಕೇಳುವ ವರೇ ಇಲ್ಲ. ಯಾವಾಗಲೋ ಉಂಡು ಯಾವುದೋ ಮೂಲೆಯಲ್ಲಿ ಕೇವಲ ಆಯಾಸದಿಂದ ಒರಗಿಕೊಂಡು ನಿದ್ರಿಸುತ್ತಿದ್ದನು. ನೋತಾಭಾಯಿಗೂ ಈ ಸೇವೆ ಈ ಜನದ ಗುಂಪು ಈ ತಳಮಳಗಳು ಕೊಂಚ ಕಷ್ಟವೇ ಆದರೂ, ಈ ಮಾನ್ಯ ಅತಿಥಿಯ, ಭಗವದ್ಭಕ್ತನ ಸೇವೆಯಲ್ಲಿ ಆಸ್ತಿಕತೆಯ ಪ್ರಸಂಗ ಕಾಲ್ದ ವಲ್ಲಿ ಅಲಸಿಗೆ ತೋರುವುದು ಮಹಾ ಪಾಪವಲ್ಲವೆ? ಅದಕ್ಕಾಗಿ ಆತನು ತಾನು ಗಳಿಸಿಕ್ಕಿದ್ದ ಒಂದು ತಿಂಗಳು ಪ್ರಿವಿಲೇಜ್ ರಜವನ್ನು ತೆಗೆದುಕೊಂಡು, ಯೋಗೀಶ್ವರನ ಹಿಂದೆಮುಂದೆ ಸುತ್ತಿಕೊಂಡು, ಅವನ ಮುಖ, ಸ್ನಾನ, ಊಟ, ಹಾಸಿಗೆ, ಬೀಸಣಿಗೆ, ಕುಡಿಯುವ ನೀರು, ಇತ್ಯಾದಿಗಳನ್ನಲ್ಲದೆ, ಬಂದ ಜನರನ್ನು ಸ್ವಾಗತಿಸುವುದು, ಆದರಿಸುವುದು ಇವುಗಳಲ್ಲಿ ತೊಡಗಿ ಮುಳುಗಿ ಹೋಗಿ ತನ್ನ ಮನೆಯು ಈ ರೀತಿ ಪಾವನವಾದುದಕ್ಕೆ ಹೆಮ್ಮೆ ಪಟ್ಟುಕೊಂಡು ತನ್ನ ಜನ್ಮದಲ್ಲಿ ಈ ಕೆಲವು ದಿನಗಳಾದರೂ ಸಾರ್ಥಕವಾದು ವೆಂದುಕೊಳ್ಳುತ್ತಿದ್ದನು.

ರಾಯರಿಗೆ ತಮ್ಮ ವಿಶ್ರಾಂತಿಯನ್ನೆಲ್ಲ ಕೇವಲ ದಾಕ್ಷಿಣ್ಯಕ್ಕಾಗಿ ಅಡವು ಹಾಕಿಕೊಂಡು ಬವಣೆಪಡುವುದು ಸರಿಯಾಗಿ ತೋರಲಿಲ್ಲ ತಮ್ಮ 'ಕರ ಣೀಕ ಮಂತ್ರಿ'ಯೊಡನೆ ಆಲೋಚನೆ ನಡೆಸಿದರು. ಆದರೆ ಮಂತ್ರಿಯು "ಕೊಂಚ ತಾಳಿ." ನೋಡೋಣ. ಇನ್ನೆಷ್ಟು ದಿನ ಇದ್ದಾರು? ಆಗಲೇ ಎರಡು ವಾರಗಳಾದುವು" ಎಂದುದಕ್ಕೆ ರಾಯರು ಮೊಂಡಾಗಿ "ಛೀ! ನೀನು ಹೇಳುವುದೂ ಸರಿಯೇ. ಅದನ್ನು ಯಾರು ಕಾದಾರು? ನಾನು ಇಂದೇ ಏನಾದರೂ ಮಾಡಬೇಕು" ಅಂದರು. ಶ್ರೀಮತಿಯವರು "ಹಿಂದೆ ಕಾಗದ ಬರೆದು ಫಲವೇನಾಯಿತು? ಸುಮ್ಮನೆ ಬರಿಯ ನಿಷ್ಠುರ" ಅಂದರು. ರಾಯ ರಿಗೆ ಇವರ ನಿಜವು ತಟ್ಟಿತು. "ಇರಲಿ ಇನ್ನೆರಡು ದಿನ ನೋಡೋಣ, ಇಷ್ಟ ರಲ್ಲೇ ಹೋದಾರು?" ಎಂದುಕೊಂಡರು. ಮೂರಲ್ಲ, ನಾಲ್ಕಲ್ಲ ಒಂದು ವಾರವೇ ಕಳೆಯಿತು. ಕಷ್ಟನಿವಾರಣೆಯು ಬೇರೆ ಆಗುವಂತೆ ಕಂಡುಬರ ಲಿಲ್ಲ. ಯೋಗೀಶ್ವರನು ಹೊರಡುವ ಮಾತೂ ಹೊರಡಲಿಲ್ಲ.

ಈಗ ರಾಯರು 'ಲೈವ್‌ವೈರ್' ನಂತಾಗಿದ್ದರು. ಸಾಮಾನ್ಯವಾಗಿ

ಶಾಂತವಾಗಿದ್ದ ಅವರ ಪ್ರಕೃತಿ ಕಂಡವರ ಮೇಲೆ ಕಿಡಿ ಕಾರುವಂತಿತ್ತು. ಇಂತಹ ಸ್ಥಿತಿಯಲ್ಲಿ ರಾಯರು ಒಂದು ರಾತ್ರಿ ಹಾಸಿಗೆಯ ಮೇಲೆ ಅವರ ಶಿಕ್ಷೆಗನುಸಾರವಾಗಿ ಹೊರಳಾಡುತ್ತಿದ್ದರು. ಹೊರಗೆ ಎಂದಿನಂತೆ ಯೋಗೀಶ್ವರನ ಪುರಾಣ ಸಮೇತ ತತ್ತ್ವೋಪದೇಶವು ಏರು-ಬೀಳು ಧ್ವನಿಯಿಂದ ಸಾಗುತ್ತಿದ್ದಿತು. ಭಕ್ತರ ಗುಂಪು ವರಾಂಡವನ್ನು ತುಂಬಿದ್ದಿತು. ರಾಯರು ತಮ್ಮ ಹೊಟ್ಟೆಯುರಿಯುವ ಶಮನಕ್ಕಾಗಿ 'ರಾಮ! ನಾರಾಯಣ!' ಎಂದು ದೈವಧ್ಯಾನವನ್ನು ಮಾಡುತ್ತಿದ್ದರು. ಇದು ಹತ್ತಿರದ ಆವರಣಕ್ಕೆ ಹೊಂದಿಕೊಂಡಿದ್ದಿತು. ಗಂಟೆ ಹನ್ನೊಂದಾಯಿತು. ಹನ್ನೆರಡೂ ಹೊಡೆಯಿತು. ರಾಯರು ಮೆಲ್ಲನೆ ಎದ್ದು ಬಾಗಿಲನ್ನು ತೆಗೆದು ತಾವು ನಿದ್ದೆಗೆಡುತ್ತಿರುವರೆಂಬುದನ್ನು ಎಲ್ಲರಿಗೂ ತೋರಿಸಿಕೊಳ್ಳುವುದಕ್ಕೆ ಅಲ್ಲಿ ಅರೆಕ್ಷಣ ನಿಂತುಕೊಂಡಿದ್ದು ಮತ್ತೆ ಒಳಕ್ಕೆ ಬಂದು ಬಾಗಿಲನ್ನು ಹಾಕಿಕೊಂಡು ಮಲಗಿದರು. ಆದರೆ ಈ ಆಟವು ಫಲಿಸಲಿಲ್ಲ. ಕಾಕುಬಾಯಿಯ ಮನೆಯ ಗಡಿಯಾರವು ಹನ್ನೆರಡೂವರೆ ಘಂಟೆಯನ್ನು ಹೊಡೆಯಿತು. ಅನಂತರ ಒಂದನ್ನೂ ರಾಯರು ಕೇಳಿದರು. ಈಗ ಅವರ ತಾಳ್ಮೆಯು ಹಾಳಾಯಿತು. ಮತ್ತೆ ಎದ್ದು ಹೊರಗೆ ಹೋಗಿ ನೋಡಿದರು. ಯೋಗೀಶ್ವರನು ಮಂಚದ ಮೇಲೆ ಕುಳಿತು ತನ್ನ ಹಾವ-ಭಾವಗಳೊಂದಿಗೆ ಉಪನ್ಯಾಸವನ್ನು ಸಾಗಿಸಿದ್ದನು. ಅವನ ಪಕ್ಕದಲ್ಲಿ ಒಂದು ಕುರ್ಚಿಯ ಮೇಲೆ ಮೋತಾಭಾಯಿಯು ಇನ್ನೂ ಇತರರಂತೆಯೇ ಆಲಿಸುತ್ತಿದ್ದನು. ರಾಯರು ಹೊರಗೆ ಬಂದವರೇ ಈತನ ಕಡೆಗೆ ದಿಟ್ಟಿಸಿ ನೋಡಿದರು. ಮೋತಾಭಾಯಿಯು ಇವರನ್ನು ಕಂಡು ಇವರ ಇಂಗಿತವನ್ನು ಅರಿತವನಂತೆಯೂ ಅದನ್ನು ಅಂಗೀಕರಿಸಿದವನಂತೆ ನಟಿಸಿದನು. ರಾಯರು ಈಗ ದಾಕ್ಷಿಣ್ಯವನ್ನು ಮೂಲೆಗೊತ್ತರಿಸಿದ್ದುದರಿಂದ ಮುಂದೆ ಹೆಜ್ಜೆಯಿಟ್ಟು,

"ಮೋತಾಭಾಯಿ, ನಿಮ್ಮಲ್ಲಿ ಒಂದು ನಿಮಿಷ ಮಾತನಾಡುವದಿದೆ." ಎಂದರು.

ಮೋತಾಭಾಯಿಯು ಅಸಮ್ಮತಿಯಿಂದ ಎದ್ದು ಬಂದನು. ಇಬ್ಬರೂ ರಾಯರ ಮನೆಯೊಳಗೆ ಒಂದು ಹೆಜ್ಜೆಯನ್ನಿಟ್ಟರು. ರಾಯರು ಹೇಳಿದರು.

"ನೋಡಿ ಬಹಳ ದಿನಗಳಿಂದ ನನಗೆ ಬಹಳ ತೊಂದರೆಯಾಗುತ್ತಿದೆ."

"ಇದನ್ನು ಹೇಳುತ್ತೀರೆಂದು ನನಗೆ ಗೊತ್ತು."

"ಸ್ವಲ್ಪ ಹೊತ್ತುಗೊತ್ತು ನೋಡಿಕೊಂಡು ನಡೆಸಿದರೆ ನಮಗೆ ಮಹೋಪಕಾರ......."

"ಅದರೆ ಇದೇ ಹೊತ್ತು ಶಾಂತವಾದುದು. ಎಲ್ಲರಿಗೂ ಕೇಳಲೂ ಅನುಕೂಲ. ಇದರಿಂದ ಅವರು ನಮಗೆಲ್ಲ ಮಾಡುತ್ತಿರುವ ಉಪಕಾರವು ಮಹತ್ತರವಾದುದು. ಇದು ದೇವರ ಕೆಲಸ. ನಮಗೆಲ್ಲರಿಗೂ ಬಹಳ ಮುಖ್ಯವಾದುದು—ಅತ್ಯಾವಶ್ಯಕವಾದುದು."

"ಕ್ಷಮಿಸಿ. ಒಬ್ಬೊಬ್ಬರಿಗೆ ಒಂದೊಂದು ಮುಖ್ಯ ಆವಶ್ಯಕ. ತಮಗೆ ಪುರಾಣಶ್ರವಣವು ಎಷ್ಟು ಮುಖ್ಯವೋ ನನಗೆ ನಿದ್ದೆಯು ಅಷ್ಟೇ ಮುಖ್ಯವಾಗಿರಬಹುದೆಂದು ತಾವು ನಿರೀಕ್ಷಿಸಲಾರಿರ?"

"ಛೀ; ಛೀ, ಹಾಗೆನ್ನಬೇಡಿ. ಅದು ದೈವನಿಂದೆಯಾದೀತು. ತಮ್ಮ ಶ್ರೇಯಸ್ಸಿಗೆ ಕುಂದಾಗುವುದು ನನಗಿಷ್ಟವಿಲ್ಲ."

"ಅದನ್ನು ನನಗೆ ಬಿಡಿ."

"ಇನ್ನು ಕೊಂಚ ದಿನ ಮಾತ್ರ. ಯೋಗೀಶ್ವರರು ಹೋಗುತ್ತಾರೆ. ಅಲ್ಲಿಯ ವರೆಗೆ ಸಹಿಸಿಕೊಂಡು ಬಿಡಿ."

"ಹಾಗಲ್ಲ."

"ಆಗಲಿ" ಮೋತಾಭಾಯಿಯು ಹೊರಟೇ ಹೋದನು. ರಾಯರು ಸಿಡಿಯುತ್ತ ಬಾಗಿಲನ್ನು ಮುಚ್ಚಿಕೊಂಡು ಬಿದ್ದುಕೊಂಡರು. ಇವರ ಸಂಭಾಷಣೆಯನ್ನು ಕೇಳಿಯೋ ಊಹಿಸಿಕೊಂಡೋ ಗುಂಪು ಬೇಗನೆ ಚದುರಿತು. ರಾಯರು ನಿಟ್ಟುಸಿರನ್ನು ಬಿಟ್ಟು ಕಣ್ಣನ್ನು ಮುಚ್ಚಿದರು. ಅವರ ಅದೃಷ್ಟವಶದಿಂದ ಮುಂದಿನ ರಾತ್ರಿಗಳು ರಾಯರಿಗೆ ಹಿಂಸಾಕಾರಕವಾಗಲಿಲ್ಲ. ಯಾರೋ ಪುಣ್ಯಾತ್ಮರು ತತ್ತ್ವೋಪದೇಶಕ್ಕಾಗಿ ಯೋಗೀಶ್ವರರನ್ನು ತಮ್ಮ ಮನೆಗೆ ಆಹ್ವಾನಿಸಿದುದರಿಂದ ಆತನು ಅಲ್ಲಿಗೆ ಹೋಗುತ್ತಿದ್ದನು. ಕೆಲವು ದಿನಗಳ ನಂತರ ಯೋಗೀಶ್ವರನು ಸೂರತ್ತಿಗೆ ಹೊರಟುಹೋದನು.

ಹಾಗೆ ಹೋಗುವ ಮುನ್ನ ಆತನು ಮೋತಾಭಾಯಿಗೆ ಉಪದೇಶ ಕೊಟ್ಟು ದುರ್ಗೋಪಾಸನೆ ಮಾಡಲು ತಿಳಿಸಿ ಹೋದನು. ಇದರ ಪರಿಣಾಮವಾಗಿ ಮೋತಾಭಾಯಿಯ ಬೆಳಗ್ಗೆ ಪೂಜೆ ಐದುಗಂಟೆಗೆ ಮೊದಲಾಗುತ್ತಿ

ದ್ದನು. ಈಗ ನಾಲ್ಕಕ್ಕೇ ಮೊದಲಾಗಲಾರಂಭಿಸಿತು. ಆತನು ಅಲಾರಾಂ ಸಹಾಯದಿಂದ ಎದ್ದು ತನ್ನ ಕೆಲಸವನ್ನು ಹಿಂದಿನಂತೆ ಸಾಗಿಸುತ್ತಿದ್ದನು. ಆದರೆ ಈಗ ಪೂಜೆಯು ಬಹಳ ದೀರ್ಘವಾಯಿತು. ಹೆಚ್ಚು ಹೆಚ್ಚು ಮಂತ್ರಗಳು ಪಠಿಸಲ್ಪಡುತ್ತಿದ್ದವು. ಹಿಂದೆ ದೇವಿಗೆ ಅಷ್ಟೋತ್ತರವಾಗುತ್ತಿದ್ದದು, ಈಗ ಸಹಸ್ರನಾಮವಾಗಲು ತೊಡಗಲಾಯಿತು. ಇದಕ್ಕೆ ತಕ್ಕಂತೆ ಹೆಚ್ಚು ಹೂ ಬೇಕಾಗಿ ಹುಡುಗಿಯು ಈ ಮನೆಯು ಕಣಿಗಲ ದಾಸವಾಳಗಳಿಗಷ್ಟೇ ಅಲ್ಲದೆ ಪಕ್ಕದ ಮನೆಯ ಗುಲಾಬಿ ಮಲ್ಲಿಗೆಗಳಿಗೂ ಕೈ ಹಾಕಬೇಕಾಯಿತು. ಮೋತಾಭಾಯಿ "ಜೋಪಾನ, ಮೆತ್ತಗೆ ಕುಯ್ದುಕೊಂಡು ಬಾ, ಗಲಭೆಯಾದೀತು" ಎಂದು ತಾಕೀತು ಮಾಡಿ "ಈ ಹೂವುಗಳ ಉಪಯೋಗವು ಅವರಿಗೇನು ಗೊತ್ತು. ಸುಮ್ಮನೆ ಹೆರಳಿಗೆ ಸಿಕ್ಕಿಸಿಕೊಳ್ಳುತ್ತಾರೆ, ಇಲ್ಲವೆ ಗಿಡದ ಮೇಲೆಯೇ ಒಣಗಿಸುತ್ತಾರೆ. ನಾವಾದರೆ ದೇವರಿಗಾದರೂ ಸಲ್ಲಿಸುತ್ತೇವೆ." ಎಂದುಕೊಂಡನು. ಉಪಾಸನೆಯು ಮೊದಲಾದಂದಿನಿಂದ ತಣ್ಣೀರು ಮಡಿಗೆ ಆರಂಭವಾಯಿತು. ಇದರ ಪರಿಣಾಮವಾಗಿಯೋ ಏನೋ ಆತನಿಗೆ ಕೆಮ್ಮು ನೆಗಡಿಗಳು ಹೆಚ್ಚಾದವು. ಇದು ರಾಯರಿಗೆ ಚೆನ್ನಾಗಿ ಗೊತ್ತಾಗಲವಕಾಶವಿತ್ತೆಂದು ಹೇಳಲೇಬೇಕಾಗಿಲ್ಲ. ಇತ್ತೀಚೆಗೆ ಮಡಿಗೋ ಏನೋ ಬಚ್ಚಲಮನೆಯಲ್ಲಿ ಮುಂಚಿನ ಬಟ್ಟೆಯೊಗೆಯುವುದೂ ಸಾಗುತ್ತಿದ್ದಿತು. 'ಇನ್ನು ಇದು ಬೇರೆ' ಅಂದುಕೊಂಡರು ರಾಯರು. ಗಂಟೆ ಜಾಗಟೆಗಳೂ ಮೋತಾಭಾಯಿಯ ಕಂಠದಂತೆ ಈಗ ಹೆಚ್ಚು ಶಬ್ದಮಾಡುವಂತೆ ಅವರಿಗೆ ಭಾಸವಾಯಿತು. ಈ ಬದಲಾವಣೆಯನ್ನು ಅನುಭವಿಸಿದ ರಾಯರು ಬಹಳ ಸಿಟ್ಟಾದರು, ಬೇಸರಿಸಿದರು. ತಮ್ಮ ದುರದೃಷ್ಟವನ್ನು ನೆನೆದು ಕೊರಗಿದರು. ಆದರೆ ಇವು ಯಾವುವೂ ಅವರಿಗೆ ಪರಿಹಾರವನ್ನು ಕೊಡಲಾರದಾದುವು. ಕೆಟ್ಟಗಿಟ್ಟ ಪತ್ರಿಯೂ ಉಪಯೋಗವಿಲ್ಲದಾಯಿತು. ಹೀಗೆ ಕೆಲವು ದಿನಗಳಾದ ಮೇಲೆ ತಮ್ಮ ಕಷ್ಟ ಪರಿಹಾರಕ್ಕೆ ಉಪಾಯಗಾಣದ ರಾಯರು ಒಂದು ದಿನ ತಮ್ಮ ಉನ್ಮತ್ತಾವಸ್ಥೆಯಲ್ಲಿ, ತಮಗೆ ವಿರೋಧವಾಗಿ, ಹಿಂಸಿಸುತ್ತಿದೆಯೆಂದು ದೈವವನ್ನೂ ನಿಂದಿಸಿದರು. ಮತ್ತೆ ಮರುಗಳಿಗೆಯಲ್ಲಿ ತಮ್ಮ ಹುಚ್ಚನ್ನು ಮನಸ್ಸಿಗೆ ತಂದುಕೊಂಡು ನೊಂದರು, ನಾಚಿದರು. ಮತ್ತೊಂದು ಗಳಿಗೆಯಲ್ಲಿ ತಮ್ಮ ಹೊಟ್ಟೆಯುರಿಯನ್ನು ತಡೆಯಲಾರದೆ ಯಾರಿಗಾದರೂ ಅದನ್ನು ಹೇಳಿಕೊಳ್ಳಬೇಕೆಂದು ತೋರಿ ಆಗಿನ ಏಕಾಂತ

ದಲ್ಲಿ ದೈವವನ್ನು ಕುರಿತು 'ಹೇ, ದೇವರೇ. ಈ ಕಷ್ಟದಲ್ಲಿ ನನಗೆ ದಿಕ್ಕೇ ತೋರದು. ನಾನು ಅಸಹಾಯನಾಗಿದ್ದೇನೆ. ನೀನೇ ಈ ಚಿತ್ರಹಿಂಸೆಯಿಂದ ಪಾರುಮಾಡಬೇಕು.'' ಎಂದುಕೊಂಡು ಸುಮ್ಮನಾದರು

ಬಹಳ ದಿನ ನಿದ್ದೆಗೆಟ್ಟ ಆಯಾಸದಿಂದಲೋ, ಮತ್ತೆ ಯಾವ ಕಾರಣದಿಂದಲೋ ಆ ಬೆಳಿಗ್ಗೆ ರಾಯರಿಗೆ ನಾಲ್ಕು ಗಂಟೆಗೆ ಎಚ್ಚರವಾಗಲಿಲ್ಲ. ಅವರು ಕಣ್ಣು ಬಿಟ್ಟಾಗ ಬೆಳಕಾಗಿದ್ದಿತು. ಇದು ಅವರಿಗೆ ಆಶ್ಚರ್ಯವನ್ನುಂಟು ಮಾಡಿತು. "ಅಹ, ಎಲ್ಲ ದಿನಗಳೂ ಹೀಗೆಯೇ ಆದರೆ........? ಆ?'' ಅಂದುಕೊಂಡು ದಿಗ್ಗನೆದ್ದು ಗಡಿಯಾರವನ್ನು ನೋಡಿದರು. ಏಳು ಗಂಟೆ! ಏಳೆ? ನಿಜವಾಗಿ? ಭಲೆ! ಅವರು ಕೆಳಧ್ವನಿಯಲ್ಲಿ ಸಿಳ್ಳು ಹಾಕುತ್ತ ಹೊರಗೆ ಹೋದರು.

ರಾಯರು ಕಾಫಿಯನ್ನು ಕುಡಿಯುತ್ತ ಕಿಟಕಿಯ ಬಳಿ ಕುಳಿತಿದ್ದರು. ಪಕ್ಕದ ಮನೆಯ ಬಾಗಿಲಿನ ಸದ್ದಾಯಿತು. ಹುಂ. ಬಾಗಿಲಿನ ಸದ್ದು. ಈ ಬೆಳಿಗ್ಗೆ ಇದು ಏತಕ್ಕೆ ಕೇಳಿಸಲಿಲ್ಲ? ಮೋತಾಭಾಯಿಯು ಮುಂಚೆ ಏಳಲಿಲ್ಲವೆ? ಆತನ ಪೂಜೆ ಏನಾಯಿತು? ಹಿಂದಿನಂತೆ ಅವನ ಆರೋಗ್ಯವು ನೆಟ್ಟಗಿಲ್ಲವೋ ಏನೋ? ಈ ಯೋಚನೆಗಳು ಮುಗಿಯುವದರೊಳಗಾಗಿ ಬಾಗಿಲು ತೆಗೆಯಲ್ಪಟ್ಟಿತು. ಮೋತಾಭಾಯಿಯು ಆಫೀಸಿನ ಪೋಷಾಕಿನಲ್ಲಿ ಹೊರಬಿದ್ದನು. ಅವನನ್ನು ನೋಡಿದಾಗ ರಾಯರಿಗೆ ಕಂಡುದುದು ಆತನ ಹಣೆಯಲ್ಲಿ ಮಾಮೂಲಿನ ದೊಡ್ಡ ಗಂಧ, ಮೇಲೆ ದೊಡ್ಡ ಕುಂಕುಮ ಇಲ್ಲದಿದ್ದುದು. ಇದರಿಂದ ಅವನು ಕ್ಷೇಮವಾಗಿಲ್ಲವೆಂದು ಊಹಿಸಿ ರಾಯರು ತಮ್ಮ ಸೌಜನ್ಯದಿಂದ, "ಏನು ಆರೋಗ್ಯ ಸರಿಯಾಗಿದೆಯೆ?" ಅಂದರು.

"ಓಹೋ ಅದಕ್ಕೇನು ಬಂದಿದೆ? ಈ ಪ್ರಶ್ನೆಯೇನು ನಾನು ಈ ದಿನ ಪೂಜೆಯನ್ನು ಮಾಡಲಿಲ್ಲವೆಂದೋ?"

"ಹುಂ........ ಅದೂ ಒಂದು ಕಾರಣ, ಅಷ್ಟೆ."

"ಅದಕ್ಕೆ ಬೇರೆ ಕಾರಣವಿದೆ. ಅದನ್ನು ಹೇಳಬೇಕೋ ಬಿಡಬೇಕೋ ತಿಳಿಯದು." ರಾಯರಿಗೆ ಫಲವಿಷ್ಟು ಮುಖ್ಯವಾಗಿರುವಾಗ ಕಾರಣವನು

ಕಟ್ಟಿಕೊಂಡೇನು ? ಆದುದರಿಂದ ಅವರು ಉತ್ತರವಾಗಿ,

" ನಿಮ್ಮ ಗುಟ್ಟು ನಿಮ್ಮದು ಅಂದರು "

" ಅದು ಅಂತಹ ಗುಟ್ಟೇನೂ ಅಲ್ಲ. ಅಲ್ಲದೆ ತಾವೂ ತುಂಬ ತಿಳಿದವರು. ಏನಾದರೂ ಸಲಹೆ ಕೊಡಬಲ್ಲಿರಿ ಅಂತ ಕಾಣುತ್ತದೆ."

" ಛೇ, ನನಗೇನು ಗೊತ್ತು ? "

ಮೋಹನಾಭಾಯಿಯು ಈ ಮಾತನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ತನ್ನ ಕತೆಯನ್ನು ಮೊದಲುಮಾಡೇಬಿಟ್ಟನು.

" ನೋಡಿ, ನಿನ್ನೆಯ ದಿನ ರಾತ್ರಿ ನನಗೊಂದು ವಿಚಿತ್ರ ಕನಸು ಬಿದ್ದಿತು. ನಾನು ಈಚೆಗೆ ದೇವಿಯ ಉಪಾಸನೆಯನ್ನುಮಾಡುತ್ತಿದ್ದೇನೆ ನಿಮಗೆ ಗೊತ್ತೇ ? "

" ಬಹಳ ಚೆನ್ನಾಗಿ. " ರಾಯರಿಗೆ ಇದು ತಿಳಿಯದೆ. ?

" ಕನಸಿನಲ್ಲಿಯೂ ನಾನು ದೇವಿಯ ಆರಾಧನೆಯನ್ನು ಮಾಡುತ್ತಿದ್ದೆ. ನೋಡಿ ಏನು ಸುಯೋಗ. ಅಂದು ಏನೋ ವಿಶೇಷ ದಿವಸವಿರಬೇಕು. ಬುಟ್ಟಿಬುಟ್ಟಿಗಳಲ್ಲಿ ಹೂವನ್ನು ಕಂಡೆ. ಬೊಗಸೆಬೊಗಸೆಯಲ್ಲಿ ಪೂಜಿಸಿ ನಲಿದೆ. ದೇವಿಯನ್ನು ಕೊಂಡಾಡಿದೆ. ಅವಳಿಗೆ ಧೂಪ—ದೀಪ—ಮಂಗಳಾರತಿಗಳನ್ನೆತ್ತಿದೆ. ಭಾರಿ ಮಂಗಳಾರತಿ ಅದು. ಆಗ 'ದಿನ್ನ'ನು ಜಾಗಟೆ ಬಾರಿಸಿದ ಹಾಗೆ ಎಂದೂ ಬಾರಿಸಿರಲಿಲ್ಲ. ಅಲ್ಲದೆ ಆಗ 'ಹಂಸಿ' ಯೂ ಸಹಿತ ಶಂಖವನ್ನು ಊದುತ್ತಿದ್ದಳು. ನೋಡಿ ನಮ್ಮ ಮನೆಯಲ್ಲಿ ಶಂಖವೇ ಇಲ್ಲ. ಇಂದು—ನಾಳೆ ತರುತ್ತೇನೆಂದು ಕಾಲಹಾಕುತ್ತಿದ್ದೇನೆ. " " ಅಯ್ಯೋ ದೇವರೆ ! " ಅಂದುಕೊಂಡರು ರಾಯರು.

" ಮಂಗಳಾರತಿಯಾದ ಮೇಲೆ ದಂಡಪ್ರಣಾಮವನ್ನೂ ಮಾಡಿದೆ. ಇನ್ನೇನು ಏಳಬೇಕು. ಏನಾಯಿತು ಅಂತೀರಿ. ? "

" ಏಳಲಾಗದಂತೆಯೋ! "

" ನಿಶ್ಚಯವಾಗಿ ನಿಮ್ಮ ಬುದ್ಧಿಯು ಬಹಳ ತೀಕ್ಷ್ಣವಾದುದು. ನಾನು ಏಳದಿದ್ದುದಕ್ಕೆ ಕಾರಣ ? "

"ಶಕ್ತಿ ಇಲ್ಲದೆ "

" ಅದೂ ನಿಜ. ನನಗೆ ದಿಗ್ಭ್ರಮೆಯಾಗಿ ಕೈಕಾಲಿನಲ್ಲಿನ ತ್ರಾಣವೇ

ಹೋಗಿಬಿಟ್ಟಿದ್ದಿತು. ಏಕೆನ್ನುವಿರೋ? ಕೇಳಿ. ನಾನು ಏಳಬೇಕೆಂದು ತಲೆಯೆತ್ತಿದಾಗ ಪೂಜೆಯ ಮನೆಯಲ್ಲವೂ, ಅಲ್ಲಿ ಸಹಸ್ರಕೋಟಿ ಸೂರ್ಯರು—ಹುಂ—ಸಹಸ್ರಕೋಟಿ ಸೂರ್ಯರು, ಏಕಕಾಲದಲ್ಲಿ, ಹುಂ, ಏಕಕಾಲದಲ್ಲಿ ಉದ್ಭವಿಸಿದರೆ ಹೇಗೋ ಹಾಗೆ ಪ್ರಜ್ವಲಿಸುತ್ತಿತ್ತು. ನನ್ನ ಕಣ್ಣು ಕೋರೈಸಿ ಹೋಯಿತೆಂದು ಹೇಳಬೇಕಾಗಿಲ್ಲ. ಆದರೂ ಈ ಮಹಾಪ್ರಭೆಯು ಆ ನನ್ನ ದೇವಿಯ ಚಿನ್ನದ ಮೂರ್ತಿಯ ಸ್ಥಳದಲ್ಲೇ ಕೇಂದ್ರಿತವಾಗಿದ್ದಿತೆಂದು ನನ್ನ ಕಣ್ಣುಗಳು ನಿಶ್ಚಯಿಸಿದುವು. ನಾನು ಹಿಂದೆಯೇ ಹೇಳಿದಂತೆ ಈ ಬೆಳಕನ್ನು ತಾಳಲಾರದೆ ಮತ್ತೆ ಹಾಗೆಯೇ ಮುಗುಚಿಕೊಂಡೆ. ಆಗ ಏನಾಯಿತು ಅನ್ನುತ್ತೀರಿ ?"

"ನನಗೆ ಊಹಿಸಲು ಸಾಧ್ಯವಿಲ್ಲ." ರಾಯರು ಉತ್ಪ್ರೇಕ್ಷೆಯನ್ನು ಮನ್ನಿಸಿದರು.

"ಯಾರಿಗೆ ತಾನೇ ಸಾಧ್ಯ ಸ್ವಾಮಿ ? ದೈವವೈಚಿತ್ರ್ಯವು ಯಾರಿಗೆ ತಾನೆ ಹಿಡಿಯಲು ಸಿಕ್ಕುತ್ತದೆ. ?"

"ಹೌದು ಸಿಕ್ಕಲಾರದು. ನಾವು ಸುಮ್ಮನೆ ಅದನ್ನು ಹಿಡಿಯಲು ಹುಚ್ಚರಂತೆ ಒದ್ದಾಡುತ್ತೇವೆ ಅಷ್ಟೆ."

"ನಿಜ. ನಾನು ಒಪ್ಪುತ್ತೇನೆ. ಅದಕ್ಕೂ ನಮಗೂ ಅಷ್ಟೊಂದು ಅಂತರ. ಇನ್ನೂ ಕೇಳಿ. ಆಗ—ನಾನು ಹಾಗೆ ಅರೆಮೂರ್ಛೆಯಿಂದ ಹುಂ, ಅರೆಮೂರ್ಛೆಯಿಂದ ಬಿದ್ದಿರುವಾಗ—ಒಂದು ಆಕಾಶವಾಣಿ........"

"ಏನು ?"

"ಹುಂ. ನೀವು ನಂಬಿದರೆ ನಂಬಿ. ಬಿಟ್ಟರೆ ಬಿಡಿ. ಆಕಾಶವಾಣಿಯೇ ನನಗೆ ಕೇಳಿಸಿದುದು. ಅದಕ್ಕೆ ಬೇರೆಯ ಹೆಸರಿಲ್ಲ."

"ಆಗಲಿ."

"ಅದು ಏನನ್ನು ಹೇಳಿತೆಂದು ತಿಳಿದಿರಿ ?"

"ಗೊತ್ತಿಲ್ಲ....... ವರ ......."

"ಹೇಗೆ ಗೊತ್ತಾದೀತು? ವರಪ್ರದಾನ ಇತ್ಯಾದಿ ಸಾಮಾನ್ಯದ ಊಹೆ. ಆದರೆ ಇದು ಅತ್ಯಂತ ವಿಚಿತ್ರವಾದುದು. ನನಗಿನ್ನೂ ದೊಡ್ಡ ಸಮಸ್ಯೆಯಾಗಿ

ಕುಳಿತಿದೆ."

"ಓಹೋ!"

"ಕೇಳಿ. ನನಗೆ ಕೇಳಿಸಿದಂತೆಯೇ ಹೇಳಿಬಿಡುತ್ತೇನೆ. 'ಭಕ್ತನೆ! ಇನ್ನು ಮುಂದೆ ನೀನು ನನ್ನ ಪೂಜೆಯನ್ನು ನಿಲ್ಲಿಸಬೇಕೆಂಬುದು ನನ್ನ ಇಚ್ಛೆ. ಈ ಇಚ್ಛೆಯು ಪೂರ್ತಿಯಾಗುವಂತೆ ನಡೆದುಕೊಳ್ಳುವುದೇ ನೀನು ನನಗೆ ಮಾಡತಕ್ಕ ಸೇವೆಯೆಂದು ತಿಳಿ.' ಈಗ ಏನನ್ನು ಹೇಳುತ್ತೀರಿ ಹೇಳಿ."

ರಾಯರ ಉಸಿರೇ ಕಟ್ಟಿಹೋದಂತಾಯಿತು. ಕೃತಜ್ಞತೆ, ಹರ್ಷ, ನಗೆ ಇವುಗಳು ಒಂದೇ ಕಾಲದಲ್ಲಿ ಅವರ ಮನಸ್ಸಿನೊಳಕ್ಕೆ ರಭಸದಿಂದ ಹಾಯ್ದುವು. ಅವರು ಹೇಗೋ ಮಾತನ್ನಾಡಿಸಿಕೊಂಡು,

"ಇದು ವಿಚಿತ್ರವೇ ಸರಿ" ಅಂದರು.

"ನಾನು ಏನನ್ನು ಹೇಳುತ್ತಿದ್ದುದು? ಅದನ್ನೇ."

"ವಿಚಿತ್ರಕ್ಕಿಂತ ಅದ್ಭುತವಾದುದು."

"ನಾನೂ ಹಾಗೆಯೇ ಅನ್ನುತ್ತೇನೆ. ಆದರೆ ಇದಕ್ಕೆ ಕಾರಣವೇನು? ಇದರ ಅರ್ಥವೇನು? ಇದು ನನಗೆ ತಿಳಿಯಬೇಕು. ನೀವು ಏನನ್ನು ಊಹಿಸುತ್ತೀರಿ?"

"ನನಗೆ ತಿಳಿಯದು. ಮನಶಾಸ್ತ್ರಜ್ಞರನ್ನು ಕೇಳಬೇಕು."

"ಛೇ ಅವರಿಂದ ಏನು ತಿಳಿಯುತ್ತದೆ. ಅವರಷ್ಟೆಲ್ಲವೂ ಸುಳ್ಳು. ಅವರಿಗೆ ತಿಳಿದಿರುವುದು ಆ ಫ್ರಾಯ್ಡನ 'Suppressed Desire' ತತ್ತ್ವ ಒಂದೇ. ತಲೆಗೆಲ್ಲ ಒಂದೇ ಮಂತ್ರ. ಅದರಿಂದ ಏನು ಪ್ರಯೋಜನ?"

ರಾಯರು ನಸುನಕ್ಕರು. ಅನಂತರ "ಹಾಗಾದರೆ? ಮತ್ತೆ ಯಾರನ್ನು ಕೇಳುವುದು? ನೀತಿಜ್ಞರನ್ನೆ?" ಎಂದರು.

"ಛೇ ಅವರಿಂದ ಈ ಒಗಟೆಯನ್ನು ಬಿಡಿಸುವದಾದರೆ ನಾನೇ ಏಕೆ ಹಾಗೆ ಮಾಡಲಾರದವನಾಗಿದ್ದೇನೆ?"

"ನಾವು ನೀತಿಜ್ಞರಲ್ಲ." ರಾಯರು ಸ್ಪಷ್ಟವಾಗಿ ನಕ್ಕರು.

" ಅದು ಹೇಗೆ? "

ರಾಯರು ತೊಡಕಿಗೆ ಬಿದ್ದರು.

" ಅಂದರೆ, ಅಂದರೆ ನಾವು ಬಿಟ್ಟು ಆ ಶಾಸ್ತ್ರ ಈ ಶಾಸ್ತ್ರಗಳನ್ನು ಓದಿಲ್ಲ ಅಂತ " ಎಂದು ತೊದಲಿದರು.

" ಅದು ಹೇಗೋ ಏನೋ ಕೇಳಿ. ನಾನು ನೋಡಬೇಕೆಂದಿರುವುದು ದೈವಜ್ಞರೊಬ್ಬರನ್ನು."

" ಓ "

" ಇಂತಹ ಅದ್ಭುತದ— ನೀವು ಹೇಳಿದಂತೆ—ಅರ್ಥವನ್ನೂ, ಅದರ ಸೂಚನೆಯನ್ನೂ ಅವರ ದೃಷ್ಟಿಯಿಂದ ನಡೆಯಬೇಕಾದ ನಡವಳಿಕೆಯನ್ನೂ ಅವರೇ ತಿಳಿಸಬಲ್ಲವರು. ಅವರ ನಿಶ್ಚಿತವನ್ನು ತಿಳಿಯುವವರೆಗೂ ಯಾವ ನಡವಳಿಕೆಯನ್ನೂ ನಿಶ್ಚಯಿಸುವುದಿಲ್ಲ."

" ಅಂದರೆ. ?"

" ಅಂದರೇನು. ತಾವು ಮೊದಲೇ ಊಹಿಸಲಿಲ್ಲವೇ. ನಾನು ಪ್ರಾಜೆಕ್ಟನ್ನು ಮಾಡಿಲ್ಲವೆಂದು. "

" ತಾವೇ ಹೇಳಿದಿರಿ."

" ಆ ಕನಸು, ಈ ನಿಶ್ಚಿತವೇ ಅದಕ್ಕೆ ಕಾರಣಗಳು. "

" ಹೋ. ಹಾಗೇ. ಒಳ್ಳೆಯ ಕನಸು. ನಿಮ್ಮ ನಿಶ್ಚಯವು ಸರಿಯಾದುದು......... "

" ಹಾಗೆ ಹೇಳುವಿರೆಂದು ನನಗೆ ಮೊದಲೇ ತಿಳಿದಿದ್ದಿತು. "

" ದೇವರು ದೊಡ್ಡವನು ! "

" ಅಷ್ಟಲ್ಲದೆ ಒಂದಾನೊಂದು ದಿನ ನಿಮ್ಮಲ್ಲಿ ಈ ನಂಬಿಕೆ ಹುಟ್ಟುವುದೆಂದು ನಾನು ಹೇಳಿರಲಿಲ್ಲವೆ ? ಅದು ಈಗಲೇ ಬಂದಿದೆ ಸಂತೋಷ "

" ನಿಜ ! "

ಇಬ್ಬರೂ ಹಾಸ್ಯದ ನಗೆಯನ್ನು ನಕ್ಕರು. ಮೋತಾಭಾಯಿಯು ಭಕ್ತನ ವಚನನ್ನೇ ನೆನಸಿಕೊಂಡಂತೆ, ಜೇಬಿಗೆ ಕೈ ಹಾಕಿ ಗಡಿಯಾರ

ವನ್ನು ತೆಗೆದು ನೋಡಿ, "ಅಯ್ಯೋ ನನಗೇನು ಬಂತು ಹೊತ್ತು. ಈ ಕನಸಿನ ಸಂಭ್ರಮದಲ್ಲಿ ಆಫೀಸಿಗೆ ಇಷ್ಟು ಹೊತ್ತಾಗಿ ಬಿಟ್ಟಿ!" ಎಂದು ಹಾರಿ ಹೋದನು.

ರಾಯರು ದೀರ್ಘ ನಿಶ್ವಾಸವನ್ನು ಬಿಟ್ಟು ಮತ್ತಷ್ಟು ನಸುನಕ್ಕು ಮತ್ತೆ ಮೃದುವಾಗಿ ಸಿಳ್ಳು ಹಾಕಿದರು.

# ದಾದಿ

( ಸಣ್ಣ ಕತೆ )

ಬರೆದವರು :

**ಶ್ರೀಕೃಷ್ಣ ಪಾಟೀಲ**

೧

ಆ ಮಾತಿಗೆ ಹನ್ನೆರಡು ವರುಷ ಕಳೆದಿರಬೇಕು—ಆದರೆ ಅನಲಾನ ಜೀವನವು ಕಾಲುವೆಯ ನೀರಿನಂತೆ ಅವ್ಯಾಹತವಾಗಿ ಸಾಗಿದೆ. ಇಷ್ಟು ದಿನ ಗಳಲ್ಲಿ ನೂರಾರು ಸಾರೆ ಮಳೆಯು ಭೋರಿಟ್ಟುಕೊಂಡು ಸುರಿದಿರಬೇಕು. ಸಾವಿರಾರು ಹೊಳೆಗಳು ಮಹಾಪೂರಕ್ಕಿಟ್ಟುಕೊಂಡು, ಮಂಡೆ ತುಂಬಿ ಹೊರ ಚೆಲ್ಲಿ, ಅನೇಕ ಪ್ರಾಣಹರಣ, ವಿತ್ತಹರಣಗಳನ್ನು ಮಾಡಿ ಜನಜೀವನವನ್ನು ಸಂಕಟದ ಬಾಗಿಲಿಗೆ ತೂಗಹಾಕಿರಬೇಕು. ಆದರೆ ಅನಲಾನ ಕಾಲುವೆ ಯಂತಹ ಜೀವನದಲ್ಲಿ ಎಷ್ಟು ಮಾತ್ರವೂ ಅಡೆ-ತಡೆಗಳಿಲ್ಲ, ಲೋಪ-ದೋಷ ಗಳಿಲ್ಲ, ಕುಂದು-ಕೊರತೆಗಳಿಲ್ಲ. ಸುಗಮವಾಗಿ, ಶಾಂತವಾಗಿ, ಸುಲಭವಾಗಿ ಹರಿದೋಡುವಂತೆ ಒಂದೇ ಓಟ, ಒಂದೇ ಗುರಿ. ಕಾಲುವೆಯ ನೀರನ್ನು ಎಡಬಲದ ಒಕ್ಕಲಿಗರು ತಮ್ಮ ಹೊಲಗಳಿಗೆ ಬಳಸಿ ಫಲವನ್ನುಂಡಂತೆ ಅನ- ಲಾನ ಜೀವನಫಲವನ್ನು ಸೇವೆಯಿಂದ, ಸ್ನೇಹದಿಂದ ಹೊಂದಿ ಆನಂದ ಪಟ್ಟಿರುವರು. ಅನಲಾನಿಗೆ ಅವುಗಳ ಕಡೆಗೆ ಗಮನವಿಲ್ಲ. ಸೇವೆಯನ್ನು ಹೊಂದಿದ ಜನರು ತನಗೆ ಕೃತಜ್ಞರಾಗಿರಬೇಕೆಂದು ಆಶಿಸಿದವಳಲ್ಲ. ಆಶಿಸು ವಂತೆಯೂ ಇರಲಿಲ್ಲ. ತನ್ನ ಕೆಲಸವಾಯಿತು, ತಾನಾಯಿತು. ಬಿಡುವಿನ ಸಮಯದಲ್ಲಿ ರೋಗಿಗಳು ಬಯಸಿದರೆ ಒಂದೆರಡು ಹಳೆಯ ಕತೆಗಳ ನೆನಪು ಮಾತ್ರ ಆಯಿತು. ಇಷ್ಟೇ ಅವಳ ಜೀವನದ ಗುರಿ. ಆದರೆ ಅದರಲ್ಲಿ ಒಂದು ಕ್ರಮವಿದ್ದಿತು.

ಅಕ್ಕನ ಮನೆಯಲ್ಲಿ ಒಂದು ನಿಂತ ಮೇಲೆ ತನ್ನ ಭೋಗಜೀವನಕ್ಕೆ ಒಂದು ತ್ಯಾಗವೃತ್ತಿಯನ್ನು ಕಲ್ಪಿಸಿದಳು. ''ತ್ಯಾಗದಲ್ಲಿ ತೃಪ್ತಿ ಇದೆ" ಎಂಬ ಹಳೆಯ ಮಾತನ್ನು ಚಿಕ್ಕಂದಿನಿಂದ ಸ್ಮರಣೆಯಲ್ಲಿಟ್ಟುಕೊಂಡು ಬಂದಿದ್ದಳು. ಆದರೆ ತನ್ನ ಸಾಲೆಯ ಚರ್ಚಾಕೂಟದಲ್ಲಿ ಶೂನ್ಯಮಯ ತ್ಯಾಗದಲ್ಲಿದ್ದ ತನ್ಮಯತೃಪ್ತಿಯ ಜಟಿಲ ಸಮಸ್ಯೆಯನ್ನು ಬಾಯಿತುಂಬ ಹಳಿದಿದ್ದಳು; ನಿಂದಿ ಸಿದ್ದಳು. ಅದನ್ನು ಎತ್ತಿಹಿಡಿದ ಶಿಕ್ಷಕವೃಂದವನ್ನು ನಗೆಯಾಡಿದ್ದಳು. ಚರ್ಚಾ ಕೂಟದಲ್ಲಿ ಇವಳ ಕಿಡಿನುಡಿಯ ಓಘಕ್ಕೆ ಸಭಿಕರು, ಗೆಳೆಯರು ಮೆಚ್ಚಿ, ಬಹುಮತದಿಂದ ಮನ್ನಿಸಿದ್ದರು. ಆದರೆ ಆ ಮಾತು ಇಂದು ಅವಳ ಜೀವನದ ಹಾಸು-ಹೊಕ್ಕಾಗಿದ್ದುದು ಆಶ್ಚರ್ಯದ ಮಾತಲ್ಲವೇ ! 'ಅನಲಾ, ನಿನ್ನ ಜೀವ ನವು ಇಂದು ಹೀಗೇಕೆ ?' ಎಂದು ಎದುರಾಡಿ ಕೇಳುವವರು ಯಾರೂ ಇರ ಲಿಲ್ಲ. ಪರರ ಭೋಗಜೀವನವನ್ನು ಹಳಿಯದಿದ್ದರೂ ತನ್ನ ತ್ಯಾಗವೃತ್ತಿಯೇ ಮೇಲೆಂದು ಪ್ರತಿಪಾದಿಸುವ ಸ್ಥಿರತೆಗೂ ಬಂದಿರಲಿಲ್ಲ. ಆ ಭೋಗ-ತ್ಯಾಗದ

ನಡುವೆ ಒಂದು ಅಸ್ಪಷ್ಟ ರೇಖೆಯನ್ನು ಕಲ್ಪಿಸಿ, ತನಗಾಗಿ ನಿರ್ಮಿಸಿಕೊಂಡು ಅವರ ಸೂಕ್ಷ್ಮದಾರಿಯ ಮೇಲೆ ನಡೆದು ಉಭಯತರನ್ನು ಸ್ನೇಹದಿಂದ, ಪ್ರೀತಿಯಿಂದ ನೋಡುತ್ತ ನಡೆದಿದ್ದಳು. ಹೀಗಾಗಿ ನಕ್ಕವರ ಜೊತೆಗೆ ತಾನೂ ಹೊಟ್ಟೆ ಬಿರಿಯುವಂತೆ ನಗುವಳು. ದುಃಖಿಸುವವರ ಜೊತೆಗೆ ತಾನೂ ಒಂದೆರಡು ಕಣ್ಣೀರಿನ ಹನಿಗಳನ್ನು ಉದುರಿಸುವಳು. ಸರ್ವಭಾಂಡ ಸದೃಶವಾಗಿ ತೋರುವ ನೀರಿನಂತೆ ಅನಲಾನ ಜೀವನವು ಪರಿಶುದ್ಧ, ಪವಿತ್ರ, ನಿರ್ಗುಣವಾಗಿ ವೈಶಾಲ್ಯಮಯವಾಗಿದ್ದಿತು.

ದಾದಿಯಾಗಿ ಬೆಳಗಾಂವಿಯ ಆಸ್ಪತ್ರೆಯನ್ನು ಸೇರಿದ ದಿನ ಜೀವಮಾನವೆಲ್ಲ ಹೊಸ ಹೊಸದಾಗಿ ಕಾಣಹತ್ತಿತು. ಓರಗೆಯ ದಾದಿಯರು ಬಿಡುಗಣ್ಣಿನಿಂದ ನೋಡಹತ್ತಿದರು. ಮೂಲೆಯಲ್ಲಿ ನಿಂತು ಒಬ್ಬಿಬ್ಬರು 'ಇವಳಾರೆ?' ಎಂದು ಪಿಸುಗುಟ್ಟುವ ಮಾತುಗಳನ್ನು ಕೇಳಿದಳು. 'ಇವಳು ಸಹ ಒಬ್ಬ ವಿಧವೆಯೇ! ಅಯ್ಯೋ, ಮುಖದ ಮೇಲಿನ ಕುಂಕುಮದ ಕಲೆಯನ್ನು ಇದೇ ಒರಸಿ ತೆಗೆದಂತಿದೆಯಲ್ಲ! ಗಂಡ ಸತ್ತು ವರುಷೆರಡು ವರುಷಗಳು ಆಗಿರಬೇಕು! ಮಕ್ಕಳಿವೆಯೋ ಇಲ್ಲವೋ!' ಇತ್ಯಾದಿ ತರ್ಕದ ಶುಷ್ಕ ಮಾತುಗಳು ದಿನಕ್ಕೊಂದು ಚೆಂದವಾಗಿ ಹುಟ್ಟಿ, ಬೆಳೆದು ಅನಲಾನ ಕಿವಿಯನ್ನು ಸೇರಿ ಬುದ್ಧಿಯಲ್ಲಿ ನಾಟ್ಯವಾಡಹತ್ತಿದವು. ಅನಲಾನು ಅವೆಲ್ಲವುಗಳನ್ನು ಸಹಿಸಿದಳು. ಇನ್ನೂ ನೂರಾರು ಸಹಿಸಬಲ್ಲೆನೆಂಬ ದೃಢನಿರ್ಧಾರದಿಂದ ತನ್ನ ನಿತ್ಯಕರ್ಮಗಳನ್ನು ಸಾಗಿಸಿದಳು. ತಿಂಗಳೊಪ್ಪತ್ತಿನಲ್ಲಿ ಅವರ ಬರಡುಮಾತುಗಳು ಮುಗಿದವು. ಸ್ನೇಹಪತ್ರವನ್ನು ಚಾಚಿದರು. ಅನಲಾ ಪಿಟ್ಟೆನ್ನದೆ ಸ್ವೀಕರಿಸಿದಳು. ಪಿಸುಗುಟ್ಟಿದವರೇ ಇಂದಿಗೆ ಅವಳ ಜೀವದ ಗೆಳತಿಯರಾದರು.

ಪರಿಶುದ್ಧ ತರ್ಕದಲ್ಲಿ, ಬುದ್ಧಿಯ ಹರಿತದಲ್ಲಿ, ಅನುಭವದ ಆಳದಲ್ಲಿ ಅನಲಾ ಇಂದು ಹಿರಿಯ ದಾದಿಯಂತೆನಿಸಿದಳು. ಓರಗೆಯ ದಾದಿಯರ ಸಣ್ಣ ಪುಟ್ಟ ನ್ಯಾಯಗಳನ್ನು ತೀರಿಸುವ ಹೊರೆ ಅನಲಾನ ಪಾಲಿಗೆ ಬಂದಿತು. ರೋಗಿಗಳ ಶುಶ್ರೂಷೆಯ ಕ್ರಮವೆಲ್ಲ ಅನಲಾನ ಆದೇಶದಂತೆ ಸಾಗಹತ್ತಿತು. ಅವರ ಔಷಧ-ಉಪಚಾರಗಳು ಅನಲಾನ ಸಂದೇಶದಂತೆ ಕ್ರಮವಿಟ್ಟವು. ಮಹತ್ವದ ಅಪರೇಶನದ ಕಾಲದಲ್ಲಿ ಮುಖ್ಯ ಡಾಕ್ಟರರು ಅನಲಾನನ್ನು

ಸಹಾಯಕ್ಕೆ ಕರೆಯುಹತ್ತಿದ ಮೇಲಂತೂ ಸ್ಥಿರಬುದ್ಧಿಗೆ ಕಳಸವಿಟ್ಟಂತೆ ಸ್ಥಿರಚಿತ್ತಳು ಎಂದೂ ಖ್ಯಾತಿವೆತ್ತಳು.

ಅನಲಾ ತನ್ನ ಓರಗೆಯವರಲ್ಲಿ ಇಷ್ಟು ಮಾನಮರ್ಯಾದೆಯನ್ನು ಪಡೆದು ಅವರ ಜೀವದ ಗೆಳತಿಯೆನಿಸಿದರೂ ಒಂದು ಮಾತಿನ ನಿರ್ಣಯವನ್ನು ಅವರು ಮಾಡಿಕೊಳ್ಳದೆ ಹೋದರು. ಸುಮನಾ ಅವಳನ್ನು ಎಷ್ಟೋ ಸಾರೆ ಕೆಣಕಿ ಮೋರೆಯೊಣಗಿಸಿಕೊಂಡಳು. ಅರುಣಾ ಪ್ರೀತಿಪುರಸ್ಸರವಾಗಿ ಪೂರ್ವವೃತ್ತಾಂತವನ್ನು ಅರಿಯ ಹೋಗಿ ಬಾಯಿ ಕಟ್ಟಿಸಿಕೊಂಡಳು. ಹೀಗೆ ಒಬ್ಬಳಲ್ಲ ಎಲ್ಲರು ಒಂದೊಂದು ಬಗೆಯ ವಿಷಯಾಂತರದ ಬಿರುಸುಡಿಗಳಿಗೆ ಒಳಗಾಗಿ ಮೌನರಾದರು. ಅರಿಯಬೇಕೆಂದು ಬೇರಿಳಿದ ಹಂಬಲವು ನಿರುತ್ತರಗೊಂಡರೂ ಅದು ಆಳ-ಆಳವಾಗಿ ನೆಲದಲ್ಲಿ ಇಳಿದು ದಿನಕ್ಕೊಂದು ತೆರವಾಗಿ ಕುಡಿಗಟ್ಟಿ ಅವರ ತುಟಿಗಳಲ್ಲಿ ಮುಗ್ಧ ಮಾತುಗಳಿಂದ ಸುಳಿದಾಡುತ್ತಿದ್ದಿತು. ಅವಳ ಪೂರ್ವವೃತ್ತಾಂತದಿಂದ ತಮ್ಮ ಜೀವರೇಖೆಯು ದುರ್ಗಮವಾಗಲಿ, ಸುಗಮವಾಗಲಿ ಇರುವದು ಅಷ್ಟೇ ಇದ್ದಿತ್ತು. ಈ ಮಾತನ್ನು ಅವರು ಅರಿತೂ ಇದ್ದರು. ಸಾವಿರ ರೋಗಿಗಳ ಹಿಂದಿನ ಬಾಳನ್ನು ತಮಗೆ ಬೇಡಾದರೂ ರೋಗಿ ಬುದ್ಧಿಪೂರ್ವಕವಾಗಿ ಹೇಳಿದರೆ—ಕೇಳಿ ಆ ಕ್ಷಣವೇ ಮರೆಯುತ್ತಿದ್ದರು. ಧರ್ಮಶಾಲೆಯೊಳಗಿನ ದೀಪದಂತೆ ತಮ್ಮ ಬಾಳನ್ನು ಸರಿಹೋಲಿಸಿ, ಆ ಮಾತನ್ನು ನಡೆಸುತ್ತ ಬಂದಿದ್ದರು. ಆದರೆ ಅನಲಾನ ಹೇಳಬಾರದೆಂಬ ಹಟದ ಮುಂದೆ ಇವರ ಕೇಳಬೇಕೆಂಬ ಇಚ್ಛೆ ದಶಗುಣಿತವಾಗಿ ಬೆಳೆದು ಪ್ರಸಂಗವಿಶೇಷದಲ್ಲಿ ಪ್ರಶ್ನರೂಪದಿಂದ ಹೊರಬಿದ್ದು ಕೋಣೆಯನ್ನು ತುಂಬಿ ಪ್ರತಿಧ್ವನಿಗೊಡುತ್ತಿದ್ದಿತು. ಉತ್ತರವು—ತಾವು ಕೇಳಿದ ಪ್ರಶ್ನೆಯ ಪ್ರತಿಧ್ವನಿಯ ಅಣಕಮಾತುಗಳಾಗಿ ಕಿವಿಯನ್ನು ಸೇರುತ್ತಿದ್ದಿತು. ಆ ಸಮಯದಲ್ಲಿ ಅನಲಾನ ಹಿರಿತನವು ಒಂದಿಷ್ಟು ಮಸಕು ಮಸಕು.

ಅಂದು ರವಿವಾರ. ಬೇಸಗೆಯ ಬಿಸಿಲು ಒಂದಿಷ್ಟು ಪ್ರಖರವಾಗಿದ್ದಿತು. ಆಸ್ಪತ್ರೆಯ ಒಂದು ಕೋಣೆಯಲ್ಲಿ ಗಂಡಸ ವಾರ್ಡಿನ ಕೆಲವು ದಾದಿ ಜನರು ವಿನೋದವಾಡುತ್ತಿದ್ದರು. ಅನಲಾನು ನಡುವೆ ಕುಳಿತು ರೋಗನಿದಾನದ ಬಗ್ಗೆ ಚರ್ಚಿಸುತ್ತಿದ್ದಳು. ಚರ್ಚೆಯಲ್ಲಿ ಊರ ಸಂಗತಿ, ರಾಜಕಾರಣ, ಶಾಸ್ತ್ರ ಪುರಾಣಗಳು ಮಧ್ಯೆ ಮಧ್ಯೆ ಇಣಿಕಿಕ್ಕಿ ಹೋಗುತ್ತಿದ್ದವು. ಸುಮನಾ

ವಿಷಯಾಂತರ ಮಾಡುವಂತೆ ನಡುವೆ ಬಾಯಿ ಹಾಕಿ,

"ಅನಲಾ, ಒಂದು ಮಾತಿಗೆ ನೀನು ಉತ್ತರವನ್ನು ಹೇಳಬೇಕು." ಎಂದಳು.

"ಆಗಬಹುದು ತಾಯಿ," ಅನಲಾ ನಗುತ್ತ ಎಂದಳು.

"ತಾಯಿಯ ಮಾತಿಗೆ ಮಗಳು ಉತ್ತರರೂಪಿ ಬಂಧನಕಾರಿಯಾಗಿ ನಿಲ್ಲಬೇಕು" ಅರುಣಾ ಎಂದಳು.

"ಮಗಳ ಗೌರವವನ್ನುಕಾಯುವಂತಿದ್ದರೆ ತಾಯಿಗೆ ಬಂಧನಕಾರಿ."

"ಪ್ರಶ್ನಪೂರ್ವದಲ್ಲಿ ನನ್ನನ್ನುಗೌರವಮಯ ಬಂಧನದಿಂದ ಬಿಗಿಯುವ ಮಗಳು ಎಂಥವಳೋ!" ಸುಮನಾ ದನಿ ಎಳೆದಳು.

"ನಿಮ್ಮ ಪ್ರಶ್ನೆ ಅಗೌರವವನ್ನು ತಾಳದಿರಲೆಂದು ಹೇಳಿದರೆ ತಾಯಿ-ಮಗಳಲ್ಲಿ ಭೇದವನ್ನು ಕಲ್ಪಿಸಿದಂತಾಯಿತೇ?"

"ಸುಮನಾ, ಕೇಳಬೇಕಾದುದನ್ನು ನೇರವಾಗಿ ಕೇಳು. ಹೀಗೆ ದೂರ ದೂರದ ಗುರಿಯಿಂದ ಸಾಗಿದರೆ ಅನಲಾ ನಮ್ಮ ಮಾತಿನ ಬಲೆಗೆ ಸಿಕ್ಕ ಲಾರಳು." ಅರುಣಾ ಮತ್ತೆ ವಿಷಯಕ್ಕೆ ಇಬ್ಬರನ್ನು ಹಿಡಿದು ತಂದು ನಿಲ್ಲಿಸಿ ದಳು.

"ಇಷ್ಟೇ, ಅನಲಾ, ನಿನ್ನ ಬಗ್ಗೆ ಒಂದೆರಡು ಮಾತುಗಳನ್ನು ಕೇಳ ಬೇಕೆಂದು ಕೂತುಹಲ." ಸುಮನಾ ಬಾಯಿ ಮುಚ್ಚಿಕೊಂಡಳು.

"ಬಿಚ್ಚಿದ ರೆಕ್ಕೆಯನ್ನು ಮುಚ್ಚದ ಕೂತೂಹಲಪಕ್ಷಿಗೆ ಜಗತ್ತಿನಲ್ಲಿ ನೆಮ್ಮದಿಯಾಗಿ ಕುಳಿತು ಉಸಿರಾಡಿಸಲು ಒಂದು ಗಿಡವುಂಟೇ? ಮರವುಂಟೇ? ನಾನು ತಿಳಿಯಲಾರೆ."

"ಹತ್ತು-ಹನ್ನೆರಡು ವರ್ಷ ಹಾರಾಡಿದರು ಒಂದು ಟೊಂಗೆಯನ್ನು ಕಲ್ಪಿಸಿ ಸ್ಥಳವನ್ನು ಕೊಡಲಾರೆಯಾ?"

"ನಾನು ಕಲ್ಪಿಸಿಕೊಟ್ಟ ಟೊಂಗೆ ಎಷ್ಟು ಸಮಯ ತಡೆದೀತು ಸುಮನಾ?"

ಈ ಹಾರಿಕೆಯ ಮಾತುಗಳಿಂದ ಅರುಣಾ ಒಂದಿಷ್ಟು ಕುಪಿತಳಾಗಿ "ಸುಮನಾ, ನೇರವಾಗಿ ಮನದ ಮಾತನ್ನು ಕೇಳೆಂದು ಹೇಳಿರುವೆ. ಅದೆಲ್ಲ ವನ್ನು ಬಿಟ್ಟು ಇಲ್ಲದ ಮಾತಿಗೆ ಎಡೆಗೊಡುವ ಹರಟೆಯನ್ನು ಹಚ್ಚಿರುವೆಯಲ್ಲ! ಏನದು ಕೇಳು" ಎಂದು ಕಿವಿಯನ್ನು ಹಿಂಡಿದಳು.

ಸುಮನೆಯು ಕೇಳಲೋ, ಬೇಡವೋ ಎಂಬ ವಿಚಾರದ ಗೊಂದಲದಲ್ಲಿ ಬಿದ್ದಳು. ಆದರೂ ಗೆಳತಿಯ ಬೆಂಬಲದಿಂದ ಮನದ ಹೊಯ್ದಾಟವನ್ನು ಸ್ಥಿಮಿತದಲ್ಲಿರಿಸಿ, "ಅನಲಾ, ಸಿಟ್ಟಾಗದಿದ್ದರೆ ಕೇಳುವೆ." ಎಂದಳು.

"ಓ! ನಾನು ಸಿಟ್ಟನ್ನು, ಕ್ರೋಧವನ್ನು ಬಹಳ ದಿನಗಳ ಹಿಂದೆ ಕಳೆದುಕೊಂಡಿರುವೆ. ನಾನು ಪುನಃ ಅವುಗಳಿಗೆ ಸ್ಥಾನ ಸಿಕ್ಕದಂತೆ ಎಚ್ಚರದಿಂದಿರುವೆ. ಇಷ್ಟು ದಿನಗಳ ಅನುಭವದಲ್ಲಿ ಆ ಮಾತನ್ನು ಅರಿತಿದ್ದರೆ ನೀನು ಹೀಗೆ ಆಡುತ್ತಿರಲಿಲ್ಲ. ಕುತೂಹಲಕ್ಕೂ, ಶಂಕೆಗೂ ಬಹಳ ಅಂತರ ಇರುವದಿಲ್ಲ."

"ನಿನ್ನ ಮದುವೆಯಾಗಿ ಎಷ್ಟು ವರುಷಗಳಾದವು?" ಎಂದು ಬೆದರುತ್ತ ಸುಮನಾ ಕೇಳಿದಳು.

"ಇದೇ!...." ಅನಲಾ ಬಾಯಿ ತೆರೆದು ನಕ್ಕಳು. ನಗೆಯ ಹಿಂದೆ ಅಸಂತೋಷದ ಕರಿಗೆರೆಯು ಇದ್ದಿತೆಂದು ಅವರಿಗೆ ತಿಳಿಯದೆ ಹೋಯಿತು.

"ಈ ಮಾತು ಅವಳ ಬಾಯಿಂದ ಹೊರಟರೂ ನಮ್ಮೆಲ್ಲರಲ್ಲಿಯೂ ಆ ಪ್ರಶ್ನೆ ಬಹುದಿನಗಳಿಂದ ವಾಸವಾಗಿದೆ ಎಂದು ಮರೆಯದಿರು ಅನಲಾ." ಅರುಣಾ ಜ್ಞಾಪಿಸಿದಳು.

"ಆಗಿಲ್ಲವೆಂದು ಹೇಳಿದರೆ ಬೇರೊಂದು ಮದುವೆಯ ಪ್ರಯತ್ನದ ಪಾಶವನ್ನು ಕಟ್ಟಿಕೊಳ್ಳಲಿಕ್ಕಿಲ್ಲವಷ್ಟೇ?"

ಪಾಪ, ಎಲ್ಲರೂ ಅವಾಕ್ಕಾದರು.

"ಅಹುದು ಪಾಪವೆಂದು ಹೇಳುವೆ........"

ಅನಲಾಳನ್ನು ಮಧ್ಯದಲ್ಲಿ ತಡೆದು "ಹಾಗಾದರೆ ನಿನ್ನ ಮದುವೆ ಆಗಿತ್ತೇ?" ಅರುಣಾ ಕೇಳಿದಳು.

"ಹಾಗಲ್ಲ. ಪ್ರಯತ್ನಪಟ್ಟು ನನಗಾಗಿ ಒಬ್ಬ ವರನನ್ನು ಹುಡುಕಿದರೆ ಮದುವೆಗೆ ಬೆಳೆದು ನಿಂತ ವಧುವು ತನ್ನ ಪಾಲಿನ ವರನನ್ನು ನೀವು ಕಸಿದುಕೊಂಡಿರೆಂದು ಶಪಿಸಲಿಕ್ಕಿಲ್ಲವೇ?" ಮಾತು ಸೇರದಿದ್ದರೂ ಎಲ್ಲರೂ ತೀಯಾಗಿ ನಕ್ಕರು.

"ಹೋಗಲಿ. ನಿನ್ನ ಕುಂಕುಮವು ಅಳಿಸಿ ಎಷ್ಟು ವರುಷಗಳಾದವು?" ನಡುವೆ ಬಾಯಿ ಹಾಕಿ ಸುಮತಿ ಕೇಳಿದಳು.

" ಕುಂಕುಮಕ್ಕೂ, ಗಂಡನಿಗೂ ಸಂಬಂಧವನ್ನು ಕಲ್ಪಿಸಿದರೆ ಬಳೆಯು ಹೋದ ದಿನವೆಂದು ಹೇಳಿದರೆ ಸಮಾಧಾನವೇ ?" ಎಂದು ಅನಲಾ ತಿರುಗಿ ಪ್ರಶ್ನೆ ಹಾಕಿದಳು.

" ಅವುಗಳನ್ನು ನೀನು ನಂಬುವದಿಲ್ಲವೇ ?"

" ನನ್ನ ನಂಬುಗೆಯನ್ನು ಹೇಳುವುದಿಲ್ಲ. ನೀವು ನಂಬಲೆಂದು ಹೇಳುವೆ "

" ನಿನ್ನ ಉತ್ತರದ ಅರ್ಥವನ್ನು ಮಾಡಹೋದರೆ ನಾವು ನಮ್ಮ ಪ್ರಶ್ನೆಯನ್ನು ಮರೆಯುಬಹುದು. ಇದೆಂತಹ ಮಾತು ! " ಅರುಣಾ ಅಂದಳು.

" ಅರುಣಾ, ಕುಂಕುಮಕ್ಕೂ, ಗಂಡನಿಗೂ ಗಂಟು ಹಾಕಬೇಕೆಂದಿದ್ದರೆ, ನಾವು ನೂರು ವರುಷಗಳ ಹಿಂದೆ ಹೋಗಿ ನಿಂತು ಮಾತಾಡಬೇಕು. ಭೂತಕಾಲದ ಸಂಗತಿಗಳ ನಿಷ್ಕರ್ಷೆಯನ್ನು ನಾವು ಮಾಡಬಾರದು. ಈ ವರ್ತಮಾನ ಕಾಲವು ನಾಳೆ ಭೂತಕಾಲಕ್ಕೆ ಇಳಿದರೆ ಆ ಬರುವ ಭವಿಷ್ಯವಾದಿಗಳಿಗೆ ಇಂದಿನ ರೀತಿ ನೀತಿಗಳನ್ನು ಮಾತಾಡಲು ಅಧಿಕಾರವುಂಟೇ ? ಅದು ಹೋಗಲಿ. ಕುಂಕುಮವನ್ನು ಹಚ್ಚಿಕೊಳ್ಳಲು ನನ್ನ ತಾಯಿ ಕಲಿಸಿದಳು. ಆ ಮುಂದೆ ನಾನೇ ಹಚ್ಚಿಕೊಳ್ಳಹತ್ತಿದೆ. ಮದುವೆಯಾಗಿದ್ದರೆ ಗಂಡನೇನು ಹೊಸದಾಗಿ ಹಚ್ಚಿರಲಿಲ್ಲ. ಈ ಮೊದಲೇ ಹಚ್ಚಿಕೊಂಡ ಕುಂಕುಮದ ಬಟ್ಟನ ಮೇಲೆ ತನ್ನದೊಂದು ಬಟ್ಟನ್ನು ಇಟ್ಟನೆನ್ನು. ಅಹುದೇ ? ಮತ್ತು ಕುಂಕುಮವು ಒರಸಿ ಹೋಗಲು ಗಂಡನ ಸಾವು ನೋವು ಅವಶ್ಯವಿರಲಿಲ್ಲ. ಅದರಂತೆ ಬಳೆ.... ಕುಂಕುಮದಿಂದ ನಮ್ಮ ಸೌಭಾಗ್ಯವನ್ನು ಅಳೆಯಬೇಕೆಂದರೆ ಒಂದು ಬಟ್ಟು ಕುಂಕುಮ ಹಚ್ಚಿದ ಗಂಡನಿಗಿಂತ ಕುಂಕುಮ ವ್ಯಾಪಾರಿಯೇನು ಕಡಿಮೆ ! ಎರಡು ಬಳೆ ತೊಡಿಸಿದ ಗಂಡನಿಗಿಂತ ಬಳೆಗಾರನ ಸೌಭಾಗ್ಯಕ್ಕೇನು ಕೊರತೆ ! ನನ್ನ ಮಾತನ್ನು ತಿಳಿದುಕೊಂಡಿರಾ ? "

" ಅಂತೂ ನಿನ್ನ ಮದುವೆಯಾಗಿದ್ದಿತೇನು ? " ಅರುಣಾ ಎಂದಳು.

" ನೀನು ಹಾಗೆ ತಿಳಿದುಕೊಂಡರೆ ಪುನರ್ವಿವಾಹಕ್ಕೆ ನನ್ನನ್ನು ಪ್ರೇರೇಪಿಸುವದಿಲ್ಲವಷ್ಟೇ ? "

" ಅದು ಹೋಗಲಿ, ನಿನಗೆ ಮಕ್ಕಳಿರುವವೇ?" ಸುಮನಾ ಕೇಳಿದಳು.

" ಅಯ್ಯೋ ಮಂಕೇ ! ಮದುವೆಯ ಮಾತೇ ನಿಷ್ಕರ್ಷೆಯಾಗದಿರು

ಪಲ್ಲಿ ಮಕ್ಕಳನ್ನು ಎಣಿಸಹೋಗುವಿಯಲ್ಲ! ” ಸುಮತಿ ನಗೆಯಾಡಿದಳು.

“ನಗೆಯಾಡಬೇಡ ಸುಮತಿ. ಅವಳಿಗೆ ಅಷ್ಟು ಸಹ ಬುದ್ಧಿಯಿಲ್ಲ ಎಂದು ತಿಳಿದರೆ ನಮ್ಮ ಜಾತಿಯನ್ನು ನಾವು ಅಪಮಾನ ಮಾಡಿಕೊಂಡಂತಾದೀತು ?” ಅನಲಾ ಎಂದಳು.

“ಹಾಗಾದರೆ ಮಕ್ಕಳುಂಟೇ ?”

“ಉಂಟು.”

“ಉಂಟು! ಎಷ್ಟು ?”

“ಆಸ್ಪತ್ರೆಯಲ್ಲಿ ಮಲಗಿದ ರೋಗಿಗಳೆಲ್ಲ ನನ್ನಮಕ್ಕಳೆಂದು ಹೇಳಿದರೆ ನೀವು ನಂಬಲಿಕ್ಕಿಲ್ಲ.”

ಎಲ್ಲರು ಬಿದ್ದು ಬಿದ್ದು ನಗಹತ್ತಿದರು.

“ಆ ಹಿಂದಿನ ಕೋಣೆಯಲ್ಲಿ ಮಲಗಿದ ಮುದುಕ ಗಾಯಾಳು ಸಹ ನಿನ್ನ ಮಗನೇ ?” ಎಂದು ಸುಮನಾ ಕೇಳಿ ತನ್ನ ನಗೆಯನ್ನು ಮುಂದುವರಿಸಿದಳು.

“ಅಹುದು.” ಅನಲಾ ನಿರ್ವಿಕಾರ ಉತ್ತರವನ್ನು ಕೊಟ್ಟಳು.

ನಗೆಯ ಇನ್ನೊಂದು ತೆರೆಯು ಕೋಣೆಯನ್ನು ತುಂಬಿತು.

“ಆದರೆ ಅದೇ ಮುದುಕನು ‘ಸುಮನಾ, ನೀನು ಎಂಥ ಸೌಂದರ್ಯಶಾಲಿನಿಯು! ನಿನ್ನ ರೂಪವು ಚಂದ್ರನಂತೆ ಶೀತಲವಾಗಿದೆ! ಹೂವಿನಂತೆ ಕೋಮಲವಾಗಿದೆ! ನೀರಿನಂತೆ ಅವರ್ಣನೀಯವಾಗಿದೆ!’ ಎಂದು ನುಡಿದರೆ ಏನನ್ನುವಿ ?”

ಎಲ್ಲರು ಬೆಕ್ಕಸ ಬೆರಗಾದರು. ಜೀವನವನ್ನು ಹಿಂಡಿ ತೆಗೆದಂತೆ ಕಳವಳಪಟ್ಟರು. ಅನಲಾನ ಬಾಯಿಗೆ ಹತ್ತುವದೆಂದರೆ ಬೆಂಕಿಯನ್ನು ಮುದ್ದಾಡಿದಂತೆಂದು ಮತ್ತೊಮ್ಮೆ ಅನುಭವಪಟ್ಟರು. ಅನಲಾನು ಸ್ವಾಭಾವಿಕವಾಗಿ ಮಾತಾಡಿದರೂ ತಮ್ಮ ದೋಷಜೀವನದ ಯಾವುದೋ ಒಂದು ಗುಪ್ತ ಘಟನೆಯನ್ನು ಗುರಿಯೊಡ್ಡಿ ನಿಂತು ಗಾಯಗೊಂಡು ವ್ಯಥೆಪಟ್ಟರು. ಪಿಟ್ಟೆನ್ನದೆ ನಿಂತುವನ್ನು ನೋಡಿ ಅನಲಾನೆ ಮುಂದುವರಿದು “ನನ್ನ ಪೂರ್ವೇತಿಹಾಸವನ್ನು ಅರಿಯಬೇಕೆಂದು ಇಷ್ಟೇಕೆ ಹಂಬಲವೋ ?”

ಒಬ್ಬಳು ಎಲ್ಲರಿಗೆ ಚಹಾ ತಂದಿಟ್ಟಳು. ಅನಲಾ ಚಹದ ಕಪ್ಪುಗಳನ್ನು

ಅವರ ಮುಂದೆ ಹರಿಸಿ "ಈ ಚಹದ ಗುಟುಕಿನ ರುಚಿಯನ್ನು ನನ್ನ ಬೆಲೆ ಯಿಲ್ಲದ ಆ ಕರಿ ಬಾಳನ್ನು ಕೇಳಿ ನೋಡುಕೊಳ್ಳಬೇಡಿರಿ. ಅವರಲ್ಲಿ ಯಾರು ಇಲ್ಲವೆಂದರೆ ನಾನು ಹೇಳುವೆನು." ಎಂದು ಅವಳ ಮಾತು ಮುಗಿಯುವ ಪೂರ್ವದಲ್ಲಿ ಎಲ್ಲರು ಚಹ ಕುಡಿದು ತಮ್ಮ ತಮ್ಮ ಕೆಲಸಕ್ಕೆ ಹೋದರು.

೨

ಅನಲಾ ತನ್ನ ಹಿಂದಿನ ಬಾಳನ್ನು ಬುದ್ಧಿಪೂರ್ವಕವಾಗಿಯಾಗಲಿ, ಸ್ವಾರ್ಥದಿಂದಾಗಲಿ, ಸ್ವಾಭಾವಿಕ ಜಿಗುಪ್ಸೆಯಿಂದಾಗಲಿ ಮರೆತವಳಲ್ಲ. ಮರೆಯಲಿಕ್ಕೆ ಸಂಧಿಯನ್ನೂ ತಂದುಕೊಂಡಿರಲಿಲ್ಲ. ತನ್ನ ಮುಂದೆ ಸ್ಪಷ್ಟವಾಗಿ ಹಬ್ಬಿ ನಿಂತ ಜೀವನವನ್ನು ಹಿಂಸೋತ್ಸವ ಮಾಡಿದ ದುರ್ಘಟನೆಯ ಸಿದ್ಧಿಗಾಗಿ ಮೀಸಲಿಟ್ಟಿದ್ದಳು. ಆ ದುರ್ಘಟನೆಯು ತಪಃಫಲಕ್ಕೆ ತಾನೂ, ಇಂದಿನ ತನ್ನ ಕೃತಿಯೂ ಸಾಕ್ಷಿಯಾಗಿ ನಿಂತು ಪರೀಕ್ಷಿಸಲೆಂದು ಮಿಡಿಯುತ್ತಿದ್ದಳು. ಅವಳ ಗೆಳತಿಯರ ಇಂಥ ಮಾತುಗಳಿಂದ ಆ ಸ್ಮರಣೆಯು ಜೀರೊಡೆದು ಮತ್ತೆ ಚಿತ್ರಫಲಕದ ಮೇಲೆ ಮಿಂಚಿನಂತೆ ಸುಳಿದು ಹೋಗುವದು. ಮರುಕ್ಷಣವೇ ಒಂದು ಲಘುಶ್ವಾಸಗರೆದು ಕರ್ತವ್ಯದ ಕರೆಗೆ ಮರೆಗೊಟ್ಟು ಓಡುವಳು. ಇಂದಿನ ಕರ್ತವ್ಯಜಾಗೃತಿಯ ಉತ್ಕಟತೆಯಿಂದ ಆ ದುರಂತ ಘಟನೆಯು ನೆರಳು ಸಹ ಸೋಂಕದಂತೆ ತೀರಾಗಿದ್ದಳು.

ಇದಾಗಿ ಐದು ದಿನಗಳ ಮೇಲೆ ಕೆಲ ದಿನ ರಜೆಯನ್ನು ತೆಗೆದುಕೊಳ್ಳುವ ಪ್ರಸಂಗ ಬಂದಿತು.

ಅಕ್ಕನಿಗೆ ನಾಲ್ಕಾರು ದಿನಗಳಿಂದ ಹಿಡಿದ ಜ್ವರವು ಬಿಟ್ಟಿರಲಿಲ್ಲ. ಅನಲಾನು ಅಕ್ಕನನ್ನು ತಾಯಿಯಂತೆ ಪರಾಮರ್ಶಿಸಿದಳು. ಇಳಿವಯಸ್ಸಿನ ಕಾರಣದ ಮೂಲಕ ಜ್ವರವು ಬಂದು ವ್ಯತ್ಯಾಸವಿಲ್ಲದೆ ಹೋದವು. ಜ್ವರ ನಿಂತರೂ ಇನ್ನೂ ಏಳಲು ಕೂಡಲು ಚೆನ್ನಾಗಿ ಬರುತ್ತಿರಲಿಲ್ಲ. ಅನಲಾ ಮನೆಯ ಕೆಲಸವನ್ನು ಚೊಕ್ಕಟವಾಗಿ ನೆರವೇರಿಸಿ ಬೇಸರದ ಸಮಯದಲ್ಲಿ ತಾನರಿತ ಅಲ್ಪಜ್ಞಾನದ ಪುಸ್ತಕಾವಲೋಕನದಂತೆ ಲೋಕಪ್ರಪಂಚದ ಒಂದೆರಡು ಸಂಗತಿಗಳನ್ನು ಹೇಳಿ ಅಕ್ಕನನ್ನು ಪ್ರಸನ್ನವಾಗಿಸುತ್ತಿದ್ದಳು. ಹೊಸ ಪದ್ಧತಿಯ ಉಪಚಾರದಿಂದ ಅಕ್ಕನು ಸಂತುಷ್ಟಳಾದಳು. ಅನಲಾ ಆಕೆಯ ಕಣ್ಣಲ್ಲಿ ಒಂದು ಬಗೆಯ ಪೂಜ್ಯಮೂರ್ತಿಯಾಗಿ ಮಾರ್ಪಟ್ಟಳು. ಬೇನೆಯ

ಬಿಗಿವು ಇಳಿದು ಎರಡು ದಿನಗಳಾದವು. ಒಂದು ಮಾತಿನ ನಿರ್ಣಯಕ್ಕಾಗಿ ತಡೆಹಿಡಿದಿದ್ದಳು. ಆ ತಾಳ್ಮೆ ಬೇನೆಯ ಉತ್ತರಸಮಯದಲ್ಲಿ ಮನಸ್ಸಿನಲ್ಲಿ ನಿಲ್ಲದಾಯಿತು.

ಒಂದಿನ ಮಧ್ಯಾಹ್ನದ ಇಳಿಹೊತ್ತಿನಲ್ಲಿ ಅನಲಾ ಕಾಫಿಯನ್ನು ಅಕ್ಕನ ಮುಂದಿಟ್ಟು, ಎದುರು ಕುರ್ಚಿಯ ಮೇಲೆ ಕುಳಿತು “ಅಕ್ಕ, ಇಂದು ಪ್ರಕೃತಿಯಲ್ಲಿ ಗುಣವೇ?” ಎಂದು ಕೇಳಿದಳು.

“ಅನಲಾ, ಎಲ್ಲ ಸರಿಯಿದೆ ನಾಳೆ ನಾನೇ ಅಡಿಗೆಯನ್ನು ಮಾಡುವೆ.” ಅಕ್ಕನು ಉತ್ತರವನ್ನಿತ್ತಳು.

“ನಾನು ಮತ್ತೆ ಐದು ದಿನ ರಜೆಯನ್ನು ಬೆಳೆಸಬೇಕೆಂದಿರುವೆ.”

“ಆಗದು ಅನಲಾ. ನಾನು ನಾಳೆ ಅಡಿಗೆಯನ್ನು ಮಾಡೇಬಿಡುವೆ.”

“ಅಕ್ಕಾ ಆಗದು, ಮಾತುಗಳನ್ನು ಹಟದ ಕಡೆಗೆ ತಿರುಗಿಸಬೇಡ.”

“ನೀನು ಹಾಗೆ ಅಂದುಕೊಂಡರೆ ಸರಿ. ನಾನು ಮಾಡುವೆ. ನೀನು ಮಾಡಗೊಡುವದಿಲ್ಲೆಂದು ಮಾತ್ರ ಹಟ ಹಿಡಿಯಬೇಡ ಇಷ್ಟೇ.”

“ಅಕ್ಕ........”

“ಅಹುದು. ನಿನ್ನ ಹಟದ ಮುಂದೆ ನನ್ನ ಹಟವನ್ನು ಪರೀಕ್ಷಿಸಲು ನಿಲ್ಲಿಸುವದಿಲ್ಲ. ನಿಂತರೆ ಸೋಲುವದು ಖಂಡಿತವೆಂದು ಹೇಳುವೆ.”

“ಅಕ್ಕ........”

“ಅಹುದು ಅನಲಾ. ಈ ಮಾತಿಗೆ ಎರಡರ್ಥವನ್ನು ಮಾಡಬೇಡ. ಅನಲಾ, ಒಂದು ಮಾತು ಆಡಿಕೊಳ್ಳಬೇಕೆಂದಿರುವೆ. ನೀನು ಅವಶ್ಯ ಕೇಳು.”

“ಅಕ್ಕ, ನನಗೆ ತಿಳಿಯುವದು.”

“ಅಹುದು. ನಾನಾಡುವ ಮಾತುಗಳನ್ನು ನೀನು ಮೊದಲಾಗಿ ತಿಳಿದರೆ, ಅಕ್ಕ-ತಂಗಿಯರ ದೇಹ ಬೇರೆಂದು ಕಂಡರೂ ತಾಯಿ-ತಂದೆ ಒಬ್ಬರೇ ಎಂದು ಸ್ಪಷ್ಟವಾಗುವದು. ಅನಲಾ, ನಿನ್ನ ಸಂಸಾರವನ್ನು ನಾನು ಹೀಗೆ ಒಣವೊಣದಾಗಿ ನೋಡಬೇಕೆಂದು ಆಶಿಸಿರಲಿಲ್ಲ. ದೇವರಲ್ಲಿ ಬೇಡಿಕೊಂಡೂ ಬಂದಿರಲಿಲ್ಲ. ನಿನ್ನ ವಿದ್ಯೆ, ರೂಪ ಮತ್ತು ಸ್ವಭಾವಕ್ಕೆ ಅನುಗುಣವಾಗಿ ಗಂಧಮಾಧವನು ಪತಿಯಾಗಿ ದೊರಕಿದನೆಂದು ಸಂತೋಷದಲ್ಲಿದ್ದೆ. ನಿನ್ನ ಜೀವನಕ್ಕೆ ಅವನು ವಿಷಪ್ರಾಯನಾಗಿ ಪರಿಣಮಿಸಬಹುದೆಂದು ಬಗೆ

ದಿರಲಿಲ್ಲ. ಅನಲಾ, ಹತ್ತು ಸಾರೆ ತಾಳಿದವಳು ಹನ್ನೊಂದನೆಯ ಸಾರೆಗೂ ತಾಳುವದು ನಿನಗೆ ಜಡವಿರಲಿಲ್ಲ! ಗಂಧಮಾಧವ ಅನಲಾನ ಪಾಲಿಗೆ ಹನ್ನೊಂದನೆಯ ಸಾರೆಯಾದರು ನಿನ್ನಲ್ಲಿ ದಯವು ಹುಟ್ಟಲಿಲ್ಲವೆ ? ತಾಳ್ಮೆಗೆ ಕೊನೆಗೆ ಎಂಥ ದುರ್ಘರಫಲವಿರುವದೆಂದು ತಿಳಿಯದೆ! ಗಂಡನಾಗಿ ಕೈಹಿಡಿದ ಹೆಂಡತಿಯನ್ನು ವೇಶ್ಯೆಗೂ ಕೀಳಾಗಿ ನಡೆಸಿಕೊಳ್ಳಬೇಕೇ ? ಗಂಧಮಾಧವ, ಇಂಥ ಹೆಂಡತಿಯನ್ನು ತ್ರಿಕಾಲದಲ್ಲಾದರು ಪಡೆಯಬಹುದೇ ? ಜನರ ಸೇವೆಗಾಗಿ ಮೀಸಲಾಗಿ ನಿಂತ ಅನಲಾನ ಬಾಳಿನಲ್ಲಿ ಕಂಡ ನ್ಯೂನತೆಯೇನು ? ಹಾಯ್.... ಹಾಯ್........"

"ಅಕ್ಕ, ನಿನಗೆ ಜ್ವರಕ್ಕಿಂತಲೂ ಆಯಾಸ ಹೆಚ್ಚಾಗಿರಬೇಕು. ?"

"ಅನಲಾ, ನೀನು ಸುಖದಿಂದ ಕಾಲಕಳೆಯುವ ಮನೆಯನ್ನು ನೋಡಬೇಕೆಂದು ಬಹಳ ದಿವಸದ ಆಸೆಯಾಗಿದ್ದಿತು."

"ಅಕ್ಕ, ನಾನು ಈ ಮನೆಗೆ ಬೇಸರವಾಗದಂತೆ ನಡೆದಿರುವೆನೆಂದು ಆತ್ಮಸಾಕ್ಷಿಯಾಗಿ ಹೇಳುವೆ. ಈ ಮನೆಯ ನೆರಳಲ್ಲಿ ನಿಂತು ನೋಡಿದರೆ ಮನೆಯೊಂದೇ ಕಂಡುಬರುವುದು; ಜಗತ್ತು ನನಗೆ ಕಾಣಿಸುವದಿಲ್ಲ."

"ಅನಲಾ, ನಾನು ಆ ಮಾತನ್ನು ಆಡುವೆನೆ ?"

"ಅಕ್ಕಾ, ನೀನು ನನ್ನ ಪಾಲಿನ ಬ್ರಹ್ಮನಾಗಿದ್ದರೆ ನನ್ನ ಭವಿಷ್ಯವನ್ನು ಹೇಗೆ ಬರೆಯುತ್ತಿದ್ದೆ ಹೇಳಬಲ್ಲೆಯಾ ?"

"ಇನ್ನೊಂದು ಸಾರೆ ತಾಳೆಂದು ಬರೆಯುತ್ತಿದ್ದೆ."

"ಆ ಮುಂದೆ ನಾನು ಮಾಡಿದಂತೇ ಬರೆಯುತ್ತಿದ್ದೆಯಲ್ಲ. ಇದರಲ್ಲಿ ತಪ್ಪೇನು ?"

"ಅನಲಾ, ನಿನ್ನ ಮಾತಿನ ಜೊತೆಗೆ ನಾನು ಓಡಲಾರೆ. ನಾವು ಹೆಣ್ಣು ಜಾತಿಗೆ ಸಂಬಂಧಿಸಿದವರು."

"ಅಹುದು. ನೀನು ಸರಿಯಾಗಿ ಮಾತಾಡಿದೆ. ಗಂಡುಜಾತಿಗೆ ಮೊಲೆಯುಣಿಸಿದವರು ನಾವೇ !"

"ತಾಯತನದ ಹೊಣೆಗಾರಿಕೆಯ ಮಾತನ್ನು ನೀನು ಆಡಬಹುದೇ ?"

"ಓಹೋ! ಅಕ್ಕ, ನನ್ನನ್ನು ಗೆದಿಯುವದಕ್ಕೆ ಸ್ವಾರ್ಥದ ಕಡೆಗೆ ಓಡಬೇಡ. ನಾನು ಸ್ತ್ರೀಯಾಗಿ ಹುಟ್ಟಿದ ದಿನವೇ ಅದನ್ನು ಪಡೆದುಕೊಂಡಿರುವೆ.

ಸ್ತ್ರೀಯ ಅರ್ಥ ಬೇರಲ್ಲ. ತಾಯಿತನದ ರಸಗಟ್ಟಿ ಅದು. ನೀನಾಡಿಸಿದ ಮಕ್ಕಳನ್ನೇ ನಾನಾಡಿಸಿಲ್ಲವೇ ? ನೀನು ಹೊಟ್ಟೆಯಿಂದ ಎತ್ತಿ ಜನನ ಕೊಟ್ಟು ಮುದ್ದಾಡಿ ಸುಖಪಡುವಂತೆ ನಾನು ಮನಸಿನಿಂದ ಎತ್ತಿ, ಹೃದಯಕ್ಕೊತ್ತಿ ಮುದ್ದಾಡಿ ಸುಖಪಡುತ್ತಿರುವೆ. ನೀನು ಆ ಮಕ್ಕಳ ತಾಯಿಯೆಂದು ತಾಳುವ ಅಭಿಮಾನಕ್ಕಿಂತಲೂ ನನ್ನ ಅಭಿಮಾನ ಕೀಳೆಂದು ತಿಳಿಯಬೇಡ.''

''ಅನಲಾ, ನಿನ್ನ ಮಾತುಗಳಿಂದ ನನ್ನ ಮಾತುಗಳು ಸೋಲುವವು. ಆದರೆ ಮನಸು ಸೋಲುವಂತಹ ಮಾತುಗಳಿದ್ದರೆ ಒಂದೆರಡು ಹೇಳು''

ಅಷ್ಟರಲ್ಲಿ ಅಕ್ಕನ ಹಿರಿಯ ಮಗನು ಓಡುತ್ತ ಒಳಗೆ ಬಂದು ''ಅನಲಾ ತಾಯಿ, ಆಸ್ಪತ್ರೆಯಿಂದ ಆಳುಮಗನು ಬಂದು ಈ ಚೀಟಿಯನ್ನು ಕೊಟ್ಟು ಹೋದನು.'' ಎಂದು ಕಾಗದವನ್ನು ಕೊಟ್ಟು ಓಡಿದನು. ಅದನ್ನು ತೆರೆದು ಅನಲಾ ಓದಿಕೊಂಡಳು.

''ಅಕ್ಕ, ನಿನ್ನ ಮಾತು ಸಧ್ಯಕ್ಕೆ ಗೆದಿಯಲಿ. ಮನಸಿನ ಪ್ರಸಂಗ ಇನ್ನೊಮ್ಮೆ" ಎಂದಳು.

''ಯಾಕೆ ?"

''ಇಂದು ನಾನು ಆಸ್ಪತ್ರೆಗೆ ಹೋಗಿ ಹಾಜರ ಆಗುವೆನು. ಒಂದು ಮಹತ್ವದ ಆಪರೇಶನ್ನ ಇದೆಯಂತೆ. ಅದಕ್ಕೆ ನನ್ನ ನೆರವು ಅವಶ್ಯವೆಂದು ಡಾಕ್ಟರರು ಕಾಗದವನ್ನು ಕಳಿಸಿರುವರು."

''ಆಗಲಿ. ನನ್ನ ಮೊದಲಿನ ಮಾತು ಗೆದಿಯಿತು. ಇನ್ನೊಂದು ಮಾತು ಎಂದು ಗೆದಿಯುವದೋ ನೋಡುವೆನು.''

ಅನಲಾ ದವಾಖಾನೆಗೆ ಹೋದಳು. ಉಳಿದ ದಾದಿಯರು ಅವಳನ್ನು ಆದರದಿಂದ ಬರಮಾಡಿಕೊಂಡರು.

ಆಪರೇಶನ್ನದ ವೇಳೆ ಸಮೀಪಿಸಿತು. ಅನಲಾ ಡಾಕ್ಟರ ಬಳಿಗೆ ಹೋಗಿ ಆಪರೇಶನ್ನ ವಿಧಿ-ವಿಧಾನವನ್ನು ಕೇಳಿದಳು.

''ಅನಲಾತಾಯಿ, ರೋಗಿಗೆ ವಯಸ್ಸಾದಂತಿದೆ. ತಲೆಯು ಜಜ್ಜಿ ಸ್ಮೃತಿ ತಪ್ಪಲಾಗಿದೆ. ಮಿದುಳಿನ ಒತ್ತಡದಿಂದ ರೋಗಿಗೆ ಇನ್ನೂ ಸ್ಮೃತಿಯಿಲ್ಲ. ಒಂದು ಕಡೆಗೆ ತಲೆಯೊಡೆದು ಬಹಳ ರಕ್ತಶ್ರಾವವಾಗಿದೆ. ಆದರೆ

ಬದುಕುವೆನೆಂಬ ಆಶೆಯಿದೆ. ಆದರೆ ನಾನು ಕರೆಸಿದೆನೆಂದು ನಿಮ್ಮ ಮನೆಯಲ್ಲಿ ತೊಂದರೆ ಇಲ್ಲವಷ್ಟೇ ?" ಎಂದು ವಿನಯದಿಂದ ಕೇಳಿದರು.

"ಡಾಕ್ಟರರೇ ಹಾಗೇನಿಲ್ಲ. ಅಕ್ಕನು ಸಂಪೂರ್ಣ ಗುಣ ಹೊಂದಿರುವಳು. ನಾನು ಹಾಜರ ಆಗಬೇಕೆಂದು ಅಕ್ಕನು ಆಗ್ರಹ ತೊಟ್ಟಿದ್ದಳು. ನಿಮ್ಮ ಕಾಗದ ಸಾಕಾಯಿತು, ಬಂದೆ."

"ಸಂತೋಷ."

"ಆಗಲಿ, ನಾನು ಎಲ್ಲಿ ನಿದ್ದೆಯನ್ನು ಮಾಡುವೆ"

"ಅಷ್ಟರಲ್ಲಿ ಊರ ಇಬ್ಬರು ಡಾಕ್ಟರು ಬರಬಹುದು."

ಅನಲಾ ತನ್ನ ಕೆಲಸಕ್ಕೆ ಹೋದಳು. ಆದರೆ ರೋಗಿಯನ್ನು ಇನ್ನೂ ನೋಡಿರಲಿಲ್ಲ. ನೋಡಬೇಕೆಂಬ ಚಪಲತೆಯೂ ಅವಳನ್ನು ಕಾಡಲಿಲ್ಲ.

ಆಳುಗಳು ರೋಗಿಯನ್ನು ತಂದು ಕೋಣೆಯಲ್ಲಿ ಮಲಗಿಸಿದರು. ಡಾಕ್ಟರು ತಮ್ಮ ಗೆಳೆಯರೊಂದಿಗೆ ಬಂದರು. ಇಬ್ಬರು ದಾದಿ ಜನರು ಅನಲಾನ ಕೈಕೆಳಗೆ ಸಹಾಯಕ್ಕೆ ನಿಂತರು.

ಡಾಕ್ಟರು ರೋಗಿಯ ಮುಖದ ಮೇಲಿನ ಮುಸುಕು ತೆರೆದು 'ಇದೋ' ಎಂದು ಪೆಟ್ಟಾದ ತಲೆಯ ಭಾಗವನ್ನು, ಗಾಯವನ್ನು ತೋರಿಸಿ ವರ್ಣಿಸಹತ್ತಿದರು. ಅನಲಾ ನೋಡಿದಳು. ಎದೆಯು ಝಲ್ಲೆಂದಿತು. ಮಿಂಚು ತಲೆಯನ್ನು ಹೊಕ್ಕು, ದೇಹದಲ್ಲಿ ಹರಿದು ಭೂಮಿಯಲ್ಲಿ ಇಳಿದಂತಾಯಿತು. ಮನಸೂ, ಕೈಕಾಲುಗಳೂ ತಡಬಡಿಸಹತ್ತಿದವು. ಡಾಕ್ಟರು ತೋಳೇರಿಸಿ ಕೊಯ್ಯಲಿಕ್ಕೆ ಸಿದ್ಧರಾದರು. ಉಳಿದ ಸಹಾಯಕರು ರೋಗಿಯ ಜೀವಧಾರಣ ಶಕ್ತಿಯನ್ನು ಕಾಯ್ದುಕೊಂಡಿರಲು ಪ್ರಯತ್ನಿಸಹತ್ತಿದರು.

ಅನಲಾ ಕಾಣಬಾರದು, ವಿಚಾರಿಸಬಾರದು, ತರ್ಕಿಸಬಾರದು ಎಂದುಕೊಂಡು ಬಂದ ಹನ್ನೆರಡು ವರುಷಗಳ ಸಂಗತಿಯು ತಾನಾಗಿ ಓಡೋಡಿ ಕಣ್ಣ ಮುಂದೆ ಬಂದು ಬಂದು ಹೋಗಹತ್ತಿತು. ಒಂದು ಸಾರೆಯಲ್ಲ, ಹತ್ತಿಪ್ಪತ್ತು ನೂರು ಸಾರೆ ಅನಲಾನ ಸ್ಮರಣೆಯ ಭದ್ರವಾದ ಕೋಣೆಯಿಂದ ಹೊರ ಧುಮುಕಿ, ಕಣ್ಣ ಮುಂದೆ ಚಿತ್ರ ಮೂಡಿ ಮರೆಯಾಗಹತ್ತಿತು. ತಾನೊಬ್ಬ ದಾದಿ. ಆಪರೇಶನ್ನದ ಕೋಣೆಯಲ್ಲಿರುವೆ. ಡಾಕ್ಟರರಿಗೆ ಸಹಾಯಕಳಾಗಿ ನಿಂತಿರುವೆ

ತನ್ನ ಸ್ಥಿರಬುದ್ಧಿ ಹೋಯದಾಡಿದರೆ ಘಾತ. ರೋಗಿ ಬದುಕಬೇಕಾದರೆ ತನ್ನ ನೆರವು ಅಗತ್ಯ. ಮುಂತಾದ ವಿಷಯಗಳು ಮುಸುಕುಮುಸುಕಾಗಹತ್ತಿದವು.

ಡಾಕ್ಟರು ಆಪರೇಶನ್ನದ ತಂದ್ರಿಯಲ್ಲಿರುವರು. ಅನಲಾ ದಾದಿ ಕೊಟ್ಟ ಶಸ್ತ್ರಗಳನ್ನು ಒಂದೊಂದಾಗಿ ಡಾಕ್ಟರರ ಕೈಗೆ ಕೊಡುತ್ತಿರುವಳು. ಗಟ್ಟಿಯಾಗಿ ಉಸಿರನ್ನು ಸಹ ಬಿಡದೆ ಎಲ್ಲರು ಕೆತ್ತಿದ ಪ್ರತಿಮೆಗಳಂತೆ ನಿಂತಿರುವರು. ಮೌನವು ಸಾಮ್ರಾಜ್ಯ ಸಿಂಹಾಸನದ ಮೇಲೆ ಸ್ಥಿರವಾಗಿ ಕುಳಿತು ತೂಕಡಿಸುವಂತೆ ಶಾಂತ, ಶಾಂತ. ಆಪರೇಶನ್ನು ಮುಗಿಯಬಂದಿದೆ. ಡಾಕ್ಟರು ಕೊನೆಯ ಶಸ್ತ್ರಕ್ಕೆ ಕೈನೀಡಿದರು. ಅನಲಾ ಸುಮ್ಮನೆ ನಿಂತಿರುವಳು. ಹಿಡಿದ ಶಸ್ತ್ರ ಡಾಕ್ಟರರ ಕೈಗೆ ಬರಲಿಲ್ಲ. ನೋಡಿದರು. ಅನಲಾನ ನಿಶ್ಚಲ ಭಾವಪೂರ್ಣ ಮೂರ್ತಿ ಕಂಡಿತು. ಡಾಕ್ಟರು "ಅನಲಾ!" ಎಂದರು. ಎಚ್ಚತ್ತಳು. ಗಾಬರಿಯಾಗಿ ಕೈಯಲ್ಲಿಯ ಶಸ್ತ್ರ ಕೊಟ್ಟಳು ಅಂತೂ ಮುಗಿಯಿತು. ಆಳುಗಳು ರೋಗಿಯನ್ನು ಮೆಲ್ಲಗೆ ತೆಗೆದುಕೊಂಡು ಹೋದರು.

ಬಟ್ಟೆಬರೆಗಳನ್ನು ಬದಲಿಸಿ ಕೈಕಾಲು ತೊಳೆದು ಡಾಕ್ಟರು ಅನಲಾನನ್ನು ಕರೆಕಳುಹಿದರು. ಅನಲಾ ಬಂದು ಹುಚ್ಚುಹುಚ್ಚಾಗಿ ಮುಖ ಕೆಳಗೆ ಮಾಡಿ ನಿಂತಳು.

"ಅನಲಾತಾಯಿ, ನಿಮ್ಮ ಮನಸು ಏಕೋ ಇಂದು ವ್ಯಗ್ರವಾಗಿದೆ?" ಎಂದರು.

"ಡಾಕ್ಟರ........"

"ನೂರಾರು ಆಪ್ರೇಶನ್ನುಗಳ ಅನುಭವವುಂಟು ನಿಮಗೆ!"

"ಅಹುದು ಡಾಕ್ಟರ...."

"ಆದರೆ ಇಂದು ಹೀಗೇಕೆ?"

"ಮನಸು ಒಂದಿಷ್ಟು ಅಸ್ಥಿರವಾಗಿದ್ದಿತು. ಕ್ಷಮಿಸಿರಿ."

"ನಾನು ಕಾರಣವನ್ನು ಕೇಳಬೇಕೆಂದು ಕರೆಸಿಲ್ಲ. ನೀವು ಹಾಗೆ ಹೇಳದ್ದರೆ ನಾನು ಕರೆಸುತ್ತಿರಲಿಲ್ಲ."

"ಡಾಕ್ಟರ, ನಿಮ್ಮ ವಿನಯವನ್ನು ನಾನು ಇನ್ನೊಮ್ಮೆ ಎತ್ತಿ ಆಡ ಬಯಸುವದಿಲ್ಲ. ನನ್ನ ಮನಸು ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳುವೆನು." ಎಂದು ಸೌಮ್ಯವಾಗಿ ಮಾತಾಡಿದಳು.

"ಅವನು ಬದುಕಿದರೆ ಆ ಪುಣ್ಯದಲ್ಲಿ ನಿಮಗೂ ಒಂದಿಷ್ಟು ಪಾಲು ಇರಲೆಂದು ಕರಿಕಳುಹಿವೆ." ಎಂದು ಡಾಕ್ಟರು ನಕ್ಕರು.

"ಆ ಪುಣ್ಯಕ್ಕಾಗಿ ನಾನು ಅಭಿಮಾನಪಡುವೆ. ನನ್ನ ವ್ಯಗ್ರತೆಯ ಕಾರಣವನ್ನು ನಾನು ಈಗಿನಿಂದಲು ಮರೆಯುತ್ತಿರುವೆ. ಆದರೆ ಡಾಕ್ಟರ್, ರೋಗಿಯ ಮೈಯಿಂದ ರಕ್ತವು ಬಹಳ ಹೋಗಿದೆ. ಗಾಯವೂ ದೊಡ್ಡದಿದೆ.

"ಅಹುದು. ಎಂಟು-ಹತ್ತು ದಿನಗಳು ಹೋಗಲಿ. ರೋಗಿ ಯಾರೆಂದು ಬಲ್ಲಿರಾ?"

"ಇಲ್ಲ"

"ಗಂಧಮಾಧವ ದೇಸಾಯಿ. ಅವನು ತೊಟ್ಟ ಮಾಸಿದ ಹರಕ ಕೋಟಿನಲ್ಲಿ ಇನ್ನೂ ಕೆಲ ಸಂಗತಿಗಳು ತಿಳಿಯುವಂತಹ ಕಾಗದಗಳುಂಟು. ಮೊದಲು ಅವನೊಬ್ಬ ದೊಡ್ಡ ಮನೆತನದವನಿರಬೇಕು!"

"ಅಪಘಾತದಲ್ಲಿ ಸಿಕ್ಕವನೆ?" ಎಂದು ವಿಷಯವನ್ನು ಬದಲಿಸಿದಳು.

"ಗೋಕಾಕದ ಮೋಟಾರಿನಲ್ಲಿ ಸಿಕ್ಕು ಈ ಅವಸ್ಥೆಗೆ ಬಂದಿರುವನು. ಆಪ್ತೇಷ್ಟರು ಯಾರೆಂಬುದು ತಿಳಿಯದು."

"ತಿಳಿಯದೇ!"

"ಹೆಚ್ಚಿನ ವಿಚಾರ ನಮಗೇನು ಮಾಡುವದು? ಮೋಟರದವರು ತಂದು ಹಾಕಿದರು. ನಮ್ಮ ಕೆಲಸ ಗುಣಪಡಿಸುವದು. ಕರ್ತವ್ಯದ ಫಲವೆಂದು ಅವನು ಬದುಕಿದರೆ ಸರಿ."

"ಆಗಲಿ" ಎಂದು ನುಡಿದು ತನ್ನ ಕೆಲಸಕ್ಕೆ ಹೋದಳು.

ಸಂಜೆಯಾಯಿತು. ಅನಲಾಳ ತಲೆಯಲ್ಲಿ ಹರಡಿದ ವಿಚಾರಮಾಲೆಯು ಗೊಂದಲದಲ್ಲಿ ಕೆಡವಿ ಮನಸಿಗೆ ನೆಮ್ಮದಿಯನ್ನುಂಟುಮಾಡಲೊಲ್ಲದು. ರೋಗಿಯ ಮುಖವನ್ನು ನೋಡುವುದಕ್ಕೂ, ಡಾಕ್ಟರು 'ಗಂಧಮಾಧವ ದೇಸಾಯಿ' ಎಂದು ಹೆಸರು ಹೇಳುವದಕ್ಕೂ ತಾಳ-ಮೇಳ ಹೊಂದಿ ಇವನೇ ತನ್ನ ಗಂಡನೆಂದು ಅರಿಯುವದು ತಡವಾಗಲಿಲ್ಲ. ಅವನು ತೊಟ್ಟ ಕೋಟಿನಲ್ಲಿಯ ಇನ್ನೂ ಕೆಲ ಸಂಗತಿಗಳನ್ನು ಅರಿತು ತಾನೇನು ಮಾಡಬೇಕು? ಅರಿತ ಸಂಗತಿಯನ್ನೇ ಮರೆಯಬೇಕೆಂಬ ಪ್ರಯತ್ನದಲ್ಲಿದ್ದ ತನಗೆ ಅವುಗಳಿಂದ

ಉಪಯೋಗವೇನು ? ಸರಿ. ಆತನ ಮುಖವನ್ನು ನೋಡದೆ ಇಂದಿಗೆ ಹನ್ನೆರಡು ವರುಷಗಳಾದವು. ಇಂದು ನೋಡಿ ಮನಸು ಹೀಗೇಕೆ ವ್ಯತ್ಯಾಸ ಹೊಂದಬೇಕು ? ಈ ವರೆಗೆ ನೂರಾರು ಆಪರೇಶನ್ನುಗಳನ್ನು ಮಾಡಿದ ಸಂಗತಿಯನ್ನು ತಾನು ಬಲ್ಲೆ. ಗಂಧಮಾಧವನಕಿಂತಲೂ ಚಿಕ್ಕವರಿದ್ದರು. ದೊಡ್ಡವರಿದ್ದರು. ಆಗ ಯಾವ ಬಗೆಯ ಚಿಂತೆಯು ನಂತೆ ಇರಲಿಲ್ಲ. ಇಂದು ಹೀಗೇಕೆ? ನೂರಾರು ಅಸಂಬದ್ಧ ಸಂಗತಿಗಳು ತಲೆಯನ್ನು ಸೇರಿ ನೋವನ್ನುಂಟು ಮಾಡಿದವು.

ಅಂದು ರಾತ್ರಿ ಅನಲಾನಿಗೆ ಬಿಡುವು. ಆಸ್ಪತ್ರೆಯಲ್ಲಿ ರಾತ್ರಿ ವ್ಯವಸ್ಥೆಯನ್ನು ಮಾಡಿ ಮನೆಗೆ ನಡೆದಳು. ದಾರಿಯುದ್ದಕ್ಕೂ ಇದೇ ವಿಚಾರ. ಮನಸು ಎಳೆ-ಎಳೆದು ಹಿಂದೆ ಜಗ್ಗಿ ನಿಲ್ಲಿಸುವದು. ಕರ್ತವ್ಯವು 'ಅವನೊಬ್ಬ ರೋಗಿ; ಮುಂದೆ ನಡೆ' ಎನ್ನುವದು.

ಈ ಮಾತಿಗೆ ಮನಸು 'ಎಲೇ, ನಿಷ್ಕರುಣಿ ಕರ್ತವ್ಯವೇ, ಗಂಧಮಾಧವನು ಅನಲಾನ ಧರ್ಮಪತಿಯು. ಅನಲಾನ ಸ್ತ್ರೀಜೀವನಕ್ಕೆ ಎರಡು ದಿನವಾದರು ಮಂಗಲದಾಯಕವಾಗಿ ಸುಖಪಟ್ಟಿರುವನು' ಎನ್ನುವದು.

“ಹೋದ ಜನ್ಮದಲ್ಲಿ ಯಾರಿಗೆ ಯಾರೋ ? ಎನ್ನುವಂತೆ ಅದರ ವಿಚಾರ ಈಗೇಕೆ ?” ಎಂದು ಕರ್ತವ್ಯವು ಬಾಣ ಬಿಡುವದು.

“ಛೀ, ಅನಲಾನು ಒಬ್ಬ ಮಾನವಳು. ದಯೆ, ಮಾಯೆ, ಪ್ರೀತಿ ಮುಂತಾದ ಉದಾತ್ತ ವಿಚಾರಗಳು ಅವಳಿಂದ ತೊಲಗಿಹೋಗಿವೆಯೆಂದು ತಿಳಿಯಬೇಡ. ಅವಳ ಪತ್ನಿ-ಜೀವನದ ಮುಕ್ಕಾಲು ಭಾಗ ಸಂಕಟಗಳಿಂದ ತುಂಬಿರಬಹುದು. ನಿದ್ರೆಯ ಪೂರ್ವಭಾಗವೆಲ್ಲ ದುಸ್ವಪ್ನ, ದುರ್ವಿಕಾರಗಳಿಂದ ಹೆಣೆದಿರಬಹುದು. ಕಣ್ಣೀರಿನ ಕಾಲುವೆಯನ್ನೇ ಹರಿಸಿರಬಹುದು. ಆದರೆ ಒಂದರ್ಧ ಕಾಲವಾದರು ಆಕೆ ಧರ್ಮಪತ್ನಿಯೆಂದು ಗಂಧಮಾಧವನ ಸೇವೆಯನ್ನು ಮಾಡಿಲ್ಲವೆ ? ದಯೆಯ ಭಿಕ್ಷೆಯನ್ನು ಹೊಂದಿಲ್ಲವೇ ? ಸಂಸಾರಸುಖಕ್ಕಾಗಿ ಗಂಧಮಾಧವನನ್ನು ನಗೆಯಿಂದ ಬರಮಾಡಿಕೊಂಡಿಲ್ಲವೇ ? ಇಂದು ಹೊತ್ತು ನಿಂತ ಈ ದೇಹವು ಅವನನ್ನು ಗಂಡನೆಂದು ಕರೆದು ಅಭಿಮಾನ ಪಟ್ಟಿಲ್ಲವೇ? ಅವಳ ಕೈಗಳು ಸೇವೆಗಾಗಿ ಹಾತೊರೆದು ನಿಂತಿಲ್ಲವೇ ? ಇವೆಲ್ಲವುಗಳನ್ನು ಹೇಗೆ ಮರೆಯಬಚ್ಚುವೆ !”

“ಅವೆಲ್ಲ ಸಂಕುಚಿತ ಭಾವನೆ.” ಕರ್ತವ್ಯವು ಮನಸನ್ನು ಹಳಿಯಿತು.

"ನೀನು ಕುರುಡ." ಮನಸು ಅಣಕಿಸಿತು.

ಹೀಗೆಯೆ ಗೊಂದಲಗೊಂದಲಮಯವಾಗಿ ದಾರಿಯನ್ನು ತುಳಿದಳು. ಮನೆಯನ್ನು ಮುಟ್ಟಿದ ಸಂಗತಿಯು ತಿಳಿಯದು. ಪಡಸಾಲೆಯ ಒಂದು ಕುರ್ಚಿಯ ಮೇಲೆ ಆಯಾಸಗೊಂಡವರಂತೆ ಕುಳಿತಳು. ಮನಸು ಇಷ್ಟು ಅಸ್ಥಿರವಾದುದು ಜೀವನದಲ್ಲಿ ಇದೇ ಮೊದಲು.

ಮಕ್ಕಳು "ಅನಲಾತಾಯಿ!" ಎಂದು ಎಷ್ಟೋ ಕೂಗಿಟ್ಟು ಕರೆದವು. ಮರುನುಡಿಯಿಲ್ಲದ್ದರಿಂದ ಮತ್ತೆ ಹೊರಗೆ ಹೋದವು. ಅಕ್ಕನು ಒಂದಿಷ್ಟು ತಿರುಗಾಡಿಕೊಂಡು ಬರಲು ಹೊರಗೆ ಹೋಗಿದ್ದಳು. ಪಡಸಾಲೆಯಲ್ಲಿ ತಾನೇ ತಾನು. ಬೇರೊಂದು ವಿಚಾರವಿಲ್ಲದ್ದರಿಂದ ಮನಸು ಮತ್ತೆ ಮುಂದುವರಿದು ಸುಪ್ತಸಂಗತಿಗಳನ್ನು ಕೊರೆದು ಚಿತ್ರಮಾಡಿಸಹತ್ತಿತು :

ಮದುವೆಯಾದ ಮೇಲಿನ ಎರಡು ವರುಷಗಳ ಸಂಗತಿಯು ಕ್ಷಣಾರ್ಧದಲ್ಲಿ ಮುಗಿಯಿತು. ಆ ಕೊನೆಯ ದಿನದ ದುರಂತ ಘಟನೆಯು ನಿದಾನವಾಗಿ, ಸ್ಪಷ್ಟವಾಗಿ ಕಣ್ಣ ಮುಂದೆ ಕಾಲಿಟ್ಟು ನಡೆಯಹತ್ತಿತು.

ಅನಲಾ ನಿನ್ನೆ ರಾತ್ರಿ ಗಂಡನಿಂದ ತಿಂದ ಹೊಡೆತಗಳಿಗೆ ಮಲಮು ಸವರಿ ಪಟ್ಟಿಯನ್ನು ಕಟ್ಟಿಕೊಳ್ಳಹತ್ತಿರುವಳು ತೊಡೆಯ ಮೇಲೆ ಬಾಳೆಯ ಕಾಯಿಯಂತೆ ಗಡುತರವಾಗಿ ಉಬ್ಬಿ ಹಸಿರಿಟ್ಟ ಬಾಸುಳಕ್ಕೆ ಮಲಮು ತೊಡೆಯುವ ಮುಂದೆ ಕೈಜಾರಿ ಬಾಟಲಿಯು ಬಿದ್ದಿತು. ಗಾಯದ ಮೇಲೆ ಬರೆ ಎಳೆದಂತೆ ನೋವು ಅಧಿಕವಾಗಿ ಕಣ್ಣೀರು ತಾವಾಗಿ ಹರಿಯಹತ್ತಿದವು. ಆದರೂ ಸೆರಗಿನಿಂದ ಒರಸಿಕೊಂಡು ಪಟ್ಟಿಯನ್ನು ಕಟ್ಟಿದಳು. ಗಂಡನಿಗೆ ವಿವೇಕ ಎಂದು ಬರುವದೋ ಎಂದು ಅತ್ತ ಕಣ್ಣೀರು ಬಡಿತಕ್ಕಿಂತಲೂ ಅಧಿಕವಾಯಿತು. ಎದುರು ಗೋಡೆಗೆ ತೂಗುಹಾಕಿದ ಬಾಲಗೋಪಾಲನ ಮೂರ್ತಿಗೆ ಭಾವೋದ್ರೇಕದಿಂದ ನಮಸ್ಕರಿಸಿದಳು. ಮದುವೆಯ ಪೂರ್ವದಲ್ಲಿ ತಾನು ಅನುಭವಿಸಿದ ಸುಖಸ್ವಪ್ನ ಇಂದು ಶತಚೂರ್ಣವಾಗಿ ಹರಿದುಹೋಯಿತು. ಸಂಕಟಮಯವಾದ ತನ್ನ ಬಾಳನ್ನು ಹಳಿದುಕೊಂಡಳು. ಇದನ್ನು ಇನ್ನೂ ಎಷ್ಟು ದಿನ ಉಣ್ಣಬೇಕಾಗುವದೋ ಎಂದು ಆಲೋಚಿಸಿದಳು. ನಾಳೆ ವಿವೇಕ ಬಂದೀತು, ಇನ್ನು ಬಹಳ ದಿನ ಉಳಿಯಲಿಕ್ಕಿಲ್ಲ, ಎಂಬ ತಾಳ್ಮೆಯಿಂದ ದಿನ ಕಳೆದಳು.

ಆಗ ಇಳಿಹೊತ್ತಿನ ಸಮಯ. ಆ ಮನೆಯಲ್ಲಿ ತನ್ನ ಹೊರತು ಬೇರಾರೂ ಇಲ್ಲ. ಒಬ್ಬಳೇ ಒಬ್ಬಳು ಇಡೀ ಮನೆಗೆ. ಮದುವೆಯಾದ ಮೇಲೆ ಒಂದು ದಿನದ ಮನೆ ತುಂಬಿ ನಿಂತ ಭಾಗ್ಯವು ಇಂದು ಬರಿದು ಬರಿದು. ವೇಶ್ಯೆಯ ಮನೆಗೆ ಸಾಲುಗಟ್ಟಿಕೊಂಡು ಹರಿದುಹೋಗಿದೆ. ಹಾಗೆ ಮಾಡಬಾರದೆಂದು ಬುದ್ಧಿಯನ್ನು ಹೇಳಹೋಗಿ ನಾಲ್ಕೈದು ಸಾರಿ ಬೆನ್ನು ಕಾಸಿಕೊಂಡಿದ್ದಳು. ಇತ್ತಲಾಗಿ ಆ ಮಾತನ್ನೇ ಎತ್ತಲಾರದವಳಾಗಿ ಕುಳಿತಿರುವಳು. ತನ್ನ ವಿದ್ಯೆ, ತನ್ನ ತಾಳ್ಮೆ ಗಂಡನನ್ನು ಸನ್ಮಾರ್ಗದ ಕಡೆಗೆ ಎಳೆಯಲು ಎಷ್ಟು ಮಾತ್ರವೂ ಸಹಕಾರಿಯಾಗಿ ನಿಲ್ಲಲೊಲ್ಲವು........ಎಂದು ವಿಚಾರಿಸುತ್ತಿರುವಷ್ಟರಲ್ಲಿ ಬಾಗಿಲ ತೆರೆದ ಸಪ್ಪಳಾಯಿತು. ಗಂಧಮಾಧವನು ಬಂದನು.

ಗಂಡನು ಬಂದನೆಂದು ಒಳಮನೆಗೆ ಹೋದಳು. ಹಿಂದಿನಿಂದ "ಶ್ರೀಮತೀ....!" ಎಂದು ಒದರುತ್ತ, ಜೋಲಿಯನ್ನು ಹೊಡೆಯುತ್ತ ಮಾಧವನು ಒಳಬಂದನು. ಒಳಮನೆಯ ಒಂದು ಮೂಲೆಯಲ್ಲಿ ಅನಲಾ ಗೋಡೆಗೆ ಒರಗಿ ನಿಂತಳು.

ಗಂಡನ ಬಾಯಲ್ಲಿ ಅಸ್ಪಷ್ಟ ಮಾತು. ಹೇಸಿಕೆ ಬರುವಂತಹ ಪ್ರೈಮೋಲಿನ ಬಟ್ಟೆ. ಅರ್ಧ ಪ್ರಜ್ಞೆ; ಅರ್ಧ ವಿಸ್ಮೃತಿ ಬಾಯಿಂದ ದುರ್ಗಂಧ ವಾಸನೆ. ಮುಖದ ಮೇಲೆ ಭೀಕರ ಕಳೆ. ನಿಸ್ತೇಜವಾಗಿ ಒಣಗಿ ನಿಂತ ಕೈಕಾಲು. ನೋಡಿ ಅನಲಾನಿಗೆ ಅಸಹ್ಯವೆನಿಸಿತು. ಇಂಥ ಪತಿಯನ್ನು ಆಜನ್ಮ ಸೇವೆ ಮಾಡಿಕೊಂಡು ನಿಲ್ಲಬೇಕೇ ? ದೇವಾ....!" ಎಂದು ಕಣ್ಣೀರು ಹರಿಸಿದಳು. ಗಂಧಮಾಧವನು ಅದನ್ನು ಕಂಡನು. ತೊದಲಿಸುತ್ತ, "ನನ್ನನ್ನು ನೋಡಿ ನಿನಗೆ ದುಃಖವಾಗುವದೇನೇ ?" ಎಂದನು. ಬಾಯಿಂದ ದುರ್ಗಂಧ ವಾಸನೆಯು ಹೊರಟಿತು.

ಅನಲಾ ಸುಮ್ಮನಿದ್ದಳು. ಕಣ್ಣಿಂದ ನೀರು ಹಾಗೇ ಹರಿಯುತ್ತಿದ್ದವು.

"ನನ್ನ ಈ ಅವಸ್ಥೆಯನ್ನು ನೋಡಿ ಹೇಸಿಕೆ ಬಂದಿತೇನೆ ?" ಕುರ್ಚಿಯ ಮೇಲೆ ಧೊಪ್ಪನೆ ಕುಳಿತನು.

ಮತ್ತೂ ಸುಮ್ಮನಿದ್ದಳು.

"ಮಾತಾಡುವಿಯೋ, ಇಲ್ಲವೋ ?" ಬಡಿಗೆಯನ್ನು ಕೈಚಾಚಿ ತೆಗೆದುಕೊಂಡನು.

ಅನಲನು ಕಣ್ಣರಳಿಸಿಕೊಂಡನು. ಗಂಡನನ್ನು ಇನ್ನೊಮ್ಮೆ ನೋಡಿದಳು. ಹೇಸಿಕೆ, ತಿರಸ್ಕಾರದ ಸುಳಿಗಳು ಮುಖದ ಮೇಲೆ ಮೂಡಿಕೊಂಡವು. ಗಂಡನ ಕಠೋರ ಮಾತುಗಳನ್ನು, ಅಸಭ್ಯವರ್ತನೆಯನ್ನು ಪ್ರತಿಭಟಿಸ ಬೇಕೆಂದಳು. ಗಂಭೀರತೆಯು ಕಣ್ಣಲ್ಲಿ ಇಣಿಕಿಕ್ಕಿತು; ಧೈರ್ಯದ ಸಹಾಯ ದಿಂದ ಬೀಡು ನಿಂತಿತು.

"ಏನೆಂದೆ? ಉತ್ತರವನ್ನು ಕೊಡದಿದ್ದರೆ ನೋಡು." ಬಡಿಗೆಯನ್ನು ಮೇಲೆತ್ತಿದನು.

"ಉತ್ತರವನ್ನು ಕೊಡುವೆ. ಒಂದಿಷ್ಟು ಆ ಕುರ್ಚಿಯ ಮೇಲೆ ಗಟ್ಟಿಯಾಗಿ ಕುಳಿತುಕೊಳ್ಳಿರಿ." ಮಾತಿನಲ್ಲಿ ಗಡುಸುತನವನ್ನು ತಂದುಕೊಂಡು ನುಡಿದಳು.

"ಹಾಂ! ಹೀಗೆ ಮಾತಾಡು. ನನ್ನನ್ನು ಕಂಡು ಹೇಸಿಕೆ ಏನು?"

"ಹೌದು. ಹೇಸಿಕೆಯಲ್ಲದೆ ತಿರಸ್ಕಾರವೂ ಉಂಟು."

"ನಾನು ನಿನ್ನ ಗಂಡನು ಇದನ್ನು ಮರೆಯಬೇಡ."

"ಇಷ್ಟು ದಿನಗಳ ವರೆಗೆ ಆ ಮಾತನ್ನು ಮರೆತಿಲ್ಲವೆಂದೇ ಈ ಮನೆಯಲ್ಲಿ ನಿಂತಿರುವೆ." ದನಿಯು ತಾರಕ್ಕೇರಿತು.

"ನಾವು ಸರ್ವತಂತ್ರ ಸ್ವತಂತ್ರರು ತಿಳಿಯಿತೇ?"

"ಹೌದು. ನಿಮ್ಮ ಈ ವೃತ್ತಿಯಿಂದ ಅಬಲೆಯರಾದ ನಾವು ಸಹ ಸರ್ವತಂತ್ರ ಸ್ವತಂತ್ರರಾಗಬೇಕೆಂದು ಆಶಿಸುವೆವು."

"ನೀನು ಏನು ಮಾತಾಡುವೆ?" ಮಾತು ಸಿಟ್ಟಿನಿಂದ ಬಂದಿತು.

"ನಿಮ್ಮ ಮಾತಿಗೆ ಉತ್ತರ ಕೊಡುತ್ತಿರುವೆ. ನಿಮಗೆ ಇನ್ನೂ ಏನಾದರು ಬೇಕಿದ್ದರೆ ಕೇಳಿರಿ. ಹೆಣ್ಣುಜಾತಿಯ ವತಿಯಿಂದ ನಿಂತು ಉತ್ತರ ಕೊಡುವೆ."

"ಊಹು......."

"ಇಷ್ಟು ದಿನಗಳ ವರೆಗೆ ನಿಮಗೆ ಬುದ್ಧಿ ಬರಬಹುದೆಂದು ತಿಳಿದಿದ್ದೆ. ಆ ಮಾತು ಇಂದು ನಿಷ್ಕರ್ಷೆಯಾಗಿದೆ. ನಿಮಗೆ ಬುದ್ಧಿಯನ್ನು ಕಲಿಸಹೋಗಿ

ನಾನು ಬುದ್ಧಿಭ್ರಷ್ಟಳಾಗುವೆನೆಂದು ಮನದಟ್ಟಾಗಿದೆ. ನೀವು ಪಡೆದ ಬುದ್ಧಿ ನಿಮ್ಮಲ್ಲಿರಲಿ. ಕೇಳಿರಿ, ಉತ್ತರವನ್ನು ಕೊಡುವೆ.”

“ ಓ! ಇಷ್ಟು ಸಿದ್ಧಳಾಗಿ ಧೈರ್ಯದಿಂದ ನಿಂತಿರುವೆಯೋ? ”

“ ಇದೆಲ್ಲ ನಿಮ್ಮ ಪುಣ್ಯ. ಈ ಧೈರ್ಯಕ್ಕೆ ಅಭಿಮಾನಿದೇವತೆಗಳು ನೀವೆಯೇ. ಈ ಪರೀಕ್ಷೆಯಲ್ಲಿ ನಿಮ್ಮಿಂದ ತೇರ್ಗಡೆಹೊಂದಬಯಸಿ ನಿಂತಿರುವೆ.”

“ ಹುಚ್ಚನಾಯಿಯಂತೆ ಈ ಮನೆಯಿಂದ ಹೊಡೆದೋಡಿಸುವೆ. ತಿಳಿಯಿತೇ ! ” ಸೆರೆಯ ಮದವು ಇಳಿಯುತ್ತ ಬರಹತ್ತಿತು.

“ಈ ಮನೆಯು ನಿಮ್ಮದು. ಧರ್ಮಪತ್ನಿಯಾಗಿ ನಿಮ್ಮ ನೆರಳಲ್ಲಿ ನಿಂತು, ನೀವು ಕುಣಿದಂತೆ ನಾನು ಬಾಳುವೆಯನ್ನು ಮಾಡಬಹುದು. ಆದರೆ ಈ ಮನೆಯಲ್ಲಿ ಅರ್ಧ ನನ್ನದಿದೆ ಎಂದು ಹೇಳಲು ಅಧಿಕಾರವಿಲ್ಲ. ಅದೇ ಇದ್ದರೆ ಈ ಮನೆಯಲ್ಲಿ ನಡುವೆ ಗೋಡೆಯನ್ನು ನಿಲ್ಲಿಸಿ, ನಿಮ್ಮ ಮುಖವು ಕಾಣದಂತೆ, ದನಿಯು ಕೇಳದಂತೆ ಮಾಡುತ್ತಿದ್ದೆ.... ”

“ ಜೋಕೆ! ಎಚ್ಚರದಿಂದ ಮಾತಾಡು.”

“ ನನ್ನ ಮಾತುಗಳ ಹಿಂದೆ ಎಚ್ಚರವೆ ಮೂರ್ತಿಗೊಂಡು ನಿಂತು ಮಾತಾಡುವದೆಂದು ತಿಳಿಯಿರಿ. ಎರಡು ವರುಷ ನಿಮ್ಮ ಸಂಗಡ ಎಚ್ಚರವಿಲ್ಲದೆ ನಡೆದು ಬಂದೆನು. ಈ ಮೊದಲೇ ನಾನು ಎಚ್ಚತ್ತಿದ್ದರೆ ನೀವು ಕಣ್ಣು ಬಿಡುತ್ತಿದ್ದಿರೇನೋ ? ಹೋಗಲಿ. ಕಳೆದ ದಿನಗಳ ಕಂತೆಯನ್ನು ನಾನು ಉಚ್ಚರಿಸಬಯಸುವದಿಲ್ಲ. ಈಗ ನಿಮ್ಮ ‘ಜೋಕೆ’ ಎಂಬ ಬೆದರಿಕೆಯು ಬಡಿತಕ್ಕಿಂತಲೂ ಅಧಿಕವೆಂದು ತಿಳಿಯುವದಿಲ್ಲ.”

“ಶ್ರೀಮತಿ, ನನ್ನ ಸಹನೆಯನ್ನು ಪರೀಕ್ಷಿಸಬೇಡ.”

“ ಸಹನೆ ಶಬ್ದವನ್ನು ಉಪಯೋಗಿಸಿ ಅದರ ಅವಮಾನ ಮಾಡಬೇಡಿರಿ. ಅದು ನನ್ನ ಇಡುಗಂಟು. ನೀವು ಆ ಶಬ್ದವನ್ನು ಉಚ್ಚರಿಸಿದ್ದಕ್ಕಾಗಿ ಪಶ್ಚಾತ್ತಾಪಪಡಬೇಕಾದೀತು.”

“ ಯಾಕೆ, ನಿನ್ನೆಯ ಬಡಿತಗಳು ಗುಣವಾದವೇನು?”

"ಅವರ ಗೊಡವೆ ನಿಮಗೇನು ! ಅವು ನನ್ನ ಪಾಲಿನವು. ಅವರೆ ನಾಳಿನ ಬಡಿತಕ್ಕಾಗಿ ಯಾರನ್ನು ಹುಡುಕುವಿರಿ, ವಿಚಾರಿಸಿರಿ?"

"ಶ್ರೀಮತೀ........"

"ಹೂ........ಇದೇ ಕೊನೆಯ ಶ್ರೀಮತಿಯಾಗಲಿ ನಿಮ್ಮ ಬಾಯಿಂದ. ಶ್ರೀಮತಿಯು ನಿಮ್ಮ ಅಭಿಮಾನದ ಹೆಸರು. ಇನ್ನು ಮುಂದೆ 'ಶ್ರೀಮತಿ' ಎಂದು ಕರೆಯಿಸಿಕೊಳ್ಳುವಲ್ಲಿ ನನಗೆ ಬಂಧನವೇನಿಲ್ಲ. ನಾನು ಅನಲಾ. ನನ್ನ ತಾಯಿ-ತಂದೆಗಳು ಪ್ರೇಮದಿಂದ ಇಟ್ಟ ಹೆಸರೇ ನನಗೆ ಅಭಿಮಾನಾಸ್ಪದವಾಗಿದೆ."

ಗಂಧಮಾಧವನು ಗಕ್ಕನೆ ಎದ್ದು ಬಡಿಗೆಯನ್ನು ಅತ್ತಿತ್ತ ಹೊರಳಾಡಿಸಿದನು.

"ಎಚ್ಚರಿಕೆ ! ಒಂದು ಹೆಜ್ಜೆ ಮುಂದಿಟ್ಟರೆ ಪರಸ್ತ್ರೀಯ ಮೇಲೆ ಕೈಯೆತ್ತಿದ ಅಪವಾದ ಮಂದಿಯ ಕಿವಿಗೆ ಮುಟ್ಟೀತು." ಎಂದು ಅನಲಾ ಗಟ್ಟಿಯಾಗಿ ನುಡಿದಳು.

"ಶ್ರೀಮತೀ, ನಾನು ಯಾರೆಂದೆ ?"

"ನೀವು ಯಾರೆಂಬುದನ್ನು ಹೆಚ್ಚಾಗಿ ನೀವೇ ತಿಳಿದುಕೊಂಡರೆ ಸರಿಯಾದೀತು. ಈಗ ನಾನು ನಿಮ್ಮ ಒಂದೊಂದು ಮಾತಿಗೆ ಒಂದೊಂದು ಹೊಸ ಅರ್ಥವನ್ನು ಕಾಣಹತ್ತಿರುವೆ."

"ನನ್ನೆದುರು ನಿಂತು ಹೀಗೆ ಅವಮಾನಪಡಿಸಿದರೆ ನಾನು ಎಂದಿಗೂ ಸಹಿಸೆನು. ಶ್ರೀಮತೀ........" ಬಡಿಗೆಯನ್ನು ಬೀಸುತ್ತ ಮುಂದೆ ಬಂದನು.

"ಸ್ಮರಣೆಯಲ್ಲಿರಲಿ. ಬಡಿಗೆಯನ್ನೆತ್ತಿದ ಗಂಡನಿಗೆ ಬೆನ್ನೊಡ್ಡಿ ನಿಲ್ಲುವ ಹೆಂಡತಿಯುಂಟು; ಎದುರು ಬಡಿಗೆಯನ್ನೆತ್ತಿ ನಿಲ್ಲುವ ಹೆಂಡತಿಯುಂಟು; ಕೊಡಲಿಯನ್ನೆತ್ತುವ ಹೆಂಡತಿಯುಂಟು; ಅಲ್ಲದೆ ಮಲಗಿದ ಗಂಡನ ಕುತ್ತಿಗೆಯ ಮೇಲೆ ಚೂರಿಯನ್ನೂರಿ ನಗುವ ಹೆಂಡತಿಯುಂಟು. ಇವುಗಳಲ್ಲಿ ನಾನು ಯಾವ ಪಂಗಡಕ್ಕೆ ಸೇರಿದವಳೆಂದು ನೀವು ಪರೀಕ್ಷಿಸಿದಂತಿಲ್ಲ. ನೀವು ಅದನ್ನು ನಿರ್ಧರಿಸಬೇಕೆಂದಿದ್ದರೆ ನಾನು ಪರೀಕ್ಷೆಗೆ ನಿಲ್ಲಲು ಸಿದ್ಧಳಿರುವೆ." ಎಂದು ತುಟಿಗಳನ್ನು ಕಡಿದು ನೆರಗುಕಟ್ಟಿ ನಿಂತುಕೊಂಡಳು.

ಗಂಧಮಾಧವನು ಒಂದಿಷ್ಟು ಗಾಬರಿಯಾದನು.

"ಇಂಥ ಮಾತುಗಳಿಂದ ಈ ಮನೆಗೆ ಆಜನ್ಮ ಎರವಾಗಿ ನಿಲ್ಲಬೇಕಾಗುವದು, ಶ್ರೀಮತಿ!" ಎಂದು ಗದರಿಸಿದನು.

"ಅಹುದು. ಆ ಮಾತು ನನಗೆ ತಿಳಿಯುದಿಲ್ಲ. ಈ ಹತ್ತು ಮೊಳದ ಮನೆಯು ಹೊರತು ಬೇರೆ ನೆಲವಿದೆ ಎಂದು ಇಂದು ನನಗೆ ಕಂಡುಬಂದಿದೆ. ಈ ಮನೆಯ ನಿರ್ಜೀವ ಬಾಳುವೆಯಲ್ಲಿ ನಿಮಗೆ ಅಭಿಮಾನವೆನಿಸಿದರೆ ನೀವು ಸಂತೋಷಪಟ್ಟುಕೊಳ್ಳಿರಿ."

"ಓ, ಮನೆಯನ್ನು ಬಿಡುವ ಹೆದರಿಕೆಯನ್ನೂ ಹಾಕುವೆಯಾ?"

"ಆ ಮಾತಿಗೆ ನೀವು ಹೆದರಿಲ್ಲನೆಂದು ತಿಳಿಯುವೆ."

ಗಂಧಮಾಧವನು ಅವಾಕ್ಕಾಗಿ ನಿಂತನು.

"ನಿಮ್ಮನ್ನು ಹೆದರಿಸಿಕೊಂಡು ಹೋಗಬೇಕೆಂದು ನಾನು ಇಚ್ಛಿಸಿಲ್ಲ. ಹೆದರುವಿರೆಂದೂ ತಿಳಿದಿಲ್ಲ. ಮಂಗಲದಾಯಕವಾದ, ಸ್ವರ್ಗದಿಂದ ಇಳಿದು ಬಂದ ಮನೆಯ ಭಾಗ್ಯವನ್ನು ಬಣ್ಣದ ಕೋಳಿಯಂತಹ ಒಬ್ಬ ವೇಶ್ಯೆಗೆ ಕಣ್ಣು ಮುಚ್ಚಿ ಕೊಟ್ಟು ನಗುವ ನಿಮಗೆ ನನ್ನಂತಹ ಕ್ಷುದ್ರಳಿಂದ ಹೆದರಿಕೆಯಾದೀತೆಂದು ತಿಳಿಯಲಾರೆ. ನೈತಿಕ ಹೊಣೆಯನ್ನು ಬೀದಿಬೀದಿಯಲ್ಲಿ ಮಾರಿಕೊಂಡು ತಿರುಗಾಡುವ ಒಬ್ಬ ಕುಡುಕರು ನನ್ನಿಂದ ಭಯಪಡಬಹುದೆಂದು ಕಲ್ಪಿಸಲಾರೆ. ಧರ್ಮಪತ್ನಿಯನ್ನು ವೇಶ್ಯೆಗೂ ಕೀಳಾಗಿ ತಿಳಿದುಕೊಂಡು ಬಂದ ಒಬ್ಬ ಅಸಭ್ಯಗೃಹಸ್ಥರು ನನ್ನ ಒಣಮಾತುಗಳಿಂದ ಅಂಜಬಹುದೆಂದು ನಂಬಲಾರೆ........"

"ಶ್ರೀಮತಿ, ಯಾರ ಮುಂದೆ ಆಡುತ್ತಿರುವೆ!" ನಡುವೆ ತಡೆದು ಗಂಧಮಾಧವನು ಚೀರಿದನು.

"ನಿಮ್ಮ ಮುಂದೆ. ನಾನಾಡುವ ಮಾತುಗಳು ನಿಮ್ಮ ಹೃದಯಕ್ಕೆ ತಾಕುವಂತಿದ್ದರೆ ಸ್ವೀಕರಿಸಿ ಪೋಷಿಸಿರಿ."

ಗಂಧಮಾಧವನು ತುಟಿಗಳನ್ನು ಕಚ್ಚಿ ಬೆರಳು ಮುರಿಯುತ್ತ ನಿಲ್ಲುವನು.

"ಎರಡು ವರುಷಗಳ ಬಾಳುವೆಯಲ್ಲಿ, ಲಗ್ನದ ಹೊತ್ತಿನಲ್ಲಿ ಅಗ್ನಿಸಾಕ್ಷಿಯಾಗಿ ವಚನಕೊಟ್ಟ ಮಾತಿನಂತೆ ಎಷ್ಟನ್ನು ಪಾಲಿಸಿರುವಿರಿ? ಸ್ಮರಿಸಿಕೊಳ್ಳಿರಿ. ಈ ಎರಡು ವರುಷದ ಸಂಗತಿಗಳನ್ನು ಕಣ್ಣ ಮುಂದೆ ನಿಲ್ಲಿಸಿಕೊಳ್ಳಿರಿ.

ನನ್ನ ಪಾಲಿಗೆ ಸಿಕ್ಕುವವನ್ನು ನಿಮಗೆ ಒಪ್ಪಿಸುವೆ. ಇಷ್ಟು ಸಮಯದ ಹಗಲು ರಾತ್ರಿ ನನ್ನ ಪಾಲಿಗೆ ಬಂದುದು, ಬಡತನ, ಜಗಳ, ಅವಮಾನ ಫಲ, ದ್ರೋಹ, ವಂಚನೆ. ಇನ್ನೂ ಏನು ಬೇಕು? ಕನಸಿನಲ್ಲಿ ಸಹ ನಿಮ್ಮ ವಿಕಾರ ಮೂರ್ತಿಯ ಅವತಾರದ ಲೀಲಾಜಾಲವೇ! ನಾನಾಡಿದ ಮಾತು ಗಳಲ್ಲಿ ತಪ್ಪಿದ್ದರೆ ಹೇಳಿ, ತಿರುಗಿ ತೆಗೆದುಕೊಳ್ಳುವೆ..............." ಅನಲಾಳ ಕಣ್ಣು ಕೆಂಪಾಗಿ ತುಟಿಗಳು ನಡುಗುತ್ತಿದ್ದವು.

"ಹೊರಡು ಇಲ್ಲಿಂದ. ಹೊರಡು." ಗಂಗಾಧರನು ಬಡಿಗೆಯನ್ನು ನೆಲದ ಮೇಲೆ ಅಪ್ಪಳಿಸಿ ಕೂಗಿದನು.

"ಸೀತಾದೇವಿಯ ಮಾತಿನ ಸ್ವರದಲ್ಲಿಯೇ ಅದನ್ನು ನಿರ್ಧರಿಸಿರುವೆನು. ನಿಮ್ಮ ಆಜ್ಞೆಯಂತೆ ಈಗ ನಾನು ನಡೆಯಬೇಕಾದುದಿಲ್ಲ."

"ಹೊರಡು. ಮನೆಯನ್ನು ಬಿಟ್ಟು ಹೊರಡು."

"ನಿಮ್ಮ ಮನೆಯ ಕಡೆಯ ಹೊಸ್ತಿಲವು ಇಲ್ಲಿಂದ ಹತ್ತು ಹೆಜ್ಜೆಯ ಮೇಲಿದೆ. ಹನ್ನೊಂದನೆಯ ಹೆಜ್ಜೆಗೆ ನಿಮ್ಮ ಅಧಿಕಾರ ತಪ್ಪಿತು. ನೆನಪಿನಲ್ಲಿ ರಲಿ."

ಅನಲಾ ಹೊರಡುವಳು. ನಾಲ್ಕಾರು ಹೆಜ್ಜೆ ನಡೆದಿರಬೇಕು.....

"ಶ್ರೀಮತಿ.... ..." ಗಂಗಾಧರನು ಗಟ್ಟಿಯಾಗಿ ಅರಚಿದನು. ಅನಲಾ ತಿರುಗಿ ಬಂದು "ಓ! ಶ್ರೀಮತಿಯ ಹೆಸರಲ್ಲಿ ಇನ್ನೂ ಅಭಿಮಾನ ವಿದೆ; ಅಧಿಕಾರವಿದೆ. ಅದು ನಿಮ್ಮ ಸೊತ್ತು. ಅದನ್ನೂ ಅಳಿಸಿ ಹಾಕುವೆನು." ಎಂದು ಮಂಗಲಸೂತ್ರವನ್ನು ಹರಿದು ಗಂಡನ ಪಾದಗಳ ಮೇಲೆ ಇಟ್ಟು "ಈಗ ನಾನು ಶ್ರೀಮತಿಯಲ್ಲ. ನಿಮ್ಮ ಪತಿ-ಋಣದಿಂದ ಮುಕ್ತಳಾಗಿ ನಿಂತಿ ರುವೆ. ನಾನು ಹೋಗುವೆ .... .." ಎಂದು ಹೊರಟಳು. ಮತ್ತೆ ಐದಾರು ಹೆಜ್ಜೆ ನಡೆದಿರಬೇಕು, ಗಂಗಾಧರನು ಹುಚ್ಚು-ಹುಚ್ಚಾಗಿ ನಗುತ್ತ "ಓ! ನಿನ್ನ ಬೂಟಾಟಿಕೆಯು ತೀರಿತು. ಇದಕ್ಕೆ ಇಷ್ಟೊಂದು ನಾಟಕವನ್ನು ಹೂಡಿದೆಯಾ ?" ಎಂದು ಮುಖದ ಮೇಲೆ ಕೈ ಎಳೆದುಕೊಂಡನು.

"ಏನು? ಮನದ ವಿಷವೊಮ್ಮೆ ಹೊರಬರಲಿ. ಅದನ್ನಷ್ಟು ತೊಳೆದು ಹೋಗಲು ನಿಂತಿರುವೆ." ಎಂದು ಸೈನಿಕರಂತೆ ಅನಲಾ ಹೊರಳಿ ನಿಂತಳು.

"ನೋಡುವೆ. ಆ ಮುಂದೆ ಹೇಳುವೆ. ಹೋಗು. ಹೋಗು...."

ಎಂದು ಗಂಧಮಾಧವನು ಮೂಗು ತಿಕ್ಕಿದನು. ಅನಲಾ ಹಾಗೇ ತುಟಿಗಳನ್ನು ಕಚ್ಚಿ ನಿಂತಳು. ಕೆಲಹೊತ್ತಿನ ಮೇಲೆ "ನಿನ್ನ ಪುನರ್ವಿವಾಹದ ಪತಿಯ ಆಯುಸ್ಸು ಎಷ್ಟಿದೆ ಎಂದು ನೋಡಿಕೊಳ್ಳುವೆ. ಹೋಗು." ಎಂದು ಅಣಕವಾಡಿದನು.

"ಅದರರ್ಥವನ್ನು ಹೀಗೆ ಮಾಡಿಕೊಂಡಿರಾ ?"

"ಹಾಗೆ ಮಾಡಿಕೊಳ್ಳಲು ಬೇರೆ ಜನರ ಸಹಾಯದ ಅವಶ್ಯಕತೆ ಬೇಕಿಲ್ಲ."

"ಆಗಲಿ. ಅದರ ನಿವಾರಣೆಯನ್ನೂ ಮಾಡುವೆನು" ಎಂದು ಒಳಗೆ ಹೋಗಿ ಒಂದು ಕಾಗದವನ್ನು ತಂದಳು. ಅದರಲ್ಲಿ ತನ್ನ ಹಣೆಯ ಮೇಲಿನ ಕುಂಕುಮವನ್ನು ಕೆದರಿ ಉದುರಿಸಿದಳು. ಕೈಯಲ್ಲಿಯ ಬಳೆಗಳನ್ನು ತೆಗೆದು ಅದರಲ್ಲಿ ಇಟ್ಟಳು. ಅವುಗಳನ್ನು ಗಂಡನ ಪಾದದ ಮೇಲೆ ಇರಿಸಿ "ಆಯಿತೇ? ನಿಮ್ಮ ಸಂಶಯದ ನಿವಾರಣೆಯಾಯಿತೇ ? ಕೌಮಾರ್ಯದಿಂದಲೂ ಪಡೆದುಕೊಂಡು ಬಂದ ಸ್ತ್ರೀಸಂಪತ್ತನ್ನು ನೀವು ಬೇಡದಿದ್ದರೂ ನಾನು ದಾನವಾಗಿ ಕೊಟ್ಟಿರುವೆ. ಮತ್ತೇನು ?" ಎಂದಳು.

"ಈ ರೂಪಕ್ಕೆ ಕೂದಲಿನ ಆವಶ್ಯಕತೆಯೇನು ?"

"ಪಾಪಿ! ಹೃದಯದಲ್ಲಿ ವಿಷವಿದ್ದರೆ ತೊಳೆದು ಸ್ವಚ್ಛಮಾಡಬಹುದು. ವಿಷದಿಂದಲೇ ಹೃದಯವನ್ನು ಎರಕಹೊಯಿದಿದ್ದರೆ ತೊಳೆಯುವವರಾರು ?"

"ಹೂಂ. ಏನೆಂದೆ ?"

"ನಾನು ಕರ್ಣನ ಅವತಾರವೆಂದು ನಿಮ್ಮ ಮುಂದೆ ನಿಂತಿಲ್ಲ. ನಿಮ್ಮ ಸೊತ್ತನ್ನು ನಿಮಗೆ ಸಲ್ಲಿಸಿದೆ. ಈಗ ನಾನು ಋಣಮುಕ್ತಳು. ಹೋಗುವೆನು. ಕೊನೆಗೆ ನಿಮ್ಮ ಆಶೀರ್ವಾದದ ಆಸೆಯನ್ನು ಬಯಸದೆ ನಮಸ್ಕರಿಸುವೆ." ನಮಸ್ಕರಿಸಿ ಹೊರಟಳು.

"ಶ್ರೀಮತಿ ಈಗ ನಾನಾರು ?"

ಬೀದಿಯ ಮೇಲೆ ನಿಂತ ಒಬ್ಬ ಭಿಕ್ಷುಕಿಯನ್ನು ತೋರಿಸಿ "ನಿಮ್ಮ ಮಾತಿಗೆ ಅವಳು ಉತ್ತರವನ್ನು ಕೊಡುವಳು." ಎಂದು ನುಡಿದು ಬಾಣದಂತೆ ಹೊರಟಳು. ಮನೆಯನ್ನು ತಿರುಗಿ ಸಹ ನೋಡಲಿಲ್ಲ. ಅಂದೇ ಗಾಡಿ

ಯನ್ನು ಹತ್ತಿ ಅಕ್ಕನ ಮನೆಗೆ ಬಂದಳು.

ಅಷ್ಟರಲ್ಲಿ ತಿರುಗಾಡಿಕೊಂಡು ಅಕ್ಕನೂ ಬಂದಳು.

“ಅನಲಾ, ಬಂದು ಬಹಳ ವೇಳೆಯಾಯಿತೇ?” ಎಂದು ಕರೆಯಲು, ಅಪ್ರತಿಭಳಾಗಿ “ಇದೇ ಬಂದೆ ಅಕ್ಕಾ.” ಎಂದು ಪ್ರಶ್ನಕ್ಕೆ ತಲೆಬಾಗಿ, ಮೈ ಮುರಿದುಕೊಂಡು ಒಳಗೆ ಹೋದಳು.

ಈ ಹನ್ನೆರಡು ವರುಷಗಳಲ್ಲಿ ಈ ದುರಂತ ಸಂಗತಿಯನ್ನು ದೀರ್ಘವಾಗಿ ಸ್ಮರಿಸಿಕೊಂಡುದು ಇದೇ ಮೊದಲು.

೩

ಗಂಧಮಾಧವನ ಗಾಯದ ಹೊಲಿಗೆಗಳನ್ನು ಬಿಚ್ಚಲು ೧೦-೧೨ ದಿನಗಳು ಹಿಡಿದವು. ಆದರೆ ಅವನ ಪರಿಸ್ಥಿತಿಯು ಕಠಿಣವೆನಿಸಹತ್ತಿತು. ಮೊದಲೇ ಇಳಿವಯಸ್ಸು; ಪ್ರಾಪಂಚಿಕ ಸಂಕಟಗಳಿಂದ, ನಿರಂತರ ಚಿಂತೆಯಿಂದ ದೇಹ ಬಹಳ ಸವೆದುಹೋಗಿದ್ದಿತು. ಅನಲಾ ಬಿಟ್ಟು ಹೋದ ಮೇಲೆ ಅವನ ಜೀವನಕ್ರಮವು ಸರಿಯಿರಲಿಲ್ಲ. ಸಿಕ್ಕ ಸಮಯದಲ್ಲಿ ಊಟ, ನಿದ್ದೆ ಬಂದ ಸಮಯದಲ್ಲಿ ಒಂದಿಷ್ಟು ಅಡ್ಡಾಗುವದು, ಅರೆನಿದ್ದೆಯಲ್ಲಿ ನಾನಾ ಬಗೆಯ ದುಃಸ್ವಪ್ನಗಳ ಕುಣಿದಾಟ, ಮೇಲೆ ಅನಲಾನಿಗೆ ಕೊಟ್ಟ ದುಃಖ ಅವಮಾನಗಳು ವಿಕಾರಸ್ವರೂಪವನ್ನು ತಾಳಿ ಅಣಕಿಸುತ್ತಿದ್ದವು. ಊರು ಬಿಟ್ಟು ಅನೇಕ ದೇಶ-ಕೋಶಗಳನ್ನು ತಿರುಗಿದನು. ಮನಸಿಗೆ ನೆಮ್ಮದಿಯಿಲ್ಲ. ಇಂಥ ಗುರಿಯಿಲ್ಲದ ಬಾಳಿನಲ್ಲಿ ಮೇಲೆ ಅಪಘಾತ. ಗಾಯದಿಂದ ಶರೀರದ ಬಹಳ ರಕ್ತ ಸೋರಿಹೋಗಿದೆ. ಅನಲಾ ಎಷ್ಟೋ ಉಪಚಾರವನ್ನು ಮಾಡಿದಳು. ಡಾಕ್ಟರರು ಗಂಧಮಾಧವನನ್ನು ನೋಡಿದ ಸರತಿಗೊಮ್ಮೆ ದೀರ್ಘಶ್ವಾಸಗರೆಯುವರು. ಒಂದು ದಿನ “ಅನಲಾತಾಯಿ, ರೋಗಿಯು ಕೈಬಿಡುವಂತಿದೆ” ಎಂದು ವಿಷಾದದ ದನಿ ಎಳೆದರು.

“ರೋಗಿಯು ಇದೇ ಸ್ಥಿತಿಯಲ್ಲಿ ಉಳಿದರೆ ನಿಮ್ಮ ಮಾತು ಸತ್ಯವಾಗುವದು ಡಾಕ್ಟರ! ” ಎಂದು ಅನಲಾ ನಿರ್ವಿಕಾರ ಉತ್ತರವನ್ನಿತ್ತಳು.

“ಅವನು ಬದುಕಬೇಕಾದರೆ ಒಂದು ಕೊನೆಯ ಪ್ರಯತ್ನವಿದೆ.”

“ಏನು?”

"ನಾನು ರೋಗಿಯನ್ನು ಅನೇಕ ಸಲ ಕೇಳಿದೆ. ಅವನಿಂದ ಸರಿಯಾದ ಉತ್ತರವು ದೊರೆಯದು."

"ಏನದು?"

"ಆತನಿಗೆ ಯಾರೂ ಆಪ್ತೇಷ್ಟರು ಇಲ್ಲವಂತೆ!"

ಅನಲಾ ಇನ್ನೊಂದು ಕಡೆಗೆ ಮುಖ ತಿರುವಿ "ಹ!" ಎಂದಳು.

"ಶರೀರದಲ್ಲಿ ಇನ್ನಷ್ಟು ರಕ್ತವನ್ನು ಹಾಕಿದರೆ ಜೀವಶಕ್ತಿಯು ಎಂಟು ಹತ್ತು ದಿನ ಉಳಿದು, ಬದುಕಬಹುದು."

"ಅಹುದು."

"ಆದರೆ ರಕ್ತವನ್ನು ಯಾರು ಕೊಡಬೇಕು?"

"ಅಹುದು ನಿಮ್ಮ ಸಂಶಯವು ಸರಿಯಾದುದು."

"ಆದನ್ನೊಂದು ಪ್ರಯತ್ನಿಸಿದರೆ ರೋಗಿಯ ದೈವವನ್ನು ದೇವರ ಕೈಯ್ಯಲ್ಲಿ ಕೊಟ್ಟಂತೆ!"

"ಡಾಕ್ಟರ್, ನಿಮ್ಮಂತಹ ಪ್ರಯತ್ನವಾದಿಗಳು ದೇವರ ಕೈಯ್ಯಲ್ಲಿ ಕರ್ತವ್ಯದ ಫಲವನ್ನು ಕೊಡುವದುಂಟೇ?"

"ಕರ್ತವ್ಯವು ಒಮ್ಮೊಮ್ಮೆ ವಿಫಲವಾಗುವದು. ಆನಲಾತಾಯಿ, ಆಗ ದೇವರನ್ನು ಸ್ಮರಿಸಿದರೆ ಪುರಾಣಮತವಾದಿಗಳಂತೆ ಪುಣ್ಯಬರುವಂತಿದ್ದರೆ ಅದಕ್ಕೆ ಎರವಾಗಿ ನಿಲ್ಲಬಹುದೇ!" ಎಂದು ನುಡಿದು ಡಾಕ್ಟರು ನಕ್ಕರು.

ಅನಲಾ ಸಹ ನಗೆಯಲ್ಲಿ ಭಾಗ ವಹಿಸಿ ಇನ್ನೊಂದು ಕಡೆಗೆ ಹೊರಟು ಹೋದಳು.

ರೋಗಿಯು ಚಿಂತಾಜನಕ ಪರಿಸ್ಥಿತಿಗೆ ಬಂದನು. ಡಾಕ್ಟರು 'ನಾಲ್ಕು ದಿವಸ ಜೀವ ತೂಕಡಿಸುತ್ತ ನಿಲ್ಲಬಹುದು!' ಎಂದು ಶಾಬ್ದಿಕ ಎಚ್ಚರಿಕೆಯನ್ನು ಕೊಟ್ಟರು. ಈ ವರೆಗೂ ಅವನ ಬಳಗದವರ, ಗೆಳೆಯರ ಸುಳಿವು ಹತ್ತಲಿಲ್ಲ. ಅವನ ಮರಣದ ದಾರಿಯನ್ನು ಕಾಯುತ್ತ ದಾದಿಯರು ದಿನ ಕಳೆಯ ಹತ್ತಿದರು. ಒಮ್ಮೆ "ಡಾಕ್ಟರ್, ಒಂದು ಮಾತನ್ನು ಕೇಳಬೇಕೆಂದಿರುವೆ?" ಎಂದು ಅನಲಾ ಡಾಕ್ಟರ ಮುಂದೆ ಮಾತು ಆರಂಭಿಸಲು ತಿಳಿಯದೆ ಆಡಿದಳು.

"ಏನದು ?"

"ಆ ರೋಗಿಯು ಎಂದು ಸಾಯುಬಹುದು?"

"ನಾಲ್ಕು-ಐದು ದಿನ ಸಾಕೆನಿಸುವನು. ಇದು ನಾನರಿತ ವೈದ್ಯ ವಿದ್ಯೆಯ ಅನುಭವವು."

"ಇಂಥ ಅನಾಥನ ಶವಸಂಸ್ಕಾರವನ್ನು ಯಾರು ಮಾಡುವರು?"

"ಮುನಿಸಿಪಾಲಿಟಿಯವರು!"

"ಅವರೇ............!"

"ಅಥವಾ ನಾವು ಹೊಲೆಯರಿಂದ ಹೇಗೋ ನೆರವೇರಿಸುವೆವು."

"ಹೇಗೆಯೋ!" ಅನಲಾ ಉಸಿರುಗರೆದಳು.

"ಹಣಕ್ಕೆ ಯಾವ ಬೆಲೆಯನ್ನು ಕೊಟ್ಟರೇನು?"

"ಹಣಕ್ಕೆ!.......ಅಹುದು." ಬಾಯಿಂದ ಅರ್ಥಶೂನ್ಯ ಮಾತುಗಳು ಹೊರಟವು.

"ತನ್ನವರೆನ್ನಿಸಿಕೊಳ್ಳುವವರ ಕಡೆಯಿಂದ ಒಂದು ಕಣ್ಣೀರಿನ ಹನಿಯನ್ನು ತಿಲಾಂಜಲಿಯನ್ನು ಪಡೆಯದೆ ಸಾಯುವದು ಎಂಥ ದುರ್ಭಾಗ್ಯವು!" ಡಾಕ್ಟರು ಗಂಧಮಾಧವನ ಅಸಹಾಯ ಸ್ಥಿತಿಯನ್ನು ವರ್ಣಿಸಿದರು.

ಅನಲಾಳ ಹೃದಯದಲ್ಲಿ ಬೆಂಕಿಯನ್ನು ಸುರುವಿದಂತಾದರೂ ಮನಸ್ಸನ್ನು ಸ್ಥಿರತೆಯಲ್ಲಿರಿಸಿ "ಡಾಕ್ಟರೇ, ರಕ್ತವನ್ನು ಹಾಕಿದರೆ ಬದುಕಬಹುದೇ ?" ಎಂದು ಕೇಳಿದಳು.

ಮಾತಿನಲ್ಲಿ ಕರುಣೆಯು ಮೂಡಿದ್ದಿತು.

"ಏನೋ? ನಿರಾಸೆಯಲ್ಲಿ ಒಂದು ಆಸೆಯ ಕಿರಣ."

"ಹಾಗಾದರೆ ನನ್ನ ಮೈಯ್ಯಲ್ಲಿಯ ರಕ್ತವು ಸರಿಹೋಗುವದೇ? ಪರೀಕ್ಷಿಸಿರಿ." ಆಡಿದ ಮಾತುಗಳು ನೀರಿನಂತೆ ತಿಳಿಯಾಗಿದ್ದವು.

"ಏನು ? ನಿಮ್ಮ ರಕ್ತ !" ಡಾಕ್ಟರು ಬೆರಗಾದರು.

"ಅಹುದು. ನೀವು ಬೇರೆ ಏನನ್ನು ತಿಳಿಯಬೇಡಿರಿ. ರೋಗಿಯ ರಕ್ತವಲ್ಲಿ ನನ್ನ ರಕ್ತವು ಸಮರಸವಾಗುವದೇ? ಇಂದೇ ಪರೀಕ್ಷಿಸಿರಿ."

"ನಾನು ಹಾಗೆ ಮಾಡಲಾರೆ ಅನಲಾತಾಯಿ. ಸಾವಿರ ರೋಗಿಗಳಿಗೆ

ಉಪಕಾರವಾಗುವ ನಿಮ್ಮನ್ನು ಸಂಕಟದ ಬಾಯಿಗೆ ಒಡ್ಡಿ ಒಬ್ಬನನ್ನು ಬದುಕಿಸುವ ಹುಚ್ಚುತನವನ್ನು ಮಾಡಲಾರೆ. ಅವನು ಸತ್ತರೆ ನಮಗೆ ಹಾನಿ ಏನು ?" ಡಾಕ್ಟರು ಆಶ್ಚರ್ಯದಿಂದ ಹೇಳಿದರು.

"ರೋಗಿಯು ಬದುಕುವಂತಿದ್ದರೆ ನಾನು ಅಂದ ಹಾಗೆ ಮಾಡಿರಿ. ಅನಾಥನಿರುವನೆಂಬ ನಿಮ್ಮ ಮಾತನ್ನು ಕೇಳಿ ನಾನು ವಿಚಾರಿಸಿದೆ. ವಿಚಾರಿಸಿದಷ್ಟು ಸಾರೆ 'ನೀನೇಕೆ ಕೊಡಬಾರದು? ಜೀವಧಾರಣಕ್ಕಿಂತಲೂ ಹೆಚ್ಚಾದ ರಕ್ತವನ್ನು ಜೀನಳಂತೆ ಸಂಗ್ರಹಿಸಿ ಸಾಧಿಸುವದೇನು?' ಎಂದು ಮನಸ್ಸು ತಾನೇ ಅನೇಕ ಸಾರೆ ಪ್ರಶ್ನಿಸಿ ಈ ನಿರ್ಣಯಕ್ಕೆ ಬಂದಿರುವದು."

"ಅನಲಾತಾಯಿ, ಇದೆಂತಹ ನಿಮ್ಮ ಮಾತು ! ಇಂಥ ಇಳಿವಯಸ್ಸಿನ ರೋಗಿಯು ಬದುಕಿ ಜಗತ್ತಿನಲ್ಲಿ ಮಾಡುವದಾದರು ಏನು? ಔಷಧೋಪಚಾರದಿಂದ ಬದುಕುವಂತಿದ್ದರೆ ನಮ್ಮ ಕರ್ತವ್ಯದಲ್ಲಿ ತಪ್ಪದೆ ನಡೆದು ಬದುಕಿಸುವ. ಇದೆಂತಹ ನಿಸ್ವಾರ್ಥ ! ಈ ವಿಚಾರ ಅವಿಚಾರವು."

"ಡಾಕ್ಟರೇ, ರಕ್ತವನ್ನು ಹಾಕಿದರೂ ರೋಗಿಯು ಬದುಕಲಾರನೆಂದು ನೀವು ಹೇಳಿದರೆ ನಾನು ಕೊಡುವದಿಲ್ಲ. ಹಾಗೆ ನೀವು ಹೇಳಿ ನನ್ನ ಮಾತನ್ನು ತಡೆಯಿರಿ. ಅದರ ಉಳಿದ ಮಾತು ನನ್ನ ನಿರ್ಧಾರವನ್ನು ತಿರುಗಿಸವು." ಎಂದು ಖಂಡತುಂಡವಾಗಿ ನುಡಿದಳು.

ಡಾಕ್ಟರು ಹಾಗೆ ಹೇಳದಾದರು. ಅನಲಾ ತನ್ನ ಹಟವನ್ನು ಬಿಡಲಿಲ್ಲ. ನಿರುಪಾಯರಾಗಿ ರಕ್ತವನ್ನು ಪರೀಕ್ಷಿಸಿದರು. ಸರಿಯಾಯಿತು. ಆ ವಿಧಾನವು ಸಹ ಸಾಂಗವಾಯಿತು. ರೋಗಿಯು ಇನ್ನು ಬದುಕುವನು ಎಂಬ ದೃಢತೆಯ ಕಡೆಗೆ ಮಾತುಗಳು ತಿರುಗಿದವು. ಉಳಿದ ವಾದಿಯರು ಅನಲಾ ಜ್ಞಾನಿ ಇದ್ದಂತೆ ಹುಚ್ಚಳೂ ಇರುವಳು, ಎಂದು ಅರ್ಥಮಾಡಿದರು.

೪

ಈಗ ಗಂಧಮಾಧವನು ಹಾಸಿಗೆಯ ಮೇಲೆ ಎದ್ದು ಕೂಡ್ರುವನು. ಒಂದೆರಡು ಹೆಜ್ಜೆ ತೋಟದಲ್ಲಿ ನಡೆದಾಡುವನು. ತಾನು ಬದುಕಲು ಡಾಕ್ಟರು ಮತ್ತು ಅನಲಾತಾಯಿಯು ಬಹಳ ಪ್ರಯತ್ನಪಟ್ಟರೆಂದು ತಿಳಿಯಿತು. ಅನಲಾನ

ಉಪಕಾರವು ಯಾವ ಜನ್ಮವೂ ತೀರಿಸದಷ್ಟು ಭಾರವಾಗಿದೆ ಎಂದು ಅರಿತನು. ಅನಾಥ, ಗುರಿಯಿಲ್ಲದ ತನ್ನ ಬಾಳುವೆಗೆ ಅನಲಾನಂತಹ ಒಂದು ಪ್ರೇಮಪ್ರಾಣಿಯು ದೊರೆಯಿತೆಂದು ಸಂತೋಷಪಟ್ಟನು. ಇಷ್ಟಾದರೂ ಅನಲಾ ಸಾಮಾನ್ಯ ಪಾಪಿಯಂತೆ ತನ್ನ ಸಂಗಡ ನಡೆಯುವಳು. ಇವಳು ಯಾರು? ಎಂದು ತಿಳಿಯಬಯಸಿದನು. ಎಷ್ಟು ವಿಚಾರಿಸಿದರೂ ಅವನ ನೆಲೆ ಅರಿಯದೆ ಹೋಯಿತು.

"ಅನಲಾತಾಯಿ..............." ಎಂದು ಒಂದಿನ ಮಾತು ಆರಂಭಿಸಿದನು.

"ಏನದು ?" ಎಂದು ಔಷಧವನ್ನು ಅರೆಯುತ್ತ ಕೇಳಿದಳು.

"ನಿಮ್ಮ ಉಪಕಾರವು ಬಹಳವಾಯಿತು" ಎಂದು ಗದ್ಗದಿತನಾಗಿ ನುಡಿದನು.

"ರೋಗಿಗಳಲ್ಲಿ ಹೀಗೆಯೇ ನೋಡುವದು. ಅದರಿಂದ ನನಗೆ ಸರಿಯಾಗಿ ಆಗದು."

ಗಂಧಮಾಧವನಿಗೆ ಮಾತನ್ನು ಮುಂದುವರಿಸಲು ತಿಳಿಯಲಿಲ್ಲ. ಅಪರಿಚಿತ ಒಬ್ಬ ಹೆಣ್ಣುಮಗಳ ಮುನಿತನದ ಮಾತನ್ನು ಕೇಳಲು ಸಂಕೋಚವೆನಿಸಹತ್ತಿತು. ಆದರೂ ಮನಸು ಗಟ್ಟಿಮಾಡಿ "ನಿಮ್ಮ ಉಪಕಾರ ಬಹಳವಾಗಿದೆ." ಮತ್ತೆ ಅದನ್ನೇ ನುಡಿದನು.

"ಈ ಔಷಧ ಕುಡಿಯಿರಿ." ಎಂದು ಅನಲಾ ಕೈಗೆ ಕೊಟ್ಟಳು.

ಗಂಧಮಾಧವನು ಔಷಧವನ್ನು ಕೈಯಲ್ಲಿ ಹಿಡಿದುಕೊಂಡು "ತಾಯಿ, ನಾನು ಸತ್ತಿದ್ದರೆ ಹಾನಿಯಿರಲಿಲ್ಲ." ಎಂದು ನುಡಿದನು.

"ನಮ್ಮ ದವಾಖಾನೆಯಲ್ಲಿ ಹಾಗೆ ಆಗಬಾರದೆಂದು ನನ್ನ ಆಸೆ. ನಿಮ್ಮನ್ನು ಈ ವಾರದಲ್ಲಿ ಬಿಡುಗಡೆ ಮಾಡುವದು."

ಗಂಧಮಾಧವನಿಗೆ ತನ್ನ ಮಾತನ್ನು ಆಡಲು ಅನುವು ದೊರೆಯಲಿಲ್ಲವೆಂದು ಗೊತ್ತಾಯಿತು. ಮತ್ತೆ ವಿಷಯವನ್ನು ಕೆದರುವಂತೆ "ನೀವು ಹೀಗೆಯೇ ಎಷ್ಟು ರೋಗಿಗಳಿಗೆ ರಕ್ತವನ್ನು ಕೊಟ್ಟಿರುವಿರಿ?" ಎಂದು ಕೇಳಿದನು.

"ಅಂಥ ಪ್ರಸಂಗ ಕಡಿಮೆ."

"ನಿಮ್ಮ ಮರ್ಯಾದೆಗೆ ನಾನು ಒಡ್ಡಿದೆನೇ ?"

"ಇನ್ನೊಬ್ಬರ ದೈವವನ್ನು ಹಳಿಯಲು ಯಾರಿಗೆ ಅಧಿಕಾರ ವುಂಟು ?'' ಎಂದು ನುಡಿದು ಮತ್ತೊಂದು ರೋಗಿಯ ಬಳಿಗೆ ಹೋದಳು.

ಗಂಧಮಾಧವನಿಗೆ ಏನೂ ತಿಳಿಯಲಿಲ್ಲ. ಉಳಿದ ದಾದಿಗಳನ್ನು ಕೇಳಿದರೂ ಗೊತ್ತಾಗಲಿಲ್ಲ. ಹೆಚ್ಚು ಚರ್ಚೆಯಿಂದ ಆ ವಿಷಯವನ್ನು ಅರಿಯ ಬೇಕೆಂದು ಬಯಸುವದು ತನ್ನಂತಹ ಉಪಕೃತನ ಸೌಜನ್ಯಕ್ಕೆ ಒಗ್ಗದೆಂದು ಸುಮ್ಮನಾದನು. ಆದರೂ ಅನಲಾನ ಜೊತೆಗೆ ಏನಾದರೂ ಆಡಬಹುದು; ಆವಳು ಅಪಾರ್ಥವನ್ನು ಕಲ್ಪಿಸಳು; ಎಂದು ಮನಸು ಒಳಗಿನಿಂದ ಪ್ರೇರೇಪಿ ಸುತ್ತಿದ್ದಿತು.

೫

ಮರುದಿನ ಗಂಧಮಾಧವನ ಬಿಡುಗಡೆ. ತಾನು ಇನ್ನೂ ಕೆಲದಿನ ಇರುವೆನೆಂದು ಡಾಕ್ಟರಿಗೆ ತಿಳಿಸುವದು ಲೋಭಿಯ ಲಕ್ಷಣವೆಂದುಕೊಂಡನು. ಅನಲಾನು ಸಹ ಡಾಕ್ಟರ ಮಾತಿಗೆ ಸಮ್ಮತಿಯನ್ನಿತ್ತಳು. ಆಕೆಯ ಉಪಕಾರ ದಿಂದ ಗಂಧಮಾಧವನ ಮನಸು ಜಡವಾಗಿದ್ದಿತು. ಪ್ರತ್ಯುಪಕಾರವನ್ನು ಮಾಡಿ ತೀರಿಸುವದು ತನ್ನ ಪಾಲಿಗೆ ಅಸಾಧ್ಯವೆಂದುಕೊಂಡನು. ದವಾಖಾನೆ ಯಲ್ಲಿ ಅವಳಂತಹ ನಿಸ್ಪೃಹಳು ಅವಳೊಬ್ಬಳೇ ಎಂದು ಅರಿತಿದ್ದನು. ದೇಹ ಅವಳಕೈಯಿಂದ ಪಾರಾದಂತೆ ಮನಸೊಂದು ಪಾರಾದರೆ ಸಾಕೆಂದು ವಿಚಾರಿಸಿ ದನು. ಮೊದಲಿನ ಭಾರದಲ್ಲಿ ಇನ್ನೊಂದು ಭಾರವನ್ನು ಹೇರಲು ಸಂಕೋಚ ಪಟ್ಟುಕೊಳ್ಳಲಿಲ್ಲ. ಆಕೆಯು ಗಂಧಮಾಧವನ ಸಂಕೋಚಸೀಮೆಯ ಆಚೆಗೆ ನಿಂತುಕೊಂಡ ಪವಿತ್ರ ಮೂರ್ತಿಯೆಂದು ತಿಳಿದಿದ್ದನು. ಆಕೆಯನ್ನು ದಾದಿಯೆಂದು ಕರೆಯದೆ ತಾಯಿಯೆಂದು ನಾಚಿಕೆಯಿಲ್ಲದೆ ಎಷ್ಟೋ ಸಾರೆ ಕರೆದಿದ್ದನು. ಈ ಮಾತನ್ನು ಕೇಳಿ ಆಕೆಯು ಭಯಪಟ್ಟಿರಲಿಲ್ಲ. ಎಲ್ಲ ರೋಗಿ ಗಳ ಸಾಂಪ್ರದಾಯಬದ್ಧ ಮಾತೆಂದು ಸುಮ್ಮನಾಗಿದ್ದಳು.

ಸಾಯಂಕಾಲದ ಸಮಯದಲ್ಲಿ ಅನಲಾನು ಕಂಪೌಂಡಿನ ಹೊರಗಿನ ಮಾವಿನ ಗಿಡದ ನೆರಳಲ್ಲಿ ಏನೋ ಆಲೋಚಿಸುತ್ತ ಕುಳಿತಿದ್ದಳು. ಗಂಧ ಮಾಧವನು ಮೆಲ್ಲಗ ತಿರುಗಾಡುತ್ತ ಅಲ್ಲಿಗೆ ಬಂದನು. ಅನಲಾನನ್ನು ನೋಡಿ

ನಮಸ್ಕರಿಸಿ "ಅನಲಾತಾಯಿ, ನಾಳೆ ನಾವು ಹೋಗುವೆವು." ಎಂದನು.

ಮಾತಿನಲ್ಲಿ ಕೃತಜ್ಞತೆಯು ತುಂಬಿಕೊಂಡಿದ್ದಿತು.

"ಅಹುದು. ನಿಮಗೆ ಈಗ ಸಂಪೂರ್ಣ ಗುಣವಾಗಿದೆ." ಅನಲಾ ಅಧೋಮುಖಿಯಾಗಿ ಉತ್ತರಿಸಿದಳು.

"ನಾನು ಬದುಕಿದೆನೆಂದು ನಿಮಗೆ ಸಂತೋಷವೇ?"

"ಇಲ್ಲ. ಆದರೆ ನೀವು ಸಾಯಲಿಲ್ಲವೆಂದು ಸಂತೋಷಪಡುವೆ."

"ಆದರೆ ನನಗೆ ದುಃಖವಾಗುವದು."

"ಯಾಕೆ?" ಮಾತಿನ ಕಡೆಗೆ ಸಂಪೂರ್ಣ ಲಕ್ಷ್ಯವಿದ್ದಿತು.

"ನಾನು ಬದುಕುವದು ನನಗೆ ಚಿಂತೆಯೇ ಸರಿ!"

"ನಿಮ್ಮ ಬಡತನವನ್ನು ಹೇಳುವಿರಾ?"

"ಅದಕ್ಕೂ ಅಧಿಕವಾಗಿ ನಾನು ಮಹಾಪಾಪಿಯೆಂದು ಹೇಳುವೆನು."

"ಪ್ರಾಯಶ್ಚಿತ್ತದಿಂದ ಆ ಪಾಪವನ್ನು ಕಳೆದುಕೊಳ್ಳಬಹುದು."

"ಹಾಗಾದರೆ ನೀವು ನನ್ನ ಧರ್ಮಗುರುವಾಗಿ ಉಪದೇಶಿಸಬಹುದೇ?"

"ಆ ಅಧಿಕಾರ ನನಗೆಲ್ಲಿದೆ?"

"ಅಧಿಕಾರವನ್ನು ಪಡೆದುಕೊಂಡವರ ಮಾತಿನಲ್ಲಿ ಅಪನಂಬಿಗೆಯನ್ನು ತಾಳುವದಕ್ಕಿಂತ ನಿಮ್ಮ ಮಾತು ಎಷ್ಟೋ ವಿಶ್ವಾಸಪೂರ್ಣವಾಗಿದೆ. ಈ ಮಾತು ನಾಲಿಗೆಯ ಮೇಲಿಂದ ತೇಲಿಕೊಂಡು ಬಂದರೂ ಹೃದಯದಿಂದ ಹೊರಟಿದೆ." ಎಂದು ನುಡಿದು ಕಣ್ಣೀರು ತೊಡೆದನು.

ಅನಲಾನ ಕರುಳನ್ನು ಹಿಚುಕಾಡಿದಂತಾಯಿತು.

"ಈ ವಿಷಯ ನನಗೆ ತಿಳಿಯದು, ಕ್ಷಮಿಸಿರಿ."

"ಈ ಮಾತಿನಿಂದ ನನಗೆ ಸಂತೋಷವಾಗದು ಅನಲಾತಾಯಿ."

"ನೀವು ಹೋಗುವ ಮುಂದೆ ಜಡಮನಸಿನಿಂದ ಹೋಗದೆ ನಗುತ್ತ ಹೋಗಬೇಕೆಂದು ಈ ದಾವಿಯು ಆಶಿಸುವ ಕೊನೆಯ ಮಾತು."

"ತಾಯಿಯ ಆಶೆಯು ಹಾಗಿದ್ದರೆ ಒಂದು ವರಾತನ್ನು ನಡೆಯಿಸಿ ಕೊಡಬೇಕು." ಎಂದು ಅನಲಾನ ಕಾಲು ಹಿಡಿದನು.

ಅನಲಾ ಗಾಬರಿಯಾಗಿ ಹಿಂದೆ ಸರಿದು ನಿಂತಳು. ಮಿಂಚಿನ ತೊಟ್ಟಿಲಲ್ಲಿ ಕೂಡಿಸಿ, ಕ್ಷಿತಿಜದ ತುಂಬ ತೂಗಾಡಿಕೊಂಡು ಬಂದಂತೆ ತಲೆಯು ತಿರುಗಹತ್ತಿತು. ಒಂದು ಅವ್ಯಕ್ತಭಯವು ಬುದ್ಧಿಯನ್ನು ಆವರಿಸಿ ಹಣೆಯಲ್ಲಿ

ಬೆವರಿನ ಹನಿಗಳನ್ನು ಮೂಡಿಸಿತು. ಕೆಲಹೊತ್ತು ಇಬ್ಬರೂ ಮೌನ ವಾಗಿದ್ದರು.

ಗಂಧಮಾಧವನು ಮುಖವನ್ನು ಮೇಲೆತ್ತಿರಲಿಲ್ಲ. ಕಣ್ಣಿಂದ ಹನಿಗಳು ತಟತಟಿಸುತ್ತಿದ್ದವು. ಕೊನೆಗೆ "ದಾದಿಯು ಕರ್ತವ್ಯದಲ್ಲಿ ಚ್ಯುತಿಯಾಗದಿದ್ದರೆ ನಾನು ನಡಿಸಿಕೊಡಬಲ್ಲೆ!" ಎಂದು ಮೆಲ್ಲಗೆ ನಡುಗುತ್ತ ನುಡಿದಳು.

"ಇನ್ನೊಬ್ಬರ ಜೀವನವನ್ನು ನಾನು ಸಂಕಟದಲ್ಲಿ ಎಂದಿಗೂ ಕೆಡವಲಾರೆನೆಂದು ಪ್ರತಿಜ್ಞೆಮಾಡಿ ಹನ್ನೆರಡು ವರುಷಗಳಾಗಿರಬೇಕು. ತಾಯೀ...." ಮಾತುಗಳು ಹೊರಡದಾದವು. ಕುತ್ತಿಗೆಯ ಶಿರಗಳು ಉಬ್ಬಿಬಂದವು. ನಾಲಗೆಯು ಹೊಯದಾಡಹತ್ತಿತು. ಕಣ್ಣು ನೀರು ತುಂಬಿ ತೇಲಹತ್ತಿದವು. ಕೈಬೆರಳು ನಡುಗಹತ್ತಿದವು. ಸ್ಥಿಮಿತಕ್ಕೆ ಬರಬೇಕಾದರೆ ನಾಲ್ಕೈದು ನಿಮಿಷ ಹಿಡಿಯಿತು.

"ನಿಮಗೆ ಬಹಳ ದುಃಖವಾಗುತ್ತಿರುವಂತೆ ಕಂಡುಬರುವದು." ಎಂದು ಅನಲಾ ನುಡಿದು ತನ್ನ ಧೈರ್ಯವನ್ನು ಪರೀಕ್ಷಿಸಿಕೊಂಡಳು.

"ಅಹುದು. ಈ ದುಃಖಕ್ಕೆ ನಾನೇ ಕಾರಣನು. ಹಾಗ ನಾನು ಬೀಜ ಬಿತ್ತಿ ಹನ್ನೆರಡು ವರುಷ ಫಲವನ್ನುಣ್ಣುತ್ತ ಬಂದಿರುವೆನು. ಆದರೆ ಆ ದುಃಖ ತೀರದಾಗಿದೆ. ತೀರಲೆಂದು ನಾನು ಆಶಿಸಿಲ್ಲ. ಕೊನೆಯವರೆಗೂ ಇರಲೆಂದು ಇಟ್ಟುಕೊಂಡಿರುವೆ." ಕಣ್ಣುಗಳು ಮತ್ತೆ ಹನಿಯಾದವು.

"ನನಗಂತೂ ವಿಚಿತ್ರವೆನಿಸುವದು!"

"ನನಗೆ ಶ್ರೀಮತಿ ಎಂಬ ಹೆಂಡತಿಯಿದ್ದಳು." ದುಃಖಾತಿರೇಕದಿಂದ ತೊದಲಿಸುತ್ತ ಹೊರಟ ಮಾತುಗಳನ್ನು ಮುಂದುವರಿಸಲು ಕಷ್ಟವಾಯಿತು. ಬಾಯಿಂದ ಹೊರಟ ಬಿಕ್ಕಳಿಕೆಗಳನ್ನು ಬಿಗಿಹಿಡಿದು ಕಣ್ಣೊರಸಿಕೊಂಡನು.

"ಇದರಿಂದ ನನಗೂ ದುಃಖವಾಗುವದು." ತೊದಲುತ್ತ ನುಡಿದಳು.

ಗಂಧಮಾಧವನು ಮುಂದೆ "ಹೆಂಡತಿಯೆನ್ನಲು ನನಗೆ ನಾಚಿಕೆಯಾಗುವದು. ಅವಳನ್ನು ಕಾಡಿಸಿ, ಪೀಡಿಸಿ ಕೊನೆಗೆ ಅವಳ ಸ್ತ್ರೀಸಂಪತ್ತನ್ನು ಸಹ ಅಪಹರಿಸಿ, ಅವಳ ಬಾಳನ್ನು ಹಾಳುಗೆಡವಿ ಮನೆಯಿಂದ ಹೊರಗೆ ಹಾಕಿದೆನು. ಶ್ರೀಮತಿಯ ಬೆಲೆಯನ್ನರಿಯಲು ನನಗೆ ಏಳು ಜನ್ಮಗಳು ಸಾಲವು. ಆ ಸಾಧ್ವಿಯು ತನ್ನ ಸಂಕಟದ ಪರಸೀಮೆಯ ಮೇಲೆ ನಿಂತು

ಶಾಪವಿತ್ತಂತೆ ಸನ್ಯಾಸಿಯಾಗಿ ಹೋದಳು. ನಾನು ಸತ್ತಮೇಲೆ ಹೊರುವ ರೂಪವನ್ನು ನನ್ನ ಕಣ್ಣಮುಂದೆ ಹೊತ್ತು ನಿಂತು ತನ್ನ ಕಿಡಿನುಡಿಗಳಿಂದ ನನ್ನನ್ನು ಸುಟ್ಟು ಹೊರಹೊರಟಳು. ಅವಳು ಎಲ್ಲಿಯೋ ಬದುಕಿ ಸತ್ತಹಾಗೆ ಬಾಳುತ್ತಿರುವಳು. ನಾನು ಸತ್ತು ಬದುಕಿದವನಂತೆ ಓಡಾಡುವೆ. ಆದರೆ ಒಂದು ಮಾತು........ಶ್ರೀಮತಿಯು ನನ್ನ ಮನೆಯಲ್ಲಿ ಮತ್ತೊಂದು ದಿನ ನಿಂತಿದ್ದರೆ ನಮ್ಮ ಬಾಳು ಗೃಹಿಣಿ-ಗೃಹಸ್ಥರಂತೆ ಆಗುತ್ತಿದ್ದಿತೆಂದು ದೃಢವಾಗಿ ಹೇಳ ಬಲ್ಲೆ. ಅವಳ ಕೊನೆಯ ಮಾತುಗಳಿಂದ ನನ್ನಲ್ಲಿಯ ನೂರಾರು ದುರಭಿಮಾನ ಗಳು ಸುಟ್ಟು ಸೀಕರಿಗೊಂಡುಹೋಗಿದ್ದವು. ಆದರೂ ಆ ತಪ್ಪು ಸಂಪೂರ್ಣ ನನ್ನದು.” ಎಂದು ಸಂಕಟದಿಂದ ಮಾತು ಮುಗಿಸಿದನು.

ಅನಲಾನಿಗೆ ನೂರಾರು ಸಿಡಿಲುಗಳು ಮೈತುಂಬ ಮುತ್ತಿಕೊಂಡಂತಾ ದರೂ ಕಲ್ಲಿನಂತೆ ನಿಂತಿದ್ದಳು. ಬಾಯಿಂದ “ ಹಾಯ್ ! ಹಾಯ್! ” ಎಂಬ ಬಿಸಿಯುಸಿರು ಹತ್ತಾರು ಸಾರೆ ಬಂದಿರಬೇಕು. ಅವುಗಳನ್ನೆಲ್ಲ ಬೇಸರಿಕೆಯ ಆಕಳಿಕೆಯಿಂದ ನಿವಾರಿಸಿದಳು. ಇದನ್ನು ನೋಡಿ ‘‘ನಿಮಗೆ ಬೇಸರ ವಾಯಿತೇ ? ’’ ಗಂಧಮಾಧವನು ಕೇಳಿದನು.

‘‘ಇಲ್ಲ” ಎಂದು ನುಡಿಯಲು ಅನಲಾಗೆ ಜಡವಾಯಿತು.

“ಆ ಸಾಧ್ವಿಯು ಎಂದಾದರೊಂದು ದಿನ ನಿಮ್ಮ ಆಸ್ಪತ್ರೆಗೆ ಬರಬಹುದು. ತನ್ನ ಕತೆಯನ್ನು ಹೇಳಬಹುದು. ನನ್ನನ್ನು ಬಾಯಿತುಂಬ ಹಳಿಯಬಹುದು. ನಾನು ಅದಕ್ಕೆ ಪಾತ್ರನು.”

‘‘ಇದು ಸಾಧ್ಯವಾದ ಕಲ್ಪನೆಯೆ?”

‘‘ಅನಾಥರು ರೋಗಪೀಡಿತರಾದರೆ ನೀವೇ ಉಪಚಾರಕರಲ್ಲವೇ ? ”

‘‘ಮುಂದೆ........’’

“ಮೋಸದಿಂದ ಕಿತ್ತಿಕೊಂಡ ಅವಳ ಸೊತ್ತನ್ನು ತಿರುಗಿ ಕೊಟ್ಟು ಶಾಂತ ನಾಗಿ ಸಾಯಬೇಕೆಂದಿರುವೆನು.’’ ಮತ್ತೆ ಕಣ್ಣೊರಸಿಕೊಂಡನು.

ಅನಲಾ ಮೌನಮೂರ್ತಿಯಾಗಿ ನಿಂತುಬಿಟ್ಟಳು.

“ಸ್ತ್ರೀಯು ಯಾವ ಅವಸ್ಥೆಯಲ್ಲಿದ್ದರೂ ಅವಳಲ್ಲಿ ತಾಯತನವು ಜಾಗ್ರತವಾಗಿರುವದು. ಅವಳು ನನ್ನ ಸಾವಿರ ತಪ್ಪನ್ನು ಕ್ಷಮಿಸುವಳು.”

‘‘ಸ್ತ್ರೀಯರನ್ನು ನೀವು ಅಧಿಕವಾಗಿ ಗೌರವಿಸುವಿರಿ.”

‘‘ನಾನು ಇದೇ ಹನ್ನೆರಡು ವರುಷಗಳಲ್ಲಿ ಕಲಿತ ಜ್ಞಾನ.”

“ಹೀಗೂ ಕೆಲವರುಂಟು.”

“ಅದಕ್ಕೆ ನೀವು ಅವಳಿಗೆ ಈ ಗಂಟನ್ನು ಮುಟ್ಟಿಸಿರಿ.” ಎಂದು ಒಂದು ಅರಿವೆಯ ಗಂಟನ್ನು ಮುಂದಿಟ್ಟು ಉತ್ತರವನ್ನು ನಿರೀಕ್ಷಿಸಹತ್ತಿದನು.

ಅನಲಾ ದಿಗ್ಭ್ರಾಂತಳಾದಳು. ಸ್ವೀಕರಿಸಬೇಕೇ, ಬೇಡವೇ ಎಂದು ವಿಚಾರಿಸಿದಳು; ಮತ್ತೂ ವಿಚಾರಿಸಿದಳು. ಕೊನೆಗೂ ಅನಿಶ್ಚಿತ. ಸುಮ್ಮನೆ ನಿಂತುದನ್ನು ನೋಡಿ, “ಅನಲಾತಾಯಿ, ಶ್ರೀಮತಿಯು ಇನ್ನೂ ಚಿಕ್ಕವಳು. ನಾನು ವಯಸ್ಸಾದವನು. ಮನೆಯಿಂದ ಹೊರಡುವ ಮುಂದೆ ಅವಳ ವಯಸ್ಸು ೨೫ಕ್ಕೆ ಮಿಕ್ಕಿರಲಿಲ್ಲ. ನಿಮಗಿಂತ ಅವಳು ಚಿಕ್ಕವಳೆಂದು ನಾನು ಧೈರ್ಯದಿಂದ ಹೇಳಬಲ್ಲೆ. ನಾನು ೮-೧೦ ವರುಷ ಅಥವಾ ಅದಕ್ಕೂ ಕಡಿಮೆ ಬದುಕಬಹುದು. ನಾನು ಸತ್ತಮೇಲೂ ಅವಳು ೨೦-೩೦ ವರುಷ ಅಥವಾ ಅದಕ್ಕೂ ಹೆಚ್ಚುಕಾಲ ಬದುಕಬಹುದು. ಕಳೆದ ಹನ್ನೆರಡು ವರುಷಗಳಲ್ಲಿ ಅವಳನ್ನು ಕಾಣದ ನಾನು ಎಂಟು-ಹತ್ತು ವರುಷಗಳಲ್ಲಿ ಕಾಣುವದುಂಟೇ! ಅದಕ್ಕೆ ಅವಳ ಸ್ತ್ರೀಧನ ನಿಮ್ಮಿಂದ ಮುಟ್ಟಲೆಂದು ಹೆಚ್ಚು ವರುಷಗಳ ಅವಕಾಶದ ಆಸೆಯಿರಲೆಂದು ಇಚ್ಛಿಸುವೆನು. ನೀವು ಇದನ್ನಷ್ಟು ಮಾಡಿದರೆ ನಮ್ಮ ಮರಂತ ಘಟನೆಯ ನಡುವೆ ನಿಂತು ಕಿಲ್ಬಿಷವನ್ನು ತೊಳೆದು ನಕ್ಕು ಸಾಯಲು ಅನುವುಮಾಡಿಕೊಟ್ಟಂತಾಗುವದು. ನಾನು ಹೋಗುವ ಮುಂದೆ ಬೇಡುವ ಭಿಕ್ಷೆ ಇಷ್ಟೆ! ಈ ಸಂಗತಿಯನ್ನು ದೇವರ ಸಾಕ್ಷಿಯಾಗಿ ನಿಮ್ಮೊಬ್ಬರಲ್ಲಿ ಮಾತ್ರ ಹೇಳಿರುವೆ.” ಮಾತು ಮುಗಿಯುವಷ್ಟರಲ್ಲಿ ಹತ್ತಾರು ಸಾರೆ ಬಿಕ್ಕಳಿಸಿದನು.

ಅನಲಾನಿಗೆ ಏನೂ ತಿಳಿಯದಾಯಿತು. ಮುಗಿಲು ಹರಿದು ಮೇಲೆ ಬಿದ್ದಂತೆ ಭಾರವೆನಿಸಿ ಅಲ್ಲಿಯೇ ಗಿಡಕ್ಕೆ ಒರಗಿ ಗಟ್ಟಿಯಾಗಿ ಕುಳಿತಳು.

“ನೀವು ಬೇರೆ ಏನನ್ನೂ ವಿಚಾರಿಸಹತ್ತಿರುವಿರಿ. ಇನ್ನೊಂದು ಮಾತು: ಅನಾಥನಾಗಿ ನಾನು ಎಲ್ಲಿಯೋ ಬಿದ್ದು ಸತ್ತೆನೆಂದು ತಿಳಿಯಿರಿ. ಅವಳನ್ನು ಮೋಸಗೊಳಿಸಿ ಸಂಪಾದಿಸಿದ ಸ್ತ್ರೀಸಂಪತ್ತು ನನ್ನ ಜೊತೆಗೆ ಮಣ್ಣಲ್ಲಿ ಸೇರಿ ನನ್ನನ್ನು ಪಿಶಾಚರೂಪದಿಂದ ಕಾಡದೆ ಬಿಡದು. ಸತ್ತಮೇಲೂ ಅವಳ ಕೋಪದ ಕಿಡಿಗಳನ್ನು ಬೆನ್ನಿಗೆ ಅಂಟಿಸಿಕೊಂಡು ಸ್ಮಶಾನಭೂಮಿಯಲ್ಲಿ ನಿಶಾಚರನಂತೆ ತಿರುಗುವ ಹೊತ್ತು ಬಂದಿತೇ! ನನ್ನ ಪಾಪವು ಮೂರ್ತಿಗೊಂಡು ನನ್ನ ನೆರಳ ಮೇಲೆ ನಿಂತು ಭೀಕರ ಸ್ವರೂಪದಿಂದ ಅಣಕಿಸುತ್ತ, ಅವ

ಮಾನದ ಜ್ವಾಲೆಯಿಂದ ಸುಟ್ಟು ಅಸಹ್ಯ ವೇದನೆಯನ್ನು ಕೊಡದೆ ಬಿಡುವ ದುಂಟೇ! ಹಾಯ್! ಹಾಯ್! ಓರಗೆಯ ಪಿಶಾಚಿಗಳು ನನ್ನನ್ನು ನೋಡಿ ನಗದುಂಟೇ! ಇಹದಲ್ಲಿ ಸಂಕಟ, ಸತ್ತಮೇಲೂ ಸಂಕಟ........ನಾನು ಪಾಪಿ ಏನೋ ಸರಿ. ಆದರೆ ಅದನ್ನು ನಿವಾರಿಸಬೇಕಿದ್ದರೆ ನೀವು ಈ ಕೆಲಸವನ್ನು ಮಾಡಬೇಕು. ತಾಯಿಯೆಂದು ಬೇಡಿಕೊಳ್ಳುವೆ. ದೇವಿಯೆಂದು ಅಂಗಲಾಚಿ ಸುವೆ.'' ಮತ್ತೆ ಕಾಲು ಹಿಡಿಯಹೋದನು. ಅನಲಾ ಆ ಗಂಟನ್ನು ಎತ್ತಿ ಕೊಂಡು ''ಆಗಲಿ.'' ಎಂದಳು.

ಗಂಧಮಾಧವನ ಮುಖದ ಮೇಲೆ ತಿಳಿನಗೆಯು ಮೂಡಿತು ಕಣ್ಣಲ್ಲಿ ಒಂದು ಪ್ರಚಂಡ ಜ್ವಾಲೆಯ ಕಿಡಿಯು ಬೆಳಕುಗೊಂಡಿತು. ಮೈಭಾರವೆಲ್ಲ ಇಳಿದುಹೋಯಿತು. ಆನಂದದಿಂದ ಸುರಿವ ಕಣ್ಣೀರು ತೊಡೆದುಕೊಂಡನು.

''ನಾಳೆ ನಾನು ಹೋಗುವೆನು. ಅವಶ್ಯ ಬಿದ್ದರೆ ಪತ್ರಬರೆದು ನನ್ನ ವಿಳಾಸ ತಿಳಿಸುವೆನು. ನಿಮ್ಮ ಉಪಕಾರವನ್ನು ಎಷ್ಟು ಸಾರೆ ಸ್ಮರಿಸಿದರೂ ಸಾಲದು.'' ಎಂದು ಸಂತೋಷದಿಂದ ನುಡಿದನು.

ಇಬ್ಬರು ತಮ್ಮ ತಮ್ಮ ಕೆಲಸಕ್ಕೆ ಹೋದರು.

ಮರುದಿನ ಗಂಧಮಾಧವನು ನಗುತ್ತ ಊರಿಗೆ ಹೋದನು.

೬

ಅನಲಾನಿಗೆ ನಾಲ್ಕು ದಿನಗಳ ಮೇಲೆ ಒಂದು ಪತ್ರ ಬಂದಿತು. ಪತ್ರದ ಒಕ್ಕಣಿಕೆ ಇಷ್ಟೇ ಇದ್ದಿತು:

ಅನಲಾತಾಯಿ, ನಿಮ್ಮ ಉಪಕಾರ ಬಹಳವಾಯಿತು ಎಂದು ಮೇಲಿಂದ ಮೇಲೆ ನುಡಿದರೆ ಇಲ್ಲವೆ ಸ್ಮರಿಸಿದರೆ ಅದರ ಎಷ್ಟು ಭಾಗವನ್ನು ಕಡಿಮೆ ಮಾಡಿಕೊಂಡಂತಾಗುವದು! ಈ ಜನ್ಮದಲ್ಲಿ ತೀರಿಸುವದು ಸಾಧ್ಯವಿಲ್ಲ. ಮುಂದಿನ ಜನ್ಮದಲ್ಲಿ ದೇವರು ಯಾವ ಬಗೆಯಿಂದ ತೀರಿಸಹಚ್ಚುವನೋ ತಿಳಿಯದು. ಈ ನ್ಯಾಯವನ್ನು ಅವನೇ ನಿರ್ಣಯಿಸಲಿ. ಆ ವರೆಗೆ ನಿಮ್ಮ ದಯದ ದಿವ್ಯಮೂರ್ತಿಯನ್ನು ಮನಸಿನಿಂದ ಪೂಜಿಸುವೆ.

ಸಾಧ್ವಿ ಶ್ರೀಮತಿಗೆ ಅವಳ ಮಂಗಲ ವಸ್ತುಗಳನ್ನು ಮುಟ್ಟಿಸುವಿ ರೆಂದು ನನ್ನ ಪೂರ್ಣ ನಂಬುಗೆ. ನಾನು ಅವಳಿಗೆ ಕೊಟ್ಟ ಸಂಕಟಗಳ

ಹತ್ತು ಪಟ್ಟು ಸಂಕಟವನ್ನು ನಾನು ಹನ್ನೆರಡು ವರುಷ ಉಂಡೆನೆಂದು ತಿಳಿಸಿರಿ. ಇನ್ನೂ ಪಡುವದರಲ್ಲಿ ಸಂತೋಷ ಹೊಂದುವೆ. ಇದರಿಂದ ಅವಳಿಗೆ ನೋವಾಗದಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆ.

ನಾನು ಈಗ ಸಂಪೂರ್ಣ ಗುಣಹೊಂದಿರುವೆ. ಮನಸೂ ಹಗುರಾಗಿದೆ. ಅವಳಿಗೆ ಕೊಟ್ಟ ಸಂಕಟದಿಂದ ಪಶ್ಚಾತ್ತಾಪಗೊಂಡು ಪರಿಶುದ್ಧತೆಗಾಗಿ ನೂರು ತೀರ್ಥಗಳಲ್ಲಿ ಮೀಯಬೇಕೆಂದಿರುವೆ, ಸಾವಿರ ಕ್ಷೇತ್ರಗಳನ್ನು ಸುತ್ತ ಬೇಕೆಂದಿರುವೆ. ಅದಕ್ಕು ಹೆಚ್ಚು ಜಾತ್ರೆಗಳಲ್ಲಿ ತಾಳಗುಟ್ಟಿ ಭಜಿಸಬೇಕೆಂದಿರುವೆ. ನಿಮ್ಮ ಅಪ್ಪಣೆಯಿರಲಿ.

ಮತ್ತು ಶ್ರೀಮತಿಯನ್ನು ಈ ಕಣ್ಣಿಂದ ಕಾಣಲು ನನ್ನ ಕಣ್ಣಲ್ಲಿ ಬೆಳಕಿಲ್ಲ. ಈ ಕಿವಿಯಿಂದ ಅವಳ ಮಾತನ್ನು ಕೇಳಲು ಕಿವಿಯಲ್ಲಿ ಶಕ್ತಿಯಿಲ್ಲ. ಈ ವಾಣಿಯಿಂದ ಅವಳನ್ನು ಬರಮಾಡಿಕೊಳ್ಳಲು ವಾಣಿಯಲ್ಲಿ ಬಲವಿಲ್ಲ. ಅವಳ ಸುಖದುಃಖದ ಸಂಗತಿಯನ್ನರಿಯಲು ಬುದ್ಧಿಯಲ್ಲಿ ಸ್ಥಿರತೆಯಿಲ್ಲ. ಇದಕ್ಕೆ ಹೆದರಿ ದೂರ, ಬಹುದೂರ ಓಡಿಹೋಗುತ್ತಿರುವೆ. ಜಗತ್ತಿನ ನಾಲ್ಕು ಮೂಲೆಯ ಬಾಗಿಲಗಳು ನನಗಾಗಿ ಇಂದು ತೆರೆದಿವೆ. ಒಳಗೆ ಬೆಳಕಿದೆ ಎಂದೂ ಕಾಣುತಿದೆ.

ನೀವು ನಮ್ಮಿಬ್ಬರ ದುರಂತ ಘಟನೆಯ ನಡುವೆ ನಿಂತು ತಾಯಿಯಾಗಿ ನಿರ್ಣಿಸಬೇಕು. ನಾನು ನಿಮ್ಮಿಂದ ಮುಕ್ತನಾದಂತೆ ಅವಳನ್ನಷ್ಟು ಮಾಡಿರಿ. ಅವಳ ಕೋಪ ಹಿಂಗದಿದ್ದರೆ—ನಿನ್ನ ಗಂಡ ಪಾಪಿ, ನಿನ್ನಲ್ಲಿ ಕ್ಷಮೆಯ ಭಿಕ್ಷೆಯನ್ನು ಬೇಡುತ್ತಿರುವನೆಂದು ಕಿವಿಯಲ್ಲಿ ಹೇಳಿರಿ, ”

ಪತ್ರವನ್ನು ಓದಿ ಅನಲಾನ ಹೃದಯವು ತುಂಬಿ ಬಂದಿತು. ಮಕ್ಕಳಂತೆ ಗಟ್ಟಿಯಾಗಿ ಅತ್ತಳು. ಬಿಸಿಯ ಕಣ್ಣೀರಿನ ಹನಿಗಳು ಸಾಲುಗಟ್ಟಿಕೊಂಡು ಕಪೋಲಗಳ ಮೇಲೆ ಉರುಳಿದವು. ಆದರೆ ಒಡೆವ ಗಡಿಗೆಯನ್ನು ಸರಿಪಡಿಸಿ ಆಗುವದೇನು ? ಎರಡು ದಿನ ನೀರು ತುಂಬಿಡಬಹುದಲ್ಲ ? ಎಂಬ ವೇದಾಂತದಿಂದ ಧೈರ್ಯ ತಂದುಕೊಂಡಳು.

ಇಷ್ಟು ದಿನಗಳ ವರೆಗೆ ಗೌಪ್ಯವಾಗಿರಿಸಿದ ಸಂಗತಿಯನ್ನು ಅಕ್ಕನಿಗೆ ಹೇಳಿದಳು. ಪತ್ರವನ್ನು ಓದಲಿಕ್ಕೆ ಕೊಟ್ಟಳು. ಅಕ್ಕನು ಓದಿಕೊಂಡು, “ ಅನಲಾ, ಇದು ಗಂಧಮಾಧವನದಲ್ಲವೇ ? ” ಎಂದು ಕೇಳಿದಳು.

"ಅಹುದು ಅಕ್ಕಾ. ನಿನಗೆ ಹೇಳಿರಲಿಲ್ಲ. ಇಂದು ಮನಸು ನಿಲ್ಲದೆ ಎಲ್ಲವನ್ನು ಹೇಳಿರುವೆನು. ಅವರನ್ನು ತೀರ್ಥಯಾತ್ರೆಗೆ ಕಳಿಸಿದೆನೆಂದು ದುಃಖ ಪಡುವದಿಲ್ಲ. ಹೃದಯವು ಎಷ್ಟು ಪರಿಶುದ್ಧವಾಗಿದೆ ಎಂದು ಸಂತೋಷದಿಂದ ಅಳುತ್ತಿರುವೆ. ಇದೋ ಅವರು ತಿರುಗಿ ಕೊಟ್ಟ "ನನ್ನಭಾಗ್ಯ" ಎಂದು ಬಳೆ, ಕೆದರಿ ಉದುರಿಸಿದ ಕುಂಕುಮ ಮತ್ತು ಮಂಗಳಸೂತ್ರವನ್ನು ಕಟ್ಟಿದ ಗಂಟನ್ನು ಅಕ್ಕನ ಮುಂದಿಟ್ಟಳು.

ಈಗ ಅನಲಾನ ಧೈರ್ಯಧನದ ದಿವಾಳಿಯಾಗಿದ್ದಿತು.

ಅಕ್ಕನು ಬೆಕ್ಕಸಬೆರಗಾಗಿ "ಅನಲಾ!" ಎಂದಳು.

"ಅಕ್ಕ!........" ಅನಲಾ ಎಂದಳು. ಮಾತಿನಲ್ಲಿ ಹಟವಿದ್ದಿತು.

"ಇದೇನು ಮಾಡಿದೆ!"

"ನಿನ್ನಿಂದ ನ್ಯಾಯವನ್ನು ಪಡೆಯಬೇಕಿದ್ದಿತೇ?"

"ಇದು ನ್ಯಾಯವೇ?"

"ಅಕ್ಕ, ನನ್ನ ಮಾತಿಗೆ ಉತ್ತರ ಕೊಡು." ಬಹಳ ಹೊತ್ತಿನ ಮೇಲೆ ಅನಲಾ ಎಂದಳು.

"ಅನಲಾ, ಜೀವನದಲ್ಲಿ ಇಂಥ ಹಟವು ಯೋಗ್ಯವೇ?"

"ಅಕ್ಕ, ನಿನಗಿಂತ ನಾನು ಎಷ್ಟು ವರುಷ ಚಿಕ್ಕವಳು?"

"ಮೂರು ವರುಷವಿರಬೇಕು! ಅದನ್ನೇನು ಮಾಡುವದು?"

"ಹಾಗಾದರೆ ನೀನು ಹೇಳುವ ಉಪದೇಶದಲ್ಲಿಯೂ, ನಾನು ಹೇಳುವ ಉಪದೇಶದಲ್ಲಿಯೂ ಬಹಳ ಅಂತರವಿಲ್ಲವಷ್ಟೇ?"

"ನೀನು ಮಾಡಿದ್ದು ಯೋಗ್ಯವೆಂದು ನಿನ್ನ ಅಭಿಪ್ರಾಯವೇ?"

"ನೀನು ಅಯೋಗ್ಯವೆಂದು ನುಡಿದರೆ ನಾನು ಕೆಲಮಾತು ಹೇಳುವೆ"

"ಹಾಗಾದರೆ ಅವನನ್ನೇಕೆ ಬದುಕಿಸಿದೆ?" ಅಕ್ಕನು ಗದ್ದರಿಸಿದಳು.

"ಅಕ್ಕ! ಈ ಮಾತುಗಳಿಂದ ನಿನ್ನ ತಂಗಿಯ ನಿಷ್ಕಲಂಕ ಮುಖಕ್ಕೆ ಕಲಂಕವನ್ನು ಹಚ್ಚಬಯಸುತ್ತಿರುವೆ ಎಂದು ಅರ್ಥವಾಗುವದು."

ಬಹಳ ಹೊತ್ತಿನ ವರೆಗೆ ಇಬ್ಬರೂ ಮಾತಾಡಲಿಲ್ಲ.

"ಅನಲಾ, ನನ್ನ ಮಾತಿನ ಹಿಂದೆ ಈ ಭಾವನೆಯಿರಲಿಲ್ಲ."

“ಜೀವನದಲ್ಲಿ ಔದಾರ್ಯ, ಪರೋಪಕಾರ, ನಿಸ್ವಾರ್ಥತೆ, ಸೇವೆ ಎಂಬ ಧರ್ಮರೂಪಿ ಕರ್ತವ್ಯಗಳಿರುವವು.”

ಸಣ್ಣ ಮಗನು ಒಳಗೆ ಬಂದು “ತಾಯಿ, ದವಾಖಾನೆಯ ವೇಳೆಯಾಯಿತು.” ಎಂದು ನುಡಿದನು.

ಅನಲಾ ಮಗುವನ್ನು ಎತ್ತಿ ಮುದ್ದಿಟ್ಟು “ಅಹುದು ಚಿನ್ನಾ, ಈ ದಿನ ಮರೆಯದೆ ನಿನಗೆ ಒಂದು ಗಿಳಿಯನ್ನು ತಂದುಕೊಡುವೆ.” ಎಂದು ಮತ್ತೊಮ್ಮೆ ಮಗುವನ್ನು ಮುದ್ದಿಸಿ, ಕೆಳಗಿಳಿಸಿ “ಅಕ್ಕ, ದವಾಖಾನೆಗೆ ಹೋಗುವೆ.” ಎಂದು ನಗುತ್ತ ಹೇಳಿ ಹೊರಟಳು.

ಅಕ್ಕನು ತೆರೆದ ಬಾಯನ್ನು ಕಣ್ಣುಗಳನ್ನು ಇನ್ನೂ ಮುಚ್ಚಿರಲಿಲ್ಲ.

# ಮಾಸ್ತಿಯವರು

( ವ್ಯಕ್ತಿ ಚಿತ್ರ )

ಬರೆದವರು :

**ಕೆ. ಎ. ಎನ್. ರಾವ್**

"........ಶ್ರೀ. ಮಾಸ್ತಿಯವರೂ ನಾನೂ ಒಂದನೆಯ ತಾರೀಖು ಹನ್ನೊಂದು ಗಂಟೆಗೆ ಕಾಶಿಯನ್ನು ತಲಪುತ್ತೇವೆ. ಡಾಕ್ಟರ ಬಾದಾಮಿಯವರಲ್ಲಿ ಉಳಿಯುವ ಯೋಚನೆ ಇದೆ. ಶ್ರೀ. ಮಾಸ್ತಿಯವರು ನಿಮ್ಮನ್ನು ನೋಡಲು ಉತ್ಸುಕರಾಗಿರುವರು........ಅ. ನಾ."

ಈ ಕಾಗದವು ಮುಟ್ಟಿದುದು ಎರಡನೆಯ ತಾರೀಖಿನ ಮಧ್ಯಾಹ್ನ ಒಂದು ಗಂಟೆಗೆ; ಇನ್ನೂ ಯುದ್ಧಕಾಲದ ಅಂಚೆಯ ವ್ಯವಸ್ಥೆಯೆ. ನನಗೆ ಮಾಸ್ತಿಯವರನ್ನು ಕಾಣುವ ಉತ್ಸುಕತೆ ಅವರಿಗೆ ನನ್ನನ್ನು ನೋಡುವುದರ ನೂರರಷ್ಟು. ಸರಿ, ಬೇಗನೆ ಬಟ್ಟೆಗಳನ್ನು ತಗಲು ಹಾಕಿಕೊಂಡು ಹನುಮಾನ ಘಾಟನಿಂದ 'ರಿಕ್ಷ' ಮಾಡಿಕೊಂಡು ವಿಶ್ವವಿದ್ಯಾಲಯದ ಆವರಣದಲ್ಲಿದ್ದ ಡಾ. ಬಾದಾಮಿಯವರ ಮನೆಗೆ ಹೋದೆ. ಅಲ್ಲಿ ಮಾಸ್ತಿಯವರು ಇರಲಿಲ್ಲ. ಮನೆಯವರು 'ಡಾ. ಬಾದಾಮಿಯವರು ಊರಿನಲ್ಲಿಲ್ಲ; ಅದಕ್ಕಾಗಿ ಅವರು ಮೈಸೂರ ಛತ್ರಕ್ಕೆ ಹೋದರು' ಎಂದರು. ನನಗೆ 'ಎಲ! ಇಷ್ಟೊಂದು ಕನ್ನಡಿಗರು ಇಲ್ಲಿ ಇದ್ದೂ ಇವರು ಛತ್ರಕ್ಕೆ ಹೋಗುವಂತೆ ಆಯಿತಲ್ಲ! ಬಾದಾಮಿಯವರು ಇಲ್ಲದ ಪಕ್ಷಕ್ಕೆ ಅವರ ಮನೆಯ ಆತಿಥ್ಯವನ್ನು ಒಪ್ಪಿಕೊಳ್ಳಬಾರದಾಗಿತ್ತೆ? ಇವರದ್ದು ಇಷ್ಟು ದಾಕ್ಷಿಣ್ಯಪ್ರಕೃತಿಯಲ್ಲ!' ಎನ್ನಿಸಿತು.

ಮೈಸೂರು ಛತ್ರವಿರುವದು ಹನುಮಾನ ಘಾಟನಲ್ಲೆ. ನಮ್ಮ ಮನೆಯಿಂದ ಅಲ್ಲಿಗೆ ಒಂಬು ನಿಮಿಷದ ನಡಿಗೆ. ನಾನೇ ನೇರವಾಗಿ ಹಿಂದಿರುಗಿ ಛತ್ರವನ್ನು ಹೊಕ್ಕಾಗ ಅಲ್ಲಿಯ ಅಡಿಗೆಯ ನಾರಣಪ್ಪ ಆರಾಮು ತೆಗೆದುಕೊಳ್ಳುತ್ತಿದ್ದ. ನಾನು 'ಮಾಸ್ತಿಯವರು ಯಾವ ಕೋಣೆಯಲ್ಲಿದ್ದಾರೆ?' ಎಂದು ಕೇಳಿದೆ. ಅವನು 'ಯಾರು, ಡೆಪ್ಯುಟಿ ಕಮಿಷನರು ವೆಂಕಟೇಶ ಅಯ್ಯಂಗಾರ್ಯರೆ?' ಎಂದು ಕೇಳಿ ಕೋಣೆಯ ಸಂಖ್ಯೆಯನ್ನು ಹೇಳಿದ. ಕದವನ್ನು ತಟ್ಟುತ್ತಲೆ ಒಳಗಿನಿಂದ 'ಬನ್ನಿ ಸ್ವಾಮಿ!' ಎಂಬ ಉತ್ತರ ನಯವಾದ ಧ್ವನಿಯಲ್ಲಿ ಕೇಳಿಸಿತು. ಬಾಗಿಲನ್ನು ನೂಕಿಕೊಂಡು ಒಳಹೊಕ್ಕಾಗ, ಅಗೊ, ಅಲ್ಲಿಯೇ ನಿಂತಿದ್ದರು ನನ್ನ ಮುಂದೆ ಮಾಸ್ತಿಯವರು! ಬೆಟ್ಟು ಅಗಲದ ಕೆಂಪು ಅಂಚಿನ ಕಚ್ಚೆಪಂಚೆಯನ್ನುಟ್ಟು, ಮಾಸಲು ನೀಲಿಯ ಷರಟನ್ನು ಹಾಕಿದ್ದ, ನಸುಬಾಗಿದಂತೆ ಕಂಡ ಸಣ್ಣ ಶರೀರ, ಎಣ್ಣೆಗೆಂಪಿನ ಮೊಗದ ಸುಕ್ಕುಕೆನ್ನೆಗಳು, ಕನ್ನಡಕದ ಹಿಂದೆ ಹೊಳಪಾದ ಕಣ್ಣುಗಳು, ಯೋಚನೆಯ ಹುಬ್ಬುಗಳು, ಅಡ್ಡಗೆರೆ ಕಂಡು ಕೊಂಚ ಉಬ್ಬಿದ ಹಣೆ,

ಅದರ ಮೇಲೆ ದೊಡ್ಡ ಕೆಂಪು ಬಿಳಿ ನಾಮುಗಳು, ಅರೆಬೋಳಾದ ಮುಂತಲೆ, ಕೆದರಿದ ಕೂದಲಿನ ಹಿಂತಲೆ. ನಾಲ್ಕು ಬಾರಿ ಮಡಿಸಿದ ಒದ್ದೆಯ ಪಂಚೆ ಯೊಂದನ್ನು ಎರಡೂ ಕೈಗಳಲ್ಲೂ ಎತ್ತಿಹಿಡಿದು ಹರವಿಹಾಕುವುದಕ್ಕೆ ಅಣಿ ಯಾಗಿದ್ದರು. ಹುಂ, ಈ ಸರಳ ವ್ಯಕ್ತಿಯೇ ಆ ಸುಪ್ರಸಿದ್ಧ ಸಾಹಿತಿ, ಮಾಸ್ತಿಯವರು. ನಾನು ಒಳಹೊಕ್ಕಾಗ ಅವರು ಮುಖವನ್ನು ಕೊಂಚ ಮೇಲೆತ್ತಿ ನೋಡಿ, ಮುಗುಳುನಗೆಯಿಂದ ಬರಮಾಡಿಕೊಂಡು ಹತ್ತಿರದ ಕುರ್ಚಿಯೊಂದನ್ನು ತೋರಿಸಿದರು. ಪಂಚೆಯನ್ನು ಹರವುತ್ತಲೇ ಕುಶಲ ಪ್ರಶ್ನೆಗಳಾದುವು. ಮೇಜಿನ ಮೇಲೆ ಇನ್ನು ಅಷ್ಟು ಹಿಂಡಿದ ಬಟ್ಟೆಗಳಿದ್ದುದ ರಿಂದ ನಾನೂ ಸಹಾಯಮಾಡಲು ಮುಂದುವರಿದೆ. ಅದಕ್ಕೆ ಅವರು ' ಸರಿ ಇಷ್ಟು ಮಾಡಿಕೊಳ್ಳದೆ ಏನು. ನೀವು ಕುಳಿತುಕೊಳ್ಳಿ.' ಎಂದು ಮಾತ ನಾಡುತ್ತಲೇ ಅವನ್ನು ಒಂದೊಂದಾಗಿ ವರಾಂಡಕ್ಕೆ ಸಾಗಿಸುತ್ತಿದ್ದರು. ಹಾಗೆ ಅವರು ಹೊರಗೆ ಹೋದಾಗ ನಾನು ಕೋಣೆಯ ಸುತ್ತಲೂ ನೋಡಿದೆ. ಅಲ್ಲಿದ್ದ ಕಬ್ಬಿಣದ ಮಂಚದ ಮೇಲೆ ಸ್ವಲ್ಪ ಬಿಚ್ಚಿದ ಸಣ್ಣ ಸುರುಳಿಯ ಹಾಸಿಗೆಯು, ಅವರು ಕೆಲವು ನಿಮಿಷವೇ ವಿಶ್ರಮಿಸಿಕೊಂಡಿರಬಹುದೆಂದು ಸೂಚಿಸುತ್ತಿತ್ತು. ಮೇಜಿನ ಮೇಲೆ ಕೆಲವು ಪ್ರಸಾದದ ಬಾಳೆಯ ಹಣ್ಣು ಗಳು ಗುಡ್ಡೆಯಾಗಿ ಬಿದ್ದಿದ್ದುವು. ಕೋಣೆಯ ಒಂದು ಕಡೆ ಗೋಡೆಯ ಅಂಚಿನಲ್ಲಿ ಒಂದು ರೈಲು-ಚಂಬು, ಪೆಟ್ಟಿಗೆ, ಬುಟ್ಟಿ, ಪುಸ್ತಕಗಳ ಸಾಲು ಕಾಣುತ್ತಿದ್ದವು. ಕ್ಲೋಸುಕಾಲರಿನ ಕೋಟು, ಕಂಬಳಿಯ ಟೋಪಿ ಗೂಟದ ಮೇಲೆ ನೇತಾಡುತ್ತಿದ್ದುವು. ಒಂದು ಜತೆ ದಪ್ಪ ಎಕ್ಕಡ ಬಾಗಿಲಿನ ಹಿಂದೆ. ಇಷ್ಟೇ ಈ ನಿವೃತ್ತ ಅಧಿಕಾರಿಗಳ ಪ್ರಯಾಣಸೌಕರ್ಯ.

ಬಟ್ಟೆ ಹರವಿದ ಮೇಲೆ ಮಾಸ್ತಿಯವರು ಮೇಜಿನ ಮೇಲಿದ್ದ ಹಣ್ಣಿ ನಲ್ಲಿ ಎರಡನ್ನು ಕೊಟ್ಟರು. ಅನಂತರ ಪಕ್ಕದ ಕೋಣೆಯ ಕಡೆಗೆ ಬಾಗಿ 'ನಾರಾಯಣಸ್ವಾಮಿ' ಎಂದರು. ಮಲಗಿದ್ದು ಆಗ ತಾನೆ ಎದ್ದ ಕೆಂಪು ಕಣ್ಣಿನ ಅಯ್ಯರು ಹೊರಗೆ ಬಂದರು. ಅವರು ನನಗೆ ಕಲಕತ್ತೆಯ ಪರಿಚಯ. ಆದರೆ ಈಗ ಅವರ ಮೈಬೊಜ್ಜು ಕೊಂಚ ಕರಗಿದ್ದಿತು. ಅಲ್ಲಿ ಇದ್ದ ಒಂದೆ-ರಡು ಹಲ್ಲೂ ಹೋಗಿ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದರು. ಅಲ್ಲಿದ್ದ ಜುಟ್ಟು ಈಗ ಕತ್ತರಿಗೆ ಎಡೆಕೊಟ್ಟಿದ್ದಿತು. ಕಣ್ಣಿಗೆ ಕನ್ನಡಕವೂ ಹೊಸದು.

ಇಷ್ಟೆ. ಇಲ್ಲದಿದ್ದರೆ ಅದೇ ವೇಷ್ಟಿ, ಅದೇ ಷರಟು, ಅದೇ ವ್ಯಕ್ತಿ.

ಮಾತುಕತೆಯಲ್ಲಿ ಊಟದ ಮಾತು ಬಂದಿತು. ಮಾಸ್ತಿಯವರು 'ಅದಕ್ಕೆಲ್ಲ ಈಗ ಸರಿಯಾಗಿದೆ. ಮೊದಲು ಎರಡು ಹೊತ್ತು ಹತ್ತಿರದ ಮದರಾಸು ಹೋಟಲಿನಲ್ಲಿ ಊಟ ಆಯ್ತು. ಈಗ ನಾರಾಯಣಸಾಮಿ ಶಾಸ್ತ್ರಿಗಳೊಬ್ಬರನ್ನು ಪತ್ತೆಹಚ್ಚಿ ಏರ್ಪಾಡುಮಾಡಿದ್ದಾರೆ' ಅಂದರು. ಅಯ್ಯರು 'ಹೇಗಿದ್ದರೂ ಅವರು ಅಷ್ಟು ಕರ್ಮವನ್ನೇನೋ ಮಾಡಿಸಬೇಕು. ಅವರ ಜತೆಗೆ ಇದೂ ಅವರಿಗೆ, ನಮಗೆ ಅನುಕೂಲವಾದಂತೆ ಆಗುತ್ತದೆ' ಅಂದರು ನಾನು 'ನೀವು ಇಲ್ಲಿಗೆ ಬಂದು ಛತ್ರ, ಹೋಟಲು ಅಂತ ಇಷ್ಟು ಪಾಡುಪಟ್ಟಿದ್ದೇ ಸಾಕು, ಇನ್ನು ನಮ್ಮ ಮನೆಗೇ ಬಂದುಬಿಡಿ' ಅಂದೆ. ಮಾಸ್ತಿಯವರು "ಛತ್ರದಲ್ಲಿ ನಮಗೇನೂ ಅನಾನುಕೂಲವಿಲ್ಲ. ಅಲ್ಲದೆ ಶಾಸ್ತ್ರಿಗಳಿಗೆ ಹೇಳಿಬಿಟ್ಟಿದ್ದಾಯಿತು. ಬದಲಾಯಿಸಿದರೆ 'ನೋಡಿದೆಯಾ, ಸ್ನೇಹಿತರು ಸಿಕ್ಕೊಡನೆ ನಮ್ಮನ್ನು ಒತ್ತರಿಸಿದರು' ಅಂದು ಅಸಮಾಧಾನಗೊಂಡಾರು" ಅಂದರು. "ಶಾಸ್ತ್ರಿಗಳ ಪರಿಚಯು ನನಗಿದೆ. ಅವರನ್ನು ಒಪ್ಪಿಸುತ್ತೇನೆ" ಎಂದು ಭರವಸೆಯನ್ನು ಕೊಟ್ಟಮೇಲೆ ಮಾಸ್ತಿಯವರು "ಅವರಲ್ಲಿಗೆ ಒಂದು ಹೊತ್ತಾದರೂ ಹೋಗಬೇಕು. ಇಲ್ಲದಿದ್ದರೆ ಏನು ದೊಡ್ಡಿಸ್ತಿಕೆ ಅಂದುಕೊಂಡಾರು!" ಅಂದರು. ಈ ಲೌಕಿಕದ ಬಗ್ಗೆ ಒಪ್ಪಿಗೆಯಾಯಿತು.

ಆಗ ಮೂರುವರೆ ಗಂಟೆಯ ಸಮಯವಾಗಿದ್ದು ನಾನು 'ನಮ್ಮ ಮನೆಗೆ ಹೋಗೋಣ. ಕೊಂಚ 'ಚಹ' ತೆಗೆದುಕೊಳ್ಳಬಹುದು' ಅಂದೆ. ಮಾಸ್ತಿಯವರು "ಯಾಕೆ, ಹೋಟಲಿನಲ್ಲೇ ಒಂದು ಲೋಟ ಕಾಫಿ ತೆಗೆದುಕೊಂಡುಬಿಡೋಣ. ಈಗ ಜಂಗಮವಾಡಿ ಮಠಕ್ಕೆ ಹೋಗುವದಿದೆ. ಸ್ವಾಮಿಗಳು ನನಗೆ ಹಿಂದೆ ಪರಿಚಯ" ಅಂದರು. ಈ ಮಾತಿನಲ್ಲಿ ಕಾಫಿಯ ಬಗ್ಗೆ ಪಕ್ಷಪಾತವನ್ನು ಕಂಡು ನಾನು "ನಮಗೆ ಕಾಫಿ ಅಭ್ಯಾಸವಿಲ್ಲ. ಅದಕ್ಕೆ ಏರ್ಪಾಡು ಮಾಡಲು ಪುರುಸೊತ್ತು ಇರಲಿಲ್ಲ." ಅಂದೆ. "ಅದಕ್ಕೇನು ಪರವಾಯಿಲ್ಲ. ನಾರಾಯಣಸಾಮಿ ಕೊಂಚ ಪುಡಿಯನ್ನು ಇಟ್ಟೇ ಇರುತ್ತಾರೆ. ಸುಮ್ಮನೆ ಯಾಕೆ ಹೊತ್ತು ಮಾಡೋಣ, ತೊಂದರೆ ಬೇರೆ ಅಂತ" ಎಂದರು. ನಾನು "ತೊಂದರೆ ಹೇಗಾದೀತು. ಪುಡಿ ಇದೆ ಅಂದಮೇಲೆ ಅನುಕೂಲವಾಯಿತು. ಹೆಚ್ಚು ಹೊತ್ತಾಗುವದಿಲ್ಲ" ಅಂದೆ. ಮಾಸ್ತಿಯವರು "ಸರಿ,

ಹಾಗಾದರೆ" ಅಂದು ಕೋಟು ಟೋಪಿಗಳನ್ನು ಅರ್ಧ ನಿಮಿಷದಲ್ಲಿ ಹಾಕಿಕೊಂಡರು. ಅಯ್ಯರೂ ಮೇಲುವಸ್ತ್ರವನ್ನು ಎಸೆದುಕೊಂಡು, ಕಾಫಿ ಪುಡಿಯ ಸಣ್ಣ ಡಬ್ಬಿಯನ್ನು ಹಿಡಿದುಕೊಂಡರು. ಹೊರಟೆವು. ಹಾದಿಯಲ್ಲಿ ಮಾಸ್ತಿಯವರು ಸಣ್ಣಕತೆಯೊಂದರ ಬಗ್ಗೆ ಒಳ್ಳೆಯ ಮಾತನಾಡಿದರು. ನಾನು "ಅದೇನು ತಮ್ಮ ದಾರಿಯನ್ನು ಅನುಸರಿಸಿದುದು ತಾನೆ?" ಎಂದೆ. ಮಾಸ್ತಿಯವರು ನಸುನಗುತ್ತ 'ಅದು ಹೇಗೆ? ಅದು ಹೇಗೆ?' ಎಂದು ಪ್ರಶ್ನಿಸಿದರು. ನಾನು "ಸಣ್ಣಕತೆಗಳ ಬಗ್ಗೆ ತಾವು ದೊಡ್ಡ ಮೇಲುಪಂಕ್ತಿಯನ್ನು ಹಾಕಿಬಿಟ್ಟಿದ್ದೀರಿ" ಎಂದೆ ಆಗ ಮಾಸ್ತಿಯವರು 'ಓ!' ಎಂದು ಸುಮ್ಮನಿದ್ದರು. ಆಗ ಅವರ ಕಣ್ಣಿನಲ್ಲಿ ಕಂಡುದು ಗರ್ವವಲ್ಲ, ಸದಭಿಮಾನದ ಹೆಮ್ಮೆ.

"ಮಠಕ್ಕೆ 'ರಿಕ್ಷ'ದಲ್ಲಿ ಹೋಗೋಣವೆ?" ಎಂದು ನಾನು ಸೂಚಿಸಿದೆ. ಅದಕ್ಕೆ ಮಾಸ್ತಿಯವರು " ಮಠ ಎಷ್ಟು ದೂರ ? " ಎಂದರು. ನಾನು 'ಮುಕ್ಕಾಲು ಮೈಲಿಯ ಮೇಲಾದೀತು' ಎನ್ನಲು ಅವರು "ನಡೆದು ಬಿಟ್ಟರೇ ಆಯಿತು. ರಿಕ್ಷದವನು ನಮ್ಮ ಮುಂದೇ ಪೆಡಲನ್ನು ತುಳಿಯುತ್ತ ಭಂಗಪಡುವುದು ಏತಕ್ಕೋ ನನಗೆ ಸರಿಬೀಳದು." ಅಂದರು. ಕಾಶಿಯ ಸಣ್ಣ ಬೀದಿಯಲ್ಲಿ ಅಡಚಣೆಗಳ ಮೇಲೆ ಅಡಿ ಇಡುತ್ತ, ಕೊಳೆಗಳನ್ನು ಹಳ್ಳಕೊಳ್ಳಗಳನ್ನು ದಾಟುತ್ತ, ಕಾಲುದಾರಿಯಿಂದ ರಸ್ತೆಗೋ, ರಸ್ತೆಯಿಂದ ಕಾಲುದಾರಿಗೋ ಸಮಯೋಚಿತವಾಗಿ, ಸ್ಥಳೋಚಿತವಾಗಿ, ಬದಲಾಯಿಸಿಕೊಳ್ಳುತ್ತ, ವಾಹನಪ್ರಾಣಿಗಳಿಂದ ನುಣುಚಿಕೊಳ್ಳುತ್ತ, ಮಠವನ್ನು ಸೇರಿದೆವು. ಅಲ್ಲಿ ಹೊರಗಿನಿಂದ ಸ್ವಾಮಿಯವರಿಗೆ ಮಠದ ಆಳಿನೊಡನೆ ಚೀಟಿಯನ್ನು ಕಳುಹಿಸುವುದೆಂದು ನಿರ್ಧರಿಸಿದ ಮೇಲೆ ನನ್ನ ಬಳಿ ಕಾಗದವಿದ್ದುದರಿಂದ ನಾನು ಕೊಂಚ ಹರಿದು 'ಮಾಸ್ತಿ ವೆಂಕಟೇಶ ಅಯ್ಯಂಗಾರ್' ಎಂದು ಬರೆದೆ. ಮಾಸ್ತಿಯವರು ಭುಜದ ಮೇಲಿನಿಂದ ನೋಡಿ, ಸೀಸದ ಕಡ್ಡಿಯನ್ನು ತೆಗೆದುಕೊಂಡು 'ಮತ್ತು ಸ್ನೇಹಿತರು' ಎಂದು ಸೇರಿಸಿದರು. ಕೊಂಚ ಹೊತ್ತಾದ ಮೇಲೆ ಸ್ವಾಮಿಯವರ ಶಿಷ್ಯರಲ್ಲಿ ಒಬ್ಬಾತನು ಬಂದು ನಮ್ಮ ಕಡೆ ಅತ್ತಿತ್ತ ನೋಡಿ ಅನುಮಾನಿಸುತ್ತ 'ಮಾಸ್ತಿ ವೆಂಕಟೇಶ ಅಯ್ಯಂಗಾರ್ರು !' ಅಂದನು. ಮಾಸ್ತಿಯವರು ನಸುನಗುತ್ತ ಮುಂದೆ ಹೆಜ್ಜೆ ಇಟ್ಟು 'ನಾನೇ' ಅಂದರು. ಸ್ವಾಮಿಯವರು ಪೂಜೆಯಲ್ಲಿದ್ದುದರಿಂದಲೂ ಮಠ

ವನ್ನು ನೋಡುವ ಅಗತ್ಯವಿದ್ದುದರಿಂದಲೂ ಶಿಷ್ಯರು ಅನೇಕರು ನಮ್ಮನ್ನು ಮಠದ ಒಳಗೆಲ್ಲ ಕರೆದುಕೊಂಡು ಹೋಗಿ ತೋರಿಸಿದರು. ಮಾಸ್ತಿಯವರು ಅಲ್ಲಿಯ ಸಮಾಧಿಗಳ, ಪಠಗಳ, ವಿಶೇಷಗಳ ವಿಚಾರವನ್ನೆಲ್ಲ ಕೇಳಿ ತಿಳಿದುಕೊಂಡು, ಪೂಜೆ ನಡೆಯುತ್ತಿದ್ದ ಶಿವಲಿಂಗಕ್ಕೆ ಕೈ ಮುಗಿದು ಪುಸ್ತಕ ಭಂಡಾರವನ್ನು ನೋಡಿ ಆನಂದಿಸಿ ವಾಚನಾಲಯಕ್ಕೆ ಬಂದರು. ಅಲ್ಲಿ ಮಠವು ನಡೆಸುತ್ತಿದ್ದ ಹಸ್ತಪತ್ರಿಕೆಯನ್ನು ನೋಡುತ್ತ 'ಇದು ಯಾರು ಜಿ. ಬಿ. ಶಿವಲಿಂಗಪ್ಪ? ' ಎಂದು ಕೇಳಿದರು. 'ಶಿಷ್ಯರ ಪೈಕಿ ಮುಂದಾಳು 'ನಾನು' ಎಂದ ಮೇಲೆ, ಮಾಸ್ತಿಯವರು " ನಿಮ್ಮ ಊರು ಯಾವುದು? " ಅಂದರು. ಶಿಷ್ಯನು 'ಗುಡ್ಡ' ಅಂದ. 'ನಿಮ್ಮ ತಂದೆಯ ಹೆಸರು?' ಮತ್ತೆ ಕೇಳಿದರು. 'ಬಸಪ್ಪ'. ಮಾಸ್ತಿಯವರು "ಹಾಗಾದರೆ ನಿಮ್ಮ ಹೆಸರು 'ಗು. ಬ. ಶಿವಲಿಂಗಪ್ಪ' ಎಂದಿರಬೇಕು. ಜಿ. ಬಿ. ಅಲ್ಲ" ಎಂದು ನಗುತ್ತ ಹೇಳಿ ಎಲ್ಲರನ್ನೂ ನಗಿಸಿದರು.

ಸ್ವಾಮಿಯವರಲ್ಲಿಗೆ ಹೋದ ಮೇಲೆ ಮೊದಲ ಮಾತುಗಳಾದುವು. ಮಾಸ್ತಿಯವರು "ಇತ್ತಕಡೆ ಬಂದುದು ಕನ್ನಡಿಗರ ಪರಿಚಯಕ್ಕಾಗಿ" ಎಂದು ತಿಳಿಸಿದರು. ಮತ್ತೆ " ನಾನು ಈಗ ಕನ್ನಡಿಗನು ಮಾತ್ರವೇ ಅಲ್ಲದೆ ಪರಿಷತ್ತಿನ ಉಪಾಧ್ಯಕ್ಷನಾಗಿದ್ದು ಇದು ನನ್ನ ಕರ್ತವ್ಯವೆ ಆಗಿದೆ" ಎಂದು ಸೇರಿಸಿದರು. ಪರಿಷತ್ತಿನ ವಿಚಾರವು ಸಹಜವಾಗಿಯೇ ಬಂತು. ಸ್ವಾಮಿಗಳು " ಸದಸ್ಯರ ಸಂಖ್ಯೆಯನ್ನು ಇಷ್ಟು ಹೆಚ್ಚಿಸಿ ದೊಡ್ಡ ಕೆಲಸ ಮಾಡಿದಿರಿ " ಅಂದರು.

" ಅಷ್ಟೇನು ಅಲ್ಲ. ಏನೋ ಯಥಾಸುಶಕ್ತಿ ಯತ್ನಿಸಿದ್ದೇನೆ " ಮಾಸ್ತಿಯವರು ನಮ್ರತೆಯಿಂದ ನುಡಿದರು.

" ಹಾಗೆನ್ನಬೇಡಿ, ಅದು ಎಷ್ಟು ದೊಡ್ಡದೆಂದು ಆ ವಿಚಾರವನ್ನರಿತವನಿಗೇ ಗೊತ್ತು. ದ್ರಾವಿಡ ಭಾಷೆಗಳ ಪರಿಷತ್ತು ಯಾವುದಕ್ಕೂ ಇರದ ಇಷ್ಟೊಂದು ಸದಸ್ಯಬಲವಿರುವುದು ನಿಮಗೆ ಹೆಮ್ಮೆಯ ಮಾತು. "

" ನನಗೆ ಇಷ್ಟು ದೊಡ್ಡ ಕರ್ನಾಟಕದಲ್ಲಿ ಈ ಸಂಖ್ಯೆ ಐದು ಸಾವಿರವಾದರೂ ಆಗಬೇಕೆಂದು ಆಸೆ. ಆದರೆ ಅದು ಸಾಧ್ಯವಾಗದೆ ಇರುವುದು ಒಂದು ಕೊರತೆ. "

" ಈ ವರ್ಷ ಆ ಗುರಿಯ ಸಾಧನೆಯನ್ನೂ ಕಂಡೀರಿ. ಅದಕ್ಕೆ ತಕ್ಕ ಶಕ್ತಿ, ಉತ್ಸಾಹ, ಪ್ರೋತ್ಸಾಹ, ಚಾತುರ್ಯ ಎಲ್ಲವೂ ನಿಮ್ಮಲ್ಲಿ ಇದೆ."

"ಇಲ್ಲ, ಈ ವರ್ಷ ಯಾರಾದರೂ ಚಿಕ್ಕ ವಯಸ್ಸಿನವರಿಗೆ ಈ ಜವಾಬು ದಾರಿಯನ್ನು ಹೊರಿಸಬೇಕು ಅಂತ ಮಾಡಿದ್ದೇನೆ. ಅವಷ್ಟು ದುಡಿಯುವು ದಕ್ಕಂತೂ, ನಾನು ಇಷ್ಟೇನಲ್ಲ. "

" ಹಾಗಾಗಬಾರದು. ಇನ್ನೂ ನಿಮ್ಮ ಮುಂದಾಳುತನದ ಅಗತ್ಯವಿದೆ. ಭಿನ್ನಾಭಿಪ್ರಾಯದವರನ್ನು ಕೂಡಿಸುವುದು ಸ್ವಲ್ಪ ಜನರಿಗೇ ಸಾಧ್ಯ. ನೋಡಿ ದರೋ 'ಕರ್ಣಾಟಕ-ಕರ್ನಾಟಕ', 'ಹಿಂದಿ-ಕನ್ನಡ' ಈ ವಿಷಯಗಳು ಪರಿಷತ್ತಿನ ಒಗ್ಗಟ್ಟು, ಏಳ್ಗೆಗಳಿಗೆ ಎಷ್ಟೊಂದು ಕುಂದು ತಂದಿರಬಹುದು. ಇಂತಹ ಸಂದರ್ಭಗಳಲ್ಲಿ ಲೌಕಿಕದಿಂದ ಪರಿಷತ್ತನ್ನು ನಡೆಸಿಕೊಂಡು ಬರು ವುದು ಅಗತ್ಯ." ಸ್ವಾಮಿಗಳು ಕೆಲವು ವ್ಯಕ್ತಿಗಳ ಭಾಗವನ್ನು ನಿರ್ದೇಶಿಸಿ ದರು. ಮಾಸ್ತಿಯವರು ಪ್ರಯಾಸದಿಂದ ಆ ವ್ಯಕ್ತಿಯನ್ನು ಒಳಗೆ ಹಾಕಿ ಕೊಳ್ಳಲು ಯತ್ನಿಸಿದರು. ಸ್ವಾಮಿಯವರು "ನನಗೆ ನಿಮ್ಮ ಸ್ವಭಾವವು ಗೊತ್ತು. ನೀವು ಸ್ನೇಹಿತರನ್ನು ಬಿಟ್ಟುಕೊಡುವವರಲ್ಲ. ಆದರೆ ಇದು ವ್ಯಕ್ತಿ ದೋಷದ ಮಾತಲ್ಲ—ಈ ಸಂದರ್ಭದಲ್ಲಿ. " ಅಂದರು.

" ಹೌದು, ಆ ವಿಷಯಗಳಲ್ಲಿ ಚರ್ಚೆಯು ಮಿತಿಮೀರಿ ಆಯಿತೆಂದೇ ನನಗೂ ಅನ್ನಿಸುತ್ತದೆ. "

" ಅಲ್ಲದೆ ಚರ್ಚಾಸ್ಪದವಾದ ವಿಷಯಗಳಲ್ಲಿ ಪರಿಷತ್ತು ವೈಯಕ್ತಿಕ ಅಭಿಪ್ರಾಯಗಳನ್ನು ಸಮರ್ಥಿಸುವಂತೆ ತೋರಿಸಿಕೊಂಡು ತನ್ನ ಪತ್ರಿಕೆಗಳಲ್ಲಿ ಒಂದು ಅಭಿಪ್ರಾಯಕ್ಕೇ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ."

" ನಿಜ. "

" ಈಗ ನೋಡಿ, ಪರಿಷತ್ಪತ್ರಿಕೆಯಲ್ಲಿ.... " ಸ್ವಾಮಿಯವರು ಮತದ ವಿಚಾರದಲ್ಲಿ ಲೇಖಕನೊಬ್ಬನು ತೋರಿಸಿದ ತಪ್ಪು ಅಭಿಪ್ರಾಯವನ್ನು ಸೂಚಿಸಿದರು. ಮತ್ತೆ "ಇಂತಹ ವಿಷಯಗಳಲ್ಲಿ ಪ್ರಕಟನೆಯಾಗಬೇಕಾದಾಗ ಪರಿಷತ್ತು ಆಯಾ ಮತದ ವಿದ್ವಾಂಸರ ಅಭಿಪ್ರಾಯವನ್ನೂ ತೆಗೆದುಕೊಂಡ ಪರೀಕ್ಷಿಸುವುದು ಹಿತಕರವಲ್ಲವೆ ? "

" ಹೌದು. ಈ ವಿಷಯವು ನನ್ನ ಗಮನಕ್ಕೇ ಬಂದಿರಲಿಲ್ಲ. ಮುಂದಾ ವರೂ ಈ ದೃಷ್ಟಿಗೆ ಗಮನ ಕೊಡಬೇಕು. "

" ಇನ್ನೊಂದು ಮಾತು. ಈಚೆಗೆ ಪರಿಷತ್ಪತ್ರಿಕೆಯ ಮಟ್ಟವು ಕೆಳಗಿಳಿದಿದೆ. ಇದರಲ್ಲಿ ವಿದ್ವತ್ತಿಗೆ ಸಹಜವಾಗಿ ಅವಕಾಶವಿರಬೇಕು. ಆಂಧ್ರ ಪರಿಷತ್ತಿನ ಪತ್ರಿಕೆಯು ಬಹಳ ಚೆನ್ನಾಗಿದೆ. "

ಮಾಸ್ತಿಯವರು ನಾಲಿಗೆಯನ್ನು ಕಚ್ಚಿಕೊಂಡವರಂತೆ ಒಂದು ಕ್ಷಣ ಸುಮ್ಮನಿದ್ದು " ನೋಡಿ, ಕೆಲಸಕ್ಕೆ ತಕ್ಕ ಪರಿಶ್ರಮವಿರುವವರನ್ನು ಕಾಡಿ ಬೇಡಿದರೂ ಅವರಿಗೆ ಪುರುಸೊತ್ತು ಇಲ್ಲ, ಉತ್ಸಾಹವೂ ಇಲ್ಲ. ಉತ್ಸಾಹವಿರುವ ಹುಡುಗರಿಗೂ ಅಷ್ಟಿಯಾಗಿ ನಾವೇನು ಮಾಡೋದು ? ಇದು ನಮ್ಮ ಸಂಕಟ. ಆದರೂ ತಾವು ಹೇಳಿದುದಕ್ಕೆ ಗಮನವನ್ನು ಕೊಡಲೇಬೇಕು. "

" ಇನ್ನೊಂದು ವಿಚಾರ. ಪರಿಷತ್ಪತ್ರಿಕೆಯಲ್ಲಿ ಇರುವ ಸ್ವಲ್ಪ ಪುಟ ಉದ್ದುದ್ದವಾದ ಹಳೆಯ 'ಚಾವುಂಡರಾಯ ಪುರಾಣ' 'ಮರುಳಸಿದ್ಧ ಕಾವ್ಯ' ಇವುಗಳಿಗೆ ಸ್ಥಳ ಕೊಡುವುದಕ್ಕಿಂತಲೂ ಅವನ್ನು ಬೇರೆಯಾಗಿ ಸಂಪಾದಿಸಬೇಕು. ಆಗ ಇತರ ವಿಷಯಕ್ಕೆ ಪತ್ರಿಕೆಯಲ್ಲಿ ಜಾಗ ಸಿಕ್ಕುತ್ತದೆ. "

" ತಮ್ಮದು ಒಳ್ಳೆಯ ಸಲಹೆ. ಪತ್ರಿಕೆಯ ಮಂಡಲಿಯ ಮುಂದೆ ಇಡುತ್ತೇನೆ. "

ಹೀಗೆ ಪರಿಷತ್ತಿನ ಬಗ್ಗೆ ಹೊರಬಿದ್ದ ಹಲವಾರು ಸಲಹೆ ಟೀಕೆಗಳನ್ನು ಮಾಸ್ತಿಯವರು—ಪರಿಷತ್ತಿನ ಉಪಾಧ್ಯಕ್ಷರು—ಉತ್ಸುಕತೆಯಿಂದ ಗ್ರಹಿಸಿದರು. ಉಚಿತವಾದ ರೀತಿಯಲ್ಲಿ ಸ್ವಾಮಿಗಳಿಗೆ ಸಮಾಧಾನ ಹೇಳಿ ತೃಪ್ತಿಪಡಿಸಿದರು. ಸಮ್ಮೇಳನದ ವಿಷಯವು ಬಂದಿತು. ಮಾಸ್ತಿಯವರು " ಈ ಬಾರಿ ಸಮ್ಮೇಳನ ಮದರಾಸಿನಲ್ಲಿ ನಡೆಯುತ್ತದೆ. ತಾವೂ ಅಲ್ಲಿಗೆ ದಯಮಾಡಿಸಿ ನಮ್ಮನ್ನು ಆಶೀರ್ವದಿಸಿ ಉತ್ತೇಜನ ಕೊಡಬೇಕು " ಎಂದು ಮದುವೆಯ ಆಹ್ವಾನದ ಒಕ್ಕಣೆ ವಿಶ್ವಾಸಗಳಿಂದ ಕೇಳಿಕೊಂಡರು. ಸ್ವಾಮಿಗಳು ಅನಿವಾರ್ಯವನ್ನು ಸೂಚಿಸಿದಾಗ " ತಾವು ಒಂದು ಸಂದೇಶವನ್ನಾದರೂ ಕಳುಹಿಸಿಕೊಡಿ. ಕಾಶಿಯ ಮಠದಿಂದ ಬಂದ ಆಶೀರ್ವಾದವೆಂದು ನಾವು ಹೆಮ್ಮೆಪಟ್ಟು ಸಂತೋಷಿಸುತ್ತೇವೆ " ಅಂದು " ಒಂದು ಬಾರಿ ಸಮ್ಮೇಳನವೇ

ತಮ್ಮ ಆಶ್ರಯದಲ್ಲಿ ಜರಗುವಂತೆ ಕೃಪೆ ಮಾಡಿಬಿಡಿ. ಕನ್ನಡದ ಬಾವುಟವು ಕಾಶಿಯಲ್ಲಿ ಹಾರಾಡಲಿ" ಎಂದು ಸೂಚನೆ ಕೊಟ್ಟರು. ಸ್ವಾಮಿಗಳು "ಅದೇನೋ ವಿಚಾರ ಮಾಡಬಹುದು. ಆದರೆ ಕನ್ನಡಿಗರಿಗೆ ಇದು ಬಲು ದೂರ. ನಮ್ಮ ಕಡೆಯಿಂದ ನಾವು ಯಾವುದೊಂದರಲ್ಲೇ ಅಭಿಮಾನಪಡುವವ ರಲ್ಲದಿದ್ದರೂ ಇಲ್ಲಿಯ ವರಮಾನ ದೃಷ್ಟಿಯಿಂದ ನೋಡಿದರೆ ಭಕ್ತರಲ್ಲಿ ಹೆಚ್ಚಾದ ಕನ್ನಡಿಗರಿಗೆ ಉತ್ತೇಜನ ಕೊಡುವದು ದೋಷವೆನಿಸಲಾರದು" ಎಂದರು. ಈ ಸಮಯದಲ್ಲಿ ಮಾಸ್ತಿಯವರು "ಈ ಸಂಸ್ಥೆಯು ಅಜೀವ ಸದಸ್ಯತನದಿಂದ ಪರಿಷತ್ತಿಗೆ ಸಹಾಯವಾಗುವಂತೆ ಕೃಪೆ ಮಾಡುವದಾದರೆ ತುಂಬ ಸಂತೋಷ" ಎಂದು ಬೇಡಿಕೊಂಡರು. ಸ್ವಾಮಿಗಳು ಒಪ್ಪಿದರು. ಸ್ವಾಮಿಗಳು" ಇನ್ನು ಎಷ್ಟು ದಿನ ಇಲ್ಲಿ ಇರುವುದಾಗುತ್ತದೆ?" ಎಂದು ಪ್ರಶ್ನಿಸಿದರು. ಮಾಸ್ತಿಯವರು ಆಗಿನ ನಿರ್ಧಾರದಂತೆ ಬಲಿಪಾಡ್ಯದ ಹಿಂದಿನ ದಿನ ಹೊರಡಬೇಕಾಗಿತ್ತು. ಆದರೆ ಸ್ವಾಮಿಗಳು "ಇದೇನು, ಒಳ್ಳೆ ಅಮಾವಾಸ್ಯೆಯ ದಿನವೇ ಹೊರಡಬೇಕೆಂದು ಮಾಡಿದ್ದೀರಿ? ಒಂದೆರಡು ದಿನ ತಡೆಯಲಾಗುವುದಿಲ್ಲವೆ? ದೀಪಾವಳಿಗಾಗಿ ಜನರು ಇಲ್ಲಿಗೆ ಹೊರಗಿನಿಂದ ಬರುತ್ತಾರೆ. ಹೀಗಿರುವಲ್ಲಿ ಬಂದಿರುವವರೂ ನೀವು ಮುಂದಾಗಿ ಹೊರಡುವುದು ಏಕೆ"? ಎಂದರು. ಮಾಸ್ತಿಯವರು "ತಾವು ಹಾಗೆ ಅಪ್ಪಣೆ ಕೊಡಿಸಿದ ಮೇಲೆ ಹೋಗುವುದು ಹೇಗೆ? ನಿಂತುಬಿಡುತ್ತೇನೆ" ಎಂದು ಪ್ರಯಾಣವನ್ನು ಆ ಕ್ಷಣವೇ ಮುಂದು ಹಾಕಿದರು. ಮತ್ತಷ್ಟು ಮಾತುಗಳಾಗಿ ನಾವು ಹೊರಬಿದ್ದಾಗ ದಾರಿಯಲ್ಲಿ ಮಾಸ್ತಿಯವರು "ನೋಡಿ, ಅವರು ಎಷ್ಟು ಒಳ್ಳೆಯ ಸೂಚನೆಗಳನ್ನಿತ್ತರು? ಹೀಗೆ ಸಾರ್ವಜನಿಕ ಹಿತಕ್ಕಾಗಿ, ಅಹಿತದ ಮಾತುಗಳನ್ನಾಡುವ ಧೈರ್ಯಮಾಡಿ ತಿದ್ದಲು ಯತ್ನಿಸುವವರು ಎಷ್ಟು ಕಡಿಮೆ? ಅವರ ಮಾತಿನಲ್ಲಿ ಒಂದಾದರೂ ಒಣ ಟೀಕೆ ಇರಲಿಲ್ಲ." ಎಂದು ಸಂತೋಷದಿಂದ ಕೃತಜ್ಞತೆಯನ್ನು ಸೂಚಿಸಿದರು.

ರಾತ್ರಿ ಊಟವಾದ ಮೇಲೆ ನಾನು "ವೀಳೆಯದೆಲೆ ತರಿಸಿದ್ದೀಯ ?" ಎಂದು ನಮ್ಮವಳನ್ನು ಕೇಳಿದೆ. ನಮಗೆ ಈ ಅಭ್ಯಾಸವಿಲ್ಲದೆ ಅವಳಿಗೆ ಇದು ಮನಸ್ಸಿಗೆ ಬಂದಿರಲಿಲ್ಲ. ಅವಳಿಂದ ಉತ್ತರವು ಬೇಗನೆ ಬಾರದಿದ್ದುದರಿಂದ ವಿಷಯವನ್ನು ಊಹಿಸಿ ಮಾಸ್ತಿಯವರು "ಓ, ಈ ದಿನ ಶನಿವಾರ, ನಾನು ಎಲೆಯನ್ನು ಹಾಕುವದಿಲ್ಲ." ಎಂದರು.

ಮೂರನೆಯ ದಿನ ಬೆಳಿಗ್ಗೆ ನಾವು ಮಹಾತ್ಮ ಬುದ್ಧನು ಉಪದೇಶ ಮಾಡುತ್ತಿದ್ದ ಸ್ಥಳವಾದ ಸಾರನಾಥಕ್ಕೆ ಹೊರಟೆವು. ಕಾಶಿಯ ಮೇರೆಗೆ ಬಂದಾಗ ಗಾಡಿಯ ಕುದುರೆಯು ನಿಂತು ಅನುಮಾನಿಸಿತು. ಗಾಡಿಯವನು ಏನೋ ಎರಡು ಮಾತನ್ನು ಹೇಳಲು ಮತ್ತೆ ತನ್ನ ಓಟಕ್ಕೆ ಮೊದಲು ಮಾಡಿತು. ಮಾಸ್ತಿಯವರು "ಅವನು ಹೇಳಿದುದೇನು?" ಎಂದು ಕೇಳಿದರು. ನಾನು ಭಾಷಾಂತರ ಮಾಡಿ "ಮಗು, ಇದೇ ಕಡೆಯಲ್ಲ ಈಗ. ಇನ್ನೂ ಬಲು ದೂರವಿದೆ. ಮುಂದೆ ನಡೆಯಪ್ಪ. ಎಂದ" ಎಂದೆನು. ಆಗ ಮಾಸ್ತಿಯವರು "ಆಹಾ! ಇವರ ಬಾಂಧವ್ಯ ಎಷ್ಟು ಮಧುರ!" ಅಂದರು.

ದಾರಿಯಲ್ಲಿ ಆ ಪುಸ್ತಕ ಈ ಪುಸ್ತಕದ ಮಾತು ಬಂದಿತು. ಮಾಸ್ತಿಯವರು 'ಕೆಲವು ಸಣ್ಣ ಕತೆಗಳ' ಬಗ್ಗೆ ಮಾತನಾಡುತ್ತ "ನಾನು ಶ್ರೀನಿವಾಸನೆಂದೇ ಮರೆಸಿಕೊಂಡಿದ್ದುದು ಓದುಗರು ಅದು ಅಧಿಕಾರಿಯೊಬ್ಬನು ಬರೆದುದೆಂದು ಮೆಚ್ಚಿಕೊಳ್ಳದಿರಲಿ ಅಂತ" ಎಂದರು. ಅವರ ಇತ್ತೀಚಿನ ಕಥನ ಕವನಗಳ ಮೇಲೆ ಮಾತು ತಿರುಗಿ ನಾನು "'ಅಗಡಿಯ ಸಾಧುಗಳು' ಬಹಳ ಹೃಗ್ಯವಾಗಿದೆ" ಎಂದೆ. ಅವರು "ಅದು ನಿನಗೆ ರುಚಿಸುತ್ತದೆಯೆ? ನನ್ನ ಗೆಳೆಯರಲ್ಲಿ ಕೆಲವರಿಗೆ ಅದರಲ್ಲಿ ಏನೂ ಕಾಣುವುದಿಲ್ಲ. ಒಬ್ಬರಂತೂ ಆ ಕವನಗಳ ಬಗ್ಗೆ ತೀರ ಕಟುವಾಗಿಯೇ ಬರೆದಿದ್ದಾರೆ. ಅವರಿಗೆ ಅಲ್ಲಲ್ಲಿ ಒಂದೆರಡು ಸಾಲು 'ಕವನ' ಮಾತ್ರ ಸಿಕ್ಕುತ್ತವಂತೆ. ಆ ಸಾಲುಗಳಲ್ಲಿರುವುದೂ, ಇನ್ನಿತರ ಸಾಲುಗಳಲ್ಲಿ ಇಲ್ಲದಿರುವುದೂ ಏನೋ ನನಗಂತೂ ತಿಳಿಯದು. ನೋಡಿ, ಮುಖ್ಯವಾಗಿ ನಾನು ಕಾರಣಾಂತರದಿಂದ ಕೆಲವರಿಗೆ ಅಹಿತವಾಗುವ ಗತಿ ಬಂದಿದೆ. ಅವರು ತಮ್ಮ ಅಸಮಾಧಾನವನ್ನು ಮತ್ತೆ ಹೇಗೆ ಸೂಚಿಸಬೇಕು? ಒಳಗಿನದನ್ನೆಲ್ಲ ಬಿಚ್ಚಿ ಹೇಳುವುದು ನನಗೆ ಹಿತವಿಲ್ಲದ ಕೆಲಸ. ಅವರಿವರ ಗುಳ್ಳೆಯನ್ನು ಚುಚ್ಚುವುದು ನನ್ನಿಂದ ಆಗದು. ಅವರೇ ನಿದಾನವಾಗಿ ಬುದ್ಧಿ ತಿಳಿದುಕೊಳ್ಳಲಿ" ಎಂದು ವ್ಯಸನವನ್ನು ಸೂಚಿಸಿದರು.

ಸಾರನಾಥವನ್ನು ಸೇರಿ ನಾವು ವಿಹಾರದ ಪಾಳುಗಳನ್ನು ನೋಡಲು ಹೊರಟೆವು. ಮಾಸ್ತಿಯವರೇ ನಮಗೆ ಮುಂದಾಗಿ ನಡೆಯುತ್ತ ಅವನ್ನೆಲ್ಲ ಆಗಲೇ ನೋಡಿದ್ದವರೊ ಎನ್ನುವಂತೆ "ಇದು ಹೆಣ್ಣು ಭಿಕ್ಷುವಿನ ಸಮಾಧಿ, ಇದು ಗಂಡಿನದು" ಎನ್ನುತ್ತ ಅವುಗಳ ವ್ಯತ್ಯಾಸ, ಇತರ ಭಾಗಗಳ ವೈಶಿಷ್ಟ್ಯ,

ವನ್ನು ಸುಲಭವಾಗಿ ಊಹಿಸಿ ಹೇಳುತ್ತ ಹೋದರು. ಭಗವಾನ್ ಬುದ್ಧನು ಕುಳಿತು ಉಪದೇಶಿಸುತ್ತಿದ್ದ ಸ್ಥಳವನ್ನು ಸೇರಿ, ಮುರಿದ ಕಲ್ಲು-ಛತ್ರಿಯ ನೋಟನ್ನುಕಂಡು ಮರುಗಿದ್ದಾಯಿತು. ಮಾಸ್ತಿಯವರು 'ಆಹಾ ಈ ಸ್ಥಳದಲ್ಲಿ ಭಗವಾನನು ಬೋಧಿಸುತ್ತಿರುವಾಗ ಇಗೊ, ಇದೇ ದಾರಿಯಿಂದ ಕಾಶಿಯ ಪಂಡಿತರು ಬಂದು ಶಾಸ್ತ್ರಗಳನ್ನು ಉದ್ಧರಿಸುತ್ತ ಸಮಾಧಾನ ಕೇಳಿ ಅವನೊಡನೆ ವಾಗ್ವಾದ ಮಾಡಿ ಅವನನ್ನು ಮೆಚ್ಚಿಕೊಂಡು ಹೋಗುತ್ತಿದ್ದ ದೃಶ್ಯವು ಹೇಗಿರಬೇಕು?" ಎಂದು ಭಾವನಾವಶರಾದರು. ಆ ಪಾಳುಗಳಲ್ಲಿ ಕೆಲವು ಬಿಸಿಲು ಮಳೆಗಾಳಿಗಳಿಂದ ರಕ್ಷಣೆಯಿಲ್ಲದೆ ಇರುವುದನ್ನು ಕಂಡು "ಎಲಾ, ಇವೆಲ್ಲವನ್ನೂ ಹೆಮ್ಮೆಯಿಂದ ರಕ್ಷಿಸಿಕೊಳ್ಳುವ ಸರಕಾರವು ಎಂದಿಗೆ ಬಂದೀತೋ ಏನೋ!" ಎಂದು ತವಕಿಸಿದರು. ನಾವು ಪಾಳುಗಳನ್ನು ದಾಟಿ ಹೊಸದಾಗಿ ಕಟ್ಟಲ್ಪಟ್ಟ ಗುಡಿಯ ಕಡೆಗೆ ಹೋದೆವು. ಅಲ್ಲಿ ಸಿಲೋನಿನಲ್ಲಿರುವ ಬೋಧಿವೃಕ್ಷದ ಅಂಟಿನಿಂದ ಇಲ್ಲಿ ವೃಕ್ಷವಾಗಿ ಬೆಳೆದಿದ್ದ ಬುದ್ಧಗಯದ ಬೋಧಿಯ ಮೊಮ್ಮಗುವನ್ನು ನೋಡಿ ಮಾಸ್ತಿಯವರು ಭಕ್ತಿಯಿಂದ ಪ್ರದಕ್ಷಣೆ ಮಾಡಿ ನಮಸ್ಕರಿಸಿ "ನಾರಾಯಣಸಾಮಿ, ಇದರ ಮೂರೇ ಮೂರು ಎಲೆಗಳನ್ನು ಕಿತ್ತುಕೊಳ್ಳಿ. ನನ್ನ ಬಳಿ ಇರಲಿ" ಎಂದು ಕಿತ್ತ ಎಲೆಗಳನ್ನು ಜೇಬಿನಲ್ಲಿ ಇಟ್ಟುಕೊಂಡರು. ಅನಂತರ ಗುಡಿಯೊಳಗೆ ಪ್ರವೇಶಿಸಿದೆವು. ಅಲ್ಲಿಯ ಆವರಣವು ಅವರಿಗೆ ಸಂತೋಷವನ್ನುಂಟುಮಾಡಿತು. ಅಲ್ಲಿಯ ಗೋಡೆಗಳ ಮೇಲೆ ಜಪಾನಿ ಕಲಾವಿದನೊಬ್ಬನು ಅನೇಕ ಚಿತ್ರಗಳನ್ನು ರಚಿಸಿದ್ದನು. ಆದರೆ ಈಗ ಕೊಂಚ ಸುಣ್ಣದ ಕೆಲಸ ನಡೆಯುತ್ತಿದ್ದು ಅವುಗಳಿಗೆ ಪರದೆ ಹಾಕಿದ್ದರು. ಅಲ್ಲಿಯವರ ಅಪ್ಪಣೆ ಪಡೆದು ಪರದೆಯನ್ನು ವಾರೆಯಾಗಿಸಿ ಸಾಧ್ಯವಾದಷ್ಟನ್ನು ನೋಡಿದ್ದಾಯಿತು. ಇಲ್ಲೂ ಮಾಸ್ತಿಯವರು ತಮ್ಮ ತಿಳುವಳಿಕೆಯಿಂದ ಆ ಚಿತ್ರಗಳ ವಿಷಯವನ್ನುಹೇಳಿದರು. ಮೂರ್ತಿಯ ಮುಂದೆ ನಾವು ನಿಂತಿರುವಾಗ ಒಂದು ಬಂಗಾಳಿಯ ಸಂಸಾರವೂ ದರ್ಶನಕ್ಕಾಗಿ ಬಂದಿತು. ದೊಡ್ಡವರು ನಮಸ್ಕರಿಸುವುದಕ್ಕೆ ಮುಂಚೆಯೇ ಅವರ ಸಣ್ಣ ಮಕ್ಕಳೆರಡೂ ನಮಸ್ಕರಿಸಿದುವು. ಮಾಸ್ತಿಯವರು "ನೋಡಿದಿರಾ, ಮಕ್ಕಳನ್ನು ಹೇಗೆ ಬೆಳೆಸಿದ್ದಾರೆ?" ಅಂದರು. ಗುಡಿಯಿಂದ ಹೊರಗೆ ಬಂದಾಗ "ಬುದ್ಧನ ಈ ಪ್ರತಿಮೆಗೆ ಅವನ ಸಹಜವಾದ ಮುಖಮುದ್ರೆಯಿಲ್ಲ; ವಿಷಾದಕರ" ಅಂದುಕೊಂಡರು.

ಎದುರಿಗೆ ಬಿರ್ಲಾ ವಿದ್ಯಾಸಂಸ್ಥೆ. ಅದರ ಆವರಣದಲ್ಲಿ ಎರಡು ಕಲ್ಲು ಕಂಬಗಳು ಇದ್ದುವು. ಅವುಗಳ ಮೇಲೆ ಬುದ್ಧನ ಉಪದೇಶದ ಸಾರಾಂಶವು ಹಿಂದಿ ಮತ್ತು ಇಂಗ್ಲೀಷುಗಳಲ್ಲಿ ಬರೆಯಲ್ಪಟ್ಟಿದ್ದಿತು. ಮಾಸ್ತಿಯವರು ಅದನ್ನು ಓದಿ "ಇದು ಚೆನ್ನಾಗಿದೆ. ಕೊಂಚ ಬರೆದುಕೊಂಡುಬಿಡಿ" ಎಂದು ನಾರಾಯಣಸ್ವಾಮಿಗೂ, ನನಗೂ ಹೇಳಿದರು. ನಕಲನ್ನು ಮಾಡಿಕೊಳ್ಳುವಾಗ ಅವರಲ್ಲಿಗೂ ನನ್ನಲ್ಲಿಗೂ ನಡೆದಾಡುತ್ತ ಸರಿಯಾಗಿ ಬರೆದುಕೊಳ್ಳುವುದನ್ನು ಪರೀಕ್ಷಿಸುತ್ತಿದ್ದರು. ಇನ್ನು 'ಮ್ಯೂಸಿಯಮ್ಮ್'ನ ಕಡೆಗೆ ಬರುವಾಗ ಇದ್ದ ಕಿತ್ತಲೆಯ ಹಣ್ಣು ಒಂದನ್ನು ಸುಲಿದು ನಾರಾಯಣಸ್ವಾಮಿಯು ಹಂಚಿದರು. ಮಾಸ್ತಿಯವರು ಎರಡು ತೊಳೆಗಳನ್ನು ತಿಂದು ಉಳಿದ ಎರಡನ್ನು ಮೋಟಾರಿನ ಬಳಿ ಆಡುತ್ತಿದ್ದ ಆ ಬಂಗಾಳಿ ಮಕ್ಕಳಿಗೆ ಕೊಟ್ಟರು. ಮಾಸ್ತಿಯವರೂ ನಾನೂ ಮುಂದಾಗಿ 'ಮ್ಯೂಸಿಯಂ' ಹೊಕ್ಕೆವು. ಅಲ್ಲಿ ಕಲ್ಲು-ಛತ್ರಿ ಮತ್ತು ಇತರ ಶಿಲ್ಪಗಳ ದರ್ಶನವಾಯಿತು. ಅಯ್ಯರು ಹೊತ್ತಾಗಿ ಬಂದುದನ್ನು ಕಂಡು ಮಾಸ್ತಿಯವರು "ಎಲ್ಲಿ ಹಿಂದುಳಿದು ಏನು ಮಾಡುತ್ತಿದ್ದಿರಿ?" ಎಂದರು ಸಂಶಯದಿಂದ. ಅಯ್ಯರು "ಹಾಗೆ ಒಂದು ಬಟ್ಟಲು ಚಹ ತಗೊಂಡೆ" ಅಂದರು. ಅದಕ್ಕೆ ಮಾಸ್ತಿಯವರು "ಹುಂ, ನನಗೂ ಹೇಳಿದ್ದರೆ? ನನ್ನ ಬಾಯಿಯು ಒಣಗಿದೆ" ಅಂದು ನಸುನಕ್ಕರು. ಅಯ್ಯರು "ನೀವು ರಸ್ತೆಯ ಪಕ್ಕದ ಚಹವನ್ನು ಒಪ್ಪುತ್ತೀರ? ಅದು ಹಾಗಿದೆ, ಹೀಗಿದೆ ಅಂದು ನನಗೂ ಇಲ್ಲದಂತೆ ಮಾಡುತ್ತಿದ್ದಿರಿ." ಅಂದರು. ಎಲ್ಲರೂ ನಕ್ಕೆವು. ಸಾರನಾಥದಿಂದ ಹೊರಡುವಾಗ ಮಾಸ್ತಿಯವರು 'ಇಲ್ಲಿ ಭಗವಾನ್ ಬುದ್ಧನು ನಿರ್ವಾಣವಾಗಿಲ್ಲ, ಜೀವಂತನಾಗಿದ್ದಾನೆ, ಇನ್ನೂ ಉಪದೇಶಿಸುತ್ತಲೇ ಇದ್ದಾನೆ" ಎಂದು ಹೇಳಿದರು.

ಮನೆಗೆ ಬಂದೊಡನೆ ಅವರು ನಮ್ಮವಳನ್ನು ಸಂಬೋಧಿಸಿ "ತಾಯಿ ಏನು, ಅಡಿಗೆ ನಮಗೆ ಸಿದ್ಧವಾಗಿದೆಯೆ? ನಾವೂ ಅದಕ್ಕೆ ಸಿದ್ಧವಾಗಿದ್ದೇವೆ." ಅಂದರು.

ಅದೇ ಸಂಜೆ ವಿಶ್ವವಿದ್ಯಾಲಯದಲ್ಲಿ ಕನ್ನಡಿಗರ ಕೂಟ. ಮಾಸ್ತಿಯವರ ಭಾಷಣವಾಗಬೇಕಾಗಿತ್ತು. ನಾವು ಗಾಡಿ ಮಾಡಿಕೊಂಡು ಪ್ರೊ. ಅಸುಂಡಿ

ಯವರ ಮನೆಗೆ ಹೋದೆವು. ಅಸುಂಡಿಯವರು ಊರಿನಲ್ಲಿರಲಿಲ್ಲ. ಅಲ್ಲಿ ಕನ್ನಡ ಸಂಘದ ಉಪಾಧ್ಯಕ್ಷರು ಭೇಟಿಯಾದರು. ಉಪಹಾರವಾಯಿತು. ಮಾಸ್ತಿಯವರು ತಿಂಡಿಯನ್ನು ಮುಟ್ಟಲಿಲ್ಲ, ಆದರೆ ಕಾಫಿಯನ್ನು ಬಿಡಲಿಲ್ಲ. ಅಸುಂಡಿಯವರ ಮನೆಯಿಂದ ವಿಜ್ಞಾನದ ಕಾಲೇಜಿಗೆ ಹೋಗುವಾಗ ಇದಿರಿಗಿಲ್ಲದ ಅಸುಂಡಿಯವರ ವಿಷಯವಾಗಿ "ನೋಡಿ, ಇವರು ಎಷ್ಟು ಚಿಕ್ಕವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡೂ ಮತ್ತೆ ಮದುವೆ ಮಾಡಿಕೊಳ್ಳದೆ ಒಂಟಿಯಾಗಿಯೇ ಇದ್ದುಬಿಟ್ಟಿದ್ದಾರೆ.! ಇಂತಹವರಲ್ಲಿ ನನಗೆ ವಿಶೇಷ ಮೆಚ್ಚಿಕೆ" ಅಂದರು.

ಉಪನ್ಯಾಸಕ್ಕೆ ಮುಂಚೆ ನೆರೆದಿದ್ದ ಕನ್ನಡಿಗರೆಲ್ಲರ ಪರಿಚಯವನ್ನು ವ್ಯಕ್ತಿಶಃ ಮಾಡಿಕೊಂಡರು. ಒಬ್ಬೊಬ್ಬರೊಂದಿಗೆ ಮಾತನಾಡುವಾಗಲೂ ಅವರ ಸ್ಥಳ, ತಂದೆ, ಬಂಧುಗಳನ್ನು ವಿಚಾರಿಸಿದರು. ಆಗ ಅವರಿಗೆ ಸ್ಥಳ, ಇಲ್ಲವೆ ತಂದೆ, ಇಲ್ಲವೆ ಬಂಧುಗಳು ಹೇಗಾದರೂ ಗೊತ್ತೇ ಇರುತ್ತಿದ್ದಿತು. ಇದರಿಂದ ಅವರು ಎಷ್ಟು ಆಸಕ್ತಿಯಿಂದ ಕನ್ನಡಿಗರ ಪರಿಚಯ ಮಾಡಿಕೊಂಡಿದ್ದರೆಂಬುದು ಗೊತ್ತಾಗುತ್ತಿದ್ದಿತು.

ಉಪಾಧ್ಯಕ್ಷರು ಮಾತನಾಡುತ್ತ "ಕನ್ನಡಿಗರಿಗೆ ಮಾಸ್ತಿಯವರ ಪರಿಚಯವನ್ನು ಮಾಡಿಕೊಡುವುದು ಅನವಶ್ಯಕ. ಆದುದರಿಂದ ಅವರಿಗೆ ನಮ್ಮ ಸಂಘದ ಪರಿಚಯ ಮಾಡಿಕೊಡುತ್ತೇನೆ" ಎಂದರು. ನಾರಾಯಣಸಾಮಿಯವರ ನಾಲ್ಕು ಮಾತಾದ ಮೇಲೆ ಮಾಸ್ತಿಯವರ ಸ್ವಾರಸ್ಯವಾದ ಭಾಷಣ. ಔತಣದ ಊಟದಲ್ಲಿ ಚಟ್ನಿ, ಉಪ್ಪಿನಕಾಯಿಯಂತೆ ಸಣ್ಣ ಕತೆಗಳು. ಒಂದು ಒಂದೂವರೆ ಗಂಟೆ ಕೇವಲ ನಿಮಿಷಗಳಂತೆ ಕಳೆದುವು. ಕೇಳಿದವರ ಪೈಕಿ ಒಬ್ಬರು "ಇಂತಹ ಕನ್ನಡದ ಮಾತನ್ನು ಕೇಳಿ ಎಷ್ಟು ಕಾಲವಾಗಿದ್ದಿತೋ ಏನೋ!" ಅಂದರು. ಅವರಲ್ಲಿ ಒಬ್ಬಾತ ಮಾತ್ರ ತನ್ನ ಹಿರಿಮೆಯನ್ನು ಮೆರೆಯಿಸಲು ಸಲ್ಲದ ಟೀಕೆಯೊಂದನ್ನು ನುಡಿದು ತನ್ನ ಅಜಾಗರೂಕತೆಯನ್ನು ವ್ಯಕ್ತಪಡಿಸಿದ. ಆದರೆ ಅವನು ಆಡಿದ ಕಟುನುಡಿಯು ಅಲ್ಲಿದ್ದ ಕನ್ನಡಿಗರೆಲ್ಲರನ್ನೂ ಬೇಸರಪಡಿಸಿತು, ರೇಗಿಸಿತು. ಮಾಸ್ತಿಯವರು ತಣ್ಣಗಿದ್ದು ಅವನಿಗೆ ಸಮಾಧಾನ ಹೇಳಲು ಯತ್ನಿಸಿದರು. ನಿಷ್ಪ್ರಯೋಜನವಾಗಿ ಆತನ ಈ

ಒರಟುತನವು ಮಾಸ್ತಿಯವರನ್ನು ಮುಂದೆರಡು ದಿನಗಳೆಲ್ಲೂ ಕಾಡುತ್ತಿತ್ತು. ಅವರು ಪದೇ ಪದೇ ಆ ವಿಷಯಕ್ಕೆ ತಿರುಗುತ್ತಿದ್ದರು. ನಾನು ಈ ಪ್ರತಿ ಸಂದರ್ಭದಲ್ಲೂ 'ಆತನ ನಿಷ್ಕಾರಣ ಟೀಕೆಗೆ ಉದಾಸೀನವೇ ಸರಿಯಾದ ಉತ್ತರ' ಎಂದರೂ ಅವರಿಗೆ ಸಮಾಧಾನವಾಗಲೇ ಇಲ್ಲ.

ಮಾರನೆಯ ದಿನ ಅಮಾವಾಸ್ಯೆ. ಮಾಸ್ತಿಯವರೂ ಅಯ್ಯರೂ ತರ್ಪಣ ಕಾರ್ಯಕ್ರಮಕ್ಕೆ ಶಾಸ್ತ್ರಿಗಳೊಡನೆ ಏರ್ಪಾಡು ಮಾಡಿದ್ದರು. ಆ ದಿನ ಬೆಳಿಗ್ಗೆ ಎಂಟು ಗಂಟೆಗೆ ಮುಗಿಸಿಕೊಂಡು ಕಾಫಿಗೆ ಬರುವರೆಂದು ನನಗೆ ಹೇಳಿದ್ದರು. ನಾನು ಎಂಟೂವರೆಯ ವರೆಗೆ ಕಾಯ್ದು ಇವರ ಸುಳಿವನ್ನು ಕಾಣದೆ ನೋಡಿ ಬರಲು ಮೈಸೂರ ಘಾಟಿನ ಗಂಗಾತೀರಕ್ಕೇ ಹೋದೆ. ಅಲ್ಲಿ ಆ ದಿನ ವಿಶೇಷ ಗಲಾಟೆ. ಇವರನ್ನು ಪತ್ತೆ ಹಚ್ಚಿದಾಗ ಅಯ್ಯರು ಆಗಲೇ ಕೆಲಸ ಮುಗಿಸಿ ಮೇಲೆ ಬಂದು ಬಹಳ ಹೊತ್ತಿನಿಂದ ಕುಳಿತವರಂತೆ ಕಂಡರು. ಆದರೆ ಮಾಸ್ತಿಯವರು ಮುಗುಟವನ್ನುಟ್ಟು, ನಾಮವನ್ನು ಹಾಕಿಕೊಂಡು, ಕೈ ಮುಗಿದುಕೊಂಡು ಕೆಳಮೆಟ್ಟಿನ ಮೇಲೆ ಪ್ರದಕ್ಷಿಣೆ ಸುತ್ತುತ್ತಲೇ ಇದ್ದರು. ಶಾಸ್ತ್ರಿಗಳು ನಾನು ಬಂದ ಅರೆನಿಮಿಷದಲ್ಲಿ ಹೊರಟುಹೋದರು. ಮಾಸ್ತಿಯವರು ಮಾತ್ರ ಇನ್ನೂ ಅರ್ಧಗಂಟೆ ಕರ್ಮವನ್ನು ನಡೆಸುತ್ತಲೇ ಇದ್ದರು. ಅವರಿಗೆ ಶಾಸ್ತ್ರಿಗಳು ನಿಮಿತ್ತ ಮಾತ್ರ–ಅಷ್ಟೆ. ಎಲ್ಲವೂ ಮುಗಿದು ಬಟ್ಟೆ ಹಿಂಡಿಕೊಂಡು ಮೇಲೆ ಬಂದ ಮೇಲೆಯೇ ನಾನು ಅವರ ಕಣ್ಣಿಗೆ ಬಿದ್ದುದು. ಕಂಡವರೆ ಕ್ಷಮಾಸೂಚಕವಾಗಿ "ಏನು, ಬಹಳ ಹೊತ್ತಾಯಿತೊ? ನಡೆಯಿರಿ ಬೇಗ ಹೋಗಿಬಿಡೋಣ" ಎಂದು ಚುರುಕಾಗಿ ಹೊರಟರು.

ಆ ಸಂಜೆ ಜಂಗಮವಾಡಿಯ ವಿದ್ವತ್ಸಭೆಯ ವಾರ್ಷಿಕೋತ್ಸವ. ಮಾಸ್ತಿಯವರು ಕಾಶಿಯಲ್ಲಿ ಇರುವ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಲು ಏರ್ಪಾಡು 'ಹರಾತುರಿ' ಯಿಂದ ನಡೆದಿದ್ದಿತು. ಅವರೇ ಮುಖ್ಯ ಅತಿಥಿಗಳು. ಮತ್ತೊಂದು ಉಪಯುಕ್ತವಾದ ಚಿಕ್ಕ ಭಾಷಣ ಮಾಡಿದರು. ಮನೆಗೆ ಹೋಗುವಾಗ "ಆತ ಈ ದಿನ ಬರಲಿಲ್ಲವೆ?" ಎಂದು ಕೇಳಿದರು. ಮತ್ತೆ ಆ ದಿನದ ಟೀಕಿಸಿದವನ ಮೇಲೆ ಅವರ ಗಮನವು ಹೋಯಿತು.

ಮರುದಿನ ಬೆಳಿಗ್ಗೆಯ ಹೊತ್ತಿಗೆ ನಮ್ಮ ಮನೆಗೆ ಇನ್ನಷ್ಟು ಅತಿಥಿಗಳು

ಬಂದಿದ್ದರು. ಗಂಡ ಹೆಂಡತಿ, ಎರಡು ಮಕ್ಕಳು ಮತ್ತು ಅರವತ್ತು ವರ್ಷದ ತಾಯಿಯೊಬ್ಬರು. ಮಾಸ್ತಿಯವರು ಕಾಫಿಗೆ ಬಂದವರು ಅತಿಥಿಗಳೊಡನೆ ಅದರಲ್ಲಿಯೂ ಅರವತ್ತು ವರುಷದ ತಾಯಿಯೊಡನೆ-ಬಹಳ ಸಲಿಗೆಯಿಂದ ಸ್ವಾರಸ್ಯವಾಗಿ ವಿನೋದವಾಗಿ ಹರಟೆಹೊಡೆಯಲು ಮೊದಲುಮಾಡಿದರು. ಅಂದಿನ ಕಾರ್ಯಕ್ರಮದ ಹೊತ್ತನ್ನೂ, ಅಷ್ಟು ಕೆಲಸವನ್ನೂ ಮುಗಿಸಿಕೊಂಡು ಎರಡು ಗಂಟೆಯ ರೈಲಿಗೆ ಹೊರಡಬೇಕೆಂಬುದನ್ನೂ ಅವರು ಮರೆತಂತೆ ನನಗೆ ತೋರಿತು. ಒಂದೆರಡು ಬಾರಿ ನಾನು ತೋರಿಸಿದ ಗಡಿಯಾರವೂ ಅವರ ಗಮನಕ್ಕೆ ಬರಲೇ ಇಲ್ಲ. ಇಲ್ಲಿಯವರೆಗಾಗಲೇ ನಮ್ಮ ಅನುಭವಕ್ಕೆ ಬಂದಿದ್ದಂತೆ ಮಾಸ್ತಿಯವರು ಇವರನ್ನೂ ಬಲ್ಲರು. ಇನ್ನೂ ವಿಶೇಷವೆಂದರೆ ಇಬ್ಬರೂ ಕೃಷ್ಣರಾಜಪೇಟೆಯವರೆ. ಮಾತನಾಡುತ್ತ ನೆರೆಹೊರೆಯೆಂದೇ ಸಿದ್ಧಾಂತವಾಯಿತು. ಹಿಂದಿನ ದಿನಗಳನ್ನೆಲ್ಲ ಅಳೆದು ಸುರಿದರು. ಮಾತಿಗೆ ಮಾತು ಬಂದು ಇವರಿಬ್ಬರಿಗೂ ಪರಿಚಿತವಾದ ಮೂರನೆಯ ಸಂಸಾರ—ಒಬ್ಬ ವರದರಾಜಯ್ಯನವರದು- ಚರ್ಚೆಯಾಯಿತು. ಆಗ ಮಾಸ್ತಿಯವರು "ಅವರಿಗೆ ಮಂಗಳಾ ಅಂತ ಒಬ್ಬಳು ಮಗಳು ಇರುವಳಲ್ಲವೆ?" ಎಂದು ಕೇಳಿದರು. ತಾಯಿಯು "ಮಂಗಳಾ ಮೊನ್ನೆ ಹೋಗಿಬಿಟ್ಟಳು-ಹೆತ್ತು." ಎಂದರು. ಒಡನೆಯೇ ಮಾಸ್ತಿಯವರು ಚಕಿತರಾಗಿ "ಏನು, ಆ ಮಗು ಹೋಗಿಬಿಟ್ಟಳೆ? ಅಯ್ಯೋ!" ಅಂದರು. ಅನಂತರ ನಮ್ಮಗಳನ್ನು ಉದ್ದೇಶಿಸಿ "ನೋಡಿ, ಒಂದು ಸಲ ವರದರಾಜಯ್ಯನವರು ಈ ಮಗಳನ್ನು ಕರೆದು ಕೊಂಡು ನಮ್ಮ ಮನೆಗೆ ಬಂದರು, ಬೆಂಗಳೂರಿಗೆ. ಹುಡುಗಿಯು ಬೆಳೆ ದಿದ್ದಳು. ಮದುವೆಯಾಗಿರಲಿಲ್ಲ. ಅವರು ಬಂದಿದ್ದ ಉದ್ದಿಶ್ಯ, ಆಗ ತಾನೆ ಹೆಂಡತಿ ಸತ್ತು ಕೊಂಚ ಕಾಲವಾಗಿದ್ದ ಲಕ್ಷ್ಮೀನಾರಣಪ್ಪನಿಗೆ ನನ್ನಿಂದ ಒಂದು ಮಾತನ್ನು ಹೇಳಿಸಿ ಆ ಹುಡುಗಿಯನ್ನು ಅವನಿಗೆ ಕೊಡಿಸಬೇಕು ಅಂತ. ಮಾತುಕತೆಯಾಯಿತು. ನಾನು ಅವನಿಗೆ ಹೇಳಲು ಒಪ್ಪಿಕೊಂಡೆ. ತಂದೆಯೂ ಮಗಳೂ ಹೊರಹೊರಟರು. ಆಗ ಮಗಳು ತಂದೆಗೆ ಏನೋ ಪಿಸುಮಾತನ್ನು ಹೇಳಿದಳು. ತಂದೆ ಮೆಲು ನುಡಿಯಲ್ಲಿ 'ಸಾಕು ಸುಮ್ಮನಿರು' ಅಂದಂತೆ ನನಗೆ ಕೇಳಿಸಿತು. ನನಗೆ ಹುಡುಗಿಯು ಎರಡನೆಯ ವರಕ್ಕೆ ಏನಾದರೂ ಒಪ್ಪುವದಿಲ್ಲವೋ ಏನೋ. ನಾನು ಏನು ಮಾಡುತ್ತಿದ್ದೇನೆ ಅನ್ನಿ ಸಿತು. ನಾನು ವರದರಾಜಯ್ಯನವರನ್ನು 'ಅದು ಏನು?' ಎಂದು ಕೇಳಿದೆ.

ಅವರು ಹೇಳಲು ಅನುಮಾನಿಸಿದರು. 'ಏನೂ ಇಲ್ಲ.' ಅಂದರು. ಹುಡುಗಿಯನ್ನು ಸಂಬೋಧಿಸಿ 'ಏನಮ್ಮ ಅದು ?' ಎಂದು ಕೇಳಿದೆ. ಅವಳು ನಾಚಿಕೊಂಡು ಕತ್ತೆತ್ತಿ ನಮ್ಮ ಸಂಪಿಗೆಯ ಮರದ ಕಡೆಗೆ ನೋಡಿ 'ಒಂದು ಸಂಪಿಗೆಯ ಹೂ ಕೇಳಿದೆ' ಎಂದಳು. ಆ ಹೆಣ್ಣುಮಗಳಿಗೆ ಹೂವೆಂದರೆ ಎಷ್ಟು ಆಸೆ ನೋಡಿ. ನಾನು 'ಅಷ್ಟೇನೆ ? ಇದಕ್ಕೇಕೆ ಸಂಕೋಚ ?' ಎಂದು ನಾಲ್ಕು ಹೂವನ್ನು ನಾನೇ ಕುಯ್ದು ಕೊಟ್ಟೆ. ಆ ಮಂಗಳೆಯು ಹೋಗಿಬಿಟ್ಟಳೆ ? ಅವಳ ಎದೆಯಲ್ಲಿ ಇನ್ನೆಷ್ಟು ಆಸೆಗಳು ತುಂಬಿದ್ದುವೋ ಏನೋ ಪಾಪ ! ಹೋಗಿಬಿಟ್ಟಳಲ್ಲ !" ಎಂದು ಒಂದೇ ಸಮನೆ ಮರುಗಿದರು. ಅನಂತರ ಇನ್ನಷ್ಟು ಮಾತುಕತೆಗಳಾದುವು. ಈ ಕನ್ನಡಿಗರಿಂದ ಪರಿಷತ್ತಿಗೆ ಸದಸ್ಯತ್ವದ ಕಾಣಿಕೆಯೂ ವಸೂಲಾಯಿತು. ನಾವು ವಿಶ್ವವಿದ್ಯಾಲಯಕ್ಕೆ ಮಾಳವೀಜಿಯವರನ್ನು ನೋಡಲು ಹೊರಟೆವು. ದಾರಿಯಲ್ಲಿ ಮಾಸ್ತಿಯವರು ಮತ್ತೆ ನೆನೆಸಿಕೊಂಡು "ಮಂಗಳಾ ಹೋಗಿಬಿಟ್ಟಳಂತಲ್ಲ ! ಅವಳು ಹೂ ಕೇಳಿದುದು ಈ ದಿನ ಅಸ್ವಪ್ನವ ಹಾಗಿದೆ. ಈಗ ಮರವೋ ಹೂ ಜಗಿದು ನಿಂತಿದೆ. ಆದರೆ ಮುಡಿಯಲು ಅವಳೇ ಇಲ್ಲ. ಛೇ !" ಎಂದು ಇನ್ನೂ ವ್ಯಸನಪಟ್ಟರು.

ಮಾಳವೀಯರ ವಿಷಯವಾಗಿ ಮಾತನಾಡುತ್ತ ಮಾಸ್ತಿಯವರು "ಈತ ಈಗಿನ ಕಾಲದ ಮಹರ್ಷಿಗಳಲ್ಲಿ ಒಬ್ಬ" ಎಂದರು. ನಮ್ಮ ಪೈಕಿ ಒಬ್ಬರು "ನೋಡಲು ಹೋದವರನ್ನೆಲ್ಲ ಮಾಳವೀಯವರು 'ವಿಶ್ವವಿದ್ಯಾಲಯವನ್ನು ನೋಡಿದಿರಾ ? ಅದಕ್ಕೆ ನೀವು ಏನನ್ನು ಕೊಡುತ್ತೀರಿ?' ಎಂದು ಕೇಳುತ್ತಾರೆ" ಎಂದರು. ಮಾಸ್ತಿಯವರು "ನಾನೇ ಭಿಕ್ಷುಕ. ಇಲ್ಲಿಗೆ ಬಂದಿರುವುದೂ ಭಿಕ್ಷಾಟನೆಗೇ ಎನ್ನುತ್ತೇನೆ" ಅಂದರು. ಮಾಳವೀಯವರ ಕೋಣೆಯೊಳಗೆ ಹೋದಾಗ ಆ ವೃದ್ಧರು ಚೈತನ್ಯ ಸಾಲದೆ ಮಲಗಿಯೇ ಇದ್ದರು. ಮೈತುಂಬ ಹೊದಿಕೆ. ಮುಖ ಮಾತ್ರ ಕಾಣುತ್ತಿದ್ದಿತು. ನಾನು ಪರಿಚಯದ ಎರಡು ಮಾತನ್ನು ಹೇಳಿದೆ. ಮಾಳವೀಯರು ಮಾಸ್ತಿಯವರನ್ನು ನೋಡಿ "ನೀವು ಬಂದುದು ಬಹಳ ಸಂತೋಷ" ಎಂದರು. ಮಾಸ್ತಿಯವರು "ತಮ್ಮನ್ನು ಕಂಡು ಆಶೀರ್ವಾದ ಪಡೆಯಲು ಬಂದೆ" ಎಂದರು. ಮಾಳವೀಯವರು "ನಿಮ್ಮ ಮೇಲೆ ದೇವರು ಅನುಗ್ರಹಿಸಲಿ!" ಅಂದರು.

ಮಾಸ್ತಿಯವರು ಮಲಗಿದ ವ್ಯಕ್ತಿಯ ಕಾಲಿನ ಕಡೆಗೆ ಸರಿದು, ತಮ್ಮ ತಲೆಯ ಟೋಪಿಯನ್ನು ತೆಗೆದು, ಮಾಳವೀಯರವರ ಪಾದಗಳಿಗೆ ಒತ್ತಿದರು. ಅನಂತರ ಹಿಂದೆಯೇ ಸೂಚಿತವಾಗಿದ್ದ ಪ್ರಶ್ನೆಗಳು ಹೊರಬಂದುವು. ಮಾಸ್ತಿಯವರು ಉತ್ತರವಾಗಿ "ಊರಿನಿಂದ ನನ್ನ ಕೈಲಾದುದನ್ನು ಕಳುಹಿಸುತ್ತೇನೆ" ಎಂದರು; "ತಾನೂ ಭಿಕ್ಷುಕ" ಎಂದಲ್ಲ.

ಹೊರಬಂದಾಗ "ಇಂತಹವರ ಆಶೀರ್ವಾದ ನಮಗೆ ಬಹಳ ಮುಖ್ಯವಾಗಿ ಬೇಕು" ಅಂದರು. ಮುಂದೆ ಹೋಗುತ್ತ ಒಬ್ಬರು ದಾರಿಯಲ್ಲಿನ ಹಾಸ್ಟಲುಗಳ ಗಾತ್ರಕ್ಕೆ ಮಾಸ್ತಿಯವರ ಗಮನವನ್ನು ಎಳೆದರು. ಮಾಸ್ತಿಯವರಾದರೋ "ಇವೇನೋ ದೊಡ್ಡವೆ. ಆದರೆ ನಾನು ಇವು ಸಣ್ಣವು ಎನ್ನುತ್ತೇನೆ. ನಮ್ಮದು ದೇಶ. ಘನತೆಯ ದೇಶ. ಅದಕ್ಕೆ ಇನ್ನೂ ದೊಡ್ಡ ಕಟ್ಟಡಗಳು ಇನ್ನೂ ದೊಡ್ಡ ಕೆಲಸಗಳು ಸರಿಹೋಗುತ್ತವೆ" ಎಂದು ಹೆಮ್ಮೆಯಿಂದ ಹೇಳಿದರು.

ನಾವು ಡಾ. ಬಾದಾಮಿಯವರ ಮನೆಗೆ ಹೋದೆವು. ಹಳೆಯ ಸ್ನೇಹಿತರ ಭೇಟಿಯಾಯಿತು. ಆ ದಿನ ಬಲಿಪಾಡ್ಯಮಿಯಾಗಿ ಮಾಸ್ತಿಯವರಿಗೆ ಅಲ್ಲೇ ಒತ್ತಾಯದ ಔತಣ ದೊರಕಿತು. ಬಾದಾಮಿಯವರು ಮಧ್ಯಾಹ್ನದ ರೈಲಿಗಿಂತಲೂ ರಾತ್ರಿಯದೇ ಉತ್ತಮವೆಂದರು. ಅವರ ಸೂಚನೆಯಂತೆ ಮಾಸ್ತಿಯವರು ಪ್ರಯಾಣವನ್ನು ಮುಂದೆ ಹಾಕಿದರು.

ಮೈಸೂರು ಛತ್ರದಿಂದ ರೈಲ್ವೆ ನಿಲ್ದಾಣಕ್ಕೆ ಹೊರಡುವಾಗ ಮಾಸ್ತಿಯವರು ಎಲ್ಲರನ್ನೂ ಬೀಳ್ಕೊಂಡರು. ಅತ್ತಿತ್ತ ನೋಡಿ ಜಂಗಮವಾಡಿಯ ಮಠದ ಸ್ವಾಮಿಗಳು ಕೊಟ್ಟಿದ್ದ ಹೂವಿನ ಹಾರವನ್ನು ತೆಗೆದು ನನ್ನ ಕೈಲಿಟ್ಟು "ಇದು ಬಾಡುವವರೆಗೆ ನಿಮ್ಮ ಮನೆಯಲ್ಲಿ ಇಳಿಹಾಕಿರಿ" ಎಂದರು. ನಾನು "ಅದು ಹೇಗೆ ಬಾಡೀತು ?" ಅಂದೆ.

ರೈಲಿನಲ್ಲಿ ಬಹಳ ಗಲಾಟೆ. ಎರಡನೆಯ ತರಗತಿಯಲ್ಲಿಯೂ ಕೂಡ ಮಾಸ್ತಿಯವರಿಗೆ ಸ್ಥಳ ಸಿಕ್ಕುವುದು ಪ್ರಯಾಸವಾಯಿತು. ಅವರು ಕುಳಿತುಕೊಂಡ ಮೇಲೆ "ನೋಡಿ ಇಲ್ಲೇ ಹೀಗೆ. ಮೂರನೆಯ ತರಗತಿಯಲ್ಲಿ ಏನು ಗತಿಯೋ ! ಈಗಲಾದರೂ ಇದರಲ್ಲಿ ಹೋಗುತ್ತಿದ್ದೇನೆ. ಹಿಂದೇ ದೇವರು

ಕೊಟ್ಟಿದ್ದಾಗ ಏನೋ ಮೊಂಡತನದಿಂದ ಇಲ್ಲಿಲ್ಲ ಮೂರನೆಯವರಲ್ಲೇ ಓಡಾಡಿದೆ. ಆದರೆ ನನಗಾಗಿ ನನಗೆ ವ್ಯಸನವಿಲ್ಲ. ಪಾಪ, ಆ ನನ್ನ ಬಡ ಹೆಂಗಸನ್ನು ಬಹಳ ಪ್ರಯಾಸಪಡಿಸಿದೆ. ಈಗ ನೆನಿಸಿಕೊಂಡರೆ ಮನಸ್ಸು ಕನಿಕರಪಡುತ್ತದೆ" ಎಂದು ಮರುಗಿದರು. ಅನಂತರ "ನೀವೆಲ್ಲರೂ ಕಷ್ಟಪಟ್ಟಿರಿ. ನಿಮಗೆಲ್ಲ ನನ್ನ ಧನ್ಯವಾದಗಳು. ನಮಸ್ಕಾರ'' ಅಂದರು. ನಾನು "ಒಂದು ವೇಳೆ ಕಷ್ಟಪಟ್ಟಿದ್ದೇ ನಿಜವಾದರೂ, ಪಡಬಾರದೇಕೆ? ಅದನ್ನು ನಮ್ಮಿಂದ ಕೇಳಲು ನಿಮಗೆ ಅರ್ಹತೆಯಿಲ್ಲವೆ? ಅದು ಸಾರ್ಥಕ ವಲ್ಲವೆ?' ಎಂದೆ. ಅತಿಥಿಗಳೂ ನಾವೂ 'ನಮಸ್ಕಾರ, ನಮಸ್ಕಾರ' ಎನ್ನುವಾಗ ರೈಲು ಹೊರಟಿತು.

ಮನೆಗೆ ಹಿಂದಿರುಗುವಾಗ ಜತೆಯಲ್ಲಿದ್ದ ಶಾಸ್ತ್ರಿಗಳು "ಇವರು ನಿಮಗೆ ಅಂದೇ ತುಂಬ ಪರಿಚಯವಾಗಿದ್ದರೆ?" ಎಂದು ಕೇಳಿದರು. ನಾನು "ಅವರ ವಿಷಯ ಕೇಳಿದ್ದೆ. ಆದರೆ ವ್ಯಕ್ತಿಯ ಪರಿಚಯವು ಈಗಲೇ ಅಷ್ಟು ಆದದ್ದು" ಅಂದೆ.

———